₹ 6 @vishwavaninews epaper.vishwavani.news vishwavani.news ಬೆಂಗಳೂರು । **ಹುಬ್ಬಳ್ಳಿ** । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ **ಶನಿವಾರ 09.05.2026** **ಸಂಪುಟ:** 68 **ಸಂಚಿಕೆ:** 295 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅ-17 ಮಹಿಳಾ ಫುಟ್‌ಬಾಲ್ ತಂಡ ಐತಿಹಾಸಿಕ ಸಾಧನೆ

ಭಾರತ 17 ವಯೋಮಿತಿ ಮಹಿಳಾ ಫುಟ್‌ಬಾಲ್ ತಂಡ ಐತಿಹಾಸಿಕ ಸಾಧನೆ ಮಾಡಿದೆ. ಶುಕ್ರವಾರ ಲೆಬನಾನ್ ವಿರುದ್ಧ 4-0ಯಿಂದ ಅಭೀಷ್ಟಾ ಬಾಸ್ನೆಟ್ ನೇತೃತ್ವದ ತಂಡ ಗೆಲುವು ಸಾಧಿಸಿ, ಎಎಫ್‌ಸಿ ಏಷ್ಯಾ ಕಪ್ ಕ್ವಾರ್ಟರ್ ಫೈನಲ್‌ಗೇರಿದೆ. ಇತಿಹಾಸದಲ್ಲೇ ಮೊದಲ ಬಾರಿಗೆ ತಂಡ ಈ ಸಾಧನೆ ಮಾಡಿದೆ.

ಸೊಂಪಾದ ಪುಟಗಳು

ಗ್ರೇಟ್ ನಿಕೋಬಾರ್: ಸಮುದ್ರಾಧಿಪತ್ಯದ ಮಹಾದ್ವಾರ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

100% ಫಲಿತಾಂಶ: ದಾಖಲಾತಿ ಹೆಚ್ಚಿಸುವುದೇ?
ಒಡಲಾಳ
ಸುರೇಂದ್ರ ಪೈ ಭಟ್ಕಳ 7

ದಾರಿದೀಪೋಕ್ತಿ

ಯಶಸ್ಸು ಎನ್ನುವುದು ಒಂದು ದಿನದ ಮಿಂಚಲ್ಲ, ಅದು ಪ್ರತಿದಿನದ ಸಣ್ಣ ಪುಟ್ಟ ಪ್ರಯತ್ನಗಳ ಮೊತ್ತ. ಗುರಿ ಮುಟ್ಟುವ ಗಡಿಬಿಡಿಗಿಂತ, ಸಾಗುವ ದಾರಿಯಲ್ಲಿ ಸಿಗುವ ಅನುಭವಗಳನ್ನು ಆಸ್ತಿಯನ್ನಾಗಿ ಮಾಡಿಕೊಳ್ಳುವುದು ಮುಖ್ಯ.

ವಕ್ರತುಂಡೋಕ್ತಿ

ಸಾಲ ಕೊಟ್ಟವನಿಗೆ ಇರುವ ನೆನಪಿನ ಶಕ್ತಿ, ಬಾದಾಮಿ ತಿಂದವನಿಗೂ ಇರುವುದಿಲ್ಲ.

ಟಿವಿಕೆಗೆ ಬೆಂಬಲ ಘೋಷಿಸಿ ಹಿಂಪಡೆದ ವಿಸಿಕೆ
ವಿಜಯ್ ಪ್ರಮಾಣ ವಚನ ಸ್ವೀಕಾರ ಮುಂದಕ್ಕೆ
ವಿಜಯ್ ಪದಗ್ರಹಣ

ಚೆನ್ನೈ: ತಮಿಳುನಾಡಿನಲ್ಲಿ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಮುಖ್ಯಸ್ಥ ಜೋಸೆಫ್ ವಿಜಯ್ ನೇತೃತ್ವದಲ್ಲಿ ಸರಕಾರ ರಚನೆಗೆ ಬೆಂಬಲ ಘೋಷಿಸಿದ ಕೆಲವೇ ಗಂಟೆಗಳಲ್ಲಿ ವಿಸಿಕೆ ಮತ್ತು ಮುಸ್ಲಿಂಲೀಗ್ ತಮ್ಮ ವಾಗ್ದಾನದಿಂದ ಹಿಂದೆ ಸರಿದಿದ್ದು, ಶನಿವಾರ ನಿಗದಿಯಾಗಿದ್ದ ವಿಜಯ್ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮತ್ತೆ ಮುಂದಕ್ಕೆ ಹೋಗುವ ನಿರೀಕ್ಷೆ ಇದೆ.

ವಿಜಯ್ ತಮ್ಮನ್ನು ಭೇಟಿ ಮಾಡಿ ಸರಳ ಬಹು ಮತಕ್ಕೆ ಅಗತ್ಯವಿರುವ ಶಾಸಕರ ಪಟ್ಟಿ ನೀಡಿದ ಬಳಿಕ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಶನಿವಾರ ಪ್ರಮಾಣ ವಚನ ಸ್ವೀಕಾರಕ್ಕೆ ಒಪ್ಪಿಗೆ ಸೂಚಿಸಿದ್ದರು. ಆದರೆ ರಾಜಭವನದಿಂದ ಹೊರಬರುತ್ತಿದ್ದಂತೆ ತೋಲ ತಿರುಮಾವಲನ್ ನೇತೃತ್ವದ ವಿಡುದಲೈ ಚಿರುತ್ತೈಗಳ್ ಕಚ್ಚಿ (ವಿಸಿಕೆ) ಪಕ್ಷ ತನ್ನ ನಿರ್ಧಾರ ಬದಲಿಸಿದ ಹಿನ್ನೆಲೆಯಲ್ಲಿ ಟಿವಿಕೆ ಪಕ್ಷದ ಬಹುಮತ 116ಕ್ಕೆ ಸೀಮಿತವಾಗಿದೆ. ಕಾಂಗ್ರೆಸ್ ಪಕ್ಷವು ಡಿಎಂಕೆಯಿಂದ ದೂರ ಸರಿದು ಟಿವಿಕೆಗೆ ಬೆಂಬಲ ಘೋಷಿಸಿದ ಬಳಿಕ, ಸಿಪಿಐ ಮತ್ತು ಸಿಪಿಎಂನ ತಲಾ ಇಬ್ಬರು ಶಾಸಕರು, ತೋಲ ತಿರುಮಾವಲನ್ ನೇತೃತ್ವದ ವಿಡುದಲೈ ಚಿರುತ್ತೈಗಳ್ ಕಚ್ಚಿ (ವಿಸಿಕೆ) ಅವರ ಇಬ್ಬರು ಶಾಸ ಕರು ಸರಕಾರ ರಚನೆಗೆ ಬೆಂಬಲ ಘೋಷಿಸಿದ್ದರು.

ಇದರ ಬೆನ್ನಿಗೇ 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ಸರಳ ಬಹುಮತಕ್ಕೆ ಅಗತ್ಯವಿರುವ 118 ಶಾಸಕರ ಬಲ ಗಿಟ್ಟಿಸಿದ ಸಂತಸದಲ್ಲಿ ವಿಜಯ್ ಅವರು ರಾಜ್ಯಪಾಲರನ್ನು ಭೇಟಿ ಮಾಡಿದ್ದರು. ಅಗತ್ಯ ಶಾಸಕರ ಬಲವಿರುವ ಲಿಖಿತ ಪಟ್ಟಿ ಪಡೆದ ಬಳಿಕ ಶನಿವಾರ ಪ್ರಮಾಣ ವಚನ ಬೋಧಿಸಲು ರಾಜ್ಯಪಾಲರು ಅನು ಮೋದನೆ ನೀಡಿದ್ದರು. ಆದರೆ ಇದಾದ ಬಳಿಕ ನಡೆದ ನಾಟಕೀಯ ಬೆಳವಣಿಗೆಯಲ್ಲಿ ವಿಸಿಕೆ ತನ್ನ ಬೆಂಬಲದ ಬಗ್ಗೆ ತಕರಾರು ಎತ್ತಿದೆ.

→ 8

ಬಂಗಾಳಕ್ಕೆ ಸುವೇಂದು ಹೊಸ ಅಧಿಕಾರಿ
ಟಿಎಂಸಿ ಭದ್ರಕೋಟೆಯಲ್ಲಿ ಕಮಲ ಧ್ವಜ ಹಾರಾಟ

ಕೋಲ್ಕತ್ತಾ: ತಮ್ಮ ರಾಜಕೀಯ ಗುರು ಮಮತಾ ಬ್ಯಾನರ್ಜಿ ಅವರನ್ನೇ ಮಣಿಸಿ ಪಶ್ಚಿಮ ಬಂಗಾಳ ಇತಿಹಾಸದಲ್ಲಿ ಹೊಸ ಚರಿತ್ರೆ ನಿರ್ಮಿಸಿದ ಸುವೇಂದು ಅಧಿಕಾರಿ ರಾಜ್ಯದ ಹೊಸ ಮುಖ್ಯ ಮಂತ್ರಿಯಾಗಿ ಶನಿವಾರ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

ಬರೋಬ್ಬರಿ 207 ಸ್ಥಾನಗಳಲ್ಲಿ ಜಯಗಳಿಸುವ ಮೂಲಕ ಟಿಎಂಸಿಯ 15 ವರ್ಷಗಳ ಆಡಳಿತಕ್ಕೆ ಬ್ರೇಕ್ ಹಾಕಿರುವ ಬಿಜೆಪಿ, ಜನಸಂಘ ಸಂಸ್ಥಾಪಲ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ತವರು ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಸರಕಾರ ರಚಿಸಲು ಸಿದ್ಧವಾಗಿದೆ. ರಾಜ್ಯದಲ್ಲಿ ಪಕ್ಷವನ್ನು ಗೆಲುವಿನತ್ತ ಮುನ್ನಡೆಸಿದ್ದಲ್ಲದೆ ಭವಾನಿಪುರದಲ್ಲಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ ಸುವೇಂದು ಅಧಿಕಾರಿಗೆ ಬಿಜೆಪಿ ಸಿಎಂ ಪಟ್ಟ ಕಟ್ಟಿದೆ. ಕೋಲ್ಕತ್ತಾದಲ್ಲಿ ಅಮಿತ್ ಶಾ ನಾಯಕತ್ವದಲ್ಲಿ ನಡೆದ ಬಿಜೆಪಿ ಪಕ್ಷದ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಸುವೇಂದು ಅಧಿಕಾರಿ ಅವರನ್ನು ಘೋಷಿಸಲಾಯಿತು.

ವೇಣುಗೆ ಕೇರಳ

ತಿರುವನಂತಪುರಂ: ಕೇರಳ ಸಿಎಂ ಪಟ್ಟದ ರೇಸ್ ನಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಮುಂಚೂಣಿಯಲ್ಲಿದ್ದು, ಕಾಂಗ್ರೆಸ್‌ನ 63 ಮಂದಿ ಶಾಸಕರಲ್ಲಿ 47 ಮಂದಿ ಮುಖ್ಯಮಂತ್ರಿ ಸ್ಥಾನಕ್ಕೆ ಅವರ ಹೆಸರನ್ನು ಪ್ರಸ್ತಾಪಿಸಿದ್ದಾರೆ ಎಐಸಿಸಿ ಕೇಂದ್ರ ವೀಕ್ಷಕರೊಂದಿಗೆ ನಡೆದ ವೈಯಕ್ತಿಕ ಸಭೆಗಳಲ್ಲಿ ಈ ಬೆಂಬಲ ವ್ಯಕ್ತವಾಗಿದ್ದು, ಪಕ್ಷದ ಹೈಕಮಾಂಡ್ ಸದ್ಯವೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವ ಸಾಧ್ಯತೆ ಇದೆ.

ಪುದುಚೇರಿಗೆ ರಂಗ

ಪುದುಚೆರಿ: ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಎಐಎನ್‌ಆರ್‌ಸಿ ಮುಖ್ಯಸ್ಥ ಎನ್. ರಂಗಸಾಮಿ ಅವರು ಐದನೇ ಬಾರಿಗೆ ರಾಜ್ಯವನ್ನು ಮುನ್ನಡೆಸಲು ಸಜ್ಜಾಗಿದ್ದಾರೆ. ಶುಕ್ರವಾರ ನಡೆದ ಸಭೆ ಯಲ್ಲಿ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನಾಗಿ ಎನ್. ರಂಗಸಾಮಿ ಅವರನ್ನು ಮರು ಆಯ್ಕೆ ಮಾಡ ಲಾಗಿದೆ. ಅಲ್ಲದೇ ಎ.ನಮಸ್ಸಿವಾಯಂ ಅವರು ಪಕ್ಷದ ಉಪನಾಯಕನಾಗಿ ಆಯ್ಕೆಯಾಗಿದ್ದಾರೆ. ಶನಿವಾರ ರಂಗ ಸ್ವಾಮಿ ಅವರು ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ.

ಇಂದು ಅಮಿತ್ ಶಾ ನಾಳೆ ಮೋದಿ ರಾಜ್ಯಕ್ಕೆ

ಬಿಎಸ್‌ವೈ ಅಭಿಮಾನೋತ್ಸವ: ಕೋಟೆನಾಡು ಕೇಸರಿಮಯ
ಕೇಂದ್ರ ನಾಯಕರ ಆಗಮನ ಬಿಜೆಪಿ ಕಾರ್ಯಕರ್ತರಲ್ಲಿ ಹರುಷ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಂಚರಾಜ್ಯಗಳಲ್ಲಿ ಚುನಾವಣೆಯಲ್ಲಿ ಗೆಲುವು ದಾಖಲಿಸಿರುವ ಬಿಜೆಪಿ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯಲು ಸಜ್ಜುಗೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಇಂದು ಬಿಎಸ್‌ವೈ ಅಭಿಮಾನೋತ್ಸವ ಕೋಟೆನಾಡು ಚಿತ್ರದುರ್ಗದಲ್ಲಿ ನಡೆಯುತ್ತಿದ್ದು ಕೇಂದ್ರ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ. ನಾಳೆ ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುತ್ತಿದ್ದು ರಾಜ್ಯ ಕೇಸರಿ ಪಾಳಯದಲ್ಲಿ ಹೊಸ ಚೈತನ್ಯ ಕಂಡು ಬಂದಿದೆ.

ಆಡಳಿತಾರೂಢ ಕಾಂಗ್ರೆಸ್‌ಗೆ ಟಕ್ಕರ್ ಕೊಡುವಲ್ಲಿ ಒಂದಷ್ಟು ಸೊರಗಿದಂತಿರುವ ಬಿಜೆಪಿಯ ಕಾರ್ಯಕರ್ತರಿಗೆ ಪ್ರಧಾನಿ ಹಾಗೂ ಅಮಿತ್ ಶಾ ಆಗಮನ ಒಂದಷ್ಟು ಹುರುಪು ತುಂಬಲಿದೆ. ಕಾರ್ಯಕ್ರಮದಲ್ಲಿ ಕೇಂದ್ರದ ನಾಯಕರು ನೀಡಲಿರುವ ಸಂದೇಶ ರಾಜ್ಯ ಘಟಕಕ್ಕೆ ಉಪಯುಕ್ತವಾಗಲಿದ್ದು ಈ ಕ್ಷಣಗಳನ್ನು ತುಂಬಿಕೊಳ್ಳಲು ಕಾರ್ಯಕರ್ತರು ಸಜ್ಜಾಗಿದ್ದಾರೆ.

ಬಿಎಸ್‌ವೈ ಅಭಿಮಾನೋತ್ಸವ: ಬಿ.ಎಸ್ .ಯಡಿಯೂರಪ್ಪ ಅವರ 50 ವರ್ಷಗಳ ಸುದೀರ್ಘ ರಾಜಕೀಯ ಜೀವನ ಮತ್ತು ಜನಸೇವೆ ಗೌರವಿಸಲು ಹಮ್ಮಿಕೊಂಡಿರುವ ಅಭಿಮಾನೋತ್ಸವ ಹಿನ್ನೆಲೆಯಲ್ಲಿ ಕೋಟೆನಾಡು ಕೇಸರಿಮಯವಾಗಿದ್ದು, ಸಕಲ ಸಿದ್ಧತೆ ಮಾಡಿ ಕೊಳ್ಳಲಾಗಿದೆ. ಯಡಿಯೂರಪ್ಪ ಅವರ ಹಿತೈಷಿ ಗಳು, ಅಭಿಮಾನಿಗಳು ನಗರದ ಮಾದಾರ ಚನ್ನಯ್ಯ ಗುರುಪೀಠ ಪಕ್ಕದ ಮೈದಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿ, ಯಡಿಯೂರಪ್ಪ ಅವರನ್ನು ಸನ್ಮಾನಿಸಲಿದ್ದಾರೆ.

→ 8

ನಾಳೆ ಪ್ರಧಾನಿ ನರೇಂದ್ರಮೋದಿ ಆಗಮನ

ಆಧ್ಯಾತ್ಮಿಕ ಮತ್ತು ಮಾನವೀಯ ಸಂಸ್ಥೆ ದಿ ಆರ್ಟ್ ಆಫ್ ಲಿವಿಂಗ್ ತನ್ನ 45 ವರ್ಷ ಪೂರೈಸುತ್ತಿದ್ದು, ಈ ಐತಿಹಾಸಿಕ ಸಮಾಗಮವನ್ನು ಪ್ರಧಾನಿ ನರೇಂದ್ರಮೋದಿ ಉದ್ಘಾಟಿಸಲಿದ್ದಾರೆ. ಮೇ 10 ರಂದು ನಡೆಯಲಿರುವ ಈ ಕಾರ್ಯಕ್ರಮವು ಸಂಸ್ಥೆಯ 45ನೇ ವಾರ್ಷಿಕೋತ್ಸವ ಮಾತ್ರವಲ್ಲದೆ, ಅದರ ಸಂಸ್ಥಾಪಕರಾದ ಶ್ರೀ ರವಿಶಂಕರ್ ಗುರೂಜಿ ಅವರ 70 ನೇ ಜನ್ಮದಿನದ ಸಂಭ್ರವ ಒಳಗೊಂಡಿದೆ. ಸಂಭ್ರಮಾಚರಣೆಯಲ್ಲಿ ವಿಶ್ವದ 182ಕ್ಕೂ ಹೆಚ್ಚು ದೇಶಗಳ ಜನರು ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಪಾಲ್ಗೊಳ್ಳಲಿದ್ದಾರೆ. ಸರಕಾರದ ಪ್ರಮುಖ ನಾಯಕರು, ನಾಗರಿಕ ಸೇವಾ ಅಧಿಕಾರಿಗಳು, ರೈತರು, ಇಂಜಿನಿಯರ್ ಗಳು , ಗೃಹಿಣಿಯರು, ವಿದ್ಯಾರ್ಥಿಗಳು ಮತ್ತು ಸಾವಿರಾರು ಅಂತಾರಾಷ್ಟ್ರೀಯ ಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ಸೇರಲಿರುವುದು ಈ ಕಾರ್ಯಕ್ರಮದ ವಿಶೇಷತೆಯಾಗಿದೆ. ಪ್ರಧಾನ ಮಂತ್ರಿ ಈ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡುವುದರ ಜೊತೆಗೆ ನೂತನವಾಗಿ ನಿರ್ಮಿಸಲಾದ ಅತ್ಯಾಧುನಿಕ ಧ್ಯಾನ ಮಂದಿರ ಲೋಕಾರ್ಪಣೆಗೊಳಿಸಲಿದ್ದಾರೆ. ಮಾನಸಿಕ ಆರೋಗ್ಯ, ಪ್ರಕೃತಿ ಸಂರಕ್ಷಣೆ, ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ಪರಿವರ್ತನೆಯಂತಹ ವರ್ಷ ಪೂರ್ತಿ ನಡೆಯುವ ಯೋಜನೆಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ಶ್ರೀ ರವಿಶಂಕರ್ ಗುರೂಜಿ ಅವರ ನೇತೃತ್ವದಲ್ಲಿ 'ವಿಶ್ವ ಶಾಂತಿಗಾಗಿ ಜಾಗತಿಕ ಧ್ಯಾನ' ಮೇ 13 ರಂದು ನಡೆಯಲಿದ್ದು, ಇದು ವಿಶ್ವಾದ್ಯಂತ ನೇರ ಪ್ರಸಾರವಾಗಲಿದ್ದು, ಲಕ್ಷಾಂತರ ಜನರು ಏಕಕಾಲದಲ್ಲಿ ಧ್ಯಾನದಲ್ಲಿ ತೊಡಗುವ ಮೂಲಕ ಶಾಂತಿಯ ಸಂದೇಶ ಸಾರಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಲೋಕಾಯುಕ್ತ ಬಲೆಗೆ ಬಿದ್ದ ಸರ್ವೇಯರ್

ಹರಪನಹಳ್ಳಿ: ಭೂಮಿ ಹದ್ದು ಬಸ್ತು ಮಾಡಿಕೊಡಲು ಲಂಚಕ್ಕೆ ಬೇಡಿಕೆ ಇಟ್ಟು ಲಂಚ ಸ್ವೀಕರಿಸಿದ ಹಿನ್ನಲೆಯಲ್ಲಿ ಸರ್ವೇಯರ್‌ಒಬ್ಬರು ಲೋಕಾಯುಕ್ತ ಬಲೆಗೆ ಬಿದ್ದ ಘಟನೆ ಹರಪನಹಳ್ಳಿ ತಾಲೂಕಿನ ನಂದಿಬೇವೂರು ತಾಂಡದಲ್ಲಿ ಗುರುವಾರ ಮಧ್ಯಾ ಹ್ನ ಜರುಗಿದೆ. ಹಗರಿಬೊಮ್ಮನಹಳ್ಳಿ ಭೂಮಾಪನಾ ಇಲಾಖೆಯಲ್ಲಿ ಸರ್ವೆಯರ ಆಗಿ ಕಾರ್ಯನಿರ್ವಹಿಸುತ್ತಿರುವ ಕೊಟ್ರೇಶನಾಯ್ಕ ಎಂಬಾತನೆ ಲೋಕಾಯುಕ್ತಕ್ಕೆ ಬಲೆಗೆ ಬಿದ್ದಿರುವುದು. ಹಗರಿಬೊಮ್ಮನಹಳ್ಳಿ ತಾಲೂಕಿನ ವರದಾಪುರ ಗ್ರಾಮದ ದೇವೇಂದ್ರ ಎಂಬುವವರು ತಮ್ಮ ಹೊಲದ ಹದ್ದು ಬಸ್ತಿಗಾಗಿ ಭೂ ಮಾಪನಾ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಸರ್ವೇಯರ್ ಕೊಟ್ರೇಶನಾಯ್ಕ ಎಂಬುವವರಿಗೆ ಹದ್ದು ಬಸ್ತು ಮಾಡಲು ನಿಗದಿ ಮಾಡಲಾಗಿತ್ತು. ಸರ್ವೇಯರ್ ಕೊಟ್ರೇಶನಾಯ್ಕ ಬೇರೆ ಬೇರೆ ಕಾರಣ ಹೇಳಿ 2024 ರಿಂದ ಇಲ್ಲಿಯವರೆಗೂ ಸತಾಯಿಸಿ ಲಂಚಕ್ಕೆ ಬೇಡಿಕೆ ಇಟ್ಟು ಮೊದಲಿಗೆ 10 ಸಾವಿರ ಹಣ ಪಡೆದು, ಪುನಃ 30 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು ಲಂಚ ಸ್ವೀಕರಿಸಿ ಸಿಕ್ಕಿಬಿದ್ದಿದ್ದಾರೆ. ಕೊಟ್ರೇಶ ನಾಯ್ಕ ರವರನ್ನು ಹರಪನಹಳ್ಳಿ ತಾಲೂಕಿನ ನಂದಿಬೇವೂರು ತಾಂಡದಲ್ಲಿ ಲೋಕಾಯುಕ್ತ ಪೋಲೀಸರು ಗುರುವಾರ ಮದ್ಯಾಹ್ನ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮೇ ತಿಂಗಳಲ್ಲೇ 2 ತಿಂಗಳ ಪಡಿತರ ಅಕ್ಕಿ ವಿತರಣೆ

ಹೊಸಪೇಟೆ: ಕೇಂದ್ರ ಸರಕಾರದ ಸೂಚನೆಯಂತೆ ಮೇ ಹಾಗೂ ಜೂನ್ ತಿಂಗಳ ಎನ್.ಎಫ್.ಎಸ್.ಎ ಅಕ್ಕಿ ದಾಸ್ತಾನನ್ನು ಒಟ್ಟಿಗೆ ಮೇ ತಿಂಗಳಲ್ಲೇ ನೀಡಲು ನಿರ್ಧರಿಸಲಾಗಿದ್ದು, ಅದರಂತೆ ಜಿಲ್ಲೆಯ ಪಡಿತರ ಚೀಟಿದಾರರಿಗೆ ಎರಡು ತಿಂಗಳ ಅಕ್ಕಿಯನ್ನು ಒಂದೇ ಬಾರಿಗೆ ಹಂಚಿಕೆ ಮಾಡಲಾಗುವುದು. ಅಂತ್ಯೋದಯ ಕಾರ್ಡು ಹೊಂದಿದ ಪ್ರತಿ ಪಡಿತರ ಚೀಟಿಗೆ ಒಂದು ತಿಂಗಳಿಗೆ 35 ಕೆ.ಜಿ ಯಂತೆ ಒಟ್ಟು 70 ಕೆ.ಜಿ ಅಕ್ಕಿ ಹಾಗೂ ಬಿ.ಪಿ.ಎಲ್ ಕಾರ್ಡು ಹೊಂದಿದ ಪ್ರತಿ ಸದಸ್ಯರಿಗೆ 5 ಕೆ.ಜಿ ಯಂತೆ ಪಡಿತರ ಚೀಟಿಯಲ್ಲಿನ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಪ್ರತಿ ಸದಸ್ಯರಿಗೆ 10 ಕೆ.ಜಿ ಯಂತೆ ಅಕ್ಕಿ ವಿತರಣೆ ಮಾಡಲಾಗುವುದು. ಮೇ ಹಾಗೂ ಜೂನ್ ತಿಂಗಳ ಪಡಿತರವನ್ನು ಒಟ್ಟಿಗೆ ಪಡೆಯುವ ಸಂದರ್ಭದಲ್ಲಿ, ಕಾರ್ಡುದಾರರು ತಾಂತ್ರಿಕ ದಾಖಲೀಕರಣಕ್ಕಾಗಿ ಎರಡು ಬಾರಿ ಬಯೋಮೆಟ್ರಿಕ್ (ಹೆಬ್ಬೆಟ್ಟಿನ ಗುರುತು) ನೀಡುವುದು ಕಡ್ಡಾಯವಾಗಿದೆ. ಆದ್ದರಿಂದ ಪಡಿತರ ಚೀಟಿದಾರರು ಯಾವುದೇ ಗೊಂದಲಕ್ಕೆ ಒಳಗಾಗದೆ ಸಹಕರಿಸಬೇಕು. ಎರಡು ಬಾರಿ ಬೆರಳು ಮುದ್ರೆ ನೀಡಿದ ನಂತರವಷ್ಟೇ ಪೂರ್ಣ ಪ್ರಮಾಣದ ಧಾನ್ಯ ಲಭ್ಯವಾಗಲಿದೆ. ಪಡಿತರ ಚೀಟಿದಾರರು ಮೇ ಮಾಹೆಯಲ್ಲಿಯೇ ಎರಡು ತಿಂಗಳ ಅಕ್ಕಿಯನ್ನು ಪಡೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದ್ದಾರೆ.

ಡಿಪ್ಲೊಮಾ ಕೋರ್ಸ್ ಪ್ರವೇಶಾತಿ ಪ್ರಾರಂಭ

ಹೊಸಪೇಟೆ: ಪ್ರಸಕ್ತ ಸಾಲಿನಲ್ಲಿ ಹೂವಿನಹಡಗಲಿ ತಾಲೂಕಿನ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೊಮಾ ಕೋರ್ಸ್ ಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ಎಸ್ ಎಸ್ ಎಲ್ ಸಿ, ಪಿಯುಸಿ, ಐಟಿಐ ಪಾಸಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಬಯಸುವ ಎಸ್ಸಿ,ಎಸ್ಟಿ, ವರ್ಗ-1 ಅಭ್ಯರ್ಥಿಗಳಿಗೆ ರೂ.4780 ಹಾಗೂ ಸಾಮಾನ್ಯ ವರ್ಗ, ಓಬಿಸಿ ಅಭ್ಯರ್ಥಿಗಳಿಗೆ ರೂ.4880 ಶುಲ್ಕ ನಿಗದಿಪಡಿಸಲಾಗಿದೆ. ಲಭ್ಯವಿರುವ ಕೋರ್ಸ್ ಗಳ ವಿವರ: ಕಂಪ್ಯೂಟರ್‌ಸೈನ್ಸ್ ಆಂಡ್ ಇಂಜಿನಿಯರಿಂಗ್, ಸೈಬರ್‌ಫಿಸಿಕಲ್ ಸಿಸ್ಟಮ್ ಆಂಡ್ ಸೆಕ್ಯೂರಿಟಿ, ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಆಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಕೋರ್ಸ್ ಲಭ್ಯವಿದ್ದು, ಆಸಕ್ತ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ನೇರವಾಗಿ ಕಾಲೇಜಿಗೆ ಭೇಟಿ ನೀಡಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9448721423, 8147316279, 9591219575, 9113273556 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಹೊಸಪೇಟೆ ಜಿಲ್ಲಾ ಟಾಸ್ಕ್ ಫೋರ್ಸ್ ಸಭೆ | 16 ಪ್ರಕರಣ, 4.45 ಲಕ್ಷ ದಂಡ: ಜಿಲ್ಲಾಧಿಕಾರಿ

ಅಕ್ರಮ ಮರಳುಗಾರಿಕೆ ಬೇರು ಸಹಿತ ಕಿತ್ತೆಸೆಯಿರಿ

ಹೊಸಪೇಟೆ: ಜಿಲ್ಲೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ, ಮರಳು ಸಾಗಣೆ ಹಾಗೂ ಮಣ್ಣು ಸಾಗಣೆ ಸೇರಿದಂತೆ ವಿವಿಧ ರೀತಿಯ ಒಟ್ಟು 16 ಪ್ರಕರಣ ದಾಖಲಿಸಿ 4.45 ಲಕ್ಷ ರು. ದಂಡ ವಿಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾಹಿತಿ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲೆಯ ಉಪಖನಿಜ ಕಟ್ಟಡ ಕಲ್ಲು ಅನಧಿಕೃತ ಸಾಗಾಣಿಕೆಗೆ ಸಂಬಂಧಿಸಿದಂತೆ 9 ಪ್ರಕರಣ ದಾಖಲಾಗಿದ್ದು, 3.9 ಲಕ್ಷ ರು.ದಂಡ ವಿಧಿಸಲಾಗಿದೆ. ಅಕ್ರಮ ಮರಳು ಸಾಗಣೆಗೆ ಸಂಬಂಧಿಸಿದ 6 ಪ್ರಕರಣ ದಾಖಲಾಗಿದ್ದು, 1.2 ಲಕ್ಷ ರು.ದಂಡ ಮತ್ತು ಅನಧಿಕೃತ ಮಣ್ಣು ಸಾಗಣೆಗೆ ಸಂಬಂಧಿಸಿದ 1 ಪ್ರಕರಣ ಸೇರಿ ಜಿಲ್ಲೆಯಲ್ಲಿ ಒಟ್ಟು 16 ಪ್ರಕರಣಕ್ಕೆ ಒಟ್ಟು 4.45 ಲಕ್ಷ ರು. ದಂಡ ವಸೂಲಿ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯ ನದಿ ಪಾತ್ರಗಳಲ್ಲಿ ಹಾಗೂ ಹಳ್ಳ-ಕೊಳ್ಳಗಳಲ್ಲಿ ರಾಜಾರೋಷವಾಗಿ ನಡೆಯುತ್ತಿರುವ ಮರಳು ದಂಧೆಯನ್ನು ತಡೆಯಲು ಪೊಲೀಸ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಬೇಕು. ಅಕ್ರಮವಾಗಿ ಮರಳು ಸಾಗಿಸುವ ವಾಹನಗಳನ್ನು ವಶಪಡಿಸಿಕೊಂಡು, ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಎಂದರು. ಸರಕಾರದ ನೂತನ ಮರಳು ನೀತಿಯನ್ವಯ ಸಾರ್ವಜನಿಕರಿಗೆ ಮತ್ತು ಸರಕಾರಿ ಕಾಮಗಾರಿಗಳಿಗೆ ಸಕಾಲದಲ್ಲಿ ಮರಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಮರಳು ವಿತರಣಾ ಕೇಂದ್ರಗಳಲ್ಲಿ ಪಾರದರ್ಶಕತೆ

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾಹಿತಿ ಮಾತನಾಡಿದರು.

ಕಾಪಾಡಬೇಕು ಹಾಗೂ ಮಧ್ಯವರ್ತಿಗಳ ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯ ಗಡಿಭಾಗದ ಚೆಕ್ ಪೋಸ್ಟ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ, 24/7 ನಿಗಾ ಇರಿಸಬೇಕು. ರಾತ್ರಿ ವೇಳೆ ನಡೆಯುವ ಅಕ್ರಮ ಗಣಿ ಮತ್ತು ಮರಳು ಸಾಗಾಣಿ ತಡೆಯಲು ರಾತ್ರಿ ಗಸ್ತು ಪಡೆಯನ್ನು ಬಲಪಡಿಸಲು ಪೊಲೀಸ್ ಇಲಾಖೆಗೆ ಸೂಚನೆ ನೀಡಿದ ಅವರು, ಪರಿಸರ ಸಮತೋಲನ ಕಾಯ್ದುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ನೈಸರ್ಗಿಕ ಸಂಪನ್ಮೂಲಗಳ ಲೂಟಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಖಡಕ್ ಎಚ್ಚರಿಕೆ ನೀಡಿದರು.

ಹೊಸದಾಗಿ ಗುರುತಿಸಲಾದ ಮರಳು ಬ್ಲಾಕ್ಗಳಲ್ಲಿ ಗಣಿಗಾರಿಕೆ ಪ್ರಾರಂಭಿಸುವ ಮುನ್ನ ರಾಜ್ಯ ಪರಿಸರ ಪರಿಣಾಮ ಅಂದಾಜು ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. 2018-19ನೇ ಸಾಲಿನಲ್ಲಿ ಹೂವಿನಹಡಗಲಿ ತಾಲೂಕಿನ ಹಕ್ಕುಂಡಿ ಗ್ರಾಮ ವ್ಯಾಪ್ತಿಯಲ್ಲಿ ಮರಳು ಪರವಾನಗಿ ನೀಡಲಾಗಿದೆ. ಅದರಂತೆ 30746.08 ಮೆಟ್ರಿಕ್ ಟನ್ ಮರಳು ದಾಸ್ತಾನಿದ್ದು, ಅದರಲ್ಲಿ ಕೇವಲ 2 ಸಾವಿರ ಮೆಟ್ರಿಕ್ ಟನ್ ಮರಳು ಬಳಸಲಾಗಿದೆ.

> ಜಿಲ್ಲೆಯಲ್ಲಿ ನಡೆಯುತ್ತಿರುವ ಅನಧಿಕೃತ ಗಣಿಗಾರಿಕೆ ಮತ್ತು ಅಕ್ರಮ ಮರಳು ಮಾರಾಟ ಜಾಲವನ್ನು ಬೇರುಸಹಿತ ಕಿತ್ತೆಸೆಯಲು ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆ ಪ್ರದೇಶಗಳಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ನಿರಂತರವಾಗಿ ಭೇಟಿ ನೀಡಿ ಪರಿಶೀಲಿಸಬೇಕು. ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಗಣಿಗಾರಿಕೆ, ಮರಳು ಸಾಗಾಟ ನಡೆಸುತ್ತಿರುವುದು ಕಂಡುಬಂದಲ್ಲಿ ಅಂತಹ ಪರವಾನಗಿಗಳನ್ನು ತಕ್ಷಣವೇ ರದ್ದುಗೊಳಿಸುವುದರ ಜೊತೆಗೆ ಭಾರೀ ದಂಡ ವಿಧಿಸಬೇಕು.
>
> -ಕವಿತಾ ಎಸ್. ಮನ್ನಿಕೇರಿ, ಜಿಲ್ಲಾಧಿಕಾರಿ

ಉಳಿದಂತೆ 30546 ಮೆಟ್ರಿಕ್ ಟನ್ ಮರಳು ಜಲ್ಲಿ ಕಲ್ಲು ಹೆಚ್ಚಾಗಿ ಕಂಡು ಬರುತ್ತಿದ್ದು ಬಳಕೆಗೆ ಯೋಗ್ಯವಲ್ಲ ಎಂಬ ಕಾರಣದಿಂದ ಹಾಗೆ ಉಳಿಸಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಜಂಟಿಯಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಲು ಸೂಚನೆ ನೀಡಿದರು. ಸಾಗಾಣಿಕೆ ವೇಳೆ ಮರಳು ಮತ್ತು ಕಲ್ಲುಗಳು ಪುನಃ ಮಿಶ್ರಣವಾಗದಂತೆ ಎಚ್ಚರಿಕೆ ವಹಿಸಬೇಕು ಮತ್ತು ರಾಯಲ್ಟಿ ಪಾವತಿಸಿದ ನಂತರವಷ್ಟೇ ವಿಲೇವಾರಿಗೆ ಅವಕಾಶ ನೀಡಬೇಕು ಎಂದು ತಾಕೀತು ಮಾಡಿದರು.

ಕೂಡ್ಲಿಗಿ ತಾಲ್ಲೂಕಿನ ಹಾಲಸಾಗರ ಗ್ರಾಮದ ಕೈಲಾಶ್ ಸ್ಟೋನ್ ಕ್ರಷರ್‌ಘಟಕದ ಪರವಾನಗಿ ಮುಕ್ತಾಯವಾಗಿದ್ದು, ನವೀಕರಣಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಹಾಗೆಯೇ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವರದಾಪುರ ಗ್ರಾಮದಲ್ಲಿ ಹೊಸದಾಗಿ ಸ್ಟೋನ್ ಕ್ರಷರ್‌ಸ್ಥಾಪಿಸಲು ಸಲ್ಲಿಕೆಯಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ರಿಯಾಜ್ ಸಭೆಗೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಆಯಾ ಪ್ರದೇಶಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಜಂಟಿಯಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ನಿಯಮಾನುಸಾರ ಅನುಮತಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿ ಇ ಓ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಅರಣ್ಯ ಇಲಾಖೆ ಉಪಸಂರಕ್ಷಣಾಧಿಕಾರಿ ಅನುಪಮ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ರಿಯಾಜ್, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಹೇಮರಾಜ್ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸೂಚನಾ ಫಲಕ ಅಳವಡಿಸಿ

ಪ್ರಸ್ತುತ ಬಿರು ಬೇಸಿಗೆ ಇರುವ ಕಾರಣ ಮಕ್ಕಳು ಕೆರೆ, ಬಾವಿಗಳಿಗೆ ಈಜಲು ಹೋಗಿ ಸಾಕಷ್ಟು ಸಾವು ನೋವು ಸಂಭವಿಸುತ್ತಿವೆ. ಆದ್ದರಿಂದ ಇದಕ್ಕೆ ಕಡಿವಾಣ ಹಾಕಲು ಆಯಾಕಟ್ಟಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಸೂಚನಾ ಫಲಕ ಅಳವಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಸೂಚನೆ ನೀಡಿದರು. ಇದಕ್ಕೆ ಅವರು ಸಕರಾತ್ಮಕವಾಗಿ ಸ್ಪಂದಿಸಿದರು.

ಹಂಪಿಯಲ್ಲಿ ಶೀಘ್ರವೇ ತಲೆ ಎತ್ತಲಿದೆ 'ಸ್ಟ್ರೀಟ್ ಫುಡ್ ಹಬ್'

ಹೊಸಪೇಟೆ: ವಿಶ್ವವಿಖ್ಯಾತ ಪ್ರವಾಸಿ ತಾಣ ಹಂಪಿಯಲ್ಲಿ ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ಒಂದೇ ಸೂರಿನಡಿ ತರಹೇವಾರಿ ಗುಣಮಟ್ಟದ ಆಹಾರ ಖಾದ್ಯಗಳ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ''ಪಿ.ಎಂ. ಸ್ವನಿಧಿ'' ಯೋಜನೆಯಡಿ ಅತ್ಯಾಧುನಿಕ ''ಸ್ಟ್ರೀಟ್ ಫುಡ್ ಹಬ್'' ಸ್ಥಾಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಪಿಎಂ ಸ್ವನಿಧಿ ಯೋಜನೆಯಡಿ ಸ್ಟ್ರೀಟ್ ಫುಡ್ ಹಬ್ ಸ್ಥಾಪನೆಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳಲಾಗಿದ್ದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಹಂಪಿಗೆ ಬರುವ ಸಾವಿರಾರು ದೇಶಿ-ವಿದೇಶಿ ಪ್ರವಾಸಿಗರಿಗೆ ಒಂದೇ ಸೂರಿನಡಿ ಸ್ವಚ್ಛ ಹಾಗೂ ವೈವಿಧ್ಯಮಯ ಆಹಾರಗಳನ್ನು ಒದಗಿಸುವುದು ಈ ಫುಡ್ ಹಬ್ನ ಮುಖ್ಯ ಉದ್ದೇಶವಾಗಿದೆ. ಇದರಿಂದ ಸ್ಥಳೀಯ ಬೀದಿ ಬದಿ ವ್ಯಾಪಾರಿಗಳಿಗೂ ಆರ್ಥಿಕ ಸಬಲೀಕರಣಕ್ಕೆ ಅವಕಾಶ ಸಿಗಲಿದ್ದು, ಹಂಪಿಯ ಪ್ರವಾಸೋದ್ಯಮಕ್ಕೆ ಹೊಸ ಮೆರುಗು ಸಿಗಲಿದೆ. ಕೇಂದ್ರ ಸರಕಾರದ ಪಿ.ಎಂ. ಸ್ವನಿಧಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳ ಉಪ ಘಟಕದಡಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ರಾಜ್ಯದಲ್ಲಿ ಚಾಮುಂಡಿ ಬೆಟ್ಟ, ಬೇಲೂರು-ಹಳೇಬೀಡು, ಗಾಣಗಾಪುರ, ಪಟ್ಟದಕಲ್ಲು ಹಾಗೂ ಹಂಪಿ ಸೇರಿ 5 ಪ್ರದೇಶಗಳಲ್ಲಿ ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿದರು.

> ಒಂದು ಸ್ಟ್ರೀಟ್ ಫುಡ್ ಹಬ್ನಲ್ಲಿ 50 ಜನ ವ್ಯಾಪಾರಗಾರರಿಗೆ ಅವಕಾಶವಿದ್ದು, ದೇಶ ವಿದೇಶಗಳಿಂದ ಆಹಾರ ಹರಸಿ ಬರುವವರಿಗೆ ಶುಚಿ ಮತ್ತು ರುಚಿಯಾದ ಶುದ್ಧ ಆಹಾರ ಒದಗಿಸಬೇಕು. ಜತೆಗೆ ಗ್ರಾಹಕರಿಗೆ ನೀರು, ನೆರಳು ಸೇರಿ ಅಗತ್ಯ ಮೂಲ ಸೌಕರ್ಯಗಳನ್ನೊಳಗೊಂಡಂತೆ ಮಳಿಗೆಗಳ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು.
>
> - ಕವಿತಾ ಎಸ್. ಮನ್ನಿಕೇರಿ, ಜಿಲ್ಲಾಧಿಕಾರಿ

ನಿರ್ಧರಿಸಲಾಗಿದೆ. ಅದರಲ್ಲಿ ನಮ್ಮ ಹಂಪಿಯೂ ಸೇರಿದ್ದು, ಹೆಮ್ಮೆಯ ಸಂಗತಿ. ಈ ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು ಒಂದು ಕ್ಲಸ್ಟರ್ಗೆ 4 ಕೋಟಿ ವೆಚ್ಚದಲ್ಲಿ ತಾತ್ಕಾಲಿಕ ಮಳಿಗೆ ಸ್ಥಾಪಿಸಿ ವ್ಯಾಪಾರ ನಡೆಸಲು ಅನುಮತಿ ನೀಡಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಹಂಪಿ ಗ್ರಾಮ ಪಂಚಾಯಿತಿ ಹಾಗೂ ಕಮಲಾಪುರ ಪುರಸಭೆ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ. ಈಗಾಗಲೇ ಈ ಯೋಜನೆಗಾಗಿ ಮಳಿಗೆ ಸ್ಥಾಪಿಸಲು 3 ಸ್ಥಳ ಗುರುತಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪೈಕಿ ಈಗಾಗಲೇ ದೊಡ್ಡ ಆಲದ ಮರದ ಎದುರು ಹಾಗೂ ಹಂಪಿ ಪಾರ್ಕಿಂಗ್ ಸ್ಥಳದ ಹತ್ತಿರ ಗುತ್ತಿಲ್ಯಾಂಡ್ ಸೇರಿ ಎರಡು ಕಡೆ ಸ್ಥಳ ಸಹ ಗುರುತಿಸಲಾಗಿದ್ದು, ಭೂಮಿ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ ವೇಳೆ ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಹಂಪಿ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ರಮೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಜಿಲ್ಲಾ ಅಭಿಯಾನ ವ್ಯವಸ್ಥಾಪಕ ದೇವರಾಜ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ನೀರಿನ ಸಮಸ್ಯೆ ನಿವಾರಣೆಗೆ ಆದ್ಯತೆ ನೀಡಿ

ರಾಯಚೂರು: ಬೇಸಿಗೆ ಇರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿಗೆ ಪ್ರಥಮ ಆದ್ಯತೆ ನೀಡುವ ಮೂಲಕ ಜಿಲ್ಲೆಯ ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಹೇಳಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ, ಬಿಸಿಗಾಳಿ ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚಿಸಲು ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ತಾಲೂಕುಗಳಲ್ಲಿ ನೀರಿನ ಸಮಸ್ಯೆಗಳಿರುವ ಗ್ರಾಮಗಳನ್ನು ಗುರುತಿಸಿ ಮುಂಜಾಗ್ರತೆವಹಿಸಬೇಕು. ಈ ಕುರಿತು ಮಾಹಿತಿ ಪಡೆಯಲು ಪ್ರತಿ ಸೋಮವಾರ ವಿಸಿ ಮೂಲಕ ಸಭೆ ಕರೆಯುತ್ತೇನೆ. ತಾವು ಇಲ್ಲಿಗೆ ಬರುವುದುಬೇಕಿಲ್ಲ, ಆಯಾ ತಾಲೂಕಿನ ಅಧಿಕಾರಿಗಳು ತಾವಿದ್ದ ಸ್ಥಳದಿಂದಲೇ ಮಾಹಿತಿ ಕೊಡಬೇಕು. ಕುಡಿಯುವ ನೀರಿನ ಸಹಾಯವಾಣಿಯಿಂದ ಬರುವ ಕರೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಯಾದ ಮಾಹಿತಿ ನೀಡಬೇಕು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ನೀರಿನ ಸಮಸ್ಯೆಗಳಾಗಬಾರದು. ಇದಕ್ಕೆ ಯಾವುದೇ ಅನುದಾನದ ಕೊರತೆ ಇಲ್ಲ. ಈ ಕುರಿತು ಅಧಿಕಾರಿಗಳು ಹೆಚ್ಚಿನ ಗಮನಹರಿಸಬೇಕೆಂದು ಹೇಳಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮಹೊಪಾತ್ರ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಶರಣ ಬಸವರಾಜ, ರಾಯಚೂರು ತಾಲ್ಲೂಕು ತಹಶಿಲ್ದಾರ ಸುರೇಶ ವರ್ಮಾ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ, ಬಿಸಿಗಾಳಿ ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚಿಸಲು ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಜಿಲ್ಲಾಧಿಕಾರಿ ಪೂವಿತಾ ಎಸ್. ಮಾತನಾಡಿದರು.

ಮೇವಿನ ಸಮಸ್ಯೆ ಆಗದಂತೆ ನೋಡಿಕೊಳ್ಳಿ

ನೀರಿನ ಸಮಸ್ಯೆಗಳಿರುವ ಕಡೆ ಖಾಸಗಿ ಬೋರ್‌ವೆಲ್ ಮತ್ತು ಟ್ಯಾಂಕರ್‌ಗಳ ಮೂಲಕ ಜನರಿಗೆ ನೀರು ಕೊಡುವ ಕೆಲಸ ಮಾಡಬೇಕು. ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಬೇಕು. ಜಿಲ್ಲೆಯ ಯಾವ- ಯಾವ ಭಾಗದಿಂದ ಸಮಸ್ಯೆಗಳು ಬರುತ್ತವೆ ಎನ್ನುವುದರ ಕುರಿತು ಪಟ್ಟಿ ಮಾಡಿ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದಾದರು ರಿಪೇರಿ ಸೇರಿದಂತೆ ಇತರೆ ಏನಾದರು ಕೆಲಸ ಇದ್ದಲ್ಲಿ ಆಯಾ ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಪೋಸಲ್ ಕೊಡಿ. ಇತರೆ ಯಾವುದೇ ಸಮಸ್ಯೆಗಳಿದ್ದರೆ ನಮ್ಮ ಗಮನಕ್ಕೆ ತರಬೇಕು. ಜಾನುವಾರುಗಳಿಗೆ ಮೇವಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್ ಹೇಳಿದರು.

ರಾಯಚೂರಿನಲ್ಲಿ ಉದ್ಯೋಗ ಮೇಳ 11ರಂದು

ರಾಯಚೂರು: ಕೈಗಾರಿಕಾ ತರಬೇತಿ ಸಂಸ್ಥೆ ರಾಯಚೂರು ವತಿಯಿಂದ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯ ಸಹಕಾರದೊಂದಿಗೆ ಪ್ರಸಕ್ತ ಸಾಲಿನ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮೇ 11 ರಂದು ಬೆಳಿಗ್ಗೆ 10.00 ಗಂಟೆಗೆ ಉದ್ಯೋಗ ಮೇಳವನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ರಾಯಚೂರಿನಲ್ಲಿ ನಡೆಯಲಿದೆ.

ಮೇಳದಲ್ಲಿ ಭಾಗವಹಿಸುವ ಕಂಪನಿಗಳು ಸಾವಿತ್ರಿ ಗ್ರೂಪ್ ಆಫ್ ಇಂಡಸ್ಟ್ರೀಸ್, ಷಾ ಹ್ಯೂಂಡೈ ಸೇಲ್ಸ್ ಆಂಡ್ ಸರ್ವಿಸಸ್ ರಾಯಚೂರು, ತಿರುಮಲ ಹೊಂಡ ಸೇಲ್ಸ್ ಆಂಡ್ ಸರ್ವಿಸಸ್ ರಾಯಚೂರು, ಹೋಂಡಾ ಪ್ರೈವೇಟ್ ಲಿಮಿಟೆಡ್ ಕೋಲಾರ, ಕೇನ್ಸ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್, ಎಲ್,ಆಂಡ್,ಟಿ, ಜೆ,ಎಸ್ ,ಡ್ಬ್ಲೂ ಟೊಯೋಟಾ, ಶಿಲ್ಪಾ ಫಾರ್ಮಾ ಸಿಟಿಕಲ್ಸ್ ರಾಯಚೂರು, ಸ್ಕೈ ಲೈನ್ ಮ್ಯಾನೆಜಮೆಂಟ್ ಸರ್ವಿಸಸ್, ನಿರ್ಮಾಣ ಆರ್ಗನೈಜೇಷನ್ ಬೆಂಗಳೂರು, ಸಾರಾ ಕನ್ಸಲ್ಟೆನ್ಸಿ ಆಂಡ್ ಸರ್ವಿಸಸ್, ಇ ಟೂ ಇ ಪ್ರಕ್ಯೂರ್ಮೆಂಟ್ ಹಾಗೂ ಬೆಂಗಳೂರು ಮತ್ತು ಹೈದ್ರಾಬಾದ್ ನ ಪ್ರತಿಷ್ಠಿತ ಬಹುರಾಷ್ಟ್ರೀಯ ಮಲ್ಟಿನ್ಯಾಷನಲ್ ಕಂಪನಿಗಳು ಸದರಿ ಉದ್ಯೋಗ ಮೇಳದಲ್ಲಿ ವಿವಿಧ ಉದ್ದಿಮೆಗಳ ಪ್ರತಿನಿಧಿಗಳು ಭಾಗವಹಿಸುತ್ತಿ ಅರ್ಹ ಅಭ್ಯರ್ಥಿಗಳನ್ನ ಮೇಳದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ. ಸದರಿ ಮೇಳಕ್ಕೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಪ್ಲೋಮೊ ಪೂರ್ಣಗೊಳಿಸಿದ ಹಾಗೂ ಪದವಿಧರರು ಮತ್ತು ಐಟಿಐನ ಎಲ್ಲಾ ವೃತ್ತಿಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಭಾಗವಹಿಸಬಹುದು, ಆಸಕ್ತ ಅಭ್ಯರ್ಥಿಗಳು ಈ ಮೇಳ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಮಾಣಿಕ್ ನಗರ ರಾಯಚೂರು . ಮೊ. ಸಂ: 1) 9036684778 2) 9035198134 ಇವರನ್ನು ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ನವೀನಕುಮಾರ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೋಳದ ಮೇವು ತಿಂದು ಕುರಿಗಳ ಸಾವು

ಮುದಗಲ್: ಪಟ್ಟಣ ಸಮೀಪದ ಸೋಂಪುರ ಗೊಲ್ಲರಟ್ಟಿಯಲ್ಲಿ ಹಸಿ ಜೋಳದ ಮೇವು ತಿಂದು 50 ಕ್ಕೂ ಹೆಚ್ಚು ಕುರಿಗಳು ಅಸ್ತವ್ಯಸ್ತಗೊಂಡಿದ್ದು, ಐದು ಕುರಿಗಳು ಸಾವನಪ್ಪಿದ ಘಟನೆ ಜರುಗಿದೆ . ಗೋಲ್ಲರ ಹಟ್ಟಿಯ ಜಮೀನೊಂದರಲ್ಲಿ ಜೋಳ ಬೆಳೆಯಲಾಗಿತ್ತು, ಜೋಳ ಕಟಾವು ಮಾಡಿದ ಬಳಿಕ ನೀರು ಹಾಯಿಸಿ ಬುಡದಲ್ಲಿ ಮೇವು ಚಿಗಿದಿತ್ತು. 300 ಕ್ಕೂ ಹೆಚ್ಚು ಕುರಿಗಳು ಒಂದು ಎಕರೆ ಹಸಿ ಜೋಳದ ಮೇವು ತಿನ್ನಲು ಬಿಟ್ಟಾಗ ಅದರಲ್ಲಿ 50 ಕ್ಕೂ ಹೆಚ್ಚು ಕುರಿಗಳು ಅಸ್ತವ್ಯಸ್ತಗೊಂಡು ಐದು ಕುರಿಗಳನ್ನು ಸಾವನಪ್ಪಿದ್ದು, ಉಳಿದ ಕುರಿಗಳು ಔಷದೋಪಚಾರದಿಂದ ಗುಣಮುಖವಾಗಿವೆ. ಸ್ಥಳಕ್ಕೆ ಧಾವಿಸಿದ ಪಶುಸಂಗೋಪನ ಇಲಾಖೆಯ ವೈದ್ಯಾಧಿಕಾರಿ ಸತ್ತಕುರಿಗಳ ಸೇವಾ ಪಂಚಿನಾಮೆನಡೆಸಿ ಇದು ವಿಷಪೂರಿತ ಮೇವು ತಿಂದಿರುವುದರಿಂದ ಸಾವನ್ನಪ್ಪಿವೆ. ಸರಕಾರದಿಂದ ಬರುವ ಪರಿಹಾರವನ್ನು ಕುರಿಗಾಯಿಗಳಿಗೆ ಕೊಡಿಸುವ ಭರವಸೆ ನೀಡಿದರು. ಇಂತಹ ಘಟನೆ ಜರುಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳ ಸಾಧನೆಗೆ ಗೌರವ ಸಮರ್ಪಣೆ

ರಾಯಚೂರು: ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕಗಳಿಸುವ ಮೂಲಕ ರಾಯಚೂರು ತಾಲೂಕಿನ ವಿದ್ಯಾರ್ಥಿಗಳು ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಿತ್ತು ಹಾಕಿ ಮುಂದುವರೆದ ಪ್ರದೇಶ ಎಂಬಂತೆ ಮಾಡಿದ್ದಾರೆ ಎಂದು ತಹಶೀಲ್ದಾರ್‌ಸುರೇಶ ವರ್ಮಾ ಹೇಳಿದರು. ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಹಮ್ಮಿಕೊಂಡಿದ್ದ ರಾಯಚೂರು ತಾಲೂಕಿನ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರತಿಶತ 100 ರಷ್ಟು ಫಲಿತಾಂಶ ಪಡೆದ ಶಾಲೆಯ ಮುಖ್ಯ ಗುರುಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಮೊದಲಿನಿಂದಲೂ ಹಿಂದುಳಿದ ಜಿಲ್ಲೆಯೆಂದು ಕರೆಯಲ್ಪಡುತ್ತಿದ್ದ ಜಿಲ್ಲೆಯನ್ನು ಇಡೀ ರಾಜ್ಯವೇ ತಿರುಗಿ ನೋಡುವಂತೆ ಇಲ್ಲಿನ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳ ಪಾಲಕರು ಮತ್ತು ವಿದ್ಯಾರ್ಥಿಗಳು ಮಾಡಿದ್ದಾರೆ ಎಂದರು. ಅತ್ಯಂತ ಕಾಳಜಿಯಿಂದ ತಮ್ಮದೇ ಆದ ರೂಪರೇಷೆಗಳನ್ನು ಇಲ್ಲಿನ ಶಿಕ್ಷಕರು ರೂಪಿಸಿಕೊಂಡು, ನಿಗಾ ವಹಿಸಿ, ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಪ್ರೇರೇಪಣೆ ನೀಡಿ ಉತ್ತಮ ಫಲಿತಾಂಶ ಬರುವಂತೆ ಮಾಡಿದ್ದಾರೆ. ರಾಯಚೂರಿನ ವಿದ್ಯಾರ್ಥಿಗಳು ಬುದ್ಧಿಶಕ್ತಿ ಇದೆ. ಅವರ ಹಿಂದೆ ಮಾರ್ಗದರ್ಶನ ಮತ್ತು ನಿರಂತರ ಪರಿಶ್ರಮ ಇದ್ದರೆ ಏನನ್ನಾದರೂ ಸಾಧಿಸಬಹುದೆಂಬುವುದನ್ನು ವಿದ್ಯಾರ್ಥಿಗಳು ತೋರಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು. ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೂ ಶಿಕ್ಷಣ ಇಲಾಖೆ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಹಕಾರ ನಿರಂತರವಾಗಿರಲಿದ್ದು, ಉತ್ತಮ ಭವಿಷ್ಯವನ್ನು ರೂಪಿಸಿಕೊಂಡು ಜಿಲ್ಲೆಗೆ, ಶಿಕ್ಷಕರಿಗೆ, ಪಾಲಕರಿಗೆ ಕೀರ್ತಿ ತರುವ ಕೆಲಸ ಎಲ್ಲಾ ವಿದ್ಯಾರ್ಥಿಗಳು ಮಾಡಲಿ ಎಂದು ಸಲಹೆ ನೀಡಿದರು.

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಹರಪನಹಳ್ಳಿ, ವಿಜಯನಗರಜಿಲ್ಲೆ-583131.
Website : harapanahallitown.mrc.gov.in e-mail :ka.harapanahalli.tmc@gmail.com
ದೂರವಾಣಿಸಂಖ್ಯೆ : 08398-280258 ಫ್ಯಾಕ್ಸ ಸಂಖ್ಯೆ: 08398-280581
ಕ್ರ.ಸಂ:ಪುಸ:ಹಹಳ್ಳಿ:/ತಾಂತ್ರಿಕ/02/2026-27 ದಿನಾಂಕ:08/05/2026

: ಇ-ಪ್ರಕ್ಯೂರ್ಮೆಂಟ್ ಟೆಂಡರ್ ಪ್ರಕಟಣೆ :

2026-27ನೇ ಸಾಲಿನ ಕುಡಿಯುವ ನೀರಿನ ಅನುದಾನ ಮತ್ತು 2026-27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಈ ಕೆಳಗಿನ ಇಂ-ಡೆಂಟ್ಗಳ ಟೆಂಡರಗಳನ್ನು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ತಿದ್ದುಪಡಿ ನಿಯಮಗಳು 2001ರ ಅನ್ವಯ ಕೆ.ಡ್ಲೂ-1 ಸ್ಟ್ಯಾಂಡರ್ಡ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಾಮವಳಿಯಂತೆ ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಟೆಂಡರ ಕರೆಯಲಾಗಿದ್ದು ಆಸಕ್ತಿಯುಳ್ಳ ಅರ್ಹ ಮಯಿತ್ತು ನೋಂದಾಯಿತ ಗುತ್ತಿಗೆದಾರರು/ಸರಬರಾಜುದಾರರು ನಿಬಂಧನೆಗಳನ್ನೊಳಗೊಂಡ ದಸ್ತಾವೇಜುಗಳನ್ನು ಮತ್ತು ವಿವರಗಳನ್ನು https://kppp.karnataka.gov.in/ ನಿಂದ ಡೌನ್ಲೋಡ ಮಾಡಿಕೊಳ್ಳಬಹುದಾಗಿದೆ.

ಕ್ರ. ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಟೆಂಡರಗಳನ್ನು ಸಲ್ಲಿಸಲು ಕೊನೆಯ
1.	DMA/2026-27/WS/ WORK_INDENT58006	3.50	8750.00	16/05/2026
2.	DMA/2026-27/WS/ WORK_INDENT58008	3.90	9750.00	
3.	DMA/2026-27/WS/ WORK_INDENT58009	1.92	4800.00	
4.	DMA/2026-27/RD/ WORK_INDENT58173	0.96	2400.00	

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡಿಯಬಹುದಾಗಿದೆ.

ಸಹಿ/-
ಪೌರಾಯುಕ್ತರು
ನಗರಸಭೆ, ಹರಪನಹಳ್ಳಿ.

ರಾಜೀ ಪ್ರಕರಣ ತ್ವರಿತ ಇತ್ಯರ್ಥಕ್ಕೆ ಸುವರ್ಣಾವಕಾಶ: ನ್ಯಾ. ಮಹಾಂತೇಶ ದರಗದ

ರಾಷ್ಟ್ರೀಯ ಲೋಕ್ ಅದಾಲತ್ ಜುಲೈ 11ಕ್ಕೆ

ಕೊಪ್ಪಳ: ರಾಜೀ ಸಂಧಾನದ ಮೂಲಕ ಪ್ರಕರಣ ತ್ವರಿತವಾಗಿ ಇತ್ಯರ್ಥಕ್ಕೆ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದ್ದು, ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳನ್ನೂ ರಾಜಿ ಸಂಧಾನದ ಮೂಲಕ ಪರಿಹರಿಸಿಕೊಳ್ಳಲು ''ಸಮಾಧಾನ ಸಮಾರೋಹ'' ಎಂಬ ವಿಶೇಷ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ಎಸ್. ದರಗದ ಹೇಳಿದರು.

ನಗರದ ಜಿಲ್ಲಾ ನ್ಯಾಯಾಲಯದಲ್ಲಿನ ಡಿಎಲ್‌ಎಸ್‌ಎ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ''ಸಮಾಧಾನ ಸಮಾರೋಹ'' ವಿಶೇಷ ಲೋಕ್ ಅದಾಲತ್ ಮತ್ತು ಮೆಗಾ ಲೋಕ ಅದಾಲತ್ ಬಗ್ಗೆ ಮಾಹಿತಿ ನೀಡಿದರು.

ದೇಶದ ಪಕ್ಷಗಾರರಿಗೆ ಇದೊಂದು ಸುವರ್ಣಾವಕಾಶ. ಇದನ್ನು ಪಕ್ಷಗಾರರು ಸದುಪಯೋಗ ಪಡೆದುಕೊಳ್ಳಬೇಕು. ಈ ಹಿನ್ನೆಲೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಚಂದ್ರಶೇಖರ. ಸಿ. ಅವರ ನೇತೃತ್ವದಲ್ಲಿ ಕೊಪ್ಪಳ ಜಿಲ್ಲಾದ್ಯಂತ 2026ರ ಜುಲೈ 11 ರಂದು ನಡೆಯಲಿದೆ. ರಾಷ್ಟ್ರೀಯ ಲೋಕ್ ಅದಾಲತ್ತಿನಲ್ಲಿ ಪಕ್ಷಗಾರರು ತಮ್ಮ ವ್ಯಾಜ್ಯ ಪರಸ್ಪರ ರಾಜಿ ಸಂಧಾನ ಮಾಡಿಕೊಳ್ಳುವ ಮೂಲಕ ಪ್ರಕರಣ ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ರಾಜಿ ಸಂಧಾನಕ್ಕಾಗಿ ಸಿವಿಲ್ ದಾವೆ, ಭೂ-ಸ್ವಾಧೀನ ಪ್ರಕರಣ, ಬ್ಯಾಂಕ್ ವಸೂಲಾತಿ ಪ್ರಕರಣ, ಚೆಕ್ ಬೌನ್ಸ್ ಪ್ರಕರಣ, ಮೋಟಾರು ಅಪಘಾತ ಪರಿಹಾರ ಪ್ರಕರಣ, ವೈವಾಹಿಕ ಪ್ರಕರಣ ಹಾಗೂ ರಾಜಿ ಆಗಲು ಅರ್ಹವಿರುವ ಕ್ರಿಮಿನಲ್ ಕಾಂಪೌಂಡೆಬಲ್ ಪ್ರಕರಣ ಸೇರಿ ಹಲವಾರು ಪ್ರಕರಣ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.

ಲೋಕ್ ಅದಾಲತ್ ನಲ್ಲಿ ಪ್ರಕರಣ ಇತ್ಯರ್ಥವಾದರೆ, ನ್ಯಾಯಾಲಯಕ್ಕೆ ತುಂಬಿದ ಶುಲ್ಕ ಸಂಪೂರ್ಣವಾಗಿ ವಾಪಸ್ ನೀಡಲಾಗುವುದು. ಕಾರಣ ಪಕ್ಷಗಾರರು ಇದೇ ಜುಲೈ 11ರಂದು ಕೊಪ್ಪಳ ಜಿಲ್ಲೆಯ ಎಲ್ಲ ನ್ಯಾಯಾಲಯದಲ್ಲಿ ಜರುಗುವ 'ರಾಷ್ಟ್ರೀಯ ಲೋಕ ಅದಾಲತ್'ನ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಜಿಲ್ಲಾ ನ್ಯಾಯಾಲಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಮತ್ತು ಮಾಧ್ಯಮ ಪ್ರತಿನಿಧಿಗಳು ಇದ್ದರು.



> ಭಾರತದ ಸರ್ವೋಚ್ಚ ನ್ಯಾಯಾಲಯ 'ಸಮಾಧಾನ ಸಮಾರೋಹ' ವಿಶೇಷ ಲೋಕ್ ಅದಾಲತ್ 2026ರ ಆಗಸ್ಟ್ 21, 22 ಮತ್ತು 23ರಂದು ಮೂರು ದಿನ ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ವಿಚಾರಣೆಗೆ ಬಾಕಿ ಇರುವ ಒಟ್ಟು 4328 ಪ್ರಕರಣ ಸಂಧಾನಕ್ಕಾಗಿ ಗುರುತಿಸಲಾಗಿದೆ. ಈ ವಿಶೇಷ ಲೋಕ್ ಅದಾಲತ್ ಆಯೋಜಿಸಲಾಗಿದೆ.
>
> -ಮಹಾಂತೇಶ ಎಸ್. ದರಗದ, ಹಿರಿಯ ಸಿವಿಲ್ ನ್ಯಾಯಾಧೀಶ

ಸಂಧಾನಗಳಿಂದ ಪ್ರಕರಣ ಪರಿಹರಿಸಿಕೊಳ್ಳಿ

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಈ ವರೆಗೆ ಸಿವಿಲ್-60 ಮತ್ತು ಕ್ರಿಮಿನಲ್ (ಅ)-1 ಸೇರಿ ಒಟ್ಟು 61 ಪ್ರಕರಣ ಗುರುತಿಸಲಾಗಿದೆ. ಆಸಕ್ತಿಯುಳ್ಳವರು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ತಮ್ಮ ವ್ಯಾಜ್ಯ ರಾಜಿ ಸಂಧಾನದ ಮೂಲಕ ಪರಿಹರಿಸಿಕೊಳ್ಳಲು ನೋಂದಣಿಗೂ ಸಹ ಅವಕಾಶ ಕಲ್ಪಿಸಲಾಗಿದೆ. ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಂಪರ್ಕಿಸುವ ಮೂಲಕ ಸಾರ್ವಜನಿಕರು ತಮ್ಮ ವ್ಯಾಜ್ಯ ಪರಿಹರಿಸಿಕೊಳ್ಳಲು ಇಂದಿನಿಂದಲೇ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಆಯ್ಕೆಯಾದ ವ್ಯಾಜ್ಯಗಳನ್ನು ಮಧ್ಯಸ್ಥಿಕೆಗಾರರ ಮೂಲಕ ಸಂಬಂಧಪಟ್ಟ ಜಿಲ್ಲಾ ಅಥವಾ ತಾಲೂಕು ಮಟ್ಟದಲ್ಲೇ ಸಮಸ್ಯೆ ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಗೌರವಾನ್ವಿತ ನ್ಯಾಯಾಧೀಶರು ತಿಳಿಸಿದ್ದಾರೆ.

ಕೆರೆಗಳ ಒತ್ತುವರಿ | ರಾಸಾಯನಿಕ ಬಳಕೆಯಿಂದ ಹಕ್ಕಿಗಳ ನೆಲೆಗಳು ನಾಶ

ಇಂದು ವಿಶ್ವ ವಲಸೆ ಹಕ್ಕಿಗಳ ದಿನ

ವಿನುತಾ ಹೆಗಡೆ, ಶಿರಸಿ

ದಿನ ವಿಶೇಷ

ಪ್ರಕೃತಿಯ ಅದ್ಭುತಗಳಲ್ಲಿ ಒಂದಾದ ಹಕ್ಕಿಗಳ ವಲಸೆ ಕೇವಲ ಒಂದು ಪ್ರಯಾಣವಲ್ಲ, ಅದು ಅಳಿವು-ಉಳಿವಿನ ಹೋರಾಟ. ಪ್ರತಿ ವರ್ಷ ಮೇ ಮತ್ತು ಅಕ್ಟೋಬರ್‌ತಿಂಗಳ ಎರಡನೇ ಶನಿವಾರದಂದು ವಿಶ್ವದಾದ್ಯಂತ 'ವಿಶ್ವ ವಲಸೆ ಹಕ್ಕಿಗಳ ದಿನ'ವನ್ನು ಆಚರಿಸಲಾಗುತ್ತದೆ. ಗಡಿಗಳ ಹಂಗಿಲ್ಲದೆ ಸಾವಿರಾರು ಮೈಲಿ ದೂರ ಕ್ರಮಿಸುವ ಈ ಹಕ್ಕಿಗಳು ಪರಿಸರ ವ್ಯವಸ್ಥೆಯ ಸಮತೋಲನ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ವಲಸೆ ಹಕ್ಕಿಗಳು ಕೇವಲ ಹವಾಮಾನ ವೈಪರೀತ್ಯದಿಂದ ತಪ್ಪಿಸಿಕೊಳ್ಳಲು ಮಾತ್ರವಲ್ಲದೆ, ಆಹಾರದ ಹುಡುಕಾಟ ಮತ್ತು ಸಂತಾನೋತ್ಪತ್ತಿಗಾಗಿ ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಹಾರುತ್ತವೆ. ಭಾರತವು 'ಮಧ್ಯ ಏಷ್ಯಾ ಫ್ಲೈವೇ' ಮಾರ್ಗದಲ್ಲಿದ್ದು, ಪ್ರತಿ ವರ್ಷ ಸೈಬೀರಿಯಾ, ಮಂಗೋಲಿಯಾ ಮತ್ತು ಯುರೋಪ್‌ನಿಂದ ಲಕ್ಷಾಂತರ ಹಕ್ಕಿಗಳು ಇಲ್ಲಿಗೆ ಆಗಮಿಸುತ್ತವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಗರೀಕರಣ, ಕೆರೆಗಳ ಒತ್ತುವರಿ, ಅತಿಯಾದ ರಾಸಾಯನಿಕ ಬಳಕೆಯಿಂದ ಹಕ್ಕಿಗಳ ನೆಲೆಗಳು ನಾಶವಾಗುತ್ತಿವೆ.

ಜಾಗತಿಕ ತಾಪಮಾನ ಏರಿಕೆಯಿಂದಾಗಿ ಹಕ್ಕಿಗಳ ವಲಸೆ ಯ ಸಮಯ ಮತ್ತು ಮಾರ್ಗಗಳಲ್ಲಿ ಏರುಪೇರಾಗುತ್ತಿದ್ದು, ಇದು ಜೀವವೈವಿಧ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.

ಹಕ್ಕಿಗಳು ಕೇವಲ ನೋಡಲು ಸುಂದರವಷ್ಟೇ ಅಲ್ಲ, ಅವು ಕೀಟಗಳ ನಿಯಂತ್ರಣ ಮತ್ತು ಪರಾಗಸ್ಪರ್ಶದ ಮೂಲಕ ರೈತರಿಗೆ ಮಿತ್ರನಾಗಿವೆ. ಈ ದಿನದ ಮುಖ್ಯ ಉದ್ದೇಶವೆಂದರೆ ವಲಸೆ ಹಕ್ಕಿಗಳ ಸಂರಕ್ಷಣೆಗಾಗಿ ಅಂತಾರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸುವುದು ಮತ್ತು ಅವುಗಳ ಆವಾಸಸ್ಥಾನಗಳಾದ ಕೆರೆ, ಕುಂಟೆ ಹಾಗೂ ಕಾಡುಗಳನ್ನು ಉಳಿಸಿಕೊಳ್ಳುವುದು. ಹಕ್ಕಿಗಳ ಹಾದಿ ಸುಗಮವಾದರೆ ಮಾತ್ರ ಪ್ರಕೃತಿಯ ಸರಪಳಿ ಸುರಕ್ಷಿತವಾಗಿರಲು ಸಾಧ್ಯ.

ಭಾರತಕ್ಕೆ ಚಳಿಗಾಲದಲ್ಲಿ ವೈವಿಧ್ಯಮಯ ಹಕ್ಕಿಗಳ ವಲಸೆ

ಭಾರತವು ಭೌಗೋಳಿಕವಾಗಿ 'ಮಧ್ಯ ಏಷ್ಯಾ ಹಾರಾಟದ ಮಾರ್ಗ'ದಲ್ಲಿ ಇರುವುದರಿಂದ ಪ್ರತಿ ವರ್ಷ ಚಳಿಗಾಲದಲ್ಲಿ ಸಾವಿರಾರು ಮೈಲಿ ದೂರದಿಂದ ವೈವಿಧ್ಯಮಯ ಹಕ್ಕಿಗಳು ಇಲ್ಲಿಗೆ ವಲಸೆ ಬರುತ್ತವೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಸೈಬೀರಿಯನ್ ಕ್ರೇನ್. ಅತ್ಯಂತ ಅಪರೂಪದ ಈ ಬಿಳಿ ಹಕ್ಕಿಗಳು ಸೈಬೀರಿಯಾದಿಂದ ರಾಜಸ್ಥಾನದ ಭರತ್ ಪುರಕ್ಕೆ ದೀರ್ಘ ಪ್ರಯಾಣ ಬೆಳೆಸುತ್ತವೆ. ಮತ್ತೊಂದು ವಿಸ್ಮಯಕಾರಿ ಹಕ್ಕಿಯೆಂದರೆ ಬಾರ್-ಹೆಡೆಡ್ ಗೂಸ್. ಇವು ಹಿಮಾಲಯದ ಅತಿ ಎತ್ತರದ ಶಿಖರಗಳ ಮೇಲೆಯೇ ಹಾರಿ ಬರಬಲ್ಲ ಸಾಮರ್ಥ್ಯ ಹೊಂದಿದ್ದು, ಕರ್ನಾಟಕದ ಮೈಸೂರು ಮತ್ತು ಮಲೆನಾಡು ಭಾಗದ ಕೆರೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಉದ್ದನೆಯ ಕಾಲು ಹಾಗೂ ಗುಲಾಬಿ ಮಿಶ್ರಿತ ಬಿಳಿ ಬಣ್ಣದ ಗ್ರೇಟರ್ ಫ್ಲೆಮಿಂಗೊಗಳು ಗುಜರಾತ್‌ನ ಕಚ್ ಮತ್ತು ಒಡಿಶಾದ ಚಿಲ್ಕಾ ಸರೋವರಕ್ಕೆ ಅಂದವನ್ನು ನೀಡುತ್ತವೆ. ಸಣ್ಣ ಗಾತ್ರದ ಬೇಟೆ ಹಕ್ಕಿಯಾದ ಅಮುರ್ ಫಾಲ್ಕನ್ ಸೈಬೀರಿಯಾದಿಂದ ದಕ್ಷಿಣ ಆಫ್ರಿಕಾಕ್ಕೆ ಹೋಗುವ ದಾರಿಯಲ್ಲಿ ಈಶಾನ್ಯ ಭಾರತದ ನಾಗಾಲ್ಯಾಂಡ್ ನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬೀಡುಬಿಡುತ್ತವೆ. ವಿಶಿಷ್ಟವಾದ ದೊಡ್ಡ ಕೊಕ್ಕನ್ನು ಹೊಂದಿರುವ ರೋಸಿ ಪೆಲಿಕನ್ ಹಕ್ಕಿಗಳು ಯುರೋಪ್ ನಿಂದ ಬಂದು ದಕ್ಷಿಣ ಭಾರತದ ಜೌಗು ಪ್ರದೇಶಗಳಲ್ಲಿ ನೆಲೆಸುತ್ತವೆ. ಇವುಗಳ ಜತೆಗೆ ನಾರ್ದರ್ನ್ ಪಿಂಟೈಲ್, ಬ್ಲೂಥ್ರೋಟ್ ಮತ್ತು ಬ್ಲ್ಯಾಕ್-ಟೇಲ್ಡ್ ಗಾಡ್ವಿಟ್ ಅಂತಹ ಹಕ್ಕಿಗಳು ಭಾರತದ ಕೆರೆ-ಕಟ್ಟೆಗಳನ್ನು ತಮ್ಮ ತಾತ್ಕಾಲಿಕ ತಾಣವನ್ನಾಗಿ ಮಾಡಿಕೊಳ್ಳುತ್ತವೆ. ಈ ಹಕ್ಕಿಗಳು ಚಳಿಗಾಲ ಮುಗಿಯುತ್ತಿದ್ದಂತೆಯೇ ಅಂದರೆ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಮತ್ತೆ ತಮ್ಮ ತಾಯ್ನಾಡಿಗೆ ಮರಳುತ್ತವೆ.

ಅಭಿಮಾನೋತ್ಸವಕ್ಕೆ ಜಿಲ್ಲೆಯಿಂದ ಸಹಸ್ರಾರು ಜನ

ಕಾರವಾರ: ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರ ಹಾಗೂ ಜಿಲ್ಲೆಯಿಂದ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಲಿದ್ದಾರೆ.

30ಕ್ಕೂ ಹೆಚ್ಚು ಬಸ್ಸುಗಳು, ಟೆಂಪೋಗಳು, ನೂರಾರು ಕಾರು, ಖಾಸಗಿ ವಾಹನಗಳಲ್ಲಿ ಜನರು ಯಡಿಯೂರಪ್ಪ ಅಭಿಮಾನೋತ್ಸವವನ್ನು ಕಣ್ತುಂಬಿಕೊಳ್ಳಲು, ಹುಟ್ಟು ಹೋರಾಟಗಾರು, ಛಲದಂಕ ಮಲ್ಲ ಯಡಿಯೂರಪ್ಪ ಅವರಿಗೆ ಅಭಿನಂದನೆ ಸಲ್ಲಿಸಲು ಜಿಲ್ಲೆಯಿಂದ ಜನತೆ ಉತ್ಸಾಹದಿಂದ ಪಾಲ್ಗೊಳ್ಳಲಿದ್ದಾರೆ. ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ತೆರಳಲಿದ್ದಾರೆ.

ದಕ್ಷಿಣ ಭಾರತದಲ್ಲಿಯೆ ಮೊಟ್ಟ ಮೊದಲು ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಅಧಿಕಾರಕ್ಕೆ ತಂದ ಶ್ರೇಯಸ್ಸು ರೈತ ನಾಯಕ, ಹುಟ್ಟು ಹೋರಾಟಗಾರ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಮಹಿಳೆಯರು, ರೈತರು, ದೀನ ದಲಿತರು, ಹಿಂದುಳಿದವರು ಹೀಗೆ ಎಲ್ಲ ವರ್ಗದವರಿಗೆ ನ್ಯಾಯ ದೊರಕಿಸಿಕೊಟ್ಟ ಧೀಮಂತ ನಾಯಕ ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ಜನಸೇವೆ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಆಚರಿಸುತ್ತಿರುವುದು ಸಂತಸದ ಸಂಗತಿ. ಅಭಿಮಾನೋತ್ಸವದಲ್ಲಿ ಕಾರವಾರ ಅಂಕೋಲಾ ಕ್ಷೇತ್ರ ಹಾಗೂ ಜಿಲ್ಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ಜನತೆ ಭಾಗವಹಿಸುತ್ತಿದ್ದಾರೆ.

- ರೂಪಾಲಿ ಎಸ್.ನಾಯ್ಕ, ಬಿಜೆಪಿ ರಾಜ್ಯ ಉಪಾಧ್ಯಕ್ಷರು

ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಭಾರತೀಯ ಜನತಾ ಪಾರ್ಟಿಯ ಜಿಲ್ಲೆಯ ಎಲ್ಲ ಮಂಡಲಗಳಿಗೆ ಭೇಟಿ ನೀಡಿ, ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳುವಂತೆ ಜನತೆಯಲ್ಲಿ ಮನವಿ ಮಾಡಿದ್ದಾರೆ. ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳಲು ಜನತೆಗೆ ಅನುಕೂಲವಾಗುವಂತೆ ವಾಹನಗಳ ವ್ಯವಸ್ಥೆಯನ್ನೂ ಕಲ್ಪಿಸಿದ್ದಾರೆ.

ರೂಪಾಲಿ ಎಸ್.ನಾಯ್ಕ ನಡೆಸಿದ ಸಭೆಗಳಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಸಾಧನೆ, ಪಕ್ಷ ಸಂಘಟನೆಗಾಗಿ ನಡೆಸಿದ ಅವಿರತ ಹೋರಾಟ, ಮುಖ್ಯಮಂತ್ರಿಯಾಗಿ ಘೋಷಿಸಿದ ಜನಪ್ರಿಯ ಯೋಜನೆಗಳು, ಜಿಲ್ಲೆಯ ಜನತೆಗೆ ಯಡಿಯೂರಪ್ಪ ಅವರ ಕೊಡುಗೆಗಳ ಬಗ್ಗೆ ವಿವರಿಸಿ, ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ.

ದೂರದ ಚಿತ್ರದುರ್ಗದಲ್ಲಿ ಶನಿವಾರ ನಡೆಯಲಿರುವ ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಜನತೆ ಭಾಗವಹಿಸುತ್ತಿರುವುದು ವಿಶೇಷವಾಗಿದೆ.



ಸಮಾಚಾರ ಸಣ್ಣದಲ್ಲ

ಗಿರೀಶ್ ಮಟ್ಟಣ್ಣವರ್ ಮೊಬೈಲ್ ಎಸ್‌ಐಟಿಗೆ

ಬೆಳ್ತಂಗಡಿ: ರಾಜ್ಯಾದ್ಯಂತ ತೀವ್ರ ಕುತೂಹಲ ಮೂಡಿಸಿರುವ ಧರ್ಮಸ್ಥಳದ ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖಾ ತಂಡದ (ಎಸ್‌ಐಟಿ) ನೋಟಿಸ್‌ಗೆ ಸ್ಪಂದಿಸಿದ ಗಿರೀಶ್ ಮಟ್ಟಣ್ಣವರ್ ಅಧಿಕಾರಿಗಳ ಮುಂದೆ ಹಾಜರಾದರು. ಈ ಸಂದರ್ಭದಲ್ಲಿ ತನಿಖೆಯ ಭಾಗವಾಗಿ ಅವರ ಮೊಬೈಲ್ ಫೋನ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ತನಿಖಾ ಪ್ರಕ್ರಿಯೆಯ ಭಾಗವಾಗಿ ಹಳೆಯ ಆಂಡ್ರಾಯ್ಡ್ ಮೊಬೈಲ್ ಫೋನ್ ಹಾಜರುಪಡಿಸುವಂತೆ ಎಸ್‌ಐಟಿ ಈ ಹಿಂದೆ ಮಟ್ಟಣ್ಣವರ್ ಅವರಿಗೆ ನೋಟಿಸ್ ನೀಡಿತ್ತು. ಅದರಂತೆ ಎಸ್‌ಐಟಿ ಕಚೇರಿಗೆ ಭೇಟಿ ನೀಡಿದ ಅವರು, ಅಧಿಕಾರಿಗಳ ವಿಚಾರಣೆಗೆ ಸಹಕರಿಸಿದರು. ಸುದೀರ್ಘ ವಿಚಾರಣೆಯ ನಂತರ, ಸೋಕೋ ತಂಡದ ನೇತೃತ್ವದಲ್ಲಿ ಮಹಜರು ಪ್ರಕ್ರಿಯೆ ನಡೆಸಿದ ಎಸ್‌ಐಟಿ ಅಧಿಕಾರಿಗಳು, ಪ್ರಕರಣದ ಹೆಚ್ಚಿನ ತನಿಖೆಗಾಗಿ ಮೊಬೈಲ್ ಜಪ್ತಿ ಮಾಡಿದ್ದಾರೆ. ತಾಂತ್ರಿಕ ಸಾಕ್ಷ್ಯಗಳ ಕ್ರೋಢೀಕರಣಕ್ಕಾಗಿ ಈ ಮೊಬೈಲ್ ಪ್ರಮುಖ ಎನ್ನಲಾಗಿದ್ದು ಇದರ ದತ್ತಾಂಶ ವಿಶ್ಲೇಷಣೆಗೆ ಒಳಪಡಿಸುವ ಸಾಧ್ಯತೆಯಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಡಿಎಂಕೆ ಜೊತೆ ಮೈತ್ರಿ ಕಡಿದುಕೊಂಡು ಟಿವಿಕೆ ಬೆಂಬಲಿಸಿದ ಕಾಂಗ್ರೆಸ್
ಸುದ್ದಿ



ವಿರಾಮ
ಪ್ರತಿ ಭಾನುವಾರ

ಬತ್ತಿದ ಬೋರ್‌ವೆಲ್‌ಗಳು ಕೆಟ್ಟುನಿಂತ ಆರ್‌ಒ ಪ್ಲಾಂಟ್

ಕಲಬುರಗಿ ಜಿಲ್ಲೆಯ 236 ಹಳ್ಳಿಗಳಿಗೆ ಜಲಕ್ಷಾಮದ ಭೀತಿ | 213 ನೀರಿನ ಘಟಕ ಸ್ಥಗಿತ

ದೇವೇಂದ್ರ ಜಾಡಿ ಕಲಬುರಗಿ

ಸೂರ್ಯನ ಪ್ರಖರತೆಗೆ ಕಾದ ಕೆಂಡದಂತಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಈಗ ಬಾಯಾರಿಕೆ ನೀಗಿಸಿಕೊಳ್ಳುವುದೇ ಅತಿದೊಡ್ಡ ಸವಾಲಾಗಿದೆ. ಒಂದೆಡೆ ಅಂತರ್ಜಲ ಕುಸಿತದಿಂದ ಬೋರ್‌ವೆಲ್‌ಗಳು ಬತ್ತುತ್ತಿದ್ದರೆ, ಮತ್ತೊಂದೆಡೆ ಸರಕಾರ ಕೋಟಿ ಕೋಟಿ ಖರ್ಚು ಮಾಡಿ ನಿರ್ಮಿಸಿದ ಶುದ್ಧ ನೀರಿನ ಘಟಕಗಳು ತಾಂತ್ರಿಕ ದೋಷದಿಂದ ಕೆಟ್ಟು ನಿಂತಿವೆ. ಜಿಲ್ಲೆಯ 236 ಗ್ರಾಮಗಳಲ್ಲಿ ಜಲಕ್ಷಾಮದ ಭೀತಿ ಆವರಿಸಿದ್ದು, ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಹಳ್ಳಿ ಜನತೆ ಹನಿ ನೀರಿಗೂ ಮೈಲಿಗಟ್ಟಲೆ ಅಲೆಯುವಂತಾಗಿದೆ.

'ಪ್ರದರ್ಶನ ವಸ್ತು'ಗಳಾದ 213 ಆರ್‌ಒ ಪ್ಲಾಂಟ್‌ಗಳು: ಸರಕಾರ ಕೋಟ್ಯಂತರ ರುಪಾಯಿ ವೆಚ್ಚದಲ್ಲಿ ನಿರ್ಮಿಸಿದ ಜಿಲ್ಲೆಯ 213 ಶುದ್ಧ ನೀರಿನ ಘಟಕಗಳು ಪ್ರಸ್ತುತ ತಾಂತ್ರಿಕ ದೋಷ ಹಾಗೂ ನಿರ್ವಹಣೆಯ ಕೊರತೆಯಿಂದ ಸ್ಥಗಿತಗೊಂಡಿವೆ. ಜಿಲ್ಲೆಯಲ್ಲಿರುವ ಒಟ್ಟು 517 ಘಟಕಗಳ ಪೈಕಿ ಅರ್ಧದಷ್ಟು ಬಂದ್ ಆಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರಮುಖವಾಗಿ ಚಿಂಚೋಳಿಯಲ್ಲಿ 55, ಕಲಬುರಗಿ ಗ್ರಾಮೀಣ ಭಾಗದಲ್ಲಿ 45 ಹಾಗೂ ಆಳಂದದಲ್ಲಿ 26 ಘಟಕಗಳು ನಿಷ್ಕ್ರಿಯವಾಗಿವೆ. ಇದರಿಂದಾಗಿ ಗ್ರಾಮೀಣ ಭಾಗದ ಜನತೆ ಹನಿ ನೀರಿಗಾಗಿ ಕಿಲೋಮೀಟರ್‌ಗಟ್ಟಲೆ ಅಲೆಯುವಂತಾಗಿದೆ. ಜಿಲ್ಲೆಯ ಆಳಂದ ತಾಲೂಕಿನಲ್ಲಿ ನೀರಿನ ಸಮಸ್ಯೆ ಅತ್ಯಂತ ತೀವ್ರವಾಗಿದ್ದು, ಇಲ್ಲಿನ ಹಲವು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ. ಒಟ್ಟು 236 ಸಮಸ್ಯಾತ್ಮಕ ಗ್ರಾಮಗಳ ಪೈಕಿ ಅಫಜಲಪುರ ಮತ್ತು ಆಳಂದ ತಾಲೂಕುಗಳಲ್ಲೇ ಅತಿ ಹೆಚ್ಚು ಹಳ್ಳಿಗಳು ಬರಲಿವೆ. ಸದ್ಯ 5 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದರೂ, ಚಾಲಕರ ಕೊರತೆಯಿಂದಾಗಿ ಸಮರ್ಪಕ ವಿತರಣೆಯಾಗುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ.

ಜಿಲ್ಲೆಯ ಅಫಜಲಪುರ (43), ಆಳಂದ (45), ಸೇಡಂ (28), ಚಿತ್ತಾಪುರ (25) ಸೇರಿದಂತೆ ಒಟ್ಟು 236 ಹಳ್ಳಿಗಳನ್ನು ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಲಾಗಿದೆ. ಆಳಂದದ ಹೆಬಳಿ ತಾಂಡಾ, ಕಲಬುರಗಿಯ ಮೂಕ ತಾಂಡಾ ಹಾಗೂ ಕುಸನೂರನಲ್ಲಿ ಟ್ಯಾಂಕರ್ ಮೂಲಕ ನೀರು ಹಂಚಲಾಗುತ್ತಿದೆ. ಆದರೆ, ಇಡೀ ಗ್ರಾಮೀಣ ಭಾಗಕ್ಕೆ ಲಭ್ಯವಿರುವ 5 ಟ್ಯಾಂಕರ್‌ಗಳಲ್ಲಿ ಎರಡಕ್ಕೆ ಚಾಲಕರೇ ಇಲ್ಲದಿರುವುದು ಆಡಳಿತ ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ.

ಆಳಂದ ತಾಲೂಕಿನಲ್ಲಿ ಜಲಕ್ಷಾಮ ತೀವ್ರ

ಆಳಂದ ತಾಲೂಕಿನಲ್ಲಿ ಬೇಸಿಗೆಯ ಬಿಸಿಲಿನಿಂದಾಗಿ ಕುಡಿಯುವ ನೀರಿನ ಸಮಸ್ಯೆ ವಿಕೋಪಕ್ಕೆ ಹೋಗಿದೆ. ತಾಲೂಕಿನ ಕವಲಗಾ, ಝುಳಕಿ, ಕಡಗಂಚಿ ಸೇರಿದಂತೆ 24 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದ್ದು, ಜನತೆ ಹನಿ ನೀರಿಗೂ ಪರದಾಡುತ್ತಿದ್ದಾರೆ. ಪರಿಸ್ಥಿತಿ ನಿಭಾಯಿಸಲು 4.38 ಕೋಟಿ ರುಪಾಯಿ ಅನುದಾನದ ಅವಶ್ಯಕತೆಯಿದ್ದು, ಸದ್ಯ ಖಾಸಗಿ ಜಮೀನುಗಳಿಂದ ನೀರು ಖರೀದಿಸಿ ಪೂರೈಸಲಾಗುತ್ತಿದೆ. ನಾರಾಯಣಪುರ ಅಣೆಕಟ್ಟಿನಿಂದ ಭೀಮಾ ನದಿಗೆ ತಕ್ಷಣ ನೀರು ಹರಿಸದಿದ್ದರೆ ಮುಂದಿನ ದಿನಗಳಲ್ಲಿ ತಾಲೂಕಿನ 45 ಹಳ್ಳಿಗಳು ಸಂಪೂರ್ಣ ಜಲಕ್ಷಾಮಕ್ಕೆ ತುತ್ತಾಗುವ ಭೀತಿ ಎದುರಾಗಿದೆ.

ದೀಪದ ಕೆಳಗೆ ಕತ್ತಲೆ: ಡಿಸಿ ಕಚೇರಿಯಲ್ಲೇ ನೀರಿಲ್ಲ!

ಜಿಲ್ಲೆಯ ಅಷ್ಟೂ ಹಳ್ಳಿಗಳ ನೀರಿನ ಸಮಸ್ಯೆ ಬಗೆಹರಿಸಬೇಕಾದ ಜಿಲ್ಲಾಧಿಕಾರಿ ಕಚೇರಿ (ಮಿನಿ ವಿಧಾನಸೌಧ) ಆವರಣದಲ್ಲೇ ಕುಡಿಯುವ ನೀರಿನ ಬರ ಎದುರಾಗಿದೆ. ಇಲ್ಲಿರುವ 2 ಶುದ್ಧ ನೀರಿನ ಘಟಕಗಳು ತಿಂಗಳುಗಳಿಂದ ಕೆಟ್ಟು ನಿಂತಿವೆ. ಕಚೇರಿಗೆ ಕೆಲಸದ ನಿಮಿತ್ತ ಬರುವ ಸಾವಿರಾರು ಜನರಿಗೆ ಹನಿ ನೀರು ಸಿಗದಂತಾಗಿದ್ದು, ಸಾರ್ವಜನಿಕರು ಅಂಗಡಿಗಳಲ್ಲಿ ದುಬಾರಿ ಹಣ ನೀಡಿ ವಾಟರ್ ಬಾಟಲ್ ಖರೀದಿಸುವಂತಾಗಿದೆ. ಸ್ವತಃ ತಮ್ಮ ಕಚೇರಿಯ ಮುಂಭಾಗದ ಘಟಕವನ್ನೇ ಸರಿಪಡಿಸಲಾಗದ ಜಿಲ್ಲಾಡಳಿತ, ಇನ್ನು ಹಳ್ಳಿಗಳ ಸಮಸ್ಯೆ ಹೇಗೆ ಬಗೆಹರಿಸುತ್ತದೆ? ಎಂದು ಜನತೆ ಪ್ರಶ್ನಿಸುತ್ತಿದ್ದಾರೆ.

> ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 55 ನೀರಿನ ಟ್ಯಾಂಕರ್‌ಗಳನ್ನು ಸನ್ನದ್ಧಗೊಳಿಸಲಾಗಿದೆ. ಈಗಾಗಲೇ, ಏಪ್ರಿಲ್‌ನಲ್ಲಿ 200 ಟ್ರಿಪ್‌ಗಳು ನೀರು ಸರಬರಾಜು ಮಾಡಲಾಗಿದೆ. ಎಲ್ಲೆಲ್ಲಿ ಇನ್ನು ಅವಶ್ಯಕತೆ ಇರುತ್ತೆ ಅಲ್ಲಿ ನೀರು ಪೂರೈಕೆ ಮಾಡುತ್ತೇವೆ. ಬೋರ್‌ವೆಲ್, ಹೊಸ ಪೈಪ್‌ಲೈನ್ ಸಂಪರ್ಕ ನೀಡಲು ಕ್ರಮಕೈಗೊಂಡಿದ್ದೇವೆ. ನಗರದ ಬಂದ್ ಆದ ಆರ್‌ಒ ಘಟಕಗಳನ್ನು ದುರಸ್ತಿ ಮಾಡಲು ಸೂಚಿಸಲಾಗಿದೆ.
>
> **-ಅವಿನಾಶ ಶಿಂಧೆ** ಪಾಲಿಕೆ ಆಯುಕ್ತ

> ನೀರಿನ ತೀವ್ರ ಸಮಸ್ಯೆ ಇರುವ ಗ್ರಾಮಗಳಿಗೆ ಟ್ಯಾಂಕರ್ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೇ, ಖಾಸಗಿಯವರಿಂದ ಬೋರ್‌ವೆಲ್ ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಕೆಟ್ಟು ನಿಂತಿರುವ 213 ಶುದ್ಧ ನೀರಿನ ಘಟಕಗಳ ದುರಸ್ತಿಗಾಗಿ ಈಗಾಗಲೇ ಜಿಲ್ಲಾ ಪಂಚಾಯಿತಿ ಮೂಲಕ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
>
> **-ಜಗದೇವ ಎಸ್. ಜೀವಣಗಿ** ಕಾರ್ಯನಿರ್ವಾಹಕ ಎಂಜಿನಿಯರ್

ಡಿಸಿಎಂ ಡಿಕೆಶಿಗೆ ಎನ್.ಆರ್. ರಮೇಶ್ ಮನವಿ

ಚಾಮರಾಜನಗರ ತಾಲೂಕಿಗೆ ವರನಟ ಡಾ.ರಾಜ್ ಹೆಸರಿಡಿ

ಬೆಂಗಳೂರು: ಚಾಮರಾಜನಗರ ತಾಲೂಕಿಗೆ ವರನಟ ಡಾ.ರಾಜ್‌ಕುಮಾರ್ ಅವರ ಹೆಸರಿಡಬೇಕೆಂದು ಅಖಿಲ ಕರ್ನಾಟಕ ಡಾ.ರಾಜ್ ಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟ ಡಿಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಮನವಿ ಮಾಡಿಕೊಂಡಿದೆ.

ಒಕ್ಕೂಟದ ಅಧ್ಯಕ್ಷ ಎನ್.ಆರ್ ರಮೇಶ್ ಅವರು, ಡಿಕೆಶಿಯನ್ನು ಭೇಟಿಯಾಗಿ ಕನ್ನಡ ನಾಡು, ನೆಲ, ಜಲ ಮತ್ತು ಭಾಷೆಗಾಗಿ ಅಪಾರ ಸೇವೆ ಸಲ್ಲಿಸಿದ ಡಾ. ರಾಜ್ ಕುಮಾರ್ ಅವರು ತಮ್ಮ ಸರಳತೆ, ಸಾಮಾಜಿಕ ಬದ್ಧತೆ ಮತ್ತು ಹೋರಾಟಗಳ ಮೂಲಕ ಜನಮನ ಗೆದ್ದ ಅಪರೂಪದ ವ್ಯಕ್ತಿತ್ವ ಎಂದು ವಿವರಿಸಿದರು. 2028-29ರಲ್ಲಿ ರಾಜ್ ಜನ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ರಾಜ್ಯ ಸರಕಾರ ಮುಂದಾಗಬೇಕು ಎಂಬುವುದು ಸೇರಿದಂತೆ ಹಲವಾರು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಡಾ. ರಾಜ್ ಕುಮಾರ್ ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು, ಚಾಮರಾಜನಗರ ತಾಲೂಕಿಗೆ ಡಾ. ರಾಜ್ ಕುಮಾರ್ ತಾಲೂಕು ಎಂದು ನಾಮಕರಣ ಮಾಡುವುದು, ಬೆಂಗಳೂರು ಮತ್ತು ಚಾಮರಾಜನಗರದಲ್ಲಿ 100 ಅಡಿ ಎತ್ತರದ ಕಂಚಿನ ಪ್ರತಿಮೆಗಳ ಸ್ಥಾಪನೆ ಮಾಡಬೇಕು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ಗೆ ರಾಜ್‌ಕುಮಾರ್ ಹೆಸರು, ಮಾಗಡಿ ರಸ್ತೆ ಮೆಟ್ರೊ ನಿಲ್ದಾಣಕ್ಕೆ ಡಾ. ರಾಜ್ ಕುಮಾರ್ ಹೆಸರಿಡಬೇಕು, ರಾಜ್ ಹುಟ್ಟುಹಬ್ಬದ ದಿನವಾದ ಏ.24ನ್ನು ಅಂತಾರಾಷ್ಟ್ರಿಯ ಕಲಾವಿದರ ದಿನವಾಗಿ ಘೋಷಣೆ ಮಾಡಬೇಕು ಎನ್ನುವುದು ಸಂಘಟನೆಯ ಪ್ರಮುಖ ಬೇಡಿಕೆಯಾಗಿದೆ.

ಮೈಸೂರಿನ ಫಿಲ್ಮ್ ಸಿಟಿಗೆ ಡಾ. ರಾಜ್ ಕುಮಾರ್ ಚಲನಚಿತ್ರ ನಗರಿ ನಾಮಕರಣ ಮಾಡಿ ಚಿತ್ರರಂಗದ ಕಾರ್ಮಿಕರಿಗೆ ಡಾ. ರಾಜ್ ಕುಮಾರ್ ಸಹಾಯಧನ ಯೋಜನೆ ಘೋಷಣೆ ಮಾಡಬೇಕು ಎನ್ನುವುದು ಬೇಡಿಕೆಗಳಲ್ಲಿದೆ ಎಂದರು.

ಡಿಎಂಕೆ-ಎಐಎಡಿಎಂಕೆ ಮೈತ್ರಿ ಊಹಾಪೋಹ: ಎಚ್‌ಡಿಕೆ



ಹಾಸನ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ಸೇರಿ ಸರಕಾರ ರಚನೆ ಮಾಡಲಿವೆ ಎಂಬ ಸುದ್ದಿಗಳು ಕೇವಲ ಊಹಾಪೋಹ. ನನ್ನ ರಾಜಕೀಯ ಅನುಭವದಲ್ಲಿ ಅಂಥ ಸಾಧ್ಯತೆ ಕಾಣುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಹೊಳೆನರಸೀಪುರ ತಾಲೂಕಿನ ಮಾವಿನಕೆರೆಯ ರಂಗನಾಥಸ್ವಾಮಿ ಬೆಟ್ಟದ ದೇವಾಲಯಕ್ಕೆ ಶುಕ್ರವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ರಾಜ್ಯಪಾಲರು ಕಾನೂನು ತಜ್ಞರ ಸಲಹೆ ಪಡೆದು ಸ್ಪಷ್ಟ ಬಹುಮತದ ಸಂಖ್ಯೆಯನ್ನು ಪರಿಗಣಿಸಲಿದ್ದಾರೆ ಎಂದರು.

ಟಿವಿಕೆ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ನೀಡುತ್ತಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಪಕ್ಷದ ನಡೆ ಕುರಿತು ಟೀಕೆ ಮಾಡುವ ಅಗತ್ಯವಿಲ್ಲ. ಯಾವ ಸಂದರ್ಭಗಳಲ್ಲಿ ಅದು ಸರಕಾರಗಳನ್ನು ಅಸ್ಥಿರಗೊಳಿಸಿದೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಕೇಂದ್ರದಲ್ಲಿ ಚರಣ್‌ಸಿಂಗ್, ವಿ.ಪಿ.ಸಿಂಗ್, ಚಂದ್ರಶೇಖರ್ ಸರಕಾರಗಳ ಸಂದರ್ಭದಲ್ಲಿ ನಡೆದ ಬೆಳವಣಿಗೆಗಳೇ ಸಾಕು. ದೇವೇಗೌಡರು ಪ್ರಧಾನಿಯಾಗಿದ್ದಾಗಲೂ ಯಾವ ಕಾರಣಗಳನ್ನು ನೀಡಿ ಸರಕಾರ ಕೆಡವಿದರು ಎಂಬುದು ದೇಶಕ್ಕೆ ಗೊತ್ತಿದೆ. ಇಪ್ಪತ್ತು ವರ್ಷಗಳ ಕಾಲ ಡಿಎಂಕೆ ಜತೆ ಇದ್ದವರು, ಈಗ ವಿಜಯ್ ಜತೆ ಸೇರಿದ್ದಾರೆ. ಅವರ ರಾಜಕೀಯ ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡೇ ತೀರ್ಮಾನ ಮಾಡಿರಬಹುದು. ಅದರ ಬಗ್ಗೆ ಕಾಲವೇ ಉತ್ತರ ನೀಡಲಿದೆ ಎಂದರು.

ವಿಜಯ್ ಸಾಧನೆ ಅಚ್ಚರಿ

ಒಂದು ತಿಂಗಳ ಹಿಂದೆಯೇ ತಮಿಳುನಾಡಿನಲ್ಲಿ ಬದಲಾವಣೆಯ ವಾತಾವರಣ ಇದೆ ಎಂದು ನನ್ನ ಸ್ನೇಹಿತರಿಗೆ ಹೇಳಿದ್ದೆ. ಐವತ್ತು ವರ್ಷಗಳಿಂದ ಎರಡು ದ್ರಾವಿಡ ಪಕ್ಷಗಳ ಆಡಳಿತವನ್ನು ಜನ ನೋಡಿದ್ದಾರೆ. ಹೊಸ ವ್ಯವಸ್ಥೆ ಬೇಕೆಂಬ ನಿರೀಕ್ಷೆ ಜನರಲ್ಲಿ ಮೂಡಿತ್ತು. ತಮಿಳುನಾಡಿನ ರಾಜಕಾರಣದಲ್ಲಿ ಸಿನಿಮಾದ ಪ್ರಭಾವ ಬಹಳ ಹಿಂದಿನಿಂದಲೂ ಇದೆ. ಈಗಲೂ ಅದೇ ಪ್ರಭಾವ ಕಾಣಿಸಿದೆ. ಹೊಸ ಮುಖಕ್ಕೆ ಅಧಿಕಾರ ನೀಡಬೇಕು ಎಂಬ ಮನೋಭಾವದಿಂದ ಜನ ತೀರ್ಮಾನ ಮಾಡಿದ್ದಾರೆ. ಮಾಧ್ಯಮಗಳಲ್ಲಿ ಡಿಎಂಕೆ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬ ವರದಿಗಳು ಹರಿದಾಡುತ್ತಿದ್ದವು. ಆದರೆ ವಿಜಯ್ ಅವರ ಈಗಿನ ಸಾಧನೆಯನ್ನು ಯಾರೂ ನಿರೀಕ್ಷಿಸಿರಲಿಲ್ಲ. ಅದು ಎಲ್ಲರಿಗೂ ಅಚ್ಚರಿ ತಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕ್ವಿಂಟಾಲ್ ಸೂರ್ಯಕಾಂತಿಗೆ 7,721 ರು. ನಿಗದಿ

ವಿಜಯಪುರ: ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 2025-26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ 7,721 ರು. ದರದಲ್ಲಿ ಖರೀದಿಗೆ ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಆದೇಶಿಸಿದ್ದಾರೆ.

ಕೇಂದ್ರ ಸರಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಿರ್ದೇಶನ ನೀಡಿದ್ದಾರೆ.

ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳವನ್ನು ರಾಜ್ಯ ಸರಕಾರದ ಖರೀದಿ ಸಂಸ್ಥೆಗಳನ್ನಾಗಿ ನೇಮಕ ಮಾಡಲಾಗಿದೆ.

ನೋಂದಣಿ ಅವಧಿಯನ್ನು 50 ದಿನ ಹಾಗೂ ಖರೀದಿ ಅವಧಿಯನ್ನು 60 ದಿನ ನಿಗದಿಪಡಿಸಲಾಗಿದೆ. ನೋಂದಣಿ ಜತೆಗೆ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಖರೀದಿ ಕೇಂದ್ರಗಳನ್ನು ತೆರೆಯಬೇಕು. ನೋಂದಣಿ ಮತ್ತು ಖರೀದಿಯಲ್ಲಿ ಯಾವುದೇ ಸಮಸ್ಯೆಗಳಾಗದಂತೆ ಸಿದ್ಧತೆ ಮಾಡಿಕೊಂಡು ಪ್ರಕ್ರಿಯೆ ಆರಂಭಿಸಬೇಕು ಎಂದು ಸೂಚಿಸಿದ್ದಾರೆ.

> **ರೈತರ ಹೆಸರಿನಲ್ಲಿ ವರ್ತಕರು ಮತ್ತು ಖರೀದಿ ಸಂಸ್ಥೆಗಳು ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡಬಾರದು. ಖರೀದಿ ಪ್ರಗತಿಯ ವಿವರವನ್ನು ಪ್ರತಿ ದಿನ ರಾಜ್ಯ ಸರಕಾರ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಒದಗಿಸಬೇಕು.**
>
> **- ಶಿವಾನಂದ ಪಾಟೀಲ** ಕೃಷಿ ಮಾರುಕಟ್ಟೆ ಸಚಿವ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
Ph.08472 - 220196 e-mail: midnglb@rediffmail.com/midnglb1@gmail.com
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-3/ಕೆ.ಡಬ್ಲ್ಯೂ-1&4/2026-27/673 ದಿನಾಂಕ: 06-05-2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1 & 4
1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025-26ನೇ ಸಾಲಿನ 4702 ಆಣೆಕಟ್ಟು ಪಿಕಪ್ ಹಾಗೂ ವಿಶೇಷ ಘಟಕ ಯೋಜನೆ ಅಡಿ ಕಾಮಗಾರಿಗಳಿಗಾಗಿ ಇ-ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ.244,38,475.95ಕನಿಷ್ಠ ರೂ.3,43,481.25,** 3) ಗುತ್ತಿಗೆದಾರರ ಅರ್ಹತೆ ವಿವರ : 4ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ.ಪಿ ನಂತೆ, ಇ.ಎಂ.ಡಿ. **ಗರಿಷ್ಠ ರೂ. 3,66,600.00 ಕನಿಷ್ಠ ರೂ.4,300.00,** 5) ಪ್ರಿ ಬಿಡ್ ಮೀಟಿಂಗ್ ದಿನಾಂಕ : 14.05.2026 ಬೆಳಿಗ್ಗೆ 11.00 ಗಂಟೆಯ ವರೆಗೆ 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 19.05.2026 ಬೆಳಿಗ್ಗೆ 11.00 ಗಂಟೆಯ ವರೆಗೆ, 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 20.05.2026 ಸಾಯಂಕಾಲ 17.30 ಗಂಟೆಯ ವರೆಗೆ 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21.05.2026 ಸಾಯಂಕಾಲ 17.30 ಗಂಟೆಯ ವರೆಗೆ 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 22.05.2026 ಸಾಯಂಕಾಲ 17.30 ಗಂಟೆಯ ವರೆಗೆ 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : (https://kppp.karnataka.gov.in)
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕಲಬುರಗಿ
ವಾ.ಸಾ.ಸಂ.ಇ./ಕಲಬುರಗಿ/108/
ದೇಶಪಾಂಡೆ ಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026-27/148 ದಿನಾಂಕ: 08/05/2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2026-27 ನೇ ಸಾಲಿನ ಜಲಧಾರೆ ಯೋಜನೆಯಡಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಸಿಂಗಲ್ ಕವರ್ ಟೆಂಡರ್ ಆಹ್ವಾನಿಸಿದೆ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **11.05.2026** ರಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **11/05/2026** ಸಮಯ 10:00 ಗಂಟೆಯಿಂದ **18/05/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **11/05/2026** ಸಮಯ 16:00 ಗಂಟೆಯಿಂದ **18/05/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **19/05/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **22/05/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ
ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.
ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/72/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ದೂರವಾಣಿ ಸಂಖ್ಯೆ:08232-224195 ಇ-ಮೇಲ್:eepredmandya@gmail.com
ಸಂಖ್ಯೆ:ಕಾಅ:ಪಂರಾಇಂ:ವಿ:ಮಂಡ್ಯ:ಸಇಂ-2:ಟೆಂ.ಪ್ರ:2026-27 ದಿನಾಂಕ: 07.05.2026
ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27
ಕರ್ನಾಟಕ ಸರ್ಕಾರದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ಮದ್ದೂರು ತಾಲ್ಲೂಕಿನ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ 5054-ಯೋಜನೆ ಮಳೆಹಾನಿ ಯೋಜನೆಯಡಿ ಹಾಗೂ **2025-26ನೇ** ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುಮೋದನೆಯಾಗಿರುವ ಒಟ್ಟು **02 ಕಾಮಗಾರಿಗಳಿಗೆ** ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಇಡಲಾದ ಮೊತ್ತ **ಗರಿಷ್ಟ ರೂ.83.68ಲಕ್ಷ** ಮತ್ತು **ಕನಿಷ್ಟ ರೂ.3.37ಲಕ್ಷ** ಟೆಂಡರ್‌ಗಳನ್ನು **https://kppp.karnataka.gov.in, KPP Portal** ಆನ್ ಲೈನ್ ಮೂಲಕ ಸಲ್ಲಿಸತಕ್ಕದ್ದು, ಟೆಂಡರ್‌ಗಳನ್ನು ನಿಗಧಿಪಡಿಸಿದ ಕೊನೆಯ **ದಿನಾಂಕ:22.05.2026ರ ಸಂಜೆ 4.00ಗಂಟೆವರೆಗೆ.** ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ
ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/102/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ. ಮ.ಎ.ಕಾ. ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ-591116 ತಾಲೂಕು:ಸವದತ್ತಿ. ಜಿಲ್ಲಾ:ಬೆಳಗಾವಿ. ರಾಜ್ಯ:ಕರ್ನಾಟಕ
Dn. e-mail: eemlbcnth@gmail.com Ph: - 08330-224500
ಟೆಂಡರ ಪ್ರಕಟಣೆ ಸಂಖ್ಯೆ/ಮಕಾನಿವಿ.2/ಡಿಬಿ/4701 DWR-2,SDT-2 Road/E-tender/2026-27/191ರಿಂದ194 ದಿನಾಂಕ:08-05-2026
ಅಲ್ಪಾವಧಿ ಟೆಂಡರ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ)
(ದ್ವಿ ಲಕೋಟೆ ಪದ್ದತಿಯಲ್ಲಿ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ-ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ
ಕಾಮಗಾರಿಯ ಅಂದಾಜು ಮೊತ್ತ ರೂ.475.00 ರಿಂದ ರೂ.490.00 ಲಕ್ಷಗಳು.
For Work Indent Number. 4397, 4398, 4399 & 4400
1. ಪ್ರಿ ಬಿಡ್ ಮೀಟಿಂಗ್ ದಿನಾಂಕ: 12-05-2026 ರಂದು 11.00 ಘಂಟೆಗೆ, 2. ಗುತ್ತಿಗೆದಾರರು ಇ-ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-05-2026 ರಂದು ಸಂಜೆ 4.00 ಘಂಟೆವರೆಗೆ. 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:20-05-2026 ರಂದು ಸಂಜೆ 4.30 ಘಂಟೆಯ ನಂತರ, 4. ಆರ್ಥಿಕ ಬಿಡ್ ತೆರೆಯುವ ದಿನಾಂಕ : 21-05-2026 ರಂದು ಬೆಳಿಗ್ಗೆ 11.00 ಘಂಟೆಯ ನಂತರ
ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224500 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.
ಸಹಿ/-(ಶ್ರೀ. ವಿ. ಕೆ. ಮುದಿಗೌಡರ)
ಕಾರ್ಯನಿರ್ವಾಹಕ ಇಂಜಿನೀಯರ,(ಪ್ರ)
ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ.
DIPR/BGM/RO-NO-218/KSMCA/2026-27

ಕರ್ನಾಟಕ ಸರ್ಕಾರ
ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು-570011
ಸಂಖ್ಯೆ:ಆತಸಂ/12/ಟೆ/ಟೆಂಡರ್/2026-ಜನಿ-ಆತಸಂ ದಿನಾಂಕ: 08.05.2026
ಟೆಂಡರ್ ಪ್ರಕಟಣೆ
ಆಡಳಿತ ತರಬೇತಿ ಸಂಸ್ಥೆ ಮೈಸೂರಿನಲ್ಲಿ, ಅಧಿಕಾರಿಗಳ ತರಬೇತಿಗಳಿಗೆ ಸಂಬಂಧಿಸಿದಂತೆ, ಊಟೋಪಚಾರ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(KPPP)** ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ನೋಂದಾಯಿತ ಅರ್ಹ ಉತ್ತಮ ಸೇವೆ ಒದಗಿಸುವ ಆಸಕ್ತ ಟೆಂಡರುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **Website: http://kppp.karnataka.gov.in** ಮೂಲಕ ತಮ್ಮ ಟೆಂಡರ್‌ಗಳನ್ನು ನಿಯಮಾನುಸಾರ ಆನ್-ಲೈನ್ ಮೂಲಕ ಸಲ್ಲಿಸಬಹುದಾಗಿದೆ.
ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(KPPP)**ನಲ್ಲಿ **ದಿನಾಂಕ: 08.05.2026** ರಿಂದ ವೀಕ್ಷಿಸಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ:23.05.2026 ರ ಸಂಜೆ 05.30 ಗಂಟೆಗಳಾಗಿರುತ್ತದೆ.**
ಸಹಿ/- ಜಂಟಿ ನಿರ್ದೇಶಕರು (ಆಡಳಿತ)
ಆಡಳಿತ ತರಬೇತಿ ಸಂಸ್ಥೆ, ಮೈಸೂರು
ವಾಸಾಸಂಇ/ಮೈಸೂರು/157/ಎಸ್‌ಎಸ್‌ಸಿ/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ-1,2/ಅಲ್ಪಾವಧಿ ಟೆಂಡರ್ ಪ್ರಕಟಣೆ - ಐ.ಎಫ್.ಟಿ-04/2026-27
ದಿನಾಂಕ: 07-05-2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ& ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1,2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.3.50 ಲಕ್ಷ ರೂಗಳು ಹಾಗೂ ಗರಿಷ್ಟ ರೂ.240.16 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ- ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಒಟ್ಟು 12 ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿ:07-05-2026 ರಿಂದ ಕೆಪಿಪಿ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ:15-05-2026 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:16-05-2026 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 17-05-2026 ಸಾಯಂಕಾಲ 04-30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:18-05-2026 ಸಾಯಂಕಾಲ 04-30 ಗಂಟೆಯ ನಂತರ(ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194-231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91-8046010000+91-8068948777 ರಿಂದ ಪಡೆಯಬಹುದು.
DIPR/CTA/KSMCA/92/2026-27
ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಮಾಚಾರ ಸಣ್ಣದಲ್ಲ

ಬಿಜೆಪಿ ಮತ್ತೆ ಅಧಿಕಾರಕ್ಕೆ ತರಲು ಯತ್ನ: ಬಿಎಸ್‌ವೈ



ದಾವಣಗೆರೆ: ನಾನೂ ಅನಂತಕುಮಾರ್ ಸೇರಿದಂತೆ ಅನೇಕ ಮುಖಂಡರ ಶ್ರಮದ ಫಲವಾಗಿ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ತರಲು ಯತ್ನಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ವ್ಯಕ್ತಪಡಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಈಗ ಬದಲಾವಣೆ ಕಾಲಬಂದಿದೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ತರುವ ವಿಶ್ವಾಸವಿದೆ. ಕೋಟೆನಾಡಿನಲ್ಲಿ ಬಹಳ ವಿಶ್ವಾಸದಿಂದ ಜನರು ಕಾರ್ಯಕ್ರಮ ಮುಂದೆ ನಿಂತು ಮಾಡು ತ್ತಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು. ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸೇರುವ ಸುಸಂದರ್ಭ ಇದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಾಧನೆಯ ಬೆಟ್ಟ ಹತ್ತುವ ಕೆಲಸ

ದಾವಣಗೆರೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ 50 ವರ್ಷಗಳ ರಾಜಕೀಯ ಜೀವನದಲ್ಲಿ ಹೋರಾಟದ ಮೂಲಕ ಸಾಧನೆ ಬೆಟ್ಟ ಹತ್ತುವ ಕೆಲಸ ಮಾಡಿದ್ದಾರೆ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು. ಶುಕ್ರ ವಾರ ನಗರದಲ್ಲಿ ಮಾತನಾಡಿದ ಅವರು, ಬಿಜೆಪಿ ಚೌಕಟ್ಟಿನಲ್ಲಿ ಸ್ವಂತ ಸಂಘಟನೆ ಕಟ್ಟಿರೋದು ವಿಶೇಷ. ಬಿ.ಎಸ್.ಯಡಿಯೂರಪ್ಪ ಅವರಿಗೆ ಅಜಾತಶತ್ರು ಎಂದು ಹೇಳುವುದು ಸಮಂಜಸ ಅನಿಸುವುದಿಲ್ಲ. ಭಿನ್ನಮತ ಅನ್ನೋದು ಬಿಎಸ್‌ವೈ ಅವರ ಜತೆ ಜತೆಗೆ ಬಂದಿತು. ಸಂಘಟನೆಗಾಗಿ ಸಿಟ್ಟು ಮಾಡುತ್ತಿದ್ದರು. ಸ್ವಾರ್ಥಕ್ಕಾಗಿ ಎಂದೂ ಮಾಡಲಿಲ್ಲ. ಯಡಿಯೂರಪ್ಪ ಅವರು ಹಿಂದುತ್ವದ ವಿಚಾರ ಜನರಿಗೆ ಮುಟ್ಟಿಸಿ ಅವರ ಮನಸ್ಸು ಗೆದ್ದರು. ಬಗರ್‌ಹುಕುಂ ಹೋರಾಟದ ಮೂಲಕ ದಲಿತರ ಮನ ಗೆದ್ದಿದ್ದಾರೆ. ಹೀಗಾಗಿ ಅವರ 50 ವರ್ಷಗಳ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸಲು ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಕಾರ್ಯಕ್ರಮಕ್ಕೆ ಗೃಹ ಸಚಿವ ಅಮಿತ್ ಶಾ ಬರುತ್ತಾರೆ. ಸುಮಾರು 10 ಲಕ್ಷ ಜನರು ಸೇರುವ ಸಾಧ್ಯತೆ ಇದೆ. ಒಂದೇ ವೇದಿಕೆಯಲ್ಲಿ ಎಲ್ಲಾ ಸ್ವಾಮೀಜಿಗಳನ್ನು ನೋಡುವ ಅವಕಾಶವಿದೆ ಎಂದು ಹೇಳಿದರು.

ಅಭಿಮಾನೋತ್ಸವಕ್ಕೆ ಚಿತ್ರದುರ್ಗ ನಗರ ಸಿಂಗಾರ | 10 ಲಕ್ಷ ಜನ ಸೇರುವ ನಿರೀಕ್ಷೆ

ಚಿತ್ರದುರ್ಗದಲ್ಲಿಂದು ಬಿಎಸ್‌ವೈ ಪರ್ವ

ನೆರ್ಲಹಳ್ಳಿ ರವಿಚಂದ್ರ, ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಅಭಿಮಾ ನೋತ್ಸವ ಕಾರ್ಯಕ್ರಮಕ್ಕೆ ಕೋಟೆನಾಡು ಚಿತ್ರದುರ್ಗ ಮದುವಣಗಿತ್ತಿ ಯಂತೆ ಸಿದ್ಧಗೊಂಡಿದೆ. ಚಿತ್ರದುರ್ಗ ನಗರ ಕೇಸರಿಮಯವಾಗಿದ್ದು, ಎಲ್ಲೆಡೆ ಬಿಎಸ್‌ವೈ, ಅಮಿತ್ ಶಾ ಮತ್ತು ಪ್ರಧಾನಿ ಮೋದಿ ಅವರ ಬ್ಯಾನರ್‌ಗಳು ರಾರಾಜಿಸುತ್ತಿವೆ.

ನಗರದ ಮಾದಾರ ಚನ್ನಯ್ಯ ಮಠದ ಸಮೀಪವಿರುವ ವಿಶಾಲವಾದ ಮೈದಾನದಲ್ಲಿ ಬೃಹತ್ ವೇದಿಕೆ ಸಜ್ಜಾಗಿದೆ. ಮೇ 9ರ ಮಧ್ಯಾಹ್ನ 3 ಗಂಟೆಗೆ ಅಮಿತ್ ಶಾ ಚಿತ್ರದುರ್ಗಕ್ಕೆ ಆಗಮಿಸಲಿದ್ದು, ಅವರಿಗಾಗಿ ವೇದಿಕೆಯ ಹಿಂಭಾಗದಲ್ಲೇ ವಿಶೇಷ ಹೆಲಿಪ್ಯಾಡ್ ನಿರ್ಮಿಸಲಾಗಿದೆ. ಮಠಾಧೀಶರು, ಕೇಂದ್ರ ಹಾಗೂ ರಾಜ್ಯ ನಾಯಕರಿಗೆ ವೇದಿಕೆಯಲ್ಲಿ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಬರುವ ಲಕ್ಷಾಂತರ ಜನರಿಗಾಗಿ ಕುಡಿಯುವ ನೀರು, ಬಾಳೆಹಣ್ಣು ಮತ್ತು ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.

ಭರ್ಜರಿ ಭೋಜನ: ಬೆಳಗ್ಗೆ 9 ಗಂಟೆಯಿಂದ ಕಾರ್ಯಕ್ರಮ ಮುಗಿಯುವವರೆಗೂ ಊಟದ ವ್ಯವಸ್ಥೆಯನ್ನು ಮಾಡಲಾಗುವುದು. ಬಂದವರಿಗೆ ಭಫೆ ರೀತಿಯಲ್ಲಿ ಊಟವನ್ನು ಬಡಿಸಲಾಗುವುದು, ಬೆಳಗ್ಗೆ ಟೊಮೊಟೊ ಬಾತ್, ಮೊಸರನ್ನ, ಮೈಸೂರು ಪಾಕ್, ವಾಟರ್ ಬಾಟಲ್ ನೀಡಲಾಗುವುದು 12ರ ನಂತರ ವೆಜಿಟೇಬಲ್ ಪಲಾವ್ ಮೊಸರನ್ನ, ಮೈಸೂರು ಪಾಕ್ ಹಾಗೂ ಬಾಟಲ್ ನೀರನ್ನು ನೀಡಲಾಗುವುದು. ಯಾವುದೇ ಕಾರಣಕ್ಕೂ ಕಾರ್ಯಕ್ರಮಕ್ಕೆ ಬಂದವರನ್ನು ಹಸಿದ ಹೊಟ್ಟೆಯಲ್ಲಿ ಕಳುಹಿಸುವುದಿಲ್ಲ. ಊಟದ ವ್ಯವಸ್ಥೆ ನಿರ್ವಹಣೆಗೆ 120 ಜನ ಸ್ವಯಂ ಸೇವಕರು ಇರಲಿದ್ದಾರೆ. ಒಂದೊಂದು ಕೌಂಟರ್‌ಗೆ ಇಬ್ಬರು ಶಾಸಕರನ್ನು ಮೇಲುಸ್ತುವಾರಿಗೆ ನೇಮಿಸಲಾಗಿದೆ ಎಂದು ಶಾಸಕ ವಿಶ್ವನಾಥ್ ತಿಳಿಸಿದ್ದಾರೆ.

ರಾಜ್ಯದ ವಿವಿಧೆಡೆಯಿಂದ ಅಭಿಮಾನಿಗಳು ಆಗಮಿಸಲು 10 ಸಾವಿರ ಬಸ್‌ಗಳನ್ನು ಬುಕಿಂಗ್ ಮಾಡ ಲಾಗಿದೆ. 45ರಿಂದ 50 ಸಾವಿರ ಕಾರು ಮತ್ತಿತರ ವಾಹನಗಳು ವಾಹನಗಳು ಬರಲಿವೆ. ನಮ್ಮ ನಿರೀಕ್ಷೆಗೂ ಮೀರಿ ಸ್ಪಂದನೆ ಲಭಿಸುತ್ತಿದೆ. ಸ್ವಾಮೀಜಿಗಳು, ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಬರಲಿದ್ದಾರೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಿಎಸ್‌ವೈ ಅಂಬಾಸಿಡರ್ ಕಾರು ಆಕರ್ಷಣೆ

ಅಭಿಮಾನೋತ್ಸವ ಹಿನ್ನೆಲೆ ಯಡಿಯೂರಪ್ಪ ಅವರು ಬಳಸಿದ ಅಂಬಾಸಿಡರ್ ಕಾರನ್ನು ಪ್ರದರ್ಶನಕ್ಕೆ ಇಡಲಾಗಿದೆ. ತಂದೆ ಬಳಸಿದ್ದ ಕಾರಿನ ಬಗ್ಗೆ ಮಾತನಾಡಿದ ಬಿ.ವೈ.ವಿಜಯೇಂದ್ರ, ಯಡಿಯೂರಪ್ಪ ಅವರನ್ನು ಗುರುತಿಸುವಷ್ಟೇ ಈ ಕಾರನ್ನೂ ಜನ ಗುರುತಿಸುತ್ತಾರೆ. ಅಂದು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿ ಹಳ್ಳಿಗಳಿಗೂ ತಲುಪಿಸಲು ಯಡಿಯೂರಪ್ಪನವರಿಗೆ ಈ ಕಾರು ನೆರವಾಗಿದೆ. ಬಿ.ಎಸ್.ವೈ ಸೇರಿ ಪಕ್ಷದ ಅನೇಕ ಪ್ರಮುಖರು ಇದೇ ಕಾರಲ್ಲಿ ತೆರಳಿ ಪಕ್ಷದ ಪ್ರಚಾರ ಮಾಡಿದ್ದರು ಎಂದು ತಿಳಿಸಿದ್ದಾರೆ. ಬಿಜೆಪಿ ಮುಖಂಡರು, ಯಡಿಯೂರಪ್ಪ ಅಭಿಮಾನಿಗಳು ಕಾರಿನ ವೀಕ್ಷಣೆ ಮಾಡಿದ್ದಲ್ಲದೆ ಅದರ ಜತೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದ್ದಾರೆ.

5 ಸಾವಿರ ಪೊಲೀಸರ ನಿಯೋಜನೆ

ಬೃಹತ್ ಕಾರ್ಯಕ್ರಮದ ಹಿನ್ನೆಲೆ ನಗರದಲ್ಲಿ 5000 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡ ಲಾಗಿದೆ. ಅಡಿಷನಲ್ ಎಸ್ಪಿ-4, ಡಿವೈಎಸ್ಪಿ-17, ಪಿಐ-67, ಪಿಎಸ್‌ಐ-117, ಎಎಸ್‌ಐ-321, ಕಾನ್‌ಸ್ಟೆಬಲ್-1310, ಮಹಿಳಾ ಕಾನ್‌ಸ್ಟೆಬಲ್-159, ಗೃಹ ರಕ್ಷಕ ದಳ-755, ಕೆಎಸ್‌ಆರ್‌ಪಿ ತುಕಡಿ-12, ಡಿಎಆರ್-14, ಸ್ಕ್ವಾರ್ಡ್-5, ಡಿಫೆನ್ಸ್-64 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಶನಿವಾರ ಚಿತ್ರದುರ್ಗದಲ್ಲಿ ಆಯೋಜಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಗಮಿಸಲು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪೀಠಾಧ್ಯಕ್ಷರಾದ ವಚನಾನಂದ ಶ್ರೀಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ಆಹ್ವಾನ ನೀಡಿದರು.

ಕಮಲ ಅರಳಿಸಿದ ಬಿಎಸ್‌ವೈ

ದಾವಣಗೆರೆ: ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಂಡಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ಜಿಲ್ಲೆಯ ಎಲ್ಲ ಮಂಡಲಗಳ ವ್ಯಾಪ್ತಿಯಿಂದ 1 ಲಕ್ಷ ಜನರು ತೆರಳುತ್ತಿದ್ದೇವೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 50 ವರ್ಷಗಳಿಂದ ಸುದೀರ್ಘ ರಾಜಕಾರಣದಲ್ಲಿರುವ ಯಡಿಯೂರಪ್ಪ ಎಲ್ಲ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ನೀಡಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿದ್ದ ಅವರು, ಶಿಕಾರಿಪುರ ಪುರಸಭೆ ಸದಸ್ಯ ಸ್ಥಾನದಿಂದ ಮುಖ್ಯಮಂತ್ರಿ ಹುದ್ದೆಗೆ ಏರಿದವರು ಎಂದರು. ಬಿಜೆಪಿ ರಾಜ್ಯ ಘಟಕಕ್ಕೆ ನಾಲ್ಕು ಬಾರಿ ಅಧ್ಯಕ್ಷರಾಗಿದ್ದರು. 7 ಬಾರಿ ಶಾಸಕ, ಒಮ್ಮೆ ಲೋಕಸಭೆ ಹಾಗೂ ವಿಧಾನ ಪರಿಷತ್ ಸದಸ್ಯರಾಗಿದ್ದರು. ಉತ್ತರ ಭಾರತದಲ್ಲಿದ್ದ ಬಿಜೆಪಿ ಪ್ರಾಬಲ್ಯವನ್ನು ದಕ್ಷಿಣ ಭಾರತದತ್ತ ತಂದವರು ಯಡಿಯೂರಪ್ಪ. ದಕ್ಷಿಣ ಭಾರತದಲ್ಲಿ ಬಿಜೆಪಿ ಖಾತೆ ತೆರೆಯಲು ಸಾಧ್ಯ ಇಲ್ಲ ಎಂಬ ಮಾತನ್ನು ಸುಳ್ಳಾಗಿಸಿದರು. ಈ ಅಭಿಮಾನೋತ್ಸವಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸುತ್ತಿದ್ದಾರೆ ಎಂದರು.

ತೆರೆದ ವಾಹನದಲ್ಲಿ ಭವ್ಯ ಮೆರವಣಿಗೆ
ವಿವಿಧ ಜನಪದ ಕಲಾತಂಡಗಳ ಮೆರುಗು

ಅದ್ದೂರಿಯಾಗಿ ದುರ್ಗ ಪ್ರವೇಶಿಸಿದ ಬಿಎಸ್‌ವೈ

ಚಿತ್ರದುರ್ಗ: ಕೋಟೆನಾಡು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ ಪುರಪ್ರವೇಶ ಕಾರ್ಯಕ್ರಮವು ಅತ್ಯಂತ ಅದ್ದೂರಿಯಾಗಿ ಜರುಗಿತು. ನಗರದ ಕನಕ ವೃತ್ತದಿಂದ ಮದಕರಿ ವೃತ್ತದವರೆಗೆ ನಡೆದ ಈ ಮೆರವಣಿಗೆಯಲ್ಲಿ ಸಾವಿರಾರು ಅಭಿಮಾನಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿ, ತಮ್ಮ ನೆಚ್ಚಿನ ನಾಯಕನಿಗೆ ಅಭೂತಪೂರ್ವ ಸ್ವಾಗತ ಕೋರಿದರು. ರಸ್ತೆಯುದ್ದಕ್ಕೂ ಹೂಮಳೆಗರೆಯುವ ಮೂಲಕ ರಾಜಾಹುಲಿಯನ್ನು ಬರಮಾಡಿಕೊಳ್ಳಲಾಯಿತು. ಸ್ತಬ್ಧಚಿತ್ರಗಳು ಮತ್ತು ಕಲಾತಂಡಗಳ ಮೆರವಣಿಗೆ ಯಡಿಯೂರಪ್ಪ ಅವರ ಪುರಪ್ರವೇಶವು ಮೈಸೂರು ದಸರಾವನ್ನು ನೆನಪಿಸುವಂತಿದೆ. ಮೆರವಣಿಗೆಯಲ್ಲಿ ಬಿಎಸ್‌ವೈ ಅವರ ಸಾಧನೆಗಳನ್ನು ಸಾರುವ ಸ್ತಬ್ಧಚಿತ್ರಗಳು ಜನರ ಗಮನ ಸೆಳೆದವು. ಪೂರ್ಣಕುಂಭ ಹೊತ್ತ ಸಾವಿರಕ್ಕೂ ಹೆಚ್ಚು ಮುತ್ತೈದೆಯರು ಯಡಿಯೂರಪ್ಪ ಅವರನ್ನುಸ್ವಾಗತಿಸಿದರು. ಸುಮಾರು 2,000ಕ್ಕೂ ಹೆಚ್ಚು ರೈತರು ಕೈಯಲ್ಲಿ ನೇಗಿಲು ಹಿಡಿದು, ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದ್ದು, ವಿಶೇಷವಾಗಿತ್ತು. ರೈತರಿಂದ ಸಾಂಪ್ರದಾಯಿಕ ರಾಶಿ ಪೂಜೆಯ ಮೂಲಕ ರೈತ ನಾಯಕನಿಗೆ ಗೌರವ ಸಲ್ಲಿಸಲಾಯಿತು.

ಒನಕೆ ಓಬವ್ವನ ಪಡೆಯ ಸಾಲು: ಪ್ರಧಾನಿ ಮೋದಿ ಅವರ 'ನಾರಿ ಶಕ್ತಿ ವಂದನ್' ಕಾಯ್ದೆಯ ಗೌರವಾರ್ಥವಾಗಿ 200ಕ್ಕೂ ಹೆಚ್ಚು ಮಹಿಳೆಯರು ಒನಕೆ ಓಬವ್ವನ ವೇಷಧಾರಿಗಳಾಗಿ ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದರು.

30ಕ್ಕೂ ಹೆಚ್ಚು ಕಲಾ ತಂಡ ಭಾಗಿ: ರಾಜ್ಯದ ವಿವಿಧ ಜಿಲ್ಲೆಗಳಿಂದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ 30ಕ್ಕೂ ಹೆಚ್ಚು ಕಲಾ ತಂಡಗಳ ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶಿಸಿದರು. ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಸಂಸದಗೋವಿಂದ ಕಾರಜೋಳ, ಸದಾನಂದ ಗೌಡ, ಶ್ರೀರಾಮುಲು, ಜನಾರ್ದನ ರೆಡ್ಡಿ, ಸಿಟಿ ರವಿ, ಶಾಸಕ ಚಂದ್ರಪ್ಪ, ಬಿಸಿ ಪಾಟೀಲ್, ಜಿಎಂ ಸಿದ್ದೇಶ್ವರ, ಮುನಿರತ್ನ, ಬಿಎಸ್ ವೈ ಅಭಿಮಾನಿಗಳು ಸೇರಿದಂತೆ ಹಲವರು ಇದ್ದರು.

ಚಿತ್ರದುರ್ಗ ಪ್ರವೇಶಿಸಿದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಶುಕ್ರವಾರ ಅದ್ದೂರಿಯಾಗಿ ಸ್ವಾಗತಿಲಾಯಿತು.

ಐದು ದಶಕಗಳ ಸಾರ್ವಜನಿಕ ಸೇವೆಗೆ ಅಭಿಮಾನಿಗಳು ಸಲ್ಲಿಸುತ್ತಿರುವ ಗೌರವವೇ ಅಭಿಮಾನೋತ್ಸವ

ಅಭಿಮಾನದ ಅಲೆಯಲ್ಲಿ ತೇಲುತ್ತಿರುವ ಬಿಎಸ್‌ವೈ

ಎನ್.ಭೃಂಗೀಶ್
ನಿವೃತ್ತ ನಿರ್ದೇಶಕರು
ವಾರ್ತಾ ಇಲಾಖೆ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಅರ್ಧಶತಮಾನದ ಅವಿರತ ಸೇವೆ. ಜನಮಾನಸದಲ್ಲಿ ಅವಿಚ್ಛಿನ್ನ ಸ್ಥಾನ. ಅದರ ಫಲಶ್ರುತಿಯೇ ಇಂದು ಬಿಎಸ್‌ವೈಗೆ ಅಭಿಮಾನೋತ್ಸವದ ಮೂಲಕ ಅಭಿನಂದನೆ. ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಸಾರ್ವಜನಿಕ ಜೀವನ ಪ್ರವೇಶಿಸಿ ಐದು ದಶಕಗಳಾದ ಸಂದರ್ಭದಲ್ಲಿ ಅವರ ಅಭಿಮಾನಿಗಳಿಂದ ಸ್ಮರಣೀಯ ಗೌರವಾರ್ಪಣೆ ಶನಿವಾರ ಗಂಡು ಮೆಟ್ಟಿದ ನಾಡು ಚಿತ್ರದುರ್ಗದಲ್ಲಿ. ನಾಡಿನಾದ್ಯಂತ ಸುಮಾರು 10 ಲಕ್ಷ ಅಭಿಮಾನಿಗಳು ಒಂದೆಡೆ ಸೇರುವ ಮತ್ತು ತಮ್ಮ ನಾಯಕನ ಗುಣಗಾನ ಮಾಡುವ ಸಾರ್ಥಕ್ಯದ ಸಂಧರ್ಭವೂ ಇದು ಹೌದು. ಸೇವೆಯನ್ನೇ ಏಕೈಕ ಕೈಂಕರ್ಯವನ್ನಾಗಿಸಿ ಕೊಂಡಿರುವ ನಾಯಕನಿಗೆ ಸಾರ್ವಜನಿಕರು ಗೌರವಿಸುವ ಅಪರೂಪದ ಪರಿ ಇದು. ಕನ್ನಡಿಗರು ವಿಶಾಲ ಹೃದಯಿಗಳು ಎಂಬುದಕ್ಕೆ ಇದು ಮತ್ತೊಂದು ಸಾಕ್ಷಿ.

ದಕ್ಷಿಣ ಭಾರತದ ಹೆಬ್ಬಾಗಿಲನ್ನು ತಮ್ಮ ಪಕ್ಷಕ್ಕೆ ತೆರೆದ ಅಪರೂಪದ ಸಾಹಸಿ ಬಿಎಸ್‌ವೈ. ಇದು ಸಾಹಸವೂ ಹೌದು ಮತ್ತು ತಂತ್ರಗಾರಿಕೆಯೂ ಹೌದು. ಈ ಸಾಹಸ ಮತ್ತು ತಂತ್ರಗಾರಿಕೆ ಫಲಿಸದೇ ಹೋಗಿದ್ದರೆ ಬಿಜೆಪಿ ಇಂದಿಗೂ ವಿಂಧ್ಯ ಪರ್ವತದ ಆಚೆಗೇ ಸೀಮಿತವಾಗಿ ಉಳಿಯುತ್ತಿತ್ತು. ನಾಲ್ಕು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಿಎಸ್‌ವೈ ಅವರಿಗೆ ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪೂರ್ಣ ಅವಧಿ ಅವಕಾಶ ದೊರೆಯಲೇ ಇಲ್ಲ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ತಮ್ಮ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದಾರೆ. ನಾಡಿನ ರೈತರ ಬೆನ್ನೆಲುಬನ್ನು ಭದ್ರ ಪಡಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಅವರದು. ಸಹಕಾರಿ ಕೃಷಿ ಸಾಲದ ಮೇಲಿನ ಬಡ್ಡಿಯ ಹಿಡಿಕೆ ಮೂಲಕ ರೈತರಿಗೆ ನೆರವಾದ ಬಿಎಸ್‌ವೈ ಕೃಷಿ ಮತ್ತು ನೀರಾವರಿ ಕ್ಷೇತ್ರಗಳ ವಿಸ್ತರಣೆ ಮತ್ತು ಬಲಪಡಿಸುವಿಕೆಗೆ ನೀಡಿರುವ ಕೊಡುಗೆ ದಾಖಲಾರ್ಹ. ನಿಜವಾದ ಅರ್ಥದಲ್ಲಿ ಅವರು ಮಣ್ಣಿನ ಮಗ ಎಂಬುದನ್ನು ನಾಡು ಒಪ್ಪಿದೆ. ಸಮಕಾಲೀನ ರಾಜಕೀಯ ಸನ್ನಿವೇಶದಲ್ಲಿ ರಾಜ್ಯ ಕಂಡ ಮೂವರು ಮಾಸ್ ಲೀಡರ್‌ಗಳಲ್ಲಿ ಬಿಎಸ್‌ವೈ ಒಬ್ಬರು. ಇನ್ನಿಬ್ಬರೆಂದರೆ ಎಚ್.ಡಿ. ದೇವೇಗೌಡರು ಮತ್ತು ಸಿದ್ದರಾಮಯ್ಯ. ಈ ನಾಯಕರು ಮಾತ್ರ ತಾವು ರಾಜಕೀಯವಾಗಿ ಯಾವ ನಡೆ ಅನುಸರಿಸುತ್ತಾರೋ ಅದೇ ಮಾರ್ಗದಲ್ಲಿ ತಮ್ಮ ಅನುಯಾಯಿಗಳನ್ನು ಸೆಳೆಯುವ ಸಾಮರ್ಥ್ಯವಿರುವವರು. ನಾಡಿನ ಗಣನೀಯ ಮತದಾರರ ಪೈಕಿ ಅಧಿಕ ಸಂಖ್ಯೆಯಲ್ಲಿ ತಮ್ಮ ರಾಜಕೀಯ ನಡೆಗೆ ಹೊಂದಿಸುವಲ್ಲಿ ಈ 3 ನಾಯಕರು ಸಿದ್ಧಹಸ್ತರು.

ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದಲ್ಲಿ ಬಿಎಸ್‌ವೈ ಮನೆ ಮನೆ ಹೆಸರು. ಕಾರಣ ಎಲ್ಲಾ ವಿರೋಧಗಳನ್ನು ಲೆಕ್ಕಿಸದೆ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಅವರು ಕೈಗೊಂಡ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಮಾಡಿದರು. ಹಾಗೆ ನೋಡಿದರೆ, ಈ ಸಮಿತಿ ಎಸ್.ಎಂ ಕೃಷ್ಣ ಸರಕಾರದ ಕೂಸು. ಮಧ್ಯಂತರ ಮತ್ತು ಅಂತಿಮ ವರದಿ ಕೂಡ ಸಲ್ಲಿಕೆಯಾಗಿದ್ದು ಎಸ್.ಎಂ.ಕೃಷ್ಣ ಸರಕಾರದ ಅವಧಿಯಲ್ಲೇ. ಆದರೆ ಆ ಶಿಫಾರಸ್ಸುಗಳ ಜಾರಿಗೆ ದಿಟ್ಟ ನಿರ್ಧಾರ ಕೈಗೊಂಡಿದ್ದು ಮಾತ್ರ ಬಿ. ಎಸ್.ಯಡಿಯೂರಪ್ಪ. ನಂಜುಂಡಪ್ಪ ವರದಿಯ ಶಿಫಾರಸ್ಸುಗಳು ಬಹುತೇಕ ಉತ್ತರ ಕರ್ನಾಟಕಕ್ಕೆ ಅನ್ವಯವಾದರೂ ಇಡೀ ರಾಜ್ಯಕ್ಕೆ ಅದರ ಲಾಭವಾಗಿದೆ.

50 ವರ್ಷದ ರಾಜಕಾರಣ ಸುಲಭದ ಮಾತಲ್ಲ

ಅರ್ಧಶತಮಾನದ ಕಾಲ ಜನಮಾನಸದಲ್ಲಿ ನಿಜ ನಾಯಕನಾಗಿ ಉಳಿಯುವುದು ಅಷ್ಟು ಸುಲಭ ವಲ್ಲ. ಬಿಎಸ್‌ವೈ ಈ ಅಸಾಧ್ಯವನ್ನು ಸಾಧ್ಯವಾಗಿಸಿದ್ದಾರೆ. ಜನ ಅದನ್ನು ಮರೆಯದೆ ಸ್ಮರಿಸಿ ಗೌರವಿಸುತ್ತಿದ್ದಾರೆ. 83 ವರ್ಷಗಳ ಸನಿಹವಿರುವ ಯಡಿಯೂರಪ್ಪ ಈಗ ಸಾರ್ವಜನಿಕ ಜೀವನದಲ್ಲಿ ಗಳಿಸಬೇಕಾದದ್ದು ಏನೂ ಇಲ್ಲ. ಆದರೂ ಇಂತಹ ಸಮಾರಂಭ ಈ ಸನ್ನಿವೇಶದಲ್ಲಿ ಏಕೆ ಎಂಬುದು ಬಹು ಚರ್ಚಿತ ವಿಷಯ. ಇದು ಬಿಎಸ್‌ವೈ ಅಭಿಮಾನಿಗಳ ಏಕೈಕ ನಿರ್ಧಾರವೋ ಅಥವಾ ಅವರ ಪಕ್ಷದ ನಿರ್ಧಾರವೋ ಎಂಬುದು ಕೂಡ ಚರ್ಚಿತವಾಗುತ್ತಿದೆ. ಈ ಎರಡು ಕಾರಣಗಳು ಇರಬಹುದು. ಏಕೆಂದರೆ 2021 ರಲ್ಲಿ ದಿಢೀರೆಂದು ಅಧಿಕಾರ ತ್ಯಾಗ ಮಾಡಲು ಒತ್ತಾಯಿಸಿದ ಪಕ್ಷದ ನಾಯಕತ್ವ ಇಂದು ಅದೇ ಬಿಎಸ್‌ವೈ ಅವರನ್ನು ಓಲೈಸುತ್ತಿದೆ. ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ದೂರ ಸರಿಸುವ ಜಾಯಮಾನ ರಾಜಕಾರಣದಲ್ಲಿ ಸಾಮಾನ್ಯ ಆದರೂ ಕಹಿ ಭಾವನೆ ತೋರದೆ ಬಿಎಸ್‌ವೈ ಉತ್ಸಾಹದಿಂದ ಭಾಗವಹಿಸುತ್ತಿರುವುದು ವಿಶೇಷ.

ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಮೊಟ್ಟ ಮೊದಲ ಅಧಿವೇಶನದಲ್ಲಿ ಹಣಕಾಸು ಇಲಾಖೆ ಉನ್ನತಾಧಿಕಾರಿಗಳ ವಿರೋಧದ ನಡುವೆಯೂ ಈ ವರದಿ ಜಾರಿಯ ಬಗ್ಗೆ ಘೋಷಿಸಿದ್ದು ಬಿಎಸ್‌ವೈ. ಅವರ ಕ್ರಮದ ಫಲವಾಗಿ ಅಸಮಾನತೆ ನಿವಾರಣೆ ದಿಕ್ಕಿನಲ್ಲಿ ಈವರೆಗೆ 30,000 ಕೋಟಿ ರು.ಗೂ ಅಧಿಕ ಹಣ ವೆಚ್ಚವಾಗಿದೆ. ಇದೊಂದು ಐತಿಹಾಸಿಕ ನಿಲುವು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಬಹುತೇಕ ಲಾಭ ಉತ್ತರ ಕರ್ನಾಟಕ ವಲ್ಲದೇ ಇಡೀ ರಾಜ್ಯಕ್ಕೆ ಆಗಿದೆ.

ಹಾರಿದ್ದು ಒಂದೇ ಹೆಲಿಕಾಪ್ಟರ್: ಕಳಸ ಬಂಡೂರಿ ನಾಲಾ ಯೋಜನೆಗೆ ಅಡಿಗಲ್ಲನ್ನು ಇಟ್ಟಿದ್ದು 2007ರಲ್ಲಿ. ಆಗ ಎಚ್.ಡಿ.ಕುಮಾರಸ್ವಾಮಿ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ, ಬಿಎಸ್‌ವೈ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು. ಉತ್ತರ ಕರ್ನಾಟಕದ ಬಡತನ ಮತ್ತು ಅಸಮತೋಲನ ನಿವಾರಣೆಗೆ ತಮ್ಮ ರಾಜಕೀಯ ಪ್ರವೇಶದ ದಿನಗಳಿಂದಲೂ ಆಸಕ್ತಿ ವಹಿಸುತ್ತಾ ಬಂದಿದ್ದ ಬಿಎಸ್‌ವೈ ಆ ಪ್ರದೇಶದ ಕೃಷಿ, ನೀರಾವರಿ, ಉದ್ಯೋಗ ಸೃಜನೆ ಹಾಗೂ ಕುಡಿಯುವ ನೀರಿನ ಸಮರ್ಪಕ ವಿತರಣೆಯತ್ತ ಗಮನ ಹರಿಸಿದ್ದರು. ಬಿಎಸ್‌ವೈ ಮೊಟ್ಟ ಮೊದಲಿಗೆ ಅಧಿಕಾರ ದೊರೆತಾಗ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದ್ದು ಇದೇ ದಿಕ್ಕಿನಲ್ಲಿ.

ಕಳಸಾ ಬಂಡೂರಿ ನಾಲಾ ಯೋಜನೆಗೆ ಭೂಮಿ ಪೂಜೆ ಮಾಡಲು ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಜತೆಯಾಗಿ ಭಾಗವಹಿಸುವುದು ಅಧಿಕೃತವಾಗಿ ನಿಶ್ಚಯವಾಗಿತ್ತು. ಬೆಂಗಳೂರಿನಿಂದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಗಡಿಗ್ರಾಮದಲ್ಲಿ ನಿಶ್ಚಯವಾಗಿದ್ದ ಕಾರ್ಯಕ್ರಮಕ್ಕೆ ಈ ಇಬ್ಬರು ನಾಯಕರು ಹೋಗುವುದಿತ್ತು. ಬೆಂಗಳೂರಿನ ಜಕ್ಕೂರು ವಾಯು ನೆಲೆಯಲ್ಲಿ ಎರಡು ಹೆಲಿಕಾಪ್ಟರ್‌ಗಳು ಸಿದ್ಧವಾಗಿದ್ದವು. ಬೆ.8.30ಕ್ಕೆ ಪ್ರಯಾಣ ಆರಂಭವಾಗಬೇಕಿತ್ತು. ಆದರೆ ಕಾರ್ಯಕ್ರಮಕ್ಕೆ ಬರಬೇಕಿದ್ದ ಮುಖ್ಯಮಂತ್ರಿಗಳು ಯಾವುದೇ ಮುನ್ಸೂಚನೆ ನೀಡದೆ ತಮ್ಮ ಪ್ರಯಾಣ ರದ್ದುಗೊಳಿಸಿದರು. 9.30ರವರೆಗೆ ಜಕ್ಕೂರು ನಿಲ್ದಾಣದಲ್ಲಿ ಮುಖ್ಯಮಂತ್ರಿಗಳ ಬರುವಿಕೆಗೆ ಕಾದ ಬಿ.ಎಸ್.ಯಡಿಯೂರಪ್ಪ ಕಾರ್ಯಕ್ರಮಕ್ಕೆ ಹೋಗಲೇಬೇಕೆಂಬ ಛಲದಿಂದ ಒಂದು ಹೆಲಿಕಾಪ್ಟರ್ ಏರಿದರು. ಮತ್ತೊಂದು ಹೆಲಿಕಾಪ್ಟರ್ ಅಲ್ಲೇ ಉಳಿಯಿತು. ಮುಖ್ಯಮಂತ್ರಿಗಳ ತಂಡ ಬಾರದೆ ಹೋದರೂ ಏಕಾಂಗಿಯಾಗಿ ಗೋವಾ - ಕರ್ನಾಟಕ ಗಡಿ ಗ್ರಾಮದಲ್ಲಿ ನಡೆದ ಕಳಸಾ ಬಂಡೂರಿ ನಾಲಾ ಯೋಜನೆಯ ಶಿಲಾನ್ಯಾಸವನ್ನು ನೆರವೇರಿಸಿದರು. ಸುರಿಯುವ ಮಳೆಯಲ್ಲಿ ನಡೆದ ಈ ಸಮಾರಂಭದಲ್ಲಿ ಅಂದು ಉಪ ಮುಖ್ಯಮಂತ್ರಿಗಳಿಗೆ ಸಹಯೋಗ ನೀಡಿದವರು ಅಂದಿನ ಜಲಸಂಪನ್ಮೂಲ ಸಚಿವ ಕೆ.ಎಸ್. ಈಶ್ವರಪ್ಪ ಮಾತ್ರ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾಗಿದ್ದ ಯಡಿಯೂರಪ್ಪ ಖುದ್ದು ಮುಖ್ಯಮಂತ್ರಿ ಸಮಾರಂಭಕ್ಕೆ ಬಾರದಿದ್ದರೂ ಯೋಜನೆ ಅನುಷ್ಠಾನದ ಹೊಣೆ ಹೊತ್ತು ತಮ್ಮ ಬದ್ಧತೆ ಮೆರೆದರು. ಇಂತಹ ದಿಟ್ಟ ನಿರ್ಧಾರಗಳಿಂದಲೇ ಯಡಿಯೂರಪ್ಪ ಅವರು ಉತ್ತರ ಕರ್ನಾಟಕದ ಜನ ಮಾನಸದಲ್ಲಿ ಶಾಶ್ವತವಾದ ಸ್ಥಾನಗಳಿಸಿಕೊಂಡಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಸುವರ್ಣ ವಿಧಾನಸೌಧ ನಿರ್ಮಿಸುವ ನಿರ್ಧಾರ ಪ್ರಕಟಿಸಿ ಅದರಂತೆ ನಡೆದುಕೊಂಡರು. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಭರವಸೆ ನೀಡಿದ್ದಂತೆ ಕ್ರಮ ಕೈಗೊಂಡರು ಆ ಮೂಲಕ ನುಡಿದಂತೆ ನಡೆಯುವ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಜನಪರ ಹೋರಾಟಗಾರ, ಪ್ರಶ್ನಾತೀತ ಜನನಾಯಕನ ಅಭಿಮಾನೋತ್ಸವ ನಮಗೆಲ್ಲ ಹೆಮ್ಮೆ

ಹೋರಾಟವನ್ನೇ ಉಸಿರಾಗಿಸಿಕೊಂಡ ನಾಯಕ



ವೀರಣ್ಣ ಚರಂತಿಮಠ
ಮಾಜಿ ಶಾಸಕರು, ಬಾಗಲಕೋಟೆ

ಕರ್ನಾಟಕ ರಾಜ್ಯದಿಂದ ಇಡೀ ದೇಶಕ್ಕೆ ಸಂಸದೀಯ ವ್ಯವಸ್ಥೆಯಲ್ಲಿ ಪ್ರತಿಪಕ್ಷವೆಂದರೆ ಏನು? ಜನಪರ ಹೋರಾಟವೆಂದರೆ ಏನು? ಎಂಬುದನ್ನು ತೋರಿಸಿಕೊಟ್ಟ ಹೋರಾಟಕ್ಕೆ ಮತ್ತೊಂದು ಹೆಸರೇ ಬಿ.ಎಸ್. ಯಡಿಯೂರಪ್ಪ ಎಂದು ಹೆಸರಾದ ಧೀಮಂತ ನಾಯಕ, ಯಾವ ಮಟ್ಟಕ್ಕೆ ಎಂದರೆ 'ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು' ಎನ್ನುವುದು ಸಾರ್ವತ್ರಿಕವಾಯಿತು. ಜನಪರ ಹೋರಾಟವನ್ನೇ ತನ್ನ ಉಸಿರಾಗಿಸಿಕೊಂಡ ನಾಯಕ, ಮನೆ, ಮಠ ತೊರೆದು ಕಂಡಕಂಡಲ್ಲಿ ಅಹೋರಾತ್ರಿ, ಧರಣಿ, ಸತ್ಯಾಗ್ರಹ, ಜನಪರ ಹೋರಾಟವನ್ನು ಬೀದಿಯಿಂದ ವಿಧಾನಸೌಧದ ಒಳಗಡೆವರೆಗೆ ಒಯ್ದ ಜನರ ಕಣ್ಮಣಿ.

ಯಡಿಯೂರಪ್ಪ ಹೋರಾಟದ ಪಯಣ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಹೆಜ್ಜೆಗುರುತು ಮೂಡಿಸಿದೆ. ಅವರ ಸ್ವಂತ ಜಿಲ್ಲೆ ಶಿವಮೊಗ್ಗದ ತುಂಗಾ-ವರದಾ ನದಿಯ ವ್ಯಾಪ್ತಿಯಲ್ಲಿ ಅಂಜನಾಪುರ ಡ್ಯಾಮ್ ಸೇರಿ ರಾಜ್ಯಾದ್ಯಂತ ಹಲವಾರು ಡ್ಯಾಂ, ಕೆರೆ ಕಟ್ಟೆಯ ಯೋಜನೆಗಳಿಂದ ಹಿಡಿದು ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆಯವರೆಗೆ, ಬಗರ್ ಹುಕುಂ ಹೋರಾಟಗಳು ಇವರ ಜೀವಾಳವಾಗಿತ್ತು. ಅವರ ಹೋರಾಟದ ಹೆಜ್ಜೆ ಗುರುತು ಇಲ್ಲದ ಜಿಲ್ಲೆ ರಾಜ್ಯದಲ್ಲಿಲ್ಲ. ಆಡುಮುಟ್ಟದ ಸೊಪ್ಪಿಲ್ಲ. ಕರ್ನಾಟಕ ರಾಜ್ಯದಲ್ಲಿ ಯಡಿಯೂರಪ್ಪ ಕಾಲಿಡದ ಗ್ರಾಮವೇ ಇಲ್ಲ ಅಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕಾಲಘಟ್ಟದಲ್ಲಿ ಸಣ್ಣ ಸಣ್ಣ ಹಳ್ಳಿಗಳಿಗೆ ಕೂಡ ನಾಟಕದಂತಹ ಕಾರ್ಯಕ್ರಮಗಳಿಗೆ ಯಡಿಯೂರಪ್ಪನವರು ಆಗಮಿಸುತ್ತಿದ್ದುದಕ್ಕೆ ಮೂಗಿನ ಬೆರಳಿಟ್ಟುಕೊಳ್ಳುವಂತಿತ್ತು.

ಸಂಘಟನಾತ್ಮಕ ಸಭೆಯಲ್ಲಿ ಶಿಸ್ತಿಗೆ ಕುಂದುಂಟಾದರೆ, ಜನಪರ ಹೋರಾಟದಲ್ಲಿ ಜನಸ್ತೋಮವೇನಾದರೂ ಸೇರಿರಲಿಲ್ಲವೆಂದರೆ ದೂರ್ವಾಸ ಮುನಿಯ ಅವತಾರ ತಾಳಿಬಿಡುತ್ತಿದ್ದರು. ಸಂಘಟಕರಿಗೆ, ಸ್ಥಳೀಯ ಮುಂಚೂಣಿ ನಾಯಕರಿಗೆ ತರಾಟೆಗೆ ತೆಗೆದುಕೊಂಡು ನೀವು ಜನನಾಯಕರಾಗುತ್ತಿಲ್ಲ, ಜನರು ನಿಮ್ಮನ್ನು ನಂಬುತ್ತಿಲ್ಲವೇ ಅಥವಾ ಜನರನ್ನು ಸೇರಿಸುವಲ್ಲಿ ನೀವು ಅಸಮರ್ಥರೇ? ಅಂದರೆ ನಿಮ್ಮ ಹೋರಾಟ ಸರಿಯಾದ ದಿಸೆಯಲ್ಲಿ ಇಲ್ಲ ಅಂತಾ ಅಂದುಕೊಳ್ಳೋಣವೇ? ಈ ತರಹದ ಸರಣಿ ಪ್ರಶ್ನೆಗಳನ್ನು ಮಾಡುತ್ತಾ ಈ ರೀತಿಯಾದರೆ ನಾವು ರಾಜ್ಯದಲ್ಲಿ ಆಡಳಿತಕ್ಕೆ ಯಾವಾಗ ಬರೋದು ಎಂದು ಮತ್ತೆ ಸ್ಥಳೀಯ ನಾಯಕರಿಗೆ ತಿದ್ದಿ ಮಾರ್ಗದರ್ಶನ ಮಾಡಿ ಹುರಿದುಂಬಿಸುವ ಕಲೆ ಯಡಿಯೂರಪ್ಪನವರಿಗೆ ಕರಗತವಾಗಿತ್ತು.

ಯಡಿಯೂರಪ್ಪನವರ ಬಗ್ಗೆ ಐಪಿಎಸ್ ಅಧಿಕಾರಿಯೊಬ್ಬರು ಹೇಳುವುದನ್ನು ಕೇಳಬೇಕು. ಕೇಳುತ್ತಾ ಹೋದರೆ ಯಡಿಯೂರಪ್ಪನವರ ಹೋರಾಟದ ಕಿಚ್ಚು ತಿಳಿಯುತ್ತೆ. 2013 ರಿಂದ 2018 ರಲ್ಲಿ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಬೆಂಗಳೂರಿನಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಹೇಳುತ್ತಿದ್ದುದ್ದು ಯಾವುದಾದರೂ ಹೋರಾಟವನ್ನು ಬಿಎಸ್‌ವೈ ಹಮ್ಮಿಕೊಂಡರೆ ಮುಂಜಾನೆಯೇ 500-600 ಜನ ಸೇರಿ ಸಿ.ಎಂ. ಮನೆಯ ಮುಂದೆ, ಆಡಳಿತ ಭವನದ ಮುಂದೆ ಅಥವಾ ಹೋರಾಟ ಸ್ಥಳದಲ್ಲಿ ಧರಣಿ ಕುಳಿತುಬಿಡುತ್ತಿದ್ದರಂತೆ. ಪೊಲೀಸ್ ಅಧಿಕಾರಿಗಳಿಗೆ ನಮಗೆ ಉಪಾಹಾರದ ವ್ಯವಸ್ಥೆ ಮಾಡಬೇಕು. ಅದು ಪ್ರಜಾಪ್ರಭುತ್ವದಲ್ಲಿ ನಿಮ್ಮ ಸಾಂವಿಧಾನಿಕ ಕರ್ತವ್ಯ ಅನ್ನುತ್ತಿದ್ದರಂತೆ. ಅದಕ್ಕೆ ಇಲಾಖೆ ಒಪ್ಪಿದ ಮೇಲೆ ಆ ದಿವಸ ಧರಣಿ ಮುಂದುವರಿಸಿ ಹಾಗೆಯೇ ಮಧ್ಯಾಹ್ನದ ಊಟಕ್ಕೆ ಕೂಡ ಎಲ್ಲರಿಗೂ ಊಟದ ವ್ಯವಸ್ಥೆ ಮಾಡುವಂತೆ ಆಗ್ರಹಿಸುತ್ತಿದ್ದದ್ದು ಅವರ ಹೋರಾಟದ ಕಾರ್ಯವೈಖರಿಗೆ ಸಾಕ್ಷಿ ಅಂತಾ ಹೇಳುತ್ತಾರೆ. ಇವರುಗಳಿಗೆ ಮನೆ ಕಡೆ ಮರಳುವ ಚಿಂತೆಯೇ ಇರುತ್ತಿರಲಿಲ್ಲವಂತೆ. ಇವರ ಈ ಹೋರಾಟಕ್ಕೆ ಇಲಾಖೆಗಳೇ ಬೆಸ್ತು ಬೀಳುತ್ತಿತ್ತಂತೆ. ಇವರ ಹೋರಾಟದಿಂದ ಅವಾಗಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಅಧಿಕಾರಿಗಳಿಗೆ ಹೇಳುತ್ತಿದ್ದರಂತೆ ಬಿ.ಎಸ್.ಯಡಿಯೂರಪ್ಪನವರಿಗೆ ಹೇಳಿಬಿಡಿ ಸಿ.ಎಂ. ರವರು ಊರಿನಲ್ಲಿಲ್ಲ, ಮೈಸೂರಿಗೆ ಹೋದರು ಅಂತಾ ತಿಳಿಸಿ ಅವರನ್ನು ಸಾಗಿಹಾಕುವಂತೆ ತಿಳಿಸುತ್ತಿದ್ದರಂತೆ. ಸಿದ್ದರಾಮಯ್ಯನವರು ಈ ಯಡಿಯೂರಪ್ಪನ ಹೋರಾಟ ಸಾಕಾಗಿ ಹೋಗಿದೆ. ದೊಡ್ಡ ತಲೆನೋವು ಅನ್ನುತ್ತಿದ್ದರಂತೆ. ಅಂದರೆ ಯಡಿಯೂರಪ್ಪನವರ ಹೋರಾಟ ಯಾವಾಗಲೂ ತೋರಿಕೆಗಲ್ಲ, ಡಂಬಾಚಾರಕ್ಕಂತೂ ಅಲ್ಲವೇ ಅಲ್ಲ, ಹೋರಾಟಕ್ಕೆ ಜೀವ ನೀಡುತ್ತಿದ್ದವರು ಯಡಿಯೂರಪ್ಪನವರು.

ಇಂತಹ ಧೀಮಂತ ನಾಯಕನಿಗೆ ಸರಕಾರದ ಚುಕ್ಕಾಣಿ ಹಿಡಿಯುವ ಅವಕಾಶ ಬಂದಾಗ ರಾಜ್ಯದಲ್ಲಿ ತಮ್ಮದೇ ಆಡಳಿತಾತ್ಮಕ ಛಾಪು ಮೂಡಿಸಿದ ವೈಶಿಷ್ಟ್ಯಪೂರ್ಣ ಮೇರು ವ್ಯಕ್ತಿತ್ವವಿದೆ. ಮುಂದಿನವರಿಗೆ ಒಂದು ಮಾದರಿಯಾಗಿದ್ದಾರೆ. ಇವರು ನಮ್ಮ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ರೈತ ಬಜೆಟ್ ನೀಡಿದ್ದು ಒಂದು ಮೈಲುಗಲ್ಲು, ಹೆಣ್ಣು ಭ್ರೂಣಹತ್ಯೆ ತಡೆಯುವ ದಿಸೆಯಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ಆರಂಭಿಸಿ ಮಹಿಳಾ ಕುಲಕ್ಕೆ ಸಂತೃಪ್ತಿ ನೀಡಿದವರು. ಶಾಲಾ ಮಕ್ಕಳಿಗೆ ಸೈಕಲ್ ನೀಡುವ ಮೂಲಕ ಶೈಕ್ಷಣಿಕ ಪ್ರಗತಿಗೆ ದೊಡ್ಡ ಆಯಾಮ ನೀಡಿದ ಮಹಾನ್ ಆಡಳಿತಾರ. 2009ರಲ್ಲಿ ಇವರು ಮುಖ್ಯಮಂತ್ರಿ ಆಗಿದ್ದಾಗ ಆವಾಗ ರಾಜ್ಯಾದ್ಯಂತ ಹಿಂದೆಂದೂ ಕಂಡುಕೇಳರಿಯದ ಪ್ರವಾಹದಿಂದ ಜರ್ಝರಿತವಾದಾಗ ಹಗಲು ಇರುಳೆನ್ನದೇ ಜನರ ಸಂಕಷ್ಟಕ್ಕೆ ಸ್ಪಂದಿಸಿದ ಕರುಣಾಳು. ಇದೇ ಸಂದರ್ಭದಲ್ಲಿ ಬಾಗಲಕೋಟೆಯ ನಗರ ಸೇರಿ ಹಲವು ಗ್ರಾಮಗಳು ಪ್ರವಾವಾಹಪೀಡಿತವಾದಾಗ ಸಂಪೂರ್ಣ ಗ್ರಾಮಗಳನ್ನೇ ಸ್ಥಳಾಂತರಿಸಿ ಆಶ್ರಯ ಯೋಜನೆ ಮೂಲಕ ನವ ಗ್ರಾಮವನ್ನು ನಿರ್ಮಾಣ ಮಾಡಿ ಉಚಿತವಾಗಿ ಹೊಸ ಮನೆಗಳನ್ನು ಕಟ್ಟಿಕೊಡುವ ಮೂಲಕ ಸಂತ್ರಸ್ತರ ಬಾಳಿಗೆ ದಾರಿದೀಪವಾದವರು. ಬಾಗಲಕೋಟೆಗೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ನೀಡಿದ್ದು ಇದೇ ಯಡಿಯೂರಪ್ಪನವರು ಅವರು ಮುಖ್ಯಮಂತ್ರಿಗಳಾದ ಅವಧಿಯಲ್ಲಿ ಅನೇಕ ಕಾಲೇಜುಗಳನ್ನು, ಶಾಲೆಗಳನ್ನು, ಆಸ್ಪತ್ರೆಗಳನ್ನು, ಅಂಗನವಾಡಿ ಕೇಂದ್ರಗಳನ್ನು ಬಾಗಲಕೋಟೆಗೆ ಮಂಜೂರು ಮಾಡಿಕೊಟ್ಟವರು. ಮತ್ತೆ ಇವರು ಎರಡನೇ ಅವಧಿಗೆ ಮುಖ್ಯಮಂತ್ರಿಯಾದಾಗ 2019 ರಲ್ಲಿ ಪ್ರವಾಹ ಮರುಕಳಿಸಿದಾಗಲಂತೂ ಆ ಇಳಿ ವಯಸ್ಸಿನಲ್ಲೂ ರಾತ್ರಿ ಹಗಲು ಎನ್ನದೇ ಪೂರ್ಣ ಪ್ರಮಾಣದ ಸಂಪುಟವಿರದಿದ್ದರೂ ಏಕಾಂಗಿಯಾಗಿ ರಾಜ್ಯ ಸುತ್ತಿ ರೈತರ, ಜನಸಾಮಾನ್ಯರಿಗೆ ಸಾಂತ್ವನ, ಪರಿಹಾರ ನೀಡಿ ಸಂತೈಸಿದ ದೃಷ್ಟಾರ.

ಕೋವಿಡ್ ಸಂದರ್ಭದಲ್ಲಿ ನೇಕಾರರಿಗೆ ತಂದಂತಹ ನೇಕಾರ ಸಮ್ಮಾನ್ ಯೋಜನೆ, ಹೂಬೆಳೆಗಾರರಿಗೆ ಪರಿಹಾರ, ಆಟೋ ಟ್ಯಾಕ್ಸಿ ಚಾಲಕರಿಗೆ ಪರಿಹಾರ ಹೀಗೆ ವಿವಿಧ ವರ್ಗಗಳಿಗೆ ನೀಡಿದ ಸಹಾಯ ಅವರ ಜನಪರ ಚಿಂತನೆಯ ಪಕ್ವತೆ ತೋರಿಸುತ್ತೆ. ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದ ಯಡಿಯೂರಪ್ಪನವರು ತಮ್ಮ ಅವಧಿಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಮಮತಾಜ್ ಅಲಿಖಾನ್ ಅವರನ್ನು ಎಂ.ಎಲ್.ಸಿ. ಮಾಡಿ ಸಚಿವರನ್ನೂ ಮಾಡಿದ್ದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ.

ಇಂತಹ ಒಬ್ಬ ದಣಿವರಿಯದ ಜನಪರ ಹೋರಾಟಗಾರ, ಪ್ರಶ್ನಾತೀತ ಜನನಾಯಕ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವವನ್ನು ಇದೇ ತಿಂಗಳು 9 ರಂದು ಚಿತ್ರದುರ್ಗದಲ್ಲಿ ಪಕ್ಷಾತೀತವಾಗಿ ಹಮ್ಮಿಕೊಂಡಂತಹ ಕಾರ್ಯಕ್ರಮಕ್ಕೆ ನಾವೆಲ್ಲರೂ ನಮ್ಮ ಜಿಲ್ಲೆಯಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗಿಯಾಗೋಣ. ಈ ಜನನಾಯಕನಿಗೆ ನಮ್ಮ ಗೌರವ ಸಮರ್ಪಿಸೋಣ ಅಂತ ಎಲ್ಲರಲ್ಲೂ ವಿನಂತಿ.

ಸಂಪಾದಕೀಯ

ಮಾನಸಿಕ ಆರೋಗ್ಯಕ್ಕೆ ಆದ್ಯತೆ ಬೇಕು

ಆತಂಕಕಾರಿ ಸಂಗತಿಯೊಂದನ್ನು ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ವರದಿ ಹೊರಗೆಡಹಿದೆ. ಬೆಂಗಳೂರಿನಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆ ಗಂಭೀರವಾಗಿದ್ದು, ಭಾರತದ ದೊಡ್ಡ ನಗರಗಳಲ್ಲೆಲ್ಲ ಆತ್ಮಹತ್ಯೆಗಳ ಸಂಖ್ಯೆ ಇಲ್ಲಿ ಅತ್ಯಧಿಕವಾಗಿದೆ. ಎನ್‌ಸಿಆರ್‌ಬಿ ಮಾಹಿತಿ ಪ್ರಕಾರ ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2024ರಲ್ಲಿ ಬೆಂಗಳೂರಿನಲ್ಲಿ 2403 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದವು. ದೆಹಲಿಯ ನಂತರ ಇದು ಎರಡನೇ ಅತಿ ಹೆಚ್ಚು ಸಂಖ್ಯೆ. ಆದರೆ ಜನಸಂಖ್ಯೆ



ಅನುಪಾತದಲ್ಲಿ ಬೆಂಗಳೂರಿನ ಆತ್ಮಹತ್ಯೆ ಪ್ರಮಾಣ ಹೆಚ್ಚು. ಇಲ್ಲಿ ಪ್ರತಿ ಒಂದು ಲಕ್ಷಕ್ಕೆ ಸುಮಾರು 16.7ರಿಂದ 20 ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ದೇಶದ ಸರಾಸರಿ ಪ್ರಮಾಣವಾದ 12.4ಕ್ಕಿಂತ ಬಹಳ ಹೆಚ್ಚು. ಪ್ರತಿದಿನ ಸುಮಾರು 6ರಿಂದ 7 ಜನ ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ; ಅಂದರೆ ಸುಮಾರು ಪ್ರತಿ 3.5 ಗಂಟೆಗೆ ಒಬ್ಬರಂತೆ. 2022–2025ರ ಅವಧಿಯಲ್ಲಿ 9450 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಕುಟುಂಬ ಕಲಹಗಳು, ದಾಂಪತ್ಯ ಸಮಸ್ಯೆಗಳು, ಪ್ರೇಮಭಂಗ ಇದಕ್ಕೆ ಪ್ರಮುಖ ಕಾರಣಗಳು. ಹಣಕಾಸಿನ ಸಮಸ್ಯೆಗಳು, ಸಾಲದ ಬಾಧೆ, ಷೇರು ಮಾರುಕಟ್ಟೆ ನಷ್ಟ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚ ಜನರನ್ನು ಒತ್ತಡಕ್ಕೆ ತಳ್ಳುತ್ತಿದೆ. ಕೆಲಸದ ಒತ್ತಡ, ಒಂಟಿತನ, ಸ್ನೇಹ ಸಂಬಂಧಗಳ ಕೊರತೆ ಮತ್ತು ಓದಿನ ಒತ್ತಡ ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಐಟಿ ಉದ್ಯೋಗಿಗಳ ಮೇಲೆ ಪರಿಣಾಮ ಬೀರುತ್ತಿದೆ. ದೀರ್ಘಕಾಲದ ಅನಾರೋಗ್ಯ ಮತ್ತು ಚಿಕಿತ್ಸೆ ಪಡೆಯದ ಮಾನಸಿಕ ಆರೋಗ್ಯ ಸಮಸ್ಯೆಗಳು ಕೂಡ ಹಲವಾರು ಪ್ರಕರಣಗಳಿಗೆ ಕಾರಣವಾಗಿವೆ. ಒಟ್ಟಾರೆ ಮಾನಸಿಕ ಆರೋಗ್ಯದ ಗುಣಮಟ್ಟದಲ್ಲಿ ಹೆಚ್ಚಳ ಮಾಡಲೇಬೇಕಾದ ಅಗತ್ಯವನ್ನು ಇದು ಒತ್ತಿ ಹೇಳುತ್ತಿದೆ. ಮಾನಸಿಕ ಆರೋಗ್ಯದ ಕೌನ್ಸೆಲಿಂಗ್ ನೀಡುವ ನಿಮ್ಹಾನ್ಸ್‌ನಂಥ ಸಂಸ್ಥೆಗಳನ್ನು ಬಲಪಡಿಸಬೇಕು. ಅಲ್ಲಿಗೆ ಅನುದಾನ ಹೆಚ್ಚಿಸಬೇಕು. ತಜ್ಞರ ಸಂಖ್ಯೆಯನ್ನು ಏರಿಸಬೇಕು. ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಮಾನಸಿಕ ಸಮಸ್ಯೆ, ಖಿನ್ನತೆ ಎಂದು ಬಂದವರನ್ನು ಮೊದಲ ಆದ್ಯತೆಯಲ್ಲಿ ಪರಿಗಣಿಸಿದ ಕೌನ್ಸೆಲಿಂಗ್ ಅಥವಾ ಚಿಕಿತ್ಸೆ ಒದಗಿಸುವ ರೂಢಿ ಬೆಳೆಸಿಕೊಳ್ಳಬೇಕು. ಬೆಂಗಳೂರು ಉದ್ಯಾನಗಳ ನಗರ, ಐಟಿ ಸಿಟಿ, ಸಿಲಿಕಾನ್ ಸಿಟಿ ಎಂಬ ಹೆಗ್ಗಳಿಕೆ ಹೊಂದಿತ್ತು. ಇದೀಗ ಆತ್ಮಹತ್ಯೆಗಳ ರಾಜಧಾನಿ ಎಂದು ಅನ್ನಿಸಿಕೊಳ್ಳದಿರಲಿ.

ಸೊಂಪಾದಕೀಯ

ಪುಗಸಟ್ಟೆ ಪ್ರೀಮಿಯರ್ ಲೀಗ್

ಸ್ಟೇಡಿಯಂನಿಂದ ಆಚೆ ಬೀಳುವ ಸಿಕ್ಸರ್‌ನಂತೆ, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಿಂದ ಐಪಿಎಲ್‌ನ ಫೈನಲ್ ಪಂದ್ಯ ಚಂಗನೆ ನೆಗೆದು ಆಚೆ ಹೋಗಿದ್ದಕ್ಕೆ ವಿಲಕ್ಷಣ ಕಾರಣವೊಂದನ್ನು ಬಿಸಿಸಿಐ ನೀಡಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಿಗದಿಯಾದದ್ದಕ್ಕಿಂತ ಹೆಚ್ಚು ಟಿಕೆಟ್, ಅಂದರೆ 10000 ಟಿಕೆಟ್‌ಗೆ ಬೇಡಿಕೆ ಮಂಡಿಸಿತ್ತಂತೆ. ಸಾಮಾನ್ಯವಾಗಿ ಬಿಸಿಸಿಐ, ಸ್ಟೇಡಿಯಂ ಸಾಮರ್ಥ್ಯದ ಶೇ. 15ರಷ್ಟು ಟಿಕೆಟ್ ನೀಡುತ್ತದಂತೆ. ಅದು ಐಪಿಎಲ್ ನಿಯಮ. ಆದರೆ ಈ ಹಿಂದೆ ಕೆಎಸ್‌ಸಿಎ ನಿಗದಿಗಿಂತ ಹೆಚ್ಚು ಟಿಕೆಟ್ ಲಬಕಾಯಿಸಿದೆ. ಅದಲ್ಲದೇ ಇನ್ನೂ ಹೆಚ್ಚಿನ ಅಂದರೆ 10000 ಟಿಕೆಟ್‌ಗೆ ಬೇಡಿಕೆ ಮಂಡಿಸಿದೆ. ಇದರಿಂದ ಬೆಚ್ಚಿದ ಬಿಸಿಸಿಐ, ಇದರ ಸಹವಾಸವೇ ಬೇಡ ಎಂದು ಹೊರಬಿದ್ದಿದೆ. ಕೆಎಸ್‌ಸಿಎಯ ಸಮರ್ಥನೆಯೂ ಮಜವಾಗಿದೆ. ಅದರ ಪ್ರಕಾರ, ಕ್ಲಬ್‌ನ ಸದಸ್ಯರ ಸಂಖ್ಯೆಯೇ 3000ಕ್ಕೂ ಹೆಚ್ಚಿದೆ. ಅವರಿಗೆಲ್ಲ ಕೊಡಬೇಕಾಗುತ್ತದೆ. ಇದರಲ್ಲಿ ಬಿಟ್ಟಿಯಾಗಿ ಕೊಡುವುದೆಷ್ಟು ಎಂಬ ವಿವರ ಲಭ್ಯವಿಲ್ಲ. ಇನ್ನು ಶಾಸಕರು, ಮಂತ್ರಿಗಳ ಒತ್ತಡ ಬೇರೆ. ಅವರೂ ಕಳೆದ ಬಾರಿ ನಮಗೂ ನಮ್ಮ ಮಕ್ಕಳು ಮರಿಗೂ ಬಂಧುಗಳಿಗೂ ಟಿಕೆಟ್ ಬೇಕು ಎಂದು ನಾಚಿಕೆ ಬಿಟ್ಟೇ ಕೇಳಿದ್ದಾರೆ. ಸಿಎಂ ವರೆಗೂ ಒತ್ತಡ ಹೋಗಿದೆ. ಹೋಗೆ ಪುಗಸಟ್ಟೆ ಮಜಾ ಮಾಡುವವರ ಸಂಖ್ಯೆಯೇ ಈಗ ಬೆಂಗಳೂರಿನಿಂದ ಐಪಿಎಲ್ ಪಂದ್ಯ ಕೈತಪ್ಪಲು ಕಾರಣವಾಗಿದೆ ಎಂಬುದು ನಮಗೆ ಹೆಮ್ಮೆಯ ಸಂಗತಿಯೋ, ನಾಚಿಕೆಯ ಸಂಗತಿಯೋ ಗೊತ್ತಾಗುತ್ತಿಲ್ಲ. ಬಿಟ್ಟಿ ಸಿಕ್ಕರೆ ನನಗೊಂದು ನನ್ನಪ್ಪನಿಗೊಂದು ಎನ್ನುವವರು ತಾನೆ ನಾವು. ಅದೂ ಪ್ರೀಮಿಯಂ ಸೀಟುಗಳೇ ಆಗಬೇಕು. ನೈಜ ಕ್ರಿಕೆಟ್ ಪ್ರೇಮಿಗಳು ಇದಕ್ಕೆ ತೆರೆಗೆ ಕಟ್ಟಬೇಕು!

ಸಂಪಾದಕರ ಸದ್ಯಶೋಧನೆ

ನಮ್ಮ ನಡೆ ಯಾರಿಗೆ ಗೊತ್ತಿರಬೇಕು?

ಇಂಗ್ಲೆಂಡಿನಲ್ಲಿ ಒಂದು ಮಾತಿದೆ – Life is better when nobody knows what you are doing. ಅಂದರೆ ನೀವು ಏನು ಮಾಡುತ್ತಿದ್ದೀರಿ ಎಂಬುದು ಯಾರಿಗೂ ತಿಳಿಯದಿದ್ದಾಗ ಜೀವನವು ಉತ್ತಮವಾಗಿರುತ್ತದೆ. ಜೀವನದ ಪಯಣದಲ್ಲಿ ನಾವು ಅನೇಕ ಘಟ್ಟಗಳನ್ನು ದಾಟುತ್ತೇವೆ. ಹಿಂದೆಲ್ಲ ನಮ್ಮ ಸಾಧನೆ, ನೋವು–ನಲಿವು ಕೇವಲ ಆಪ್ತ ವಲಯಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಆದರೆ ಇಂದಿನ 'ಸೋಷಿಯಲ್ ಮೀಡಿಯಾ' ಯುಗದಲ್ಲಿ ನಾವು ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಏನು ಮಾಡುತ್ತೇವೆ ಎಂಬ ಪ್ರತಿಯೊಂದು ಸಣ್ಣ ವಿಚಾರವನ್ನೂ ಜಗತ್ತಿಗೆ ಸಾರುತ್ತೇವೆ. ಈ ಹಂತದಲ್ಲಿ, 'ಜೀವನವು ಯಾರಿಗೂ ತಿಳಿಯದಿದ್ದಾಗ ಸುಂದರವಾಗಿರುತ್ತದೆ' ಎಂಬ ಮಾತು ಅತ್ಯಂತ ಪ್ರಸ್ತುತವೆನಿಸುತ್ತದೆ. ಈ ತತ್ವವು ಕೇವಲ ರಹಸ್ಯದ ಬಗ್ಗೆ ಅಲ್ಲ, ಬದಲಾಗಿ ಅದು ಆತ್ಮಸ್ಥೈರ್ಯ, ಗೌಪ್ಯತೆ ಮತ್ತು ಮಾನಸಿಕ ಶಾಂತಿಯ ಬಗ್ಗೆ ಮಾತನಾಡುತ್ತದೆ. ನಾವು ಮಾಡುತ್ತಿರುವ ಕೆಲಸದ ಬಗ್ಗೆ ನಾಲ್ಕು ಜನರಿಗೆ ತಿಳಿಸಿದ ತಕ್ಷಣ, ನಮಗೆ ಗೊತ್ತಿಲ್ಲದೇ ಒಂದು ಸಾಮಾಜಿಕ ಒತ್ತಡ ಸೃಷ್ಟಿಯಾಗುತ್ತದೆ. 'ಅವನು ಆ ಕೆಲಸ ಮಾಡುತ್ತಿದ್ದಾನೆ, ಅದರ ಫಲಿತಾಂಶ ಏನಾಯಿತು?' ಎಂದು ಜನರು ಕೇಳಲಾರಂಭಿಸುತ್ತಾರೆ. ಈ ಪ್ರಶ್ನೆಗಳು ನಮ್ಮ ಕೆಲಸದ ಗುಣಮಟ್ಟದ ಮೇಲೆ ಪ್ರಭಾವ ಬೀರಬಹುದು. ಯಾವಾಗ ನಾವು ನಮ್ಮ ಗುರಿಗಳನ್ನು ಗುಪ್ತವಾಗಿಡುತ್ತೇವೆಯೋ, ಆಗ ನಾವು ಕೇವಲ ನಮಗಾಗಿ ಕೆಲಸ ಮಾಡುತ್ತೇವೆ. ಅಲ್ಲಿ ಬೇರೆಯವರ ನಿರೀಕ್ಷೆಗಳಿಗೆ ಉತ್ತರ ನೀಡುವ ಹೊಣೆ ಇರುವುದಿಲ್ಲ. ಸೋತರೂ ಅದು ನಮಗೆ ಕಲಿಕೆಯಾಗುತ್ತದೆ ಹೊರತು ಸಮಾಜದ ಮುಂದೆ ಅವಮಾನವೆನಿಸುವುದಿಲ್ಲ. ಜಗತ್ತು ಸುಂದರವಾಗಿದೆ ನಿಜ, ಆದರೆ ಎಲ್ಲರ ದೃಷ್ಟಿಕೋನ ಒಂದೇ ಆಗಿರುವುದಿಲ್ಲ. ನಾವು ನಮ್ಮ ಸಂತೋಷದ ಕ್ಷಣಗಳನ್ನು ಅಥವಾ ಹಂತ–ಹಂತದ ಪ್ರಗತಿಯನ್ನು ಹಂಚಿಕೊಂಡಾಗ, ಅದನ್ನು ಕಂಡು ಎಲ್ಲರೂ ಸಂಭ್ರಮಿಸುವುದಿಲ್ಲ. ಕೆಲವು ಬಾರಿ ನಕಾರಾತ್ಮಕ ಶಕ್ತಿಗಳು ಅಥವಾ ಅಸೂಯೆಯ ಕಣ್ಣುಗಳು ನಮ್ಮ ಪ್ರಗತಿಗೆ ಅಡ್ಡಿಯಾಗಬಹುದು. ಹಿರಿಯರು ಹೇಳುವಂತೆ 'ದೃಷ್ಟಿ ತಗುಲುವುದು' ಎಂಬುದು ಕೇವಲ ಮೂಢನಂಬಿಕೆಯಲ್ಲ, ಅದು ವ್ಯಕ್ತಿಯೊಬ್ಬನ ಏಳಿಗೆಯ ಬಗ್ಗೆ ಬೇರೆಯವರು ಹೊಂದಿರುವ ನಕಾರಾತ್ಮಕ ಆಲೋಚನೆಗಳ ಪ್ರಭಾವ. ಮೌನವಾಗಿ ಕೆಲಸ ಮಾಡುವುದು ಇಂಥ ಅನಗತ್ಯ ಅಡ್ಡಿಗಳಿಂದ ನಮ್ಮನ್ನು ರಕ್ಷಿಸುತ್ತದೆ. ಬೇರೆಯವರು ನೋಡುತ್ತಿದ್ದಾರೆ ಎಂದಾಗ ನಾವು ನಮಗಾಗಿ ಬದುಕುವುದಕ್ಕಿಂತ ಹೆಚ್ಚಾಗಿ ಸಮಾಜಕ್ಕೆ ತೋರಿಸಿಕೊಳ್ಳಲು ಬದುಕುತ್ತೇವೆ. ಉದಾಹರಣೆಗೆ, ಒಂದು ಪ್ರವಾಸಕ್ಕೆ ಹೋದಾಗ ಆ ಕ್ಷಣವನ್ನು ಆನಂದಿಸುವುದಕ್ಕಿಂತ ಅದನ್ನು ಫೋಟೋ ತೆಗೆದು ಅಪ್ಲೋಡ್ ಮಾಡುವುದರಲ್ಲೇ ನಾವು ನಿರತರಾಗಿರುತ್ತೇವೆ. ಯಾವಾಗ ನಮ್ಮ ಬದುಕಿನ ಬಗ್ಗೆ ಯಾರಿಗೂ ತಿಳಿದಿರುವುದಿಲ್ಲವೋ, ಆಗ ನಾವು ನಮ್ಮ ನೈಜ ರೂಪದಲ್ಲಿ ಇರುತ್ತೇವೆ. ಅಲ್ಲಿ ಯಾವುದೇ ಪ್ರದರ್ಶನ (Show off) ಇರುವುದಿಲ್ಲ. ಆ ಬದುಕು ಅತ್ಯಂತ ಪ್ರಾಮಾಣಿಕವಾಗಿರುತ್ತದೆ. ಗುಟ್ಟಾಗಿ ಕೆಲಸ ಮಾಡಿ ಗೆದ್ದಾಗ ಸಿಗುವ ಮಜವೇ ಬೇರೆ. 'Work hard in silence, let success be your noise' ಎಂಬಂತೆ, ನಿಮ್ಮ ಸಾಧನೆ ಜಗತ್ತಿಗೆ ಹಠಾತ್ ಕಾಣಿಸಿಕೊಂಡಾಗ ಅದರ ತೂಕ ಹೆಚ್ಚಿರುತ್ತದೆ. ನೀವು ಏನು ಮಾಡುತ್ತಿದ್ದೀರಿ ಎಂದು ತಿಳಿಯದ ಜನರು, ನಿಮ್ಮ ಯಶಸ್ಸನ್ನು ಕಂಡು ಬೆರಗಾಗುತ್ತಾರೆ. ಈ ಗೌಪ್ಯತೆಯು ನಿಮ್ಮ ವ್ಯಕ್ತಿತ್ವಕ್ಕೆ ಒಂದು ರೀತಿಯ ಘನತೆ ಮತ್ತು ನಿಗೂಢತೆಯನ್ನು ನೀಡುತ್ತದೆ. ಇತರರ ಅಭಿಪ್ರಾಯಗಳಿಗೆ ಕಿವಿಗೊಡದಿದ್ದಾಗ ಮನಸ್ಸು ಪ್ರಶಾಂತವಾಗಿರುತ್ತದೆ. ಟೀಕೆಗಳು ಅಥವಾ ಅನಗತ್ಯ ಸಲಹೆಗಳು ನಮ್ಮ ಏಕಾಗ್ರತೆಯನ್ನು ಭಂಗಗೊಳಿಸುವುದಿಲ್ಲ. ನಮ್ಮ ಜೀವನದ ನಿರ್ಧಾರಗಳು ಸಂಪೂರ್ಣವಾಗಿ ನಮ್ಮದಾಗಿರುತ್ತವೆ. ಬೇರೆಯವರ 'ಸಮ್ಮತಿ'ಗಾಗಿ ಕಾಯುವ ಅಭ್ಯಾಸ ತಪ್ಪುತ್ತದೆ. ಇದರಿಂದ ನಮ್ಮ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ನಮ್ಮ ಖಾಸಗಿ ಬದುಕನ್ನು ನಾವು ಎಷ್ಟು ಗುಪ್ತವಾಗಿಡುತ್ತೇವೆಯೋ, ನಮ್ಮ ಸಂಬಂಧಗಳು ಅಷ್ಟು ಗಟ್ಟಿಯಾಗುತ್ತವೆ. ಸಂಗಾತಿಯೊಂದಿಗೆ ಕಳೆದ ಸಮಯ ಅಥವಾ ಕುಟುಂಬದ ವಿಚಾರಗಳು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯ ವಸ್ತುವಾಗಬಾರದು. ಆಪ್ತ ಕ್ಷಣಗಳು ಕೇವಲ ಆ ಕ್ಷಣದಲ್ಲಿ ಭಾಗಿಯಾದವರಿಗೆ ಮಾತ್ರ ತಿಳಿದಿರಲಿ. ಇದು ಸಂಬಂಧಗಳಲ್ಲಿ ನಂಬಿಕೆ ಮತ್ತು ಗೌರವವನ್ನು ಹೆಚ್ಚಿಸುತ್ತದೆ.

ಗ್ರೇಟ್ ನಿಕೋಬಾರ್: ಸಮುದ್ರಾಧಿಪತ್ಯದ ಮಹಾದ್ವಾರ

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಇಪ್ಪತ್ತೊಂದನೆಯ ಶತಮಾನದಲ್ಲಿ ರಾಷ್ಟ್ರದ ಭದ್ರತೆ ಎನ್ನುವುದು ಕೇವಲ ಭೂ ಗಡಿಗಳ ರಕ್ಷಣೆ ಅಥವಾ ಗಡಿಭಾಗದ ಸೈನಿಕ ಬಲಕ್ಕೆ ಮಾತ್ರ ಸೀಮಿತವಾಗಿಲ್ಲ. ಸಮುದ್ರ ಮಾರ್ಗಗಳ ಮೇಲಿನ ಹಿಡಿತ, ಮಹತ್ವದ ಜಲಸಂಧಿಗಳ ನಿಯಂತ್ರಣ ಮತ್ತು ಇಂಡೋ – ಪೆಸಿಫಿಕ್ ಪ್ರದೇಶ ದಲ್ಲಿ ಕಾರ್ಯತಂತ್ರದ ಸ್ಥಾನಮಾನ, ಒಂದು ರಾಷ್ಟ್ರದ ಜಾಗತಿಕ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಭಾರತದ ದೃಷ್ಟಿಯಿಂದ ಈ ಹೊಸ ಕಾರ್ಯತಂತ್ರದ ವಾಸ್ತವಿಕತೆಯನ್ನು ಅತ್ಯಂತ ಸ್ಪಷ್ಟವಾಗಿ ಪ್ರತಿಬಿಂಬಿಸುವ ಸ್ಥಳವೆಂದರೆ 'ಗ್ರೇಟ್ ನಿಕೋಬಾರ್ ದ್ವೀಪ'.

ಭಾರತದ ಮುಖ್ಯ ಭೂಭಾಗದಿಂದ ದೂರವಿರುವ ದ್ವೀಪವೆಂದು ಕಾಣಿಸಿಕೊಂಡರೂ, ಗ್ರೇಟ್ ನಿಕೋಬಾರ್ ಭಾರತಕ್ಕೆ ಅತ್ಯಂತ ಅಮೂಲ್ಯವಾದ ಕಾರ್ಯತಂತ್ರದ ಸ್ಥಳವಾಗಿದೆ. ಅದರ ಭೌಗೋಳಿಕ ಸ್ಥಾನ, ಆರ್ಥಿಕ ಸಾಮರ್ಥ್ಯ ಹಾಗೂ ರಕ್ಷಣಾತ್ಮಕ ಮಹತ್ವ ಎಲ್ಲವೂ ಸೇರಿ ಭಾರತದ ಸಮುದ್ರ ಭದ್ರತಾ ವ್ಯವಸ್ಥೆಯ ಕೇಂದ್ರಬಿಂದುವಾಗಿ ರೂಪುಗೊಳ್ಳುತ್ತಿದೆ. ಜತೆಗೆ, ಚೀನಾ, ಹಿಂದೂ ಮಹಾಸಾಗರದಲ್ಲಿ ತನ್ನ ನೆಲೆಯನ್ನು ವಿಸ್ತರಿಸುತ್ತಿರುವ ಕಾರ್ಯತಂತ್ರಕ್ಕೆ ಇದು ಪರಿಣಾಮಕಾರಿಯಾದ ಪ್ರತಿರೋಧವಾಗಿದೆ.

'ಗ್ರೇಟ್ ನಿಕೋಬಾರ್'ನ ಮಹತ್ವ ಅದರ ಭೌಗೋಳಿಕ ಸ್ಥಾನದಲ್ಲಿದೆ. ಭಾರತದ ಮುಖ್ಯ ಭೂಭಾಗದಿಂದ ಸುಮಾರು 1,400 ಕಿಲೋಮೀಟರ್ ದೂರದಲ್ಲಿರುವ ಈ ದ್ವೀಪ ವಿಶ್ವದ ಅತ್ಯಂತ ಮಹತ್ವದ ಜಲಸಂಧಿಗಳಲ್ಲಿ ಒಂದಾದ 'ಮಲಕ್ಕಾ ಜಲಸಂಧಿ' ಸಮೀಪದಲ್ಲಿದೆ. ಇಂಡೋನೇಷ್ಯಾದ ಗಡಿ ಪ್ರಾಂತ್ಯದಿಂದ ಕೇವಲ 165 ಕಿಲೋಮೀಟರ್ ದೂರದಲ್ಲಿರುವ ಈ ದ್ವೀಪ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರವನ್ನು ಸಂಪರ್ಕಿಸುವ ಪ್ರಮುಖ ಸಮುದ್ರ ಮಾರ್ಗದ ಮೇಲ್ವಿಚಾರಣೆಗೆ ಭಾರತಕ್ಕೆ ಉತ್ತಮ ಅವಕಾಶವನ್ನು ಒದಗಿಸುತ್ತದೆ. ಪ್ರತಿ ವರ್ಷ 94,000ಕ್ಕೂ ಹೆಚ್ಚು ಹಡಗುಗಳು ಮಲಕ್ಕಾ ಜಲಸಂಧಿಯ ಮೂಲಕ ಸಂಚರಿಸುತ್ತವೆ. ಜಾಗತಿಕ ವ್ಯಾಪಾರದ ಸುಮಾರು ಶೇ.25ರಿಂದ 30ರವರೆಗೆ ಹಾಗೂ ದಿನಕ್ಕೆ ಸುಮಾರು 16 ಮಿಲಿಯನ್ ಬ್ಯಾರಲ್ ಕಚ್ಚಾ ತೈಲ ಈ ಮಾರ್ಗದ ಮೂಲಕ ಸಾಗುತ್ತದೆ. ಹೀಗಾಗಿ ಇದು ಕೇವಲ ಪ್ರಾದೇಶಿಕ ಜಲಮಾರ್ಗ ಮಾತ್ರವಲ್ಲ, ಜಾಗತಿಕ ಆರ್ಥಿಕತೆಯ ಜೀವನಾಡಿಯಾಗಿದೆ.

ಈ ಮಾರ್ಗದ ಮೇಲೆ ಭಾರತಕ್ಕೆ ದೊರೆಯುವ ಮೇಲ್ವಿಚಾರಣಾ ಸಾಮರ್ಥ್ಯ ಅತ್ಯಂತ ಮಹತ್ವದ್ದು. ಪೂರ್ವ ಏಷ್ಯಾದ ಒಟ್ಟಾರೆ ವ್ಯಾಪಾರದ ಸುಮಾರು ಶೇ.40ರಷ್ಟು ಈ ಮಾರ್ಗದ ಮೇಲೆ ಅವಲಂಬಿತವಾಗಿದೆ. ಈ ಪ್ರದೇಶದಲ್ಲಿ ಏನಾದರೂ ವ್ಯತ್ಯಯ ಉಂಟಾದರೆ ಜಾಗತಿಕ ತೈಲ ಸರಬರಾಜು, ಕೈಗಾರಿಕಾ ಸರಪಳಿ ಮತ್ತು ಅಂತಾರಾಷ್ಟ್ರೀಯ ಸಾಗಾಟ ವ್ಯವಸ್ಥೆ ಮೇಲೆ ದೊಡ್ಡ ಪರಿಣಾಮ ಬೀಳುತ್ತದೆ. 'ಗ್ರೇಟ್ ನಿಕೋಬಾರ್' ಭಾರತಕ್ಕೆ ಕೇವಲ ರಕ್ಷಣಾತ್ಮಕ ಲಾಭವನ್ನಷ್ಟೇ ನೀಡುವುದಿಲ್ಲ, ಜಾಗತಿಕವಾಗಿ ರಾಜತಾಂತ್ರಿಕ ಹಾಗೂ ಆರ್ಥಿಕ ಲಾಭಗಳಿಗೂ ದಾರಿ ಮಾಡಿಕೊಡುತ್ತದೆ. ಭಾರತದ ಸ್ವಾವಲಂಬಿ ಸಮುದ್ರಾಧಾರಿತ ವ್ಯಾಪಾರದ ಅವಲಂಬನೆ 'ಗ್ರೇಟ್ ನಿಕೋಬಾರ್'ನ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಹೀಗಾಗಿ ಸಮುದ್ರ ಭದ್ರತೆ ಭಾರತದ ಆರ್ಥಿಕ ಸ್ಥಿರತೆಗೆ ಅತ್ಯಗತ್ಯ. 'ಗ್ರೇಟ್ ನಿಕೋಬಾರ್' ಭಾರತಕ್ಕೆ ಸಾಗರ ಸಂಚಾರದ ಮೇಲ್ವಿಚಾರಣೆ, ನೌಕಾಪಡೆಯ ತ್ವರಿತ ನಿಯೋಜನೆ ಮತ್ತು ಜಲಾಂತರಗಾಮಿ ನಿಗಾವಳಿ ಹೆಚ್ಚಿಸಲು ನೆರವಾಗುತ್ತದೆ.

ಆಧುನಿಕ ಜಗತ್ತಿನ ನೌಕಾದಳ ಸ್ಪರ್ಧೆಯಲ್ಲಿ ಜಲಾಂತರಗಾಮಿ ನೌಕೆಗಳು, ಸಮುದ್ರದಡಿಯಲ್ಲಿ ಹರಡಿರುವ ಡಿಜಿಟಲ್ ಕೇಬಲ್‌ಗಳು ಹಾಗೂ ಅವುಗಳ ರಕ್ಷಣೆ ಅತ್ಯಂತ ಮಹತ್ವ ಪಡೆದುಕೊಂಡಿವೆ. ಗ್ರೇಟ್ ನಿಕೋಬಾರ್ ಸುತ್ತಲಿನ ಸಮುದ್ರ ಪ್ರದೇಶಗಳು ಅತ್ಯಾಧುನಿಕ ಜಲಾಂತರ್ಗಾಮಿ ನಿಗಾವಳಿ ವ್ಯವಸ್ಥೆಗಳನ್ನು ಸ್ಥಾಪಿಸಲು ಸೂಕ್ತವಾಗಿವೆ. ಇದರಿಂದ ಭಾರತ ಶತ್ರು ಚಟುವಟಿಕೆಗಳನ್ನು ಮುಂಚಿತವಾಗಿ ಪತ್ತೆ ಹಚ್ಚಿ ತನ್ನ ಸಮುದ್ರ ಮಾರ್ಗಗಳನ್ನು ಸುರಕ್ಷಿತವಾಗಿರಿಸಬಹುದು. ಇದಲ್ಲದೆ, ಜಾಗತಿಕ ಡಿಜಿಟಲ್ ಸಂವಹನದ ಸುಮಾರು ಶೇ.95ರಷ್ಟು ಸಮುದ್ರ ದಡಿಯಲ್ಲಿ ಅಳವಡಿಸಿರುವ ಕೇಬಲ್‌ಗಳ ಮೂಲಕ ಸಾಗುತ್ತದೆ. ಏಷ್ಯಾ, ಯುರೋಪ್ ಹಾಗೂ ಮಧ್ಯಪ್ರಾಚ್ಯವನ್ನು ಸಂಪರ್ಕಿಸುವ ಪ್ರಮುಖ ಡಿಜಿಟಲ್ ಮಾರ್ಗಗಳು ಹಿಂದೂ ಮಹಾಸಾಗರದ ಮೂಲಕ ಹಾದು ಹೋಗುತ್ತವೆ. ಗ್ರೇಟ್ ನಿಕೋಬಾರ್ ಈ ಡಿಜಿಟಲ್ ಜೀವನಾಡಿಗಳ ಭದ್ರತೆಗೆ ಭಾರತಕ್ಕೆ ಪ್ರಮುಖ ಕಾರ್ಯತಂತ್ರದ ಸ್ಥಾನವನ್ನು ನೀಡುತ್ತದೆ.

'ಗ್ರೇಟ್ ನಿಕೋಬಾರ್'ನ ಮಹತ್ವವನ್ನು ಚೀನಾದ ಅವಲಂಬನೆಯ ಬೆಳಕಿನಲ್ಲಿ ನೋಡಿದಾಗ ಅದು ಮತ್ತಷ್ಟು ಸ್ಪಷ್ಟವಾಗುತ್ತದೆ. ಚೀನಾ ದಿನಕ್ಕೆ 11 ಮಿಲಿಯನ್ ಬ್ಯಾರೆಲ್‌ಗಿಂತ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಸುಮಾರು ಶೇ.80ರಷ್ಟು ಮಲಕ್ಕಾ ಜಲಸಂಧಿಯ ಮೂಲಕವೇ ಸಾಗುತ್ತದೆ.

ಚೀನಾದ ಒಟ್ಟು ಸಮುದ್ರ ವ್ಯಾಪಾರದ ಸುಮಾರು ಶೇ.60ರಷ್ಟು ಈ ಮಾರ್ಗದ ಮೇಲೆ ಅವಲಂಬಿತವಾಗಿದೆ, ಸಂಘರ್ಷದ ಸಂದರ್ಭಗಳಲ್ಲಿ ಈ ಮಾರ್ಗದ ಮೇಲಿನ ಮೇಲ್ವಿಚಾರಣೆ ಅಥವಾ ಅಡಚಣೆ ಚೀನಾದ ಆರ್ಥಿಕತೆಗೆ ಗಂಭೀರವಾದ ಹೊಡೆತ ನೀಡಬಲ್ಲದು. 'Belt and Road Initiative' ಯೋಜನೆಯಡಿ ಚೀನಾ ಟ್ರಿಲಿಯನ್ ಡಾಲರ್‌ಗಿಂತ ಹೆಚ್ಚಿನ ಹೂಡಿಕೆಯನ್ನು ಜಾಗತಿಕವಾಗಿ ಮಾಡಿದೆ. ಭಾರತದ ಸುತ್ತಮುತ್ತಲಿನ ದೇಶಗಳ ಪ್ರಮುಖ ಬಂದರುಗಳಲ್ಲಿ ಅದರ ಹೂಡಿಕೆಗಳನ್ನು ಕಾಣಬಹುದು. ಶ್ರೀಲಂಕಾ 'ಹಂಬಂತೋಟಾ' ಬಂದರನ್ನು 99 ವರ್ಷಗಳ ಅವಧಿಗೆ ಚೀನಾಗೆ ನೀಡಿದೆ.ಇದಕ್ಕೆ ಭಾರತದ ಅತ್ಯಂತ ಪ್ರಬಲ ಉತ್ತರವೇ 'ಗ್ರೇಟ್ ನಿಕೋಬಾರ್', ಇಲ್ಲಿ ಬಲಿಷ್ಠ ಸೈನಿಕ ಹಾಗೂ ಲಾಜಿಸ್ಟಿಕ್ಸ್ ಮೂಲಸೌಕರ್ಯ ನಿರ್ಮಿಸುವ ಮೂಲಕ ಭಾರತ ಪೂರ್ವ ಹಿಂದೂ ಮಹಾಸಾಗರದಲ್ಲಿ ಕಾರ್ಯತಂತ್ರದ ಸಮತೋಲನ ಕಾಯ್ದುಕೊಳ್ಳಬಹುದು. ಗ್ರೇಟ್ ನಿಕೋಬಾರ್‌ನ ಮತ್ತೊಂದು ಮಹತ್ವದ ಅಂಶವೆಂದರೆ ಪ್ರಕೃತಿ ವಿಕೋಪ ನಿರ್ವಹಣೆ. ಹಿಂದೂ ಮಹಾಸಾಗರ ಪ್ರದೇಶವು ಸುನಾಮಿ, ಚಂಡಮಾರುತ ಮತ್ತು ಭೂಕಂಪಗಳಿಗೆ ಒಳಪಡುವ ಪ್ರದೇಶವಾಗಿದೆ.

ಗ್ರೇಟ್ ನಿಕೋಬಾರ್ ಭಾರತಕ್ಕೆ ಮಾನವೀಯ ನೆರವು ಹಾಗೂ ವಿಪತ್ತು ನಿರ್ವಹಣಾ ಕೇಂದ್ರವಾಗಿ ಕಾರ್ಯನಿರ್ವಹಿಸಬಹುದು. ತುರ್ತು ಸಂದರ್ಭಗಳಲ್ಲಿ ಅಲ್ಲಿಂದ ರಕ್ಷಣಾ ಕಾರ್ಯಾಚರಣೆ, ವೈದ್ಯಕೀಯ ನೆರವು ಮತ್ತು ಸಾಮಗ್ರಿಗಳ ತ್ವರಿತ ಸಾಗಣೆ ಸಾಧ್ಯವಾಗುತ್ತದೆ.

ಭಾರತ ಗ್ರೇಟ್ ನಿಕೋಬಾರ್ ಅಭಿವೃದ್ಧಿಗೆ ರು.80,000 ಕೋಟಿವರೆಗೆ ಹೂಡಿಕೆ ಮಾಡುವ ಮಹತ್ವಾಕಾಂಕ್ಷಿ ಯೋಜನೆ ಕೈಗೊಂಡಿದೆ. ಇದರಲ್ಲಿ ವರ್ಷಕ್ಕೆ 14 ಮಿಲಿಯನ್ 'MTEU' ಸಾಮರ್ಥ್ಯದ ಅಂತಾರಾಷ್ಟ್ರೀಯ ಕಂಟೈನರ್ ಟ್ರಾನ್‌ಶಿಪ್‌ಮೆಂಟ್ ಟರ್ಮಿನಲ್ ನಿರ್ಮಾಣ ಪ್ರಮುಖವಾಗಿದೆ. ಪ್ರಸ್ತುತ ಭಾರತದ ಸುಮಾರು ಶೇ.75ರಷ್ಟು ಟ್ರಾನ್‌ಶಿಪ್‌ಮೆಂಟ್ ಸರಕುಗಳು ಕೊಲಂಬೊ ಮತ್ತೊ ಸಿಂಗಪೂರ್ ಬಂದರುಗಳ ಮೂಲಕ ಮೂಲಕ ಸಾಗುತ್ತಿವೆ. ಗ್ರೇಟ್ ನಿಕೋಬಾರ್ ಬಂದರು ನಿರ್ಮಾಣದಿಂದ ಈ ಅವಲಂಬನೆ ಕಡಿಮೆಯಾಗುತ್ತದೆ, ಇದಲ್ಲದೆ ವರ್ಷಕ್ಕೆ 40 ಲಕ್ಷ ಪ್ರಯಾಣಿಕರನ್ನು ನಿರ್ವಹಿಸಬಲ್ಲ ಹಸಿರು ವಿಮಾನ ನಿಲ್ದಾಣ, 450 MVA ಸಾಮರ್ಥ್ಯದ ವಿದ್ಯುತ್ ಮೂಲಸೌಕರ್ಯ ಹಾಗೂ 16610 ಹೆಕ್ಟೇರ್ ಪ್ರದೇಶದಲ್ಲಿ ಮೂರುವರೆ ಲಕ್ಷ ಜನರ ಸಾಮರ್ಥ್ಯದ ಆಧುನಿಕ ನಗರದ ಅಭಿವೃದ್ಧಿ ಯೋಜನೆಗಳು ಇದರ ಭಾಗವಾಗಿವೆ. ಇವು ದ್ವೀಪವನ್ನು ಸಮಗ್ರ ರಕ್ಷಣಾ, ವ್ಯಾಪಾರ ಹಾಗೂ ಲಾಜಿಸ್ಟಿಕ್ಸ್ ಕೇಂದ್ರವನ್ನಾಗಿ ರೂಪಿಸಲಿವೆ. ಗ್ರೇಟ್ ನಿಕೋಬಾರ್ ಭಾರತಕ್ಕೆ ಕೇವಲ ಭದ್ರತಾ ಲಾಭವಲ್ಲ, ಬ್ಲೂ ಎಕಾನಮಿ ಬೆಳವಣಿಗೆಗೂ ಅವಕಾಶ ಒದಗಿಸುತ್ತದೆ. ಮೀನುಗಾರಿಕೆ, ಸಮುದ್ರ ಸಂಪತ್ತು, ಸಾಗರ ಆಧಾರಿತ ಕೈಗಾರಿಕೆಗಳು ಮತ್ತು ದಕ್ಷಿಣ ಪೂರ್ವ ಏಷ್ಯಾದೊಂದಿಗೆ ಆರ್ಥಿಕ ಸಂಪರ್ಕ ಹೆಚ್ಚಿಸಲು ಇದು ಪ್ರಮುಖ ವೇದಿಕೆಯಾಗಲಿದೆ.

ಈ ಹಿನ್ನೆಲೆಯಲ್ಲಿ ಸಮುದ್ರ ಮಾರ್ಗಗಳ ಮೇಲಿನ ಹಿಡಿತ ಹೊಂದಿರುವ ರಾಷ್ಟ್ರಗಳೇ ಭವಿಷ್ಯದ ಜಾಗತಿಕ ಶಕ್ತಿಗಳಾಗಲಿವೆ. ಹೀಗಾಗಿ ಗ್ರೇಟ್ ನಿಕೋಬಾರ್ ಕೇವಲ ಒಂದು ದ್ವೀಪವಲ್ಲ, ಅದು ಭಾರತದ ಪೂರ್ವ ಸಮುದ್ರದ ರಕ್ಷಾ ಕವಚ, ಇಂಡೋ–ಪೆಸಿಫಿಕ್‌ನಲ್ಲಿ ಭಾರತದ ಕಾರ್ಯತಂತ್ರದ ದ್ವಾರ, ಚೀನಾದ ಸಮುದ್ರ ವಿಸ್ತರಣೆಗೆ ಬಲಿಷ್ಠ ಪ್ರತಿರೋಧ ಹಾಗೂ ಭಾರತದ ಜಾಗತಿಕ ಸಮುದ್ರ ನಾಯಕತ್ವದ ಆಧಾರಸ್ತಂಭವಾಗಿದೆ. ಗ್ರೇಟ್ ನಿಕೋಬಾರ್ ಅಭಿವೃದ್ಧಿ ಕೇವಲ ಮೂಲ ಸೌಕರ್ಯ ಯೋಜನೆ ಅಲ್ಲ; ಅದು ಭಾರತದ ದೀರ್ಘಕಾಲೀನ ರಾಷ್ಟ್ರೀಯ ಕಾರ್ಯತಂತ್ರದ ಅವಶ್ಯಕತೆ. ಈ ದ್ವೀಪ ವನ್ನು ಬಲಪಡಿಸುವ ಮೂಲಕ ಭಾರತ ತನ್ನ ವ್ಯಾಪಾರ ಮಾರ್ಗಗಳನ್ನು ಸುರಕ್ಷಿತಗೊಳಿಸುತ್ತದೆ, ಆರ್ಥಿಕ ಸ್ವಾವಲಂಬನೆಯನ್ನು ಬಲಪಡಿಸುತ್ತದೆ, ರಕ್ಷಣಾತ್ಮಕ ಸಾಮರ್ಥ್ಯ ಹೆಚ್ಚಿಸುತ್ತದೆ ಹಾಗೂ ಜಾಗತಿಕ ಸಮುದ್ರ ಶಕ್ತಿಯಾಗಿ ತನ್ನ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ರಾಹುಲ್ ಗಾಂಧಿ ಗ್ರೇಟ್ ನಿಕೋಬಾರ್ ದ್ವೀಪಕ್ಕೆ ಭೇಟಿ ನೀಡಿ, ಭಾರತ ಸರಕಾರ ಕೈಗೊಂಡಿರುವ ಅಲ್ಲಿನ ಅಭಿವೃದ್ಧಿಯಿಂದ ಪರಿಸರಕ್ಕೆ ಹಾನಿಯಾಗುತ್ತದೆಯೆಂಬ ಹೊಸ ಕ್ಯಾತೆ ತೆಗೆದಿದ್ದರು. ಮತ್ತದೇ ಹಳಸಲು ನಿರೂಪಣೆಯನ್ನು ಮುನ್ನೆಲೆಗೆ ತಂದು ಅದಾನಿ ಹೆಸರನ್ನು ಬಳಸಿ ರಾಜಕೀಯ ಮಾಡಿದರು. ಆದರೆ ಮಹತ್ವದ ವಿಷಯವೆಂದರೆ ಈ ಯೋಜನೆಯ ಮೇಲ್ವಿಚಾರಣೆ, ಉದ್ದೇಶ, ಸಾರ್ವಜನಿಕ ಸಮಾಲೋಚನೆ ಮತ್ತು ಮೌಲ್ಯಮಾಪನದ ವಿವರವಾದ ಪ್ರಕ್ರಿಯೆಯ ನಂತರ 2006ರಲ್ಲಿ (ಕಾಂಗ್ರೆಸ್ ಅಧಿಕಾರದ ಸಮಯ) ಪರಿಸರ ಇಲಾಖೆಯ ಅನುಮತಿಯನ್ನು ಪಡೆಯಿತು. ಪರಿಸರ ಇಲಾಖೆಯ ಅನುಮತಿಯು ಗಾಳಿ, ನೀರು, ಶಬ್ದ, ತ್ಯಾಜ್ಯ ನಿರ್ವಹಣೆ, ಸಮುದ್ರ ಪರಿಸರ ವಿಜ್ಞಾನ, ಮಾನವ ಆರೋಗ್ಯ ಮತ್ತು ವಿಪತ್ತು ನಿರ್ವಹಣೆಯನ್ನು ಒಳಗೊಂಡ 42 ನಿರ್ದಿಷ್ಟ ಷರತ್ತುಗಳನ್ನು ಒಳಗೊಂಡಿದೆ. 'ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ', 'ಸಲೀಂ ಅಲಿ ಸೆಂಟರ್ ಫಾರ್ ಆರ್ನಿಥಾಲಜಿ ಅಂಡ್ ನ್ಯಾಚುರಲ್ ಹಿಸ್ಟರಿ', 'ದಿ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ', 'ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಸೈನ್ಸ್' ನಂತಹ ಸಂಸ್ಥೆಗಳು ಅಧ್ಯಯನಗಳನ್ನು ನಡೆಸಿ, ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ ಯೋಜನೆಯು ಸರಿಯಾದ ಸುರಕ್ಷತೆಗಳೊಂದಿಗೆ ಮುಂದುವರಿಯಬಹುದು ಎಂದು ಹೇಳಿದೆ. ಭವಿಷ್ಯದಲ್ಲಿ ಗ್ರೇಟ್ ನಿಕೋಬಾರ್ ಭಾರತದ ಸಮುದ್ರ ಶಕ್ತಿ, ಕಾರ್ಯತಂತ್ರದ ದೂರದೃಷ್ಟಿ ಮತ್ತು ಜಾಗತಿಕ ಪ್ರಭಾವದ ಸಂಕೇತವಾಗಿ ನಿಲ್ಲಲಿದೆ. ಇದು ಕೇವಲ ಭಾರತದ ದಕ್ಷಿಣದ ಗಡಿಯಲ್ಲ, ಭಾರತದ ಸಮುದ್ರಾಧಿಪತ್ಯದ ಮಹಾದ್ವಾರವಾಗಿದೆ.

ರಕ್ತಪಾತದ ಮಧ್ಯೆ ಕೊಹಿನೂರ್ ವಜ್ರ ನೆನಪಾಗಿದ್ದೇಕೆ?

ಸಂಗತ
ಡಾ. ವಿಜಯ್ ದರಡಾ
vveditoped@gmail.com

ಕಾಲ ಯಾವತ್ತೂ ತಾನಾಗಿಯೇ ಕೊಲೆಗಡುಕನಾಗುವುದಿಲ್ಲ, ಆದರೆ, ಕಾಲದ ಮಡಿಲಿನಲ್ಲಿ ಬೆಳೆಯುವ ವ್ಯಕ್ತಿ ಕೊಲೆಗಡುಕನಾಗಬಹುದು. ನಾವು ಈಗ ಬದುಕುತ್ತಿರುವ ಕಾಲ ಕೂಡ ಇದಕ್ಕೆ ಭಿನ್ನವಾಗಿಲ್ಲ, ಇಲ್ಲೊಂದು ಸಂಗತಿ ಗಮನಿಸಿ; ಈ ದುರಿತ ಕಾಲದಲ್ಲೂ ಜಗತ್ತಿನ ಅತ್ಯಂತ ಪ್ರತಿಷ್ಠಿತ ನಗರವಾಗಿರುವ ನ್ಯೂಯಾರ್ಕ್‌ನ ಮೇಯರ್ ಜೊಹ್ರಾನ್ ಮಮ್ದಾನಿ ಇದ್ದಕ್ಕಿದ್ದಂತೆ ಜಗತ್ತಿನ ಅತ್ಯಂತ ದುಬಾರಿ ವಜ್ರವಾಗಿರುವ ಕೊಹಿನೂರ್ ವಜ್ರವನ್ನು ನೆನಪಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಅದು ಭಾರತಕ್ಕೆ ಮರಳಿ ಸೇರುವುದನ್ನು ನೋಡುವ ಬಯಕೆಯನ್ನೂ ವ್ಯಕ್ತಪಡಿಸಿದ್ದಾರೆ. ಇದು ಆಶ್ಚರ್ಯವಲ್ಲವೇ? ಮೊದಲಿಗೆ ನನಗೂ ಆಶ್ಚರ್ಯವೇ ಆಗಿತ್ತು. ಆದರೆ, ರಾಜಕಾರಣದಲ್ಲಿ ಯಾವ ಮಾತೂ ಸುಮ್ಮನೆ ಬರುವುದಿಲ್ಲ. ಅಲ್ಲಿ ಹೇಳಲ್ಪಡುವ ಪ್ರತಿ ಪದದ ಹಿಂದೆಯೂ ಏನಾದರೂ ಉದ್ದೇಶವಿರುತ್ತದೆ. ಹಾಗಿದ್ದರೆ ಮಮ್ದಾನಿ ಮತ್ತು ಕೊಹಿನೂರ್ ಪ್ರಕರಣದ ಹಿಂದಿರುವುದು ಏನು?

ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಬ್ರಿಟನ್‌ನ ಕಿಂಗ್ ಚಾರ್ಲ್ಸ್ ನಾಲ್ಕು ದಿನಗಳ ಪ್ರವಾಸಕ್ಕಾಗಿ ಅಮೆರಿಕಕ್ಕೆ ಭೇಟಿ ನೀಡಿದ್ದರು. ಅವರು ಅಲ್ಲಿಗೆ ತೆರಳುವ ದಕ್ಕೂ ಸ್ವಲ್ಪ ಮೊದಲು ಪತ್ರಿಕಾ ಗೋಷ್ಠಿಯಲ್ಲಿ ಮಮ್ದಾನಿ ಮಾತನಾಡಿದ್ದರು. ಆಗ ಪತ್ರಕರ್ತರೊಬ್ಬರು, 'ನಿಮಗೆ ಕಿಂಗ್ ಚಾರ್ಲ್ಸ್ ಬಳಿ ಮಾತನಾಡಲು ಅವಕಾಶ ಸಿಕ್ಕರೆ ಏನು ಹೇಳುತ್ತೀರಿ?' ಎಂದು ಕೇಳಿದ್ದರು. ಅದಕ್ಕೆ ಮಮ್ದಾನಿ ನೀಡಿದ ಪ್ರತಿಕ್ರಿಯೆ ಕ್ಷಣಮಾತ್ರದಲ್ಲಿ ಜಗತ್ತಿನಾದ್ಯಂತ ವೈರಲ್ ಆಗಿತ್ತು.



ಮಮ್ದಾನಿ ಹೇಳಿದ್ದು: 'ರಾಜನ ಬಳಿ ಮಾತನಾಡಲು ನನಗೆ ಅವಕಾಶ ಸಿಕ್ಕರೆ ಬಹುಶಃ ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿಸುವಂತೆ ಕೇಳುತ್ತೇನೆ.' ಏಪ್ರಿಲ್ 29ರಂದು ಕಿಂಗ್ ಚಾರ್ಲ್ಸ್ ಮತ್ತು ಕ್ವೀನ್ ಕ್ಯಾಮಿಲ್ಲಾ 9/11 ಸ್ಮಾರಕ ಮತ್ತು ಮ್ಯೂಸಿಯಂಗೆ ಭೇಟಿ ನೀಡಿ 2001ರ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರಿದರು. ಆ ವೇಳೆ ಅವರು ಸಂತ್ರಸ್ತರ ಕುಟುಂಬದವರನ್ನೂ ಭೇಟಿಯಾಗಿದ್ದರು. ಆಗ ಮಮ್ದಾನಿಗೆ ಕಿಂಗ್ ಚಾರ್ಲ್ಸ್‌ರನ್ನು ಸ್ವಲ್ಪ ಕಾಲ ಭೇಟಿಯಾಗುವ ಅವಕಾಶ ಸಿಕ್ಕಿತ್ತು. ಇಬ್ಬರೂ ಶೇಕ್‌ಹ್ಯಾಂಡ್ ಮಾಡಿ, ಒಂದೆರಡು ಮಾತುಗಳನ್ನು ವಿನಿಮಯ ಮಾಡಿಕೊಂಡಿದ್ದರು.

ಆಗೇನಾದರೂ ಮಮ್ದಾನಿಯವರು ಚಾರ್ಲ್ಸ್‌ಬಳಿ ಕೊಹಿನೂರ್ ವಿಷಯ ಪ್ರಸ್ತಾಪ ಮಾಡಿದರೋ ಇಲ್ಲವೋ ಇನ್ನೂ ಗೊತ್ತಾಗಿಲ್ಲ. ಚಾರ್ಲ್ಸ್ ಬಳಿ ಮಮ್ದಾನಿ ಈ ವಿಷಯವನ್ನು ಪ್ರಸ್ತಾಪ ಮಾಡಿಲ್ಲದಿದ್ದರೂ ಪರವಾಗಿಲ್ಲ, ಆದರೆ ಅವರು ಭಾರತಕ್ಕೆ ಐತಿಹಾಸಿಕವಾಗಿ ಆದ ಅನ್ಯಾಯದ ಬಗ್ಗೆ ಸೂಚ್ಯವಾಗಿ ಮಾತನಾಡಿ ಇಡೀ ಜಗತ್ತಿನ ಗಮನ ಸೆಳೆದಿರುವುದಂತೂ ನಿಜ. ಬ್ರಿಟನ್ನಿನ ವಸಾಹತುಶಾಹಿ ಆಳ್ವಿಕೆಯ ಇತಿಹಾಸದಲ್ಲಿ ಭಾರತಕ್ಕಾದ ಗಾಯವನ್ನು ಅವರು ಕೊಹಿನೂರ್ ವಜ್ರದ ಮೂಲಕ ಮಾಧ್ಯಮಗಳಿಗೆ ಮತ್ತೊಮ್ಮೆ ನೆನಪಿಸಿದ್ದಾರೆ. ಕೊಹಿನೂರ್ ವಜ್ರವನ್ನು ನಮಗೆ ಮರಳಿಸಿ ಎಂದು ಭಾರತ ಈಗಾಗಲೇ ಸಾಕಷ್ಟು ಬಾರಿ ಬ್ರಿಟನ್ನಿನ ಬಳಿ ಕೇಳಿದೆ. ಅದರಿಂದ ಪ್ರಯೋಜನವೇನೂ ಆಗಿಲ್ಲ, ಹಾಗಂತ ನ್ಯೂಯಾರ್ಕ್ ಮೇಯರ್ ಈ ವಿಷಯದಲ್ಲಿ ಮೂಗು ತೂರಿಸುವ ಅಗತ್ಯವೇನು ಎಂದು ಕೇಳುವ ಅಗತ್ಯವಿಲ್ಲ, ಏಕೆಂದರೆ ಮಮ್ದಾನಿ ಕೂಡ ಭಾರತೀಯ ಮೂಲದವರು. ಹೀಗಾಗಿ ಕೊಹಿನೂರ್ ಬಗ್ಗೆ ಮಾತನಾಡುವ ಎಲ್ಲ ಹಕ್ಕು ಅವರಿಗಿದೆ. ಆದರೆ, ಈ ಐತಿಹಾಸಿಕ ಸಂಪತ್ತಿನ ಬಗ್ಗೆ ಅವರು ಧ್ವನಿಯೆತ್ತಿದ ಪ್ರಕರಣ ಅಷ್ಟಕ್ಕೇ ಸೀಮಿತವಾಗಿಲ್ಲ, ರಾಜನನ್ನೇ ಪ್ರಶ್ನೆ ಮಾಡುವ ಬಗ್ಗೆ ಮಾತನಾಡುವ ಮೂಲಕ ಅವರು ತಮ್ಮ ರಾಜಕೀಯ ಘನತೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಂಡಿದ್ದಾರೆ. ಸ್ವತಃ ಮಮ್ದಾನಿ ಕೆಲವೊಮ್ಮೆ ಡೊನಾಲ್ಡ್ ಟ್ರಂಪ್ ಮತ್ತು ಭಾರತವನ್ನು ಕಟುವಾಗಿ ಟೀಕಿಸುವುದು ನಿಜ. ತನ್ನ ಮೂಲವಿರುವುದು ಭಾರತದಲ್ಲಿ ಎಂದು ಆತ ಹೆಮ್ಮೆಯಿಂದ ಯಾವತ್ತೂ ಹೇಳಿಕೊಂಡಿಲ್ಲ, ಆದರೆ, ಈಗ ಕೊಹಿನೂರ್ ಬಗ್ಗೆ ಪ್ರಸ್ತಾಪಿಸುವ ಮೂಲಕ ತನ್ನ ಮತ್ತು ಭಾರತದ ನಡುವೆ ಇರುವ, ತನ್ನ ಮತ್ತು ಭಾರತೀಯ ಮೂಲದ ಅಮೆರಿಕನ್ನರ ನಡುವೆ ಇರುವ ಅಂತರವನ್ನು ಕಡಿಮೆ ಮಾಡಿಕೊಳ್ಳಲು ಜಾಣ ನಡೆ ಇರಿಸಿದಂತೆ ಕಾಣುತ್ತಿದೆ. ಬ್ರಿಟನ್ನಿನ ರಾಜ ಮತ್ತು ರಾಣಿಯ ಭೇಟಿ ವೇಳೆ ಕೊಹಿನೂರ್ ಬಗ್ಗೆ ಮಾತನಾಡುವುದು ಸಣ್ಣ ಸಂಗತಿಯಲ್ಲ. ಅದಕ್ಕೆ ನಿಜವಾಗಿಯೂ ಧೈರ್ಯ ಬೇಕು.

ಮಮ್ದಾನಿಯ ಮಾತು ಕೇಳಿದಾಗ ನನಗೆ ಕೆಲ ವರ್ಷಗಳ ಹಿಂದೆ ಬ್ರಿಟನ್ನಿನ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಶಶಿ ತರೂರ್ ಮಾಡಿದ್ದ ಹರಿತ ಭಾಷಣ ನೆನಪಾಗಿತ್ತು. ಬ್ರಿಟನ್ ಹೇಗೆ ತನ್ನ ವಸಾಹತು ದೇಶಗಳನ್ನು ಶೋಷಿಸಿ ಶ್ರೀಮಂತ ದೇಶವಾಯಿತು ಎಂಬುದನ್ನು ತರೂರ್ ಎಳೆಎಳೆಯಾಗಿ ಬಿಚ್ಚಿಟ್ಟಿದ್ದರು. ಅದಕ್ಕೆ ಸಾಕಷ್ಟು ಸಾಕ್ಷ್ಯಗಳನ್ನೂ ಅವರು ನೀಡಿದ್ದರು. ಬ್ರಿಟಿಷರು ಭಾರತಕ್ಕೆ ಬಂದಾಗ ಜಾಗತಿಕ ಜಿಡಿಪಿಯಲ್ಲಿ ಭಾರತದ ಪಾಲು ಶೇ.23 ರಿಂದ ಶೇ.27ರಷ್ಟಿತ್ತು. ಅವರು ಭಾರತವನ್ನು ಬಿಟ್ಟು ಹೋದಾಗ ಅದು ಶೇ.3ಕ್ಕಿಂತ ಕೆಳಗೆ ಕುಸಿದಿತ್ತು. ಬ್ರಿಟನ್ನಿನ ಔದ್ಯೋಗಿಕ ಕ್ರಾಂತಿಯು ವಾಸ್ತವವಾಗಿ ಭಾರತದ ಸಂಪನ್ಮೂಲಗಳನ್ನು ದೋಚಿ, ಅವುಗಳನ್ನು ಬಳಸಿಕೊಂಡು ಮಾಡಿದ ಸಾಧನೆಯಾಗಿತ್ತು. ಬ್ರಿಟನ್ ತನ್ನ ಜವಳಿ ಉದ್ಯಮವನ್ನು ಕಟ್ಟಿಕೊಳ್ಳಲು ಭಾರತದ ಜವಳಿ ಉದ್ಯಮವನ್ನು ವ್ಯವಸ್ಥಿತವಾಗಿ ನಿರ್ನಾಮ ಮಾಡಿತ್ತು. ಅದೇ ರೀತಿ ಬ್ರಿಟನ್ನಿನ ವಸ್ತುಗಳನ್ನು ಭಾರತದಲ್ಲಿ ಮಾರಾಟ ಮಾಡಲು ಭಾರತೀಯ ಗುಡಿ ಕೈಗಾರಿಕೆಗಳನ್ನು ಹೊಸಕಿ ಹಾಕಿತ್ತು. ಇದನ್ನೆಲ್ಲ ವಿವರಿಸಿ ಹೇಳಿದ ಬಳಿಕ ತರೂರ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಭಾರತದ ಮೇಲೆ ನಡೆಸಿದ ಐತಿಹಾಸಿಕ ದೌರ್ಜನ್ಯಕ್ಕೆ ಬ್ರಿಟನ್ ಕ್ಷಮೆ ಯಾಚಿಸಬೇಕು, ಭಾರತದಿಂದ ಮತ್ತು ಭಾರತೀಯರಿಂದ ದೋಚಿದ ಸಂಪತ್ತಿನ ಮೌಲ್ಯವನ್ನು ಪರಿಹಾರದ ರೂಪದಲ್ಲಿ ಈಗಲಾದರೂ ಮರಳಿಸಬೇಕು ಎಂದು ಕೇಳಿದ್ದರು.

ಭಾರತದಿಂದ ಕೊಹಿನೂರ್ ವಜ್ರ ಕಣ್ಮರೆಯಾಗಿದ್ದು ಕೂಡ ಬ್ರಿಟನ್ನಿನ ಇದೇ ವ್ಯವಸ್ಥಿತ ಲೂಟಿಯ ನೇರ ಪರಿಣಾಮಗಳಲ್ಲಿ ಒಂದು. ಕೊಹಿನೂರ್‌ನ ಇಂದಿನ ಮಾರುಕಟ್ಟೆ ಮೌಲ್ಯ ಒಂದು ಬಿಲಿಯನ್ ಡಾಲರ್‌ಗೂ ಹೆಚ್ಚು ಎಂದು ತಜ್ಞರು ಅಂದಾಜಿಸುತ್ತಾರೆ. ಆದರೆ ಅದಕ್ಕಿರುವ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮೌಲ್ಯ ಇನ್ನೂ ಹೆಚ್ಚು. ಅದು ಹಣವನ್ನು ಮೀರಿದ್ದಾಗಿದೆ. ಕೊಹಿನೂರ್ ಎಂಬುದು ಭಾರತದ ಹೆಮ್ಮೆಯ ಪ್ರತೀಕ. ಕೊಹಿನೂರ್ ಪದದ ಅರ್ಥ 'ಬೆಳಕಿನ ಬೆಟ್ಟ.' ಆದರೆ ಅದು ಭಾರತದಿಂದ ಬ್ರಿಟನ್ನಿಗೆ ಪ್ರಯಾಣಿಸಿದ ರೀತಿಯಿದೆಯಲ್ಲ, ಅದು ಕತ್ತಲು ಮತ್ತು ರಕ್ತಪಾತದ ಇತಿಹಾಸವನ್ನೇ ಹೊಂದಿದೆ! ಗೋಲ್ಕೊಂಡಾದ ಕೊಲ್ಲೂರ್ ಗಣಿಯಲ್ಲಿ 13 ಅಥವಾ 14ನೇ ಶತಮಾನದಲ್ಲಿ ಅದು ಸಿಕ್ಕಿತು ಎಂದು ಇತಿಹಾಸಕಾರರು ಹೇಳುತ್ತಾರೆ. ಕೊಲ್ಲೂರ್ ಗಣಿಯು ವಜ್ರಗಳಿಗೆ ಜಾಗತಿಕ ಪ್ರಸಿದ್ಧಿ ಪಡೆದಿತ್ತು. ಕೊಹಿನೂರ್ ವಜ್ರ ಸಿಕ್ಕಾಗ ಅದು 793 ಕ್ಯಾರೆಟ್ ತೂಕವಿತ್ತು. ಶತಮಾನಗಳ ಕಾಲ ಅದನ್ನು ಕತ್ತರಿಸಿ, ಪಾಲಿಶ್ ಮಾಡಿದ ಪರಿಣಾಮ ಈಗ ಅದರ ತೂಕ 105.6 ಕ್ಯಾರೆಟ್ ಇದೆ ಎಂದು ಹೇಳಲಾಗುತ್ತದೆ. ಕೊಹಿನೂರ್ ವಜ್ರ ಮೊದಲಿಗೆ ಕಾಕತೀಯ ರಾಜರ ಸಂಪತ್ತಾಗಿತ್ತು. ಅವರ ಬಳಿ ಅಂತಹದ್ದೊಂದು ವಜ್ರವಿದೆ ಎಂಬ ಸುದ್ದಿ ಎಲ್ಲೆಡೆ ಹರಡಿತ್ತು. 14ನೇ ಶತಮಾನದಲ್ಲಿ ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದ ಅಲಾವುದ್ದೀನ್ ಖಿಲ್ಜಿಯ ಸೇನಾ ದಂಡನಾಯಕ ಮಲಿಕ್ ಕಾಫರ್ ಆ ವಜ್ರವನ್ನು ವಶಪಡಿಸಿಕೊಂಡು ದೆಹಲಿಗೆ ಕೊಂಡೊಯ್ದಿದ್ದ. 1526ರಲ್ಲಿ ನಡೆದ ಮೊದಲ ಪಾಣಿಪತ್ ಯುದ್ಧದಲ್ಲಿ ಅದನ್ನು ಬಾಬರ್ ವಶಪಡಿಸಿಕೊಂಡ. ನಂತರ ಬಾಬರನ ಮರಿ ಮೊಮ್ಮಗ ಶಹಜಹಾನ್ ಆ ವಜ್ರವನ್ನು ತನ್ನ ಜಗತ್ಪ್ರಸಿದ್ಧ ಮಯೂರ ಸಿಂಹಾಸನಕ್ಕೆ (ತಕ್ತ್–ಎ–ತೌಸ್) ಅಳವಡಿಸಿಕೊಂಡಿದ್ದ. ನಂತರ ಬಹಳ ಕಾಲ ಅದು ಮೊಘಲರ ವಶದಲ್ಲಿತ್ತು. 1739ರಲ್ಲಿ ನಾದಿರ್ ಶಾ ದೆಹಲಿಯನ್ನು ಲೂಟಿ ಮಾಡಿ ಕೊಹಿನೂರ್ ವಜ್ರವನ್ನು ಪರ್ಷಿಯಾಕ್ಕೆ (ಈಗಿನ ಇರಾನ್) ತೆಗೆದುಕೊಂಡು ಹೋದ. ವಾಸ್ತವವಾಗಿ ಆ ವಜ್ರಕ್ಕೆ ಕೊಹಿನೂರ್ ಎಂದು ಹೆಸರಿಟ್ಟಿದ್ದೇ ನಾದಿರ್ ಶಾ. ಅವನ ಸಾವಿನ ನಂತರ ಅದು ಅಹ್ಮದ್ ಶಾ ಅಬ್ದಾಲಿಯ ಕೈಗೆ ಹೋಯಿತು. ಬಳಿಕ ಅವನ ವಂಶಸ್ಥರಿಗೆ ವರ್ಗಾವಣೆಯಾಯಿತು. ಹೀಗೆ ಶತಮಾನದ ಕಾಲ ಅದು ವಿದೇಶದಲ್ಲಿತ್ತು.

ಬಳಿಕ 1813ರಲ್ಲಿ ಮಹಾರಾಜ ರಣಜಿತ್ ಸಿಂಗ್ ಆ ವಜ್ರವನ್ನು ಭಾರತಕ್ಕೆ ಮರಳಿ ತರುವಲ್ಲಿ ಯಶಸ್ವಿಯಾಗಿದ್ದ. ಆದರೆ, ಬ್ರಿಟಿಷ್ ಸಾಮ್ರಾಜ್ಯದ ಕಣ್ಣು ಅದಾಗಲೇ ಆ ವಜ್ರದ ಮೇಲೆ ಬಿದ್ದಿತ್ತು. ಮಹಾರಾಜನ ಸಾವಿನ ನಂತರ ಅವನ ಮಗ ದುಲೀಪ್ ಸಿಂಗ್ ಸಿಂಹಾಸನವನ್ನೇರಿದ. ಆಗ ಅವನಿಗೆ ಕೇವಲ ಐದು ವರ್ಷ. 1849ರಲ್ಲಿ ಬ್ರಿಟಿಷರು ಪಂಜಾಬ್ ಅನ್ನು ವಶಪಡಿಸಿಕೊಂಡಾಗ ರಾಜಮನೆತನದ ಜತೆಗೆ ಲಿಖಿತ ಒಪ್ಪಂದ ಮಾಡಿಕೊಂಡು ಕೊಹಿನೂರ್ ವಜ್ರವನ್ನು ತಮ್ಮ ಸುಪರ್ದಿಗೆ ಪಡೆದುಕೊಂಡರು. ಹಾಗೆ ಅದು ಲಂಡನ್‌ಗೆ ಪ್ರಯಾಣಿಸಿತು. ಇಂದಿಗೂ ಬ್ರಿಟನ್ ತಾನು ಕಾನೂನುಬದ್ಧ ಒಪ್ಪಂದ ಮಾಡಿಕೊಂಡೇ ವಜ್ರವನ್ನು ತೆಗೆದುಕೊಂಡಿರುವುದಾಗಿ ವಾದಿಸುತ್ತದೆ. ಆದರೆ, 10 ವರ್ಷದ ರಾಜನನ್ನು ಹೆದರಿಸಿ ಬೆದರಿಸಿ ಮಾಡಿಕೊಂಡ ಒಪ್ಪಂದ ಕಾನೂನುಬದ್ಧವೇ ಎಂಬುದು ಪ್ರಶ್ನೆ. ಅದು ಮೋಸವಲ್ಲವೇ? ಇದು ಕೇವಲ ಭಾರತದ ವಾದವಷ್ಟೇ ಅಲ್ಲ, ಜಗತ್ತು ಕೂಡ ಇಂತಹ ಕುಟಿಲ ನೀತಿಯನ್ನು ಮೋಸವೆಂದೇ ಭಾವಿಸುತ್ತದೆ. ಟವರ್ ಆಫ್ ಲಂಡನ್‌ನಲ್ಲಿ ನಾನು ಕೊಹಿನೂರ್ ವಜ್ರವನ್ನು ನೋಡಿದ್ದೇನೆ. ಅದನ್ನು ನೋಡಿದರೆ ಮಹದಾನಂದವಾಗುತ್ತದೆ. ಭಾರತೀಯರು ಅದರ ಮೇಲೆ ಕಣ್ಣು ನೆಟ್ಟಾಗ ಅಯ್ಯೋ ಇದು ನಮ್ಮ ಸಂಪತ್ತಲ್ಲವೇ ಎಂದು ಮರುಕವಾಗುತ್ತದೆ. ಖಂಡಿತ ಅದು ನಮ್ಮ ಐತಿಹಾಸಿಕ ಸಂಪತ್ತು ಎಂದು ಮನಸ್ಸು ಹೇಳುತ್ತದೆ. ನಮ್ಮ ಮಣ್ಣಿನಲ್ಲಿ ಸಿಕ್ಕ, ನಮ್ಮವರ ಬಳಿಯಲ್ಲೇ ಇದ್ದ, ನಮ್ಮವರಿಂದಲೇ ಬ್ರಿಟಿಷರು ಕೊಂಡೊಯ್ದ ಸಂಪತ್ತು ನಮ್ಮದಲ್ಲದೆ ಇನ್ನಾರದು?

ಆದರೆ, ಬಹುಕಾಲದಿಂದ ಒಂದು ಪ್ರಶ್ನೆ ಹಾಗೇ ಉಳಿದಿದೆ. ಮುಂದೆ ಯಾವತ್ತಾದರೂ ಕೊಹಿನೂರ್ ವಜ್ರ ಭಾರತಕ್ಕೆ ಮರಳುತ್ತದೆಯೇ? ಇತಿಹಾಸವನ್ನು ಗಮನಿಸಿದರೆ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ. ಕೊಹಿನೂರ್ ವಜ್ರ ಆಗಾಗ ತನ್ನ ಜಾಗವನ್ನು ಬದಲಿಸುತ್ತಲೇ ಬಂದಿದೆ! ಅದರ ಭವಿಷ್ಯ ಎಲ್ಲಿದೆ ಎಂಬುದು ಯಾರಿಗೆ ಗೊತ್ತು? ಕಾಲವನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಬಹುಶಃ ಒಂದು ದಿನ ಕೊಹಿನೂರ್ ತನ್ನ ತಾಯ್ನೆಲಕ್ಕೆ ಮರಳಬಹುದು. ನಂತರ ಶಾಶ್ವತವಾಗಿ ಭಾರತಾಂಬೆಯ ಕಿರೀಟದಲ್ಲಿ ಹೊಳೆಯುವ ಅನರ್ಘ್ಯ ರತ್ನವಾಗಿ ರಾರಾಜಿಸುತ್ತಾ ಇರಬಹುದು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಓದುಗರಿಗೆ ಒಂದು ಓಯಸಿಸ್!

ಶಶಿಧರ ಹಾಲಾಡಿ ಅವರ ಬೇಸಿಗೆಯ ದಿನಗಳಲ್ಲಿ ಮಾಗುತ್ತಿದ್ದ ಹಣ್ಣುಗಳ ವೈವಿಧ್ಯ, ಅವುಗಳನ್ನು ಹಕ್ಕಿ ತಿಂದು ಚಪ್ಪರಿಸುತ್ತಿದ್ದ ಅನುಭವಗಳನ್ನು ಎರಡೆರಡು ಬಾರಿ ಓದಿದೆ. ಮನಸ್ಸಿನಲ್ಲಿಯೇ ಆ ಎಲ್ಲ ಹಣ್ಣುಗಳನ್ನು ತಿಂದ ಅನುಭವ ಆಗುವ ರೀತಿಯ ಸ್ವಾರಸ್ಯಕರ ವಿವರಣೆಗೆ ಮನಸೋತೆ. ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದ ನನಗೆ ಇದೊಂದು ರಸವತ್ತಾದ ಅಂಕಣ. ಚಿತ್ರದುರ್ಗ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ನಮಗೆ ಹುಣಸೆ, ಬೋರೆ(ಎಲಚಿ), ಪಾಪಸ್, ಚಳ್ಳೆ ಹಣ್ಣುಗಳನ್ನು ಕೊಯ್ದು ತಿನ್ನುತ್ತಿದ್ದ ನೆನಪಾಗಿ ಬಾಯಿ ನೀರೂರಿತು. ರಾಜಕೀಯ ಸುದ್ದಿಗಳ ಮರಳುಗಾಡಿನಲ್ಲಿ ಈ ಅಂಕಣ ಓದುಗರಿಗೆ ಒಂದು ಓಯಸಿಸ್! ಧನ್ಯವಾದ ಹಾಲಾಡಿಯವರಿಗೆ.

– ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು

ರಾಜಕಾರಣದ ಹೀನ ಸ್ಥಿತಿ!

ದೇಶದ ರಾಜಕಾರಣ ಇಂದು ಅತ್ಯಂತ ಹೀನ ಸ್ಥಿತಿ ತಲುಪಿದೆ. ಬಂಗಾಳದಲ್ಲಿ ಜನಾದೇಶವನ್ನು ಮಮತಾ ಧಿಕ್ಕರಿಸಿದ್ದಾರೆ. ಅದೇ ವೇಳೆ, ಅವರ ಆರೋಪಗಳಲ್ಲಿ ಕಿಂಚಿತ್ತಾದರೂ ಹುರುಳಿದೆ ಎಂಬ ಶಂಕೆಯೂ ಈ ದಿನಗಳಲ್ಲಿ ಬಲವಾಗುತ್ತಿದೆ. ತಮಿಳುನಾಡಿನಲ್ಲಿ ಟಿವಿಕೆ ಪಕ್ಷಕ್ಕೆ ಅವಕಾಶ ನಿರಾಕರಿಸುವ ಮೂಲಕ ಅಲ್ಲಿನ ರಾಜ್ಯಪಾಲರು, ಡಬಲ್ ಎಂಜಿನ್‌ಗಾದರೆ ಒಂದು ಅಳತೆಗೋಲು, ಸಿಂಗಲ್ ಎಂಜಿನ್‌ಗಾದರೆ ಇನ್ನೊಂದು ಅಳತೆಗೋಲು ಎಂಬ ಪ್ರಸಕ್ತ ರಾಜ್ಯಪಾಲರುಗಳ ನಡೆಗೆ ಅತಿದೊಡ್ಡ ಉದಾಹರಣೆಯಾಗಿದ್ದಾರೆ. ತನ್ಮೂಲಕ, ತಮ್ಮ ಮತ್ತು ಹುದ್ದೆಯ ಘನತೆಗಳನ್ನು ನೆಲ ಕಚ್ಚಿಸಿದ್ದಾರೆ. ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿರುವ ಒಕ್ಕೂಟಗಳು ಅಲ್ಲಿ ಘನತೆಯಿಂದ ವಿರೋಧ ಪಕ್ಷಗಳಾಗಿ ಕೂರದೆ ಸರಕಾರ ರಚಿಸುವ ಕುತಂತ್ರವನ್ನು ಯೋಚಿಸುತ್ತಿವೆ. ಕಾಂಗ್ರೆಸ್ ಪಕ್ಷವು ಮರ್ಯಾದೆ ಬದಿಗಿಟ್ಟು ಒಕ್ಕೂಟ ಬಿಟ್ಟು ನಡೆದಿದೆ. ಬಾಲವೇ ನಾಯಿಯನ್ನು ಅಲ್ಲಾಡಿಸಿದ ಹಾಗೆ, ಒಂದೆರಡು ಸೀಟುಗಳನ್ನು ಗೆದ್ದ ಪಕ್ಷಗಳು 108 ಸ್ಥಾನ ಗೆದ್ದ ಪಕ್ಷವನ್ನು ಆಡಿಸುತ್ತಿವೆ! ಕೇರಳದಲ್ಲಿ ಕುರ್ಚಿಗಾಗಿ ಪೈಪೋಟಿ ನಡೆದರೆ ಕರ್ನಾಟಕದಲ್ಲಿ ಕಳೆದೊಂದು ವರ್ಷದಿಂದಲೂ ಕುರ್ಚಿಗಾಗಿ ಕಿತ್ತಾಟ ಸಾಗಿದೆ. ಜನರ ಆದೇಶಗಳಿಗೆ ಕಿಲುಬು ಕಾಸಿನ ಕಿಮ್ಮತ್ತನ್ನೂ ಕೊಡದ ಇಂಥ ಪಕ್ಷಗಳ ಅನೇಕ ಧುರೀಣರು ಕೋಟ್ಯಂತರ ಖರ್ಚುಮಾಡಿ ಲಕ್ಷಗಟ್ಟಲೆ ಜನರನ್ನು ಸೇರಿಸಿ ತಮಗೆ ತಾವೇ ಶಹಭಾಸ್‌ಗಿರಿ ಕೊಟ್ಟುಕೊಳ್ಳುತ್ತಿದ್ದಾರೆ. ರಾಜಕಾರಣವು ಇದಕ್ಕಿಂತ ಹೀನಾವಸ್ಥೆ ತಲುಪಲು ಸಾಧ್ಯವೇ?

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಬೆಂಗಳೂರಿನಲ್ಲಿರಲಿ ಐಪಿಎಲ್

ಪ್ರಸ್ತುತ 2026ರ 19ನೇ ಐಪಿಎಲ್ ಪಂದ್ಯಾವಳಿಯ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಗುಜರಾತಿನ ಅಹಮದಾಬಾದ್‌ಗೆ ಸ್ಥಳಾಂತರಿಸಿರುವುದು ಕರ್ನಾಟಕದ ಕ್ರಿಕೆಟ್ ಅಭಿಮಾನಿಗಳಲ್ಲಿ ನಿರಾಸೆಯ ಭಾವ ಮೂಡಿಸಿದೆ.

ಪ್ರಸ್ತುತ ದೇಶದಲ್ಲಿನ ಕ್ರೀಡಾ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಒಂದು ವಿಚಾರ ಮಾತ್ರ ಸತ್ಯವಾಗಿದೆ. ಏನೆಂದರೆ ಇತ್ತೀಚಿನ ಎಲ್ಲ ಅಂತಾರಾಷ್ಟ್ರೀಯ ಕ್ರೀಡಾಕೂಟಗಳು ಉತ್ತರ ಭಾರತದಲ್ಲಿ ಆಯೋಜನೆಗೊಳ್ಳುತ್ತಿರುವುದು. ಅದರಲ್ಲೂ ಅಹಮದಾಬಾದ್ ಕೇಂದ್ರವಾಗಿದೆ. ದೇಶದ ಉಳಿದ ರಾಜ್ಯಗಳ ಕ್ರೀಡಾಭಿವೃದ್ಧಿಯ ಕಥೆಯೇನು? ಎಲ್ಲದಕ್ಕೂ ಅಹಮದಾಬಾದ್ ಮಾತ್ರ ಕೇಂದ್ರವಾಗಬಾರದು. ಬೆಂಗಳೂರು ಅಂತಾರಾಷ್ಟ್ರೀಯ ಕ್ರೀಡಾಕೂಟಗಳ ಆತಿಥ್ಯವನ್ನು ವಹಿಸುವ ಎಲ್ಲ ಮೂಲಭೂತ ಸೌಲಭ್ಯ, ವಾತಾವರಣವನ್ನು ಹೊಂದಿದ್ದರೂ ಕೂಡ ಕೇಂದ್ರ, ಸರಕಾರ, ಕ್ರೀಡಾ ಸಂಸ್ಥೆಗಳು ದಕ್ಷಿಣ ಭಾರತವನ್ನು ನಿರ್ಲಕ್ಷಿಸುವುದು ತರವಲ್ಲ. ಬೆಂಗಳೂರಿಗೆ ಈ ಬಾರಿಯ ಐಪಿಎಲ್ ಅಂತಿಮ ಪಂದ್ಯವನ್ನು ನಡೆಸಲು ಬಿಸಿಸಿಐ ಅವಕಾಶ ನೀಡಬೇಕು.

– ಬೀರಪ್ಪ ಡಿ. ಡಂಬಳಿ, ಕೋಹಳ್ಳಿ, ಬೆಳಗಾವಿ

ಸರಕಾರ ರಚನೆಗೆ ಚಿಂತಿಸಬೇಕಿದೆ

ನಮ್ಮ ನೆರೆ ರಾಜ್ಯ ತಮಿಳುನಾಡಿನಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಸರಕಾರದ ರಚನೆಗೆ ಬಹುಮತಕ್ಕೆ ಕೆಲವೇ ಶಾಸಕರ ಕೊರತೆ ಇದೆ. ಈ ಕುರಿತು ಹಗ್ಗ ಜಗ್ಗಾಟ ನಡೆಯುತ್ತಲೇ ಇದ್ದು ಬದ್ಧ ವೈರಿಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ಕೈಜೋಡಿಸಿ ಸರಕಾರ ರಚಿಸುವ ಮಾತುಗಳೂ ಕೇಳಿಬರುತ್ತಿವೆ. ಕುದುರೆ ವ್ಯಾಪಾರವು ನಡೆಯಬಹುದು. ಇಂತಹ ಪರಿಸ್ಥಿತಿ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಬಂದಿದ್ದು, ಜನರು ಇದನ್ನು ಮರೆತಿಲ್ಲ. ಯಾವುದೂ ಸಾಧ್ಯವಾಗದೇ ಹೋದಾಗ ಮರುಚುನಾವಣೆಗೆ ಹೋಗುವ ಸಾಧ್ಯತೆಗಳನ್ನೂ ಅಲ್ಲಗೆಳೆಯುವಂತಿಲ್ಲ. ಅದು ಜನರ ತೆರಿಗೆ ಹಣದ ಅಪವ್ಯಯವೇ ಹೌದು. ಈ ಸಂದರ್ಭದಲ್ಲಿ ಅತಿದೊಡ್ಡ ಪಕ್ಷವಾಗಿ ಆಯ್ಕೆಯಾದ ಪಕ್ಷವನ್ನು ಸರಕಾರ ರಚನೆಗೆ ಆಹ್ವಾನಿಸುವುದು ಸೂಕ್ತ. ಜತೆಗೆ ಬಹುಮತ ಎನ್ನುವುದನ್ನು ಕೊಂಚ ಸಡಿಲಗೊಳಿಸಬೇಕು ಎಂಬುದು ವ್ಯಕ್ತಿಗತ ಅಭಿಪ್ರಾಯ. ಈ ಕುರಿತ ಚಿಂತನೆಗೆ ಇದು ಸಕಾಲ.

– ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನವಿಲುಗಳ ಸಾವಿಗೆ ಪರಿಹಾರ

ಹಕ್ಕಿಜ್ವರದಿಂದ ಕೇವಲ ಒಂದು ತಿಂಗಳಲ್ಲಿ ರಾಜ್ಯದಲ್ಲಿ 57 ನವಿಲುಗಳು ಸಾವನ್ನಪ್ಪಿರುವುದು ಕೇವಲ ಪರಿಸರ ಹಾನಿಯಲ್ಲ,ಸಾರ್ವಜನಿಕ ಆರೋಗ್ಯದ ತುರ್ತು ಪರಿಸ್ಥಿತಿಯ ಮುನ್ಸೂಚನೆಯಾಗಿದೆ. ವೈರಸ್ ಕಾಡುಪಕ್ಷಿಗಳಿಂದ ಮನುಷ್ಯರಿಗೆ ಹರಡುವ ಮೊದಲು



ಸರಕಾರವು ತಕ್ಷಣವೇ ಪೀಡಿತ ಪ್ರದೇಶಗಳಲ್ಲಿ ಜೈವಿಕ ಭದ್ರತಾ ವಲಯ ನಿರ್ಮಿಸಬೇಕು. ಮೃತದೇಹಗಳನ್ನು ಬೀದಿ ನಾಯಿಗಳು ಎಳೆಯದಂತೆ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ಮತ್ತು ಸಾಕುಕೋಳಿಗಳಿಗೆ ವ್ಯಾಪಕ ಲಸಿಕೆ ನೀಡುವುದು ಅತಿ ಮುಖ್ಯ. ರಾಷ್ಟ್ರಪಕ್ಷಿಯ ಅಳಿವು ಮತ್ತು ಪರಿಸರ ಸಮತೋಲನವನ್ನು ಏರುಪೇರು ಮಾಡುವುದರಿಂದ, ತಾಂತ್ರಿಕ ಸಂಶೋಧನೆ ಹಾಗೂ ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಈ ಸೋಂಕು ತಡೆಗಟ್ಟುವುದು ಇಂದಿನ ತುರ್ತು ಅಗತ್ಯವಾಗಿದೆ.

– ಡಾ. ವಿಜಯಕುಮಾರ ಎಚ್.ಕೆ., ರಾಯಚೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ನಯನಾ ಶಾನುಭಾಗ, ಹೊನ್ನಾವರ**
ಭಟ್ರೇ, ಮದುವೆಯ ನಂತರ ಗಂಡನಿಗೆ ಇರುವ ಏಕೈಕ ಸ್ವಾತಂತ್ರ್ಯ ಯಾವುದು?
- **ರಿಮೋಟ್ ಸಿಗದೇ ಇದ್ದಾಗ ಯಾವ ಚಾನಲ್ ನೋಡಬೇಕು ಎಂದು ಹೆಂಡತಿಯನ್ನು ಕೇಳುವ ಸ್ವಾತಂತ್ರ್ಯ!**

- **ರೂಪಾ ಸಿ., ಹುಬ್ಬಳ್ಳಿ**
ಭಟ್ರೇ, ವಿಜ್ಞಾನಕ್ಕೂ, ರಾಜಕೀಯಕ್ಕೂ ಇರುವ ಸಾಮ್ಯತೆ ಏನು?
- **ವಿಜ್ಞಾನ ಹಳೆಯ ಸಿದ್ಧಾಂತಗಳನ್ನು ಸುಳ್ಳು ಎಂದು ನಿರೂಪಿಸುತ್ತದೆ, ರಾಜಕೀಯ ಹಳೆಯ ಭರವಸೆಗಳನ್ನು ಸುಳ್ಳು ಎಂದು ಸಾಬೀತುಪಡಿಸುತ್ತದೆ!**

- **ನಾಗೇಂದ್ರ ಬಾರಿಗಿಡದ, ಧಾರವಾಡ**
ಭಟ್ರೇ, ಕೆಲಸ ಮಾಡದಿದ್ದರೂ ಬಾಸ್ ಕಣ್ಣಲ್ಲಿ 'ಪರ್ಫೆಕ್ಟ್ ಎಂಪ್ಲಾಯಿ' ಅಂತ ಅನ್ನಿಸಿಕೊಳ್ಳುವುದು ಹೇಗೆ?
- **ಯಾವಾಗಲೂ ಕೈಯಲ್ಲಿ ಒಂದು ಡೈರಿ, ಪೆನ್ನು ಹಿಡಿದು ಕಚೇರಿಯ ಕಾರಿಡಾರ್‌ನಲ್ಲಿ ವೇಗವಾಗಿ ಓಡಾಡ್ತಾ ಇರಿ!**

- **ಸದಾಶಿವ ಬದಿಯಡ್ಕ, ಮಂಗಳೂರು**
ಭಟ್ರೇ, ಮದುವೆಯಾದ ಮೇಲೆ ಗಂಡಂದಿರು ಯಾಕೆ ಮೌನಿಗಳಾಗುತ್ತಾರೆ?
- **ಅದು ಮೌನ ಅಲ್ಲ, ಅದು 'ಅಳಿವು ಉಳಿವಿನ ಹೋರಾಟ'!**

- **ರುದ್ರಣ್ಣ ಪಿ., ಮಂಡ್ಯ**
ಭಟ್ರೇ, ಫೇಸ್‌ಬುಕ್ ಮತ್ತು ಇನ್ಸ್ಟಾಗ್ರಾಮ್‌ನಲ್ಲಿ ದಿನಕ್ಕೆ ನೂರು ಪೋಸ್ಟ್ ಹಾಕುವವರನ್ನು ಏನನ್ನಬೇಕು?
- **ಅವರನ್ನು 'ಡಿಜಿಟಲ್ ಭಿಕ್ಷುಕರು' ಅನ್ನಬೇಕು. 'ಒಂದು ಲೈಕ್ ಕೊಡಿ, ಒಂದು ಕಾಮೆಂಟ್ ಮಾಡಿ' ಎಂದು ಪರಿತಪಿಸುತ್ತಿರುತ್ತಾರೆ!**

- **ಕೆ.ಬಾಲು, ಬೆಂಗಳೂರು**
ಭಟ್ರೇ, ರಾಜಕಾರಣಿಗಳು ಚುನಾವಣೆಗೆ ಮುನ್ನ ಕಾಲಿಗೆ ಬೀಳುತ್ತಾರಲ್ಲ, ಯಾಕೆ?
- **ನಂತರ ಮತದಾರರು ಬೀಳುತ್ತಾರೆ ಎಂಬುದು ಅವರಿಗೆ ಗೊತ್ತಿರುತ್ತದೆ!**

- **ನಾಣಯ್ಯ, ಗೋಣಿಕೊಪ್ಪಲು**
ಭಟ್ರೇ, ಒಬ್ಬ ಮನುಷ್ಯ ಬುದ್ಧಿವಂತನಾಗುತ್ತಿದ್ದಾನೆ ಎಂದು ತಿಳಿಯುವುದು ಹೇಗೆ?
- **ಅವನ ಮಾತು ಕಡಿಮೆಯಾಗಿ, 'ಹೌದು ಸ್ವಾಮಿ' ಎನ್ನುವ ಪ್ರಮಾಣ ಹೆಚ್ಚಾದಾಗ!**

- **ಮೋಹನ ಪಿ.ಸ್ವಾಮಿ, ಮದ್ದೂರು**
ಭಟ್ರೇ, ಈ ಕಾಲದಲ್ಲಿ 'ದಾನ' ಮಾಡುವುದು ಅಂದ್ರೆ ಏನು?
- **ಹತ್ತು ರುಪಾಯಿ ಭಿಕ್ಷೆ ಕೊಟ್ಟು, ನೂರು ರುಪಾಯಿ ಖರ್ಚು ಮಾಡಿ ಫೋಟೋ ಶೂಟ್ ಮಾಡಿಸಿಕೊಳ್ಳುವುದು!**

100% ಫಲಿತಾಂಶ: ದಾಖಲಾತಿ ಹೆಚ್ಚಿಸುವುದೇ?

ಒಡಲಾಳ

ಸುರೇಂದ್ರ ಪೈ ಭಟ್ಕಳ

vveditoped@gmail.com

ನಾನು ಸರಕಾರಿ ಶಾಲೆಯಲ್ಲೇ ಕಲಿತ ವಿದ್ಯಾರ್ಥಿ. ನಾನೊಬ್ಬನೇ ಅಲ್ಲ, ನನ್ನಂತಹ ಲಕ್ಷಾಂತರ ಜನರು ಸರಕಾರಿ ಶಾಲೆಯಲ್ಲೇ ಕಲಿತಿದ್ದಾರೆ. ನಮಗೆಲ್ಲರಿಗೂ ನಾವು ಕಲಿತ ಸರಕಾರಿ ಶಾಲೆ ಕುರಿತು ಪ್ರೀತಿ, ಗೌರವ ಇಂದಿಗೂ ಇದೆ. ಅದ್ಯಾವ ಖಾಸಗೀಕರಣದ ಗಾಳಿ ಬಿಸಿತೋ ತಿಳಿಯೇ ಯಾವ ಸರಕಾರಿ ಶಾಲೆಗಳು ನಮ್ಮೆಲ್ಲರ ಭವಿಷ್ಯವನ್ನು ರೂಪಿಸಿದ್ದವೋ ಸರಕಾರದ ನಿರ್ಲಕ್ಷ್ಯದ ಕಾರಣ ಮೂಲೆಗುಂಪಾದವು. ಖಾಸಗೀಕರಣದ ಅಭಿವೃದ್ಧಿಯ ವೇಗಕ್ಕೆ ತಕ್ಕಂತೆ ಸರಕಾರಿ ಶಾಲೆಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ತೋರಿದ ಉದ್ದೇಶಿತ, ಯೋಜಿತ ನಿರಾಸಕ್ತಿಯ ಕಾರಣ ಸರಕಾರಿ ಶಾಲೆ ಎಂದರೆ ಅದು ಬಡ ಮಕ್ಕಳ ಶಾಲೆ, ದಡ್ಡರು ಹಾಗೂ ಕಲಿಕೆಯಲ್ಲಿ ಹಿಂದುಳಿದವರಿಗಾಗಿ ಇರುವ ಶಾಲೆ ಎಂಬ ಹಣೆಪಟ್ಟಿ ಕಟ್ಟಿಕೊಂಡಿತು.

ಪ್ರಸುತ್ತ ರಾಜ್ಯ ಶಾಲಾ ಮತ್ತು ಸಾಕ್ಷರತಾ ಇಲಾಖೆಯ ಎಸ್‌ಎಸ್‌ಎಲ್‌ಸಿ-1 ಪರೀಕ್ಷೆಯ ದಾಖಲೆಯ ಶೇ.94.10ರಷ್ಟು ಫಲಿತಾಂಶವು ಪುನಃ ಸರಕಾರಿ ಶಾಲೆಗಳಿಗೆ ಜೀವ ತುಂಬುತ್ತದೆ ಎಂದು ಶಿಕ್ಷಣ ಸಚಿವರು ಹೇಳುತ್ತಿದ್ದಾರೆ. ಸಚಿವರ ಆತ್ಮವಿಶ್ವಾಸಕ್ಕೆ ದಾಖಲೆಯ ಫಲಿತಾಂಶದ ಜತೆಗೆ ಈ ಬಾರಿ ರಾಜ್ಯದಲ್ಲಿ ಒಟ್ಟು 6,176 ಶಾಲೆಗಳು ಶೇ.100ರಷ್ಟು ಫಲಿತಾಂಶವನ್ನು ದಾಖಲಿಸಿದ್ದು ಅವುಗಳ ಪೈಕಿ ಶೇ.50ರಷ್ಟು ಅಂದರೆ 2,393 ಸರಕಾರಿ ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿದೆ.

ಜತೆಗೆ ಈ ಬಾರಿ ಯಾವ ಸರಕಾರಿ ಶಾಲೆಯು ಸಹ ಶೂನ್ಯ ಫಲಿತಾಂಶ ದಾಖಲಿಸಿಲ್ಲ. ಈ ಕಾರಣಗಳಿಂದಾಗಿ ಪಾಲಕರು ಖಂಡಿತವಾಗಿಯೂ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲಾತಿ ಮಾಡುತ್ತಾರೆ ಎಂಬ ಭರವಸೆ ಸಚಿವರದ್ದು. ಮುಂದುವರಿದು ನಮ್ಮ ಸರಕಾರ ಮಕ್ಕಳಿಗೆ ಮೊಟ್ಟೆ, ಪಠ್ಯಪುಸ್ತಕ, ಸಮವಸ್ತ್ರ, ಶೂ-ಸಾಕ್ಸ್, ಬಿಸಿಯೂಟ, ಹಾಲು, ಬಾಳೆಹಣ್ಣು ನೀಡುತ್ತದೆ. ಜತೆಗೆ ಈ ಬಾರಿಯಿಂದ ಸರಕಾರಿ ಶಾಲೆಯಲ್ಲಿ ಅದರಲ್ಲೂ ರಾಜ್ಯ ಪಠ್ಯಕ್ರಮ ಶಾಲೆಗಳ ಮಕ್ಕಳು ಶೇ.100 ಫಲಿತಾಂಶವನ್ನು ದಾಖಲಿಸುವುದು ಗ್ಯಾರಂಟಿ. ಹಾಗಾಗಿ ಪಾಲಕರು ಸರಕಾರಿ ಶಾಲೆ ಬಿಟ್ಟು ಸಿಬಿಎಸ್‌ಇ ಅಥವಾ ಖಾಸಗಿ ಶಾಲೆಗಳತ್ತ ಹೋಗುವುದಿಲ್ಲ ಎಂಬ ಆತ್ಮವಿಶ್ವಾಸದ ವ್ಯಕ್ತಪಡಿಸಿದ್ದಾರೆ.

ಜತೆಗೆ ನೂರರಷ್ಟು ಫಲಿತಾಂಶ ಪಡೆದ ಸರಕಾರಿ ಶಾಲೆಯ ಮುಂದೆ ಹೋರ್ಲ್ಡಿಂಗ್ಸ್ ಹಾಕಲು ಆದೇಶ ನೀಡಿದ್ದೇವೆ. ವಾರಕ್ಕೊಂದು ಹೊಸ ಹೊಸ ಯೋಜನೆಯನ್ನು ಘೋಷಣೆ ಮಾಡುತ್ತೇವೆ, ನಿರೀಕ್ಷೆಯಿರಲಿ ಎಂದಿದ್ದಾರೆ.

ಜತೆಗೆ '8 ಶೈಕ್ಷಣಿಕ ಗ್ಯಾರಂಟಿ' ಭರವಸೆಯನ್ನು ಮುಂದಿನ ಶಿಕ್ಷಣ ವರ್ಷದಿಂದಲೇ ಜಾರಿಗೊಳಿಸುವುದಾಗಿ ಪ್ರಕಟಿಸಿದ್ದಾರೆ. ಸರಕಾರಿ ಶಾಲೆಯ ದಾಖಲಾತಿ ಹೆಚ್ಚಳಕ್ಕೆ ಶ್ರಮವಹಿಸುತ್ತಿರುವ ಸಚಿವರ ಯೋಜನೆ ಯಶಸ್ಸು ಕಾಣಲಿ. ಶಿಕ್ಷಣ ಸಚಿವರ ಈ ಆತ್ಮವಿಶ್ವಾಸದ ಮಾತುಗಳು ನಿಜವಾಗಿಯೂ ಈ ಸಲ ಸರಕಾರಿ ಶಾಲೆಯಲ್ಲಿ ದಾಖಲಾತಿ ಹೆಚ್ಚಳ ಮಾಡುತ್ತವೆಯೇ ಎಂಬುದೇ ಯಕ್ಷ ಪ್ರಶ್ನೆ.

ಸರಕಾರಿ ಶಾಲೆಯು 80-90ರ ದಶಕದಂತೆ ಮರುಜೀವ ಪಡೆಯಬೇಕೆಂಬ ಕನಸು ಎಲ್ಲರಲ್ಲೂ ಇದೆ. ಆದರೆ ಕಳೆದ ಒಂದು ವಾರದಲ್ಲಿ ಶಿಕ್ಷಣ ಸಚಿವರು ನಡೆಸಿದ ಎಲ್ಲ ಪತ್ರಿಕಾಗೋಷ್ಠಿಯನ್ನೊಮ್ಮೆ ಗಮನವಿಟ್ಟು ಕೇಳಿಸಿಕೊಳ್ಳಿ. ನಾವು ಮೊಟ್ಟೆ ನೀಡುತ್ತೇವೆ, ಬಟ್ಟೆ ಕೊಡುತ್ತೇವೆ, ಶೇ.100 ಫಲಿತಾಂಶ ಬರುವ ಹಾಗೇ ಮಾಡುತ್ತೇವೆ ಎಂಬಿತ್ಯಾದಿ ಅಂಶಗಳನ್ನು ಮಾತ್ರ ಪುನಃ ಪುನಃ ಹೇಳಿದರೆ ಹೊರತು ಎಲ್ಲೂ ಸಹ 'ಕೇವಲ ಅಂಕಗಳು ಮಕ್ಕಳ ಭವಿಷ್ಯ ರೂಪಿಸುವುದಿಲ್ಲ, ಅಂಕಗಳ ಹೊರತಾಗಿಯೂ ಜ್ಞಾನ ಮುಖ್ಯ, ಕೌಶಲ ಮುಖ್ಯ, ನಮ್ಮ ಸರಕಾರ ಅಂಕಗಳ ಹಿಂದೆ ಬಿದ್ದಿಲ್ಲ, ಬದಲಾಗಿ ನಾವು ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತೇವೆ' ಎಂದು ಹೇಳಲಿಲ್ಲ.

ಸಚಿವರು ಹುರುಪಿನಲ್ಲಿ ಘೋಷಣೆ ಮಾಡಿರುವ 8 ಶೈಕ್ಷಣಿಕ ಗ್ಯಾರಂಟಿಗಳು ಮೊಣಕೈಗೆ ತುಪ್ಪ ಸವರಿದ ಹಾಗಿದೆ. 'ಶಿಕ್ಷಕರ ಕೊರತೆ ನೀಗಿಸುವುದು (ಕಲೆ, ದೈಹಿಕ ಶಿಕ್ಷಕ), ಡಿಜಿಟಲ್ ಶಿಕ್ಷಣ, ಶಿಕ್ಷಕರ ಅನ್ಯಕೆಲಸದ ಬಾರ ಇಳಿಕೆ' ಈ ಮೂರು ಅಂಶಗಳು ಈ ವರ್ಷವೇ ಪೂರೈಸಲು ಅಸಾಧ್ಯ. ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲು ಒಂದು ವರ್ಷಕ್ಕಿಂತ ಹೆಚ್ಚು ಸಮಯಬೇಕು. ಡಿಜಿಟಲ್ ಶಿಕ್ಷಣ ನೀಡಬೇಕಾದರೆ ಮೊದಲು ಸುವ್ಯವಸ್ಥಿತ ಕೊಠಡಿಗಳು ಬೇಕು. ಶಿಕ್ಷಕರಿಗೆ ಸೂಕ್ತ ತರಬೇತಿ ಬೇಕು. ಇವ್ಯಾವುದನ್ನು ಒಂದೂವರೆ ತಿಂಗಳಲ್ಲಿ ಮಾಡಲು ಆಗದು. ಹೀಗಿರುವಾಗ ಶಾಲೆಯ ಮುಂದೆ 8 ಗ್ಯಾರಂಟಿ ಶಿಕ್ಷಣದ ಹೋರ್ಲ್ಡಿಂಗ್ ಹಾಕಿ ಜನರನ್ನು ಸಾಧಿಸುವುದಾದರೂ ಏನು?

ಇಂದಿನ ಮಕ್ಕಳಿಗೆ ಇದರೊಟ್ಟಿಗೆ ಸರಕಾರಿ ಶಾಲೆಯಲ್ಲೂ 6 ನೇ ತರಗತಿಯಿಂದಲೇ ನೀಟ್, ಸಿಇಟಿ, ಜೆಇಇ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾದ ಫೌಂಡೇಶನ್ ಕೋರ್ಸ್ ಪ್ರಾರಂಭಿಸಬೇಕಿದೆ. ಅದಕ್ಕಾಗಿ ವಿಶೇಷ ನುರಿತ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು. ತನ್ಮೂಲಕ ಪ್ರಗತಿಪರ ಹಾಗೂ ಸಮಕಾಲೀನ ಶಿಕ್ಷಣಕ್ಕೆ ಒತ್ತು ನೀಡಬೇಕು. ಆದರೆ ಶಿಕ್ಷಣ ಸಚಿವರು ಇಂತಹ ಯಾವೊಂದು ಅಂಶವನ್ನು ಹೇಳಲಿಲ್ಲ. ಮುಖ್ಯವಾಗಿ ಪ್ರತಿ ವರ್ಷ 1.5 ಲಕ್ಷಕ್ಕೂ ಹೆಚ್ಚು ಮಕ್ಕಳು ಫೇಲ್ ಆಗುತ್ತಿದ್ದವರು ಪ್ರಸುತ್ತ ಶಿಕ್ಷಕರ ಕೊರತೆ, ಮೂಲ ಸೌಕರ್ಯಗಳ ಕೊರತೆ, ಶಿಕ್ಷಕರಿಗೆ ಅನ್ಯ ಕೆಲಸದ ಒತ್ತಡಗಳ ಹೇರಿಕೆಯ ನಡುವೆ ದಾಖಲೆಯ ಫಲಿತಾಂಶ ಹೇಗೆ ಸಾಧ್ಯವಾಯಿತು ಎಂದು ಯಾರು ಕೇಳಲಿಲ್ಲ, ಅವರು ಹೇಳಲಿಲ್ಲ.!

ಈ ಬಾರಿಯ ಬಜೆಟ್‌ನಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳ ನಿರ್ವಹಣೆ ಮತ್ತು ಅನುದಾನಕ್ಕಾಗಿ ರು.15,693 ಕೋಟಿ ಮೀಸಲಿಡಲಾಗಿದೆ. ಒಟ್ಟಾರೆಯಾಗಿ, ರಾಜ್ಯದ ಒಟ್ಟು ಬಜೆಟ್ ವೆಚ್ಚದಲ್ಲಿ ಸುಮಾರು ಶೇ.10.7ರಿಂದ 11ರಷ್ಟು ಪಾಲನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗಿದೆ. ಹೀಗಿರುವಾಗ 8 ಗ್ಯಾರಂಟಿಗಳ ಅನುಷ್ಠಾನ ಹೇಗೆ ಸಾಧ್ಯ?

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಖಾಸಗಿ ಶಾಲೆಗಳು ಹೆಚ್ಚುತ್ತಲೇ ಇವೆ. ನಮಗೆ ಸರಕಾರಿ ಕೆಲಸ ಬೇಕು, ಸರಕಾರಿ ಯೋಜನೆಯ ಲಾಭಬೇಕು. ಆದರೆ ನಮ್ಮ ಮಕ್ಕಳು ಮಾತ್ರ ಸರಕಾರಿ ಶಾಲೆಯಲ್ಲಿ ಕಲಿಯಬಾರದು ಎಂಬ ಮನಸ್ಥಿತಿ ಎಲ್ಲರದ್ದು. ಇಂದಿನ ಶಿಕ್ಷಣ ಸಚಿವರಿಂದ ಹಿಡಿದು ಕನ್ನಡಪರ ಹೋರಾಟ ಮಾಡುವ, ಸರಕಾರಿ ಶಾಲೆಯ ಉಳಿಯಬೇಕು ಎಂದು ಅಭಿಯಾನ ಮಾಡುವ ಎಲ್ಲರ ಮಕ್ಕಳು ಕಲಿತದ್ದು, ಕಲಿಯುತ್ತಿರುವುದು ಮಾತ್ರ ಖಾಸಗಿ ಶಾಲೆಯಲ್ಲಿ, ಅದು ಸಹ ಸಿಬಿಎಸ್‌ಇ, ಐಸಿಎಸ್‌ಇ ಶಾಲೆಯಲ್ಲಿ. ಕಾರಣ ಸರಕಾರಿ ಶಾಲೆಯ ಆಡಳಿತ ವ್ಯವಸ್ಥೆಯ ಮರ್ಮ ಅವರಿಗೆಲ್ಲ ಗೊತ್ತು.

ಎಲ್ಲದಕ್ಕಿಂತಲೂ ತಮಾಷೆಯ ಸಂಗತಿಯೆಂದರೆ ರಾಜ್ಯದ ಬಹುಪಾಲು ದೊಡ್ಡ ಮಟ್ಟದ ಹೆಸರು ಮಾಡಿದ ಖಾಸಗಿ ಶಾಲೆಯನ್ನು ನಮ್ಮ ರಾಜ್ಯದ ಎಲ್ಲ ಪಕ್ಷದ ರಾಜಕಾರಣಿಗಳೇ ನಡೆಸುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ವ್ಯವಸ್ಥೆ ಒದಗಿಸಿ ಲಕ್ಷಾಂತರ ರುಪಾಯಿ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಹಾಗಿದ್ದರೆ ಇವರಿಗೆಲ್ಲ ಇಂದಿನ ಕಾಲಕ್ಕೆ ತಕ್ಕಂತೆ ಗುಣಮಟ್ಟದ ಶಿಕ್ಷಣ ನೀಡುವುದು ಹೇಗೆ? ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಎಲ್ಲಿಂದ ಸಂಗ್ರಹಿಸಬೇಕು? ಆಡಳಿತ ವ್ಯವಸ್ಥೆ ಹೇಗಿರಬೇಕು? ಎಂಬಿತ್ಯಾದಿ ಅಂಶಗಳ ಬಗ್ಗೆ ಜ್ಞಾನವಿದೆ ಎಂದಾಯಿತು. ಇಷ್ಟೆಲ್ಲ ಗೊತ್ತಿದ್ದರೂ ಸಹ ಸರಕಾರಿ ಶಾಲೆಯನ್ನು ಮುಚ್ಚುವ ಹಂತಕ್ಕೆ ನಿಲ್ಲಿಸಿದ್ದಾರಲ್ಲ ಏನು ಹೇಳೋಣ?



ಪಾಸ್ ಅಂಕ ಕಡಿಮೆ ಮಾಡಿ ಬಹಳ ಬುದ್ಧಿವಂತಿಕೆಯಿಂದ ದಾಖಲೆಯ ಫಲಿತಾಂಶ ಪಡೆದು, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲ ಎಂಬ ಭ್ರಮೆಯಲ್ಲಿ ರಾಜ್ಯ ಶಿಕ್ಷಣ ಇಲಾಖೆ ಇದ್ದಂತಿದೆ. ಮರು ಮೌಲ್ಯಮಾಪನದಲ್ಲಿ ಈ ಬಾರಿ ದಾಖಲೆಯ ತಪ್ಪುಗಳಾಗಿರುವುದು, ಕಳಪೆ ಮೌಲ್ಯಮಾಪನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಸಿಬಿಎಸ್‌ಇ ಪಠ್ಯಕ್ರಮವನ್ನೊಮ್ಮೆ ನೋಡಿ 2026-27 ರಿಂದ 2030-31 ನೇ ಸಾಲಿನ 5 ವರ್ಷಗಳ ಪಠ್ಯಕ್ರಮ, ಪರೀಕ್ಷಾ ನೀತಿ, ಬೋಧಮಾ ಪದ್ಧತಿಯ ಚೌಕಟ್ಟನ್ನು ಒದಗಿಸಿದ್ದಾರೆ. ನಾವಿಲ್ಲಿ ನಮ್ಮ ಮಕ್ಕಳಿಗೆ ಹಿಂದಿ ವಿಷಯ ಬೇಡ, ಐದು ವಿಷಯ ಸಾಕು, 6 ವಿಷಯ ಮಕ್ಕಳಿಗೆ ಕಲಿಯಲು ಭಾರವಾಗುತ್ತದೆ ಎಂದು ಮಕ್ಕಳ ಸೃಜನಶೀಲತೆಯನ್ನು ಹತ್ತಿಕ್ಕುವ ಪ್ರಯತ್ನವನ್ನು ರಾಜಕೀಯ ಹಿತಾಸಕ್ತಿಗಾಗಿ ಮಾಡುತ್ತಿದ್ದೇವೆ. ಅದುವೇ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಇನ್ನು ಮುಂದೆ ಹಂತ ಹಂತವಾಗಿ 9 ಕಡ್ಡಾಯ ವಿಷಯವನ್ನು ಬೋಧಿಸಲಾಗುತ್ತದೆ. ಅದರಲ್ಲಿ ಶೇ.50 ರಷ್ಟು ಪ್ರಾಯೋಗಿಕ ಶಿಕ್ಷಣವು ಅಡಗಿದೆ. ಅದಕ್ಕೆ ತಕ್ಕಂತೆ ಶಾಲೆಗಳಲ್ಲಿ ಸ್ಕಿಲ್ ಲ್ಯಾಬ್ ಸಿದ್ಧವಾಗುತ್ತಿದೆ. ಆದರೆ ನಮ್ಮಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊಠಡಿ ನೀಡಿ ಎಂದು ಮುಖ್ಯ ಶಿಕ್ಷಕರು ಹೋರಾಟ ಮಾಡಬೇಕಿದೆ.

ಹೌದು ಸ್ವಾಮಿ ನೀವು ಮೊಟ್ಟೆ, ಬಟ್ಟೆ ಕೊಡ್ತೀರಿ ಸರಿ. ಮಕ್ಕಳನ್ನು ಎಸ್‌ಎಸ್‌ಎಲ್‌ಸಿ ಪಾಸ್ ಕೂಡ ಮಾಡಿ ಕೈ ಬಿಡುತ್ತೀರಿ ಸರಿ. ಅಲ್ಲಿಗೆ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣದ ಕನಸು ಸಾಕಾರವಾಗುತ್ತೆ ಒಪ್ಪೋಣ. ಆದರೆ ಜ್ಞಾನವಿಲ್ಲದೇ ಮಕ್ಕಳು ತಮ್ಮ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು. ಇಂದು ಎಐ ಸಾವಿರ ಜನರ ಕೆಲಸ ಮಾಡಿ ಮುಗಿಸುತ್ತಿದೆ. ನೀವು ಕೊಟ್ಟ ಮೊಟ್ಟೆ, ಬಟ್ಟೆ ಕ್ಷಣಿಕದ ಹಸಿವನ್ನು ನೀಗಿಸಬಹುದು. ಆದರೆ ಜೀವನದ ಹಸಿವನ್ನು, ನಿರುದ್ಯೋಗ ಸಮಸ್ಯೆಯನ್ನು ನೀಗಿಸುವವರು ಯಾರು? ಖಾಸಗೀಕರಣಕ್ಕೆ ಆದ್ಯತೆ ನೀಡುವ ಸರಕಾರ, ಭಾಷೆಯ ವಿಷಯದಲ್ಲಿ ಪರೀಕ್ಷಾ ಕೇಂದ್ರಕ್ಕೆ ದಾಳಿ ನಡೆಸುವ ಕೆಳಮಟ್ಟದ ಬುದ್ಧಿ ಹೊಂದಿರುವ ಸಂಘಟನೆಗಳು 1-5 ನೇ ತರಗತಿಯ ಶಿಕ್ಷಣ ಕಡ್ಡಾಯವಾಗಿ ಸರಕಾರಿ ಶಾಲೆಯಲ್ಲಿ ದೊರಕುವಂತಾಗಬೇಕು ಎಂದು ಒಮ್ಮತದ ಹೋರಾಟವನ್ನೇಕೆ ಮಾಡುವುದಿಲ್ಲ. ಭಾರತದಲ್ಲಿ ಸರಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಅವುಗಳಿಗೆ ನೀಡುವ ಪ್ರಾಮುಖ್ಯತೆಯ ವಿಷಯಕ್ಕೆ ಬಂದರೆ, ಪ್ರಮುಖವಾಗಿ ಕೇರಳ, ದೆಹಲಿ ರಾಜ್ಯಗಳು ಮುಂಚೂಣಿಯಲ್ಲಿವೆ. ಶೇ.20-25 ರಷ್ಟು ಬಜೆಟ್‌ನಲ್ಲಿ ಅನುದಾನ ಹಂಚಿಕೆ, ಹೈಟೆಕ್ ಶಾಲೆಗಳು, ಶಿಕ್ಷಕರ ನೇಮಕಾತಿ, ಸಾರ್ವಜನಿಕ ಸಹಭಾಗಿತ್ವ, ಸ್ವಿಮ್ಮಿಂಗ್ ಪೂಲ್, ಅತ್ಯಾಧುನಿಕ ಲ್ಯಾಬ್ ಮತ್ತು ಕ್ರೀಡಾಂಗಣಗಳಂತಹ ಖಾಸಗಿ ಶಾಲೆಗಳಿಗೆ ಸರಿಸಮಾನವಾದ ಸೌಲಭ್ಯಗಳನ್ನು ಸರಕಾರಿ ಶಾಲೆಗಳಲ್ಲಿ ಒದಗಿಸಲಾಗಿದೆ. ಕೇರಳದಲ್ಲಿ ಮಕ್ಕಳ ಮಾನಸಿಕ ಆರೋಗ್ಯಕ್ಕಾಗಿ 'ಹ್ಯಾಪಿನೆಸ್ ಕ್ಲಾಸ್' ಮತ್ತು ಉದ್ಯಮಶೀಲತೆ ಬೆಳೆಸಲು 'ಬಿಸಿನೆಸ್ ಬ್ಲಾಸ್ಟರ್ಸ್' ನಂತಹ ವಿಶಿಷ್ಟ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಶಿಕ್ಷಕರಿಗೆ ನಿರಂತರವಾಗಿ ಆಧುನಿಕ ಬೋಧನಾ ಪದ್ಧತಿಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ಕೇವಲ ಅಂಕಗಳಿಗೆ ಆದ್ಯತೆ ನೀಡದೆ, ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ.

ಇಂತಹ ಬದಲಾವಣೆಯ ಕಾರಣದಿಂದಲೇ ಒಟ್ಟು ದಾಖಲಾತಿಯ ಸಂಖ್ಯೆಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದ್ದರೆ, ಶೇಕಡಾವಾರು ಪ್ರಮಾಣದಲ್ಲಿ ಹಿಮಾಚಲ ಪ್ರದೇಶದಂತಹ ಈಶಾನ್ಯ ರಾಜ್ಯಗಳು ಮುಂದಿವೆ. ಇವೆಲ್ಲವೂ ಸಾಧ್ಯವಾಗಿದ್ದು ಸರಕಾರದ ಇಚ್ಛಾಶಕ್ತಿಯಿಂದಲೇ ಹೊರತು, ರಾಜಕೀಯ ಹಿತಾಶಕ್ತಿಯ ನೆಲೆಯಿಂದಲ್ಲ.

ಫಿನ್ಲ್ಯಾಂಡ್, ಅಮೆರಿಕ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ 90ರಷ್ಟು ಸರಕಾರಿ ಶಾಲೆ ಇದ್ದರೆ ಬೆರಳೆಣಿಕೆಯಷ್ಟು ಖಾಸಗಿ ಶಾಲೆ. ಇಲ್ಲಿಂದ ಅಲ್ಲಿ ನೆಲೆಸಿದವರು ಸರಕಾರಿ ಶಾಲೆಯಲ್ಲಿ ತಮ್ಮ ಮಕ್ಕಳನ್ನು ಓದಿಸಿದರೂ ಸಹ ಅವರಿಗೆ ಗುಣಮಟ್ಟದಲ್ಲಿ ವ್ಯತ್ಯಾಸ ಕಾಣುತ್ತಿಲ್ಲ. ನಮ್ಮಲ್ಲಿ ಖಾಸಗಿ ಶಾಲೆ 90ರಷ್ಟಿದ್ದರೂ ಎಲ್ಲೆಡೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎಂಬುದು ಹೇಳಲಾಗದು.

ಇನ್ನೂ ತಡವಾಗಿಲ್ಲ, ಬದಲಾವಣೆ ಇಂದಿಗೂ ಸಾಧ್ಯವಿದೆ. ಮೊದಲು ರಾಜಕೀಯ ನಾಯಕರು, ಸರಕಾರಿ ಶಾಲಾ ಶಿಕ್ಷಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಯಲ್ಲೇ ವಿದ್ಯಾಭ್ಯಾಸ ನೀಡಲು ಮುಂದಾಗಿ ಎಲ್ಲರಿಗೂ ಮಾದರಿಯಾಗಲಿ. ಇದು ಸಾಧ್ಯವೇ?

ಅಭಿಮತ

ಸಂದೀಪ್ ಶರ್ಮಾ, ಕೆಆರ್ ಪುರಂ

ಒಂದು ರಾಷ್ಟ್ರ, ಒಂದು ಚುನಾವಣೆ ಅನಿವಾರ್ಯ

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಚುನಾವಣೆ ಎನ್ನುವುದು ಕೇವಲ ಸರಕಾರವನ್ನು ಆರಿಸುವ ಪ್ರಕ್ರಿಯೆಯಲ್ಲ, ಅದೊಂದು ಭಾವನಾತ್ಮಕ ಹಬ್ಬ. ಆದರೆ, ಈ ಹಬ್ಬವು ವರ್ಷಪೂರ್ತಿ, ಯಾವುದಾದರೊಂದು ರಾಜ್ಯದಲ್ಲಿ ನಡೆಯುತ್ತಲೇ ಇರುವುದು ಹಾಗೂ ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆ ದೇಶದ ಆಡಳಿತ ಯಂತ್ರದ ಮೇಲೆ ಬೀರುತ್ತಿರುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಈಗ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಆರಂಭವಾಗಿದೆ. ಪ್ರತಿ ಚುನಾವಣೆಯೂ ತನ್ನೊಂದಿಗೆ ತರುವ ಆಡಳಿತಾತ್ಮಕ ಸ್ತಬ್ಧತೆ ಅಥವಾ ಪಾರ್ಶ್ವವಾಯು ದೇಶದ ಅಭಿವೃದ್ಧಿಯ ವೇಗವನ್ನು ಕುಂಠಿತ ಗೊಳಿಸುತ್ತಿದೆ. ಭಾರತ ದ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿ ಕೆಲವು ತಿಂಗಳಿಗೊಮ್ಮೆ ಚುನಾವಣೆಗಳು ಎದುರಾಗುತ್ತವೆ. ಚುನಾವಣೆ ಘೋಷಣೆಯಾದ ಕ್ಷಣದಿಂದ ಜಾರಿಗೆ ಬರುವ 'ಮಾದರಿ ನೀತಿ ಸಂಹಿತೆ' ಸುಮಾರು 2 ತಿಂಗಳ ಕಾಲ ಆಡಳಿತವನ್ನು ಅಕ್ಷರಶಃ ಕಟ್ಟಿಹಾಕುತ್ತದೆ. ಈ ಅವಧಿಯಲ್ಲಿ ಹೊಸ ಯೋಜನೆಗಳ ಘೋಷಣೆ, ಟೆಂಡರ್ ಪ್ರಕ್ರಿಯೆಗಳು ಮತ್ತು ಪ್ರಮುಖ ನೀತಿ ನಿರೂಪಣೆಗಳು ಸ್ಥಗಿತಗೊಳ್ಳುತ್ತವೆ. ಹಿರಿಯ ಅಧಿಕಾರಿಗಳು ಮತ್ತು ಜಿಲ್ಲಾಡಳಿತವು ಕೇವಲ ಚುನಾವಣಾ ಕರ್ತವ್ಯದಲ್ಲಿ ಮಗ್ನರಾಗುವುದರಿಂದ, ಸಾಮಾನ್ಯಜನರ ಅಹವಾಲುಗಳು ಮತ್ತು ದೀರ್ಘಾವಧಿಯ ಅಭಿವೃದ್ಧಿ ಕೆಲಸಗಳು ಮೂಲೆಗುಂಪಾಗುತ್ತವೆ. ಪ್ರಜಾಪ್ರಭುತ್ವದ ಆಶಯಗಳನ್ನು ಈಡೇರಿ ಸಬೇಕಾದ ವ್ಯವಸ್ಥೆಯು ಕೇವಲ ಮತದಾನದ ಪ್ರಕ್ರಿಯೆ ಯನ್ನು ನಿರ್ವಹಿಸುವ ಯಂತ್ರವಾಗಿ ಬದಲಾಗುತ್ತದೆ. ಚುನಾವಣಾ ವೆಚ್ಚದ ವಿಷಯಕ್ಕೆ ಬಂದರೆ ಅಂಕಿ-ಅಂಶಗಳು ಬೆಚ್ಚಿ ಬೀಳಿಸುವಂತಿವೆ. 2024ರ ಲೋಕಸಭಾ ಚುನಾವಣೆಯ ಅಂದಾಜು ವೆಚ್ಚ ₹1.35 ಲಕ್ಷ ಕೋಟಿ ದಾಟಿದೆ. ಇದು ಕೇವಲ ಅಧಿಕೃತ ವೆಚ್ಚವಲ್ಲ; ರಾಜಕೀಯ ಪಕ್ಷಗಳು ಚೆಲ್ಲುವ ಹಣದ ಹೊಳೆಯನ್ನೂ ಒಳಗೊಂಡಿದೆ. ಪ್ರತಿ ರಾಜ್ಯ ಚುನಾವಣೆಯಲ್ಲೂ ಇಂತಹದ್ದೇ ಭಾರಿ ವೆಚ್ಚವಾಗುತ್ತದೆ.

ಇದಕ್ಕಿಂತಲೂ ಗಂಭೀರವಾದ ಅಂಶವೆಂದರೆ 'ಅವಕಾಶ ವೆಚ್ಚ'. 2006ರಲ್ಲಿ ಅನುಮೋದನೆಗೊಂಡ ರೈಲ್ವೆ ಸರಕು ಸಾಗಣೆ ಕಾರಿಡಾರ್‌ಗಳಂತಹ ಬೃಹತ್ ಯೋಜನೆಗಳು ಇನ್ನೂ ಪೂರ್ಣಗೊಳ್ಳದಿರಲು ರಾಜಕೀಯ ಅಸ್ಥಿರತೆ ಮತ್ತು ಪದೇಪದೆ ಎದುರಾಗುವ ಚುನಾವಣೆಗಳೇ ಕಾರಣ. ಯೋಜನೆಗಳ ವಿಳಂಬದಿಂದಾಗಿ ಅವುಗಳ ಅಂದಾಜು ವೆಚ್ಚವು ಮೂರು ಪಟ್ಟು ಹೆಚ್ಚಾಗುತ್ತಿದ್ದು, ತೆರಿಗೆದಾರರ ಹಣ ವ್ಯರ್ಥವಾಗುತ್ತಿದೆ. ಬಂಡವಾಳ ಹೂಡಿಕೆಗೆ ಬೇಕಾದ ನಿರಂತರ ಗಮನ ಮತ್ತು ಸ್ಥಿರತೆ ಇಲ್ಲಿ ಮರೀಚಿಕೆಯಾಗುತ್ತಿದೆ. ಈ ಆಡಳಿತಾತ್ಮಕ ವಿಪ್ಲವಕ್ಕೆ ಪರಿಹಾರವಾಗಿ ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ನೇತೃತ್ವದ ಸಮಿತಿಯು 'ಒಂದು ರಾಷ್ಟ್ರ, ಒಂದು ಚುನಾವಣೆ' (One Nation One Election) ವ್ಯವಸ್ಥೆಯನ್ನು ಶಿಫಾರಸು ಮಾಡಿದೆ. 1951ರಿಂದ 1967 ರವರೆಗೆ ಭಾರತದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆಗಳು ನಡೆಯುತ್ತಿದ್ದವು. ಅಂದಿನ ಆ ವ್ಯವಸ್ಥೆಯು ಆಡಳಿತಕ್ಕೆ ಒಂದು ಶಿಸ್ತು ನೀಡಿತ್ತು. ಈಗ ಮತ್ತೆ ಅಂತಹದ್ದೇ ಸಮಕಾಲಿಕ ವ್ಯವಸ್ಥೆಯ ಅಗತ್ಯವಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಹಕ್ಕುಗಳ ಬಗ್ಗೆ ಆತಂಕಗಳಿರುವುದು ಸಹಜ. ಆದರೆ, ಈ ಸುಧಾರಣೆಯು ರಾಜ್ಯಗಳ ಸಾರ್ವಭೌಮತ್ವವನ್ನು ಕಸಿದುಕೊಳ್ಳುವ ಉದ್ದೇಶ ಹೊಂದಿಲ್ಲ, ಬದಲಾಗಿ, ಐದು ವರ್ಷಗಳ ಕಾಲ ರಾಜಕೀಯ ನಾಯಕರು ಕೇವಲ ಚುನಾವಣಾ ರ್‍ಯಾಲಿಗಳಲ್ಲಿ ಕಾಲ ಕಳೆಯುವ ಬದಲು, ಆಡಳಿತದ ಕಡೆಗೆ ಗಮನ ಹರಿಸಲು ಇದು ಪೂರಕವಾಗಲಿದೆ. ಅಭಿವೃದ್ಧಿ ಎಂಬುದು ನಿರಂತರ ಪ್ರಕ್ರಿಯೆಯಾಗಬೇಕೇ ಹೊರತು, ಚುನಾವಣಾ ವೇಳಾಪಟ್ಟಿಗೆ ತಕ್ಕಂತೆ ಏರಿಳಿತ ಕಾಣುವ ಪ್ರಕ್ರಿಯೆಯಾಗಬಾರದು. 2047ರ ವೇಳೆಗೆ 'ವಿಕಸಿತ ಭಾರತ'ದ ಕನಸನ್ನು ನನಸು ಮಾಡಬೇಕಾದರೆ, ಭಾರತವು ಅಲ್ಪಕಾಲಿಕ ರಾಜಕೀಯ ಲಾಭಗಳಿಂದ ಹೊರಬರಬೇಕಿದೆ. ನಿರಂತರ ಚುನಾವಣಾ ಪ್ರಚಾರದ ಗೀಳಿನಲ್ಲಿ ರುವ ಪ್ರಜಾಪ್ರಭುತ್ವವು ದೀರ್ಘಕಾಲಿಕ ಗುರಿಗಳನ್ನು ತಲುಪಲು ಸಾಧ್ಯವಿಲ್ಲ. ನಮಗೆಬೇಕಿರುವುದು ಅಡೆತಡೆಗಳಿಲ್ಲದ ಆಡಳಿತ ಮತ್ತು ಜನರ ಆಕಾಂಕ್ಷೆಗಳಿಗೆ ತಕ್ಕಂತೆ ಸ್ಪಂದಿಸುವ ವ್ಯವಸ್ಥೆ. ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಚುನಾವಣೆ ಎಷ್ಟು ಮುಖ್ಯವೋ, ದೇಶದ ಅಸ್ತಿತ್ವಕ್ಕೆ ಅಭಿವೃದ್ಧಿ ಅಷ್ಟೇ ಮುಖ್ಯ. ಈ ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳಲು ಇಂತಹ ಸುಧಾರಣೆಗಳು ಮೊದಲ ಹೆಜ್ಜೆಯಾಗಲಿ.

ಗಣಾಚಾರದ ಅರ್ಥ ಅಪಾರ್ಥ

ನೇರ ನುಡಿ

ಜನಮೇಜಯ ಉಮರ್ಜಿ

vveditoped@gmail.com

ಕೆಲ ದಿನಗಳ ಹಿಂದೆ ವಿಶ್ವವಾಣಿಯಲ್ಲಿ 'ಬಸವಣ್ಣನವರ ಸಪ್ತಶೀಲ : ಅಸಹಿಷ್ಣುತೆಯೇ ಗಣಾಚಾರವೇ?' ಎಂಬ ಲೇಖನ ಪ್ರಕಟವಾಗಿತ್ತು. ಲೇಖನಕ್ಕೆ ತುಂಬ ಪ್ರತಿಕ್ರಿಯೆಗಳು ಬಂದವು. ನಾಡಿನ ಹಲವು ವಿದ್ವಾಂಸರು ಕರೆ ಮಾಡಿ ಬೆನ್ನು ತಟ್ಟಿದರು. ಇದನ್ನು ಇನ್ನೂ ವಿಸ್ತರಿಸಿ ಬರೆಯಲು ಹೇಳಿದರು. ಹೇಗೆ ಶಿವಶರಣರು ಹೇಳಿದ ಗಣಾಚಾರದ ಅಪಾರ್ಥವಾಗುತ್ತಿದೆಯಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಹೀಗಾಗಿ ಮತ್ತೆ ಬರೆಯಬೇಕಾಗಿದೆ.

ಲಿಂಗಾಯತ ಪರಂಪರೆಯ ಪಂಚಾಚಾರಗಳಲ್ಲಿ ಒಂದಾದ ಗಣಾಚಾರವನ್ನು ಆಯ್ದುಕೊಂಡು ತಪ್ಪಾಗಿ ಅರ್ಥೈಸಲಾಗುತ್ತಿರುವುದು ಸತ್ಯ. ಕೆಲವು ವಲಯಗಳಲ್ಲಿ ಗಣಾಚಾರ ಎಂದರೆ ಕೋಪ, ವಿರುದ್ಧ ಪ್ರತಿಕ್ರಿಯೆ, ಭಂಜನೆ, ನಿಂದನೆ ಅಥವಾ ಆಕ್ರೋಶಪೂರ್ಣ ಹೋರಾಟ ಎಂಬ ಅಲ್ಲದ ಅರ್ಥವನ್ನು ಕೊಡಲಾಗುತ್ತಿದೆ. ಆದರೆ ವಚನ ಪರಂಪರೆಯಲ್ಲಿ ಗಣಾಚಾರದ ಅರ್ಥ ಅದಕ್ಕಿಂತ ಸೂಕ್ಷ್ಮವೂ ವಿಸ್ತಾರವೂ ಆಗಿದೆ.

ಚೆನ್ನಬಸವಣ್ಣನವರ ವಚನದಲ್ಲಿ, ಶಿವಚಾರದ ನಿಂದೆಯ ಕೇಳದಿಹುದೆ ಗಣಾಚಾರ ಎಂಬ ವ್ಯಾಖ್ಯಾನ ದೊರೆಯುತ್ತದೆ. ಅಂದರೆ ಗಣಾಚಾರ ಎಂದರೆ ಶಿವನಿಂದೆ ಮಾಡದೇ ಇರುವುದು, ಶಿವನಿಂದೆ ಕೇಳದೇ ಇರುವುದು, ಶಿವನಿಂದೆ ಎದುರಾದಾಗ ಮೌನವಾಗಿ ಸಮರ್ಥಿಸದೇ ನಿಲ್ಲುವುದು. ಅಕ್ಕ ಮಹಾದೇವಿಯವರು 'ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ ಗಳೆಂಬಷ್ಟಾವರಣಂಗಳು ತನ್ನ ಪ್ರಾಣಸ್ವರೂಪವಾಗಿ ಅವುಗಳ ನಿಂದೆಯನ್ನು ಕೇಳಿ ಸೈರಿಸದೆ ಶಿಕ್ಷಿಸುವೆನೆಂಬ ನಿಷ್ಠೆಗೊಂಡುದೇ ಗಣಾಚಾರ ನೋಡಯ್ಯ' ಎಂದು ಹೇಳುತ್ತಾರೆ. 'ಸದ್ಭಕ್ತಿ-ಸಮ್ಯಕ್ ಜ್ಞಾನ-ವೈರಾಗ್ಯ-ಷಟ್ಸ್ಥಲಮಾರ್ಗವ ಹಿಡಿದು, ನಿಜಾಚರಣೆಯಲ್ಲಿ ಆಚರಿಸುವರೆ ಶಿವಶಕ್ತಿ, ಶಿವಭಕ್ತ, ಶಿವಜಂಗಮವಲ್ಲದೆ, ಉಳಿದ ವೇಷಧಾರಿಗಳೆಲ್ಲ ಎನ್ನೊಡೆಯ ಪ್ರಮಥಗಣಾಚಾರಕ್ಕೆ ಹೊರಗೆಂದಾತನಂಬಿಗರ ಚೌಡಯ್ಯನು' ಎಂದು ಅಂಬಿಗರ ಚೌಡಯ್ಯನವರು ಹೇಳುತ್ತಾರೆ. ಚೆನ್ನಬಸವಣ್ಣನವರು ಇನ್ನೊಂದು ವಚನದಲ್ಲಿ 'ಅಷ್ಟಾವರಣಂಗಳ ಮೇಲೆ ಅನ್ಯರಿಂದ ಕುಂದು ನಿಂದೆಗಳು ಬಂದು ತಟ್ಟಿದಲ್ಲಿ ಗಣಸಮೂಹವನೊಡಗೂಡಿ ಆ ಸ್ಥಲವ ತ್ಯಜಿಸುವುದೆ ಗಣಾಚಾರವೆಂಬೆನಯ್ಯಾ' ಎಂದು ಇದೆ.

ಈ ಎಲ್ಲ ವಚನಗಳನ್ನು ನೋಡಿದಾಗ ಗಣಾಚಾರವೆಂದರೆ ಶಿವ ಮತ್ತು ಶಿವಾಚಾರದ ಬಗೆಗಿನ ಅಚಲ ನಿಷ್ಠೆ ಎಂದು ಅರ್ಥ ಮಾಡಿಕೊಳ್ಳಬಹುದು. ಶಿವನಿಂದೆಯನ್ನು ಮೌನವಾಗಿ ಸಮರ್ಥಿಸದೇ ನಿಲ್ಲುವುದು. ಇಲ್ಲಿ ನಿಲ್ಲುವುದು ಎಂದರೆ ತತ್ವಕ್ಕೆ ಬದ್ಧವಾಗಿ ನಿಲ್ಲುವುದು. ಅಷ್ಟಾವರಣಗಳನ್ನು ತನ್ನ ಪ್ರಾಣಸ್ವರೂಪವೆಂದು ತಿಳಿಯಬೇಕು ಮತ್ತು ಅವುಗಳ ನಿಂದೆಯನ್ನು ಸಹಿಸುವುದಿಲ್ಲ ಎಂಬ ನಿಷ್ಠೆಯಲ್ಲಿ ಇರಬೇಕು. ಸದ್ಭಕ್ತಿ, ಸಮ್ಯಕ್‌ಜ್ಞಾನ, ವೈರಾಗ್ಯ ಮತ್ತು ಷಟ್ಸ್ಥಲ ಮಾರ್ಗದಲ್ಲಿ ನಡೆಯುವವರು ಶಿವಭಕ್ತರು. ಕೇವಲ ವೇಷ ತೊಟ್ಟವರಿಗಿಂತ ನಿಜವಾಗಿ ಆಚರಿಸುವರು ಮುಖ್ಯ. ಅಂದರೆ ಗಣಾಚಾರವು ಹೊರಗಿನ ಬದಲು ಒಳಗಿನ ಸತ್ಯನಿಷ್ಠೆಯಲ್ಲಿ ನೆಲೆಯೂರಿದೆ. ಗಣಾಚಾರ ಎಂದರೆ ಜಗಳವಾಡುವುದು ಅಲ್ಲ; ನಿಂದೆಯ ವಾತಾವರಣದಲ್ಲಿ ಪಾಲುಗಾರರಾಗದೆ, ಅಸಮ್ಮತಿಯನ್ನು ಸಾತ್ವಿಕವಾಗಿ ತಾತ್ವಿಕವಾಗಿ ವ್ಯಕ್ತಪಡಿಸುವುದನ್ನು ಅದು ಹೇಳುತ್ತದೆ.

ಪಂಚಾಚಾರಗಳನ್ನು ಸನಾತನ ಪಂಚಭೂತಗಳಲ್ಲಿನ ಜಲ ತತ್ವಕ್ಕೆ ಹೋಲಿಸಲಾಗಿದೆ. 'ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದೆನಾದರೆ ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ' ಇದು ಬಸವಣ್ಣನವರ ಮಾತು. ಈ ವಚನ ಪೂರ್ತಿ ಓದಿದಾಗ ಇದು ಅರ್ಥವಾಗುತ್ತದೆ. ದೇಶಿಕೇಂದ್ರ ಸಂಗನಬಸವಯ್ಯನವರ 'ಅಪ್ಪುವಿನಂಶವನಳಿದು ಚಿದಪ್ಪುವೇ ಅಂಗವಾಗಿ ಗಣಾಚಾರ ನೆಲೆಸಿದುದೇ ಗುರುಲಿಂಗಸಂಬಂಧ' ಎಂಬ ಸಾಲು ಇದನ್ನು ಪುಷ್ಟೀಕರಿಸುತ್ತದೆ. 'ಮಡಿವಾಳಯ್ಯ ತನ್ನ ದೇಹವ ಕೊಟ್ಟು, ಗಣಾಚಾರದ ಶಕ್ತಿ ಪ್ರಸಾದವ ಪಡೆದ' ಎಂಬಲ್ಲಿಗೆ ಮಾಚಿದೇವರು ಶಿವತತ್ವ ನಿಷ್ಠರಲ್ಲಿ ಶ್ರೇಷ್ಠರು ಎಂದಾಗುತ್ತದೆ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ ಗಣಾಚಾರ ಕೆಲವರಿಂದ ವ್ಯಾಖ್ಯಾನವಾಗುತ್ತಿದೆ. ಉದಾಹರಣೆಗೆ ಗಣಾಚಾರವೆಂದರೆ ಶಿವಧರ್ಮದ ಸಿದ್ಧಾಂತಗಳ ಅವಹೇಳನ ಮಾಡುವವರನ್ನು ಕೊಲ್ಲಬೇಕು; ಅದೂ ಸಾಧ್ಯವಾಗದಿದ್ದರೆ ಆ ಅವಹೇಳನ ಕೇಳುವುದರ ಬದಲು ಆತ್ಮಹತ್ಯೆ ಮಾಡಿಕೊಳ್ಳಬೇಕು. ಅಥವಾ ಅವಹೇಳನ ಮಾಡುವವರು ಇರುವ ಸ್ಥಳದಲ್ಲಿ ನಿಲ್ಲದೆ, ಶಿವಭಕ್ತರು ಗಣಸಮೇತ ಮತ್ತೊಂದು ಕಡೆಗೆ ಹೋಗಬೇಕು. (ಉಲ್ಲೇಖ : https://lingayatreligion.com/).

ಇದೇ ಅರ್ಥದ ಮಾತುಗಳು ವಿಜಯಪುರದ ಸಿಂದಗಿಯಲ್ಲಿ, ಬೆಳವಿಯ ಸ್ವಾಮಿಗಳ ಬಾಯಲ್ಲಿ ಬಂದಿವೆ. ಇನ್ನೊಂದು ಕಡೆ ಗಣವನ್ನು ಸಮಾಜ ಎಂತಲೂ ಗಣಾಚಾರವನ್ನು ಸಮಾಜದೊಂದಿಗೆ ನಾವು ನಡೆದುಕೊಳ್ಳುವ ರೀತಿ ಎಂತಲೂ ವ್ಯಾಖ್ಯಾನ ಮಾಡಲಾಗುತ್ತಿದೆ. ವಿಶ್ವದ ಎಲ್ಲ ಧಾರ್ಮಿಕ ಸಾಂಸ್ಕೃತಿಕ, ಸಾಮಾಜಿಕ, ಸಾಹಿತ್ಯಕ ಅಂಶಗಳು ಆಯಾ ಕಾಲದ ಕಟ್ಟಳೆಗೆ, ಆಚರಣೆಗೆ, ವ್ಯವಸ್ಥೆಗೆ ಸೀಮಿತವಾಗಿರುತ್ತವೆ. ಆ ಕಟ್ಟಳೆಗಳಿಂದ, ವ್ಯವಸ್ಥೆಯಲ್ಲಿರುವ ದೋಷಗಳಿಂದ ಸಿಡಿದೇಳುವುದೂ ಕೂಡಾ ಕಾಲಕಾಲಕ್ಕೆ ನಡೆದುಕೊಂಡಿರುವ ಐತಿಹಾಸಿಕ ಸತ್ಯ. ಹಾಗೆಯೇ 12ನೇ ಶತಮಾನದ ಶರಣರ ಗಣಾಚಾರ ಕೂಡಾ ಇಂತಹ ಒಂದು ಪ್ರತಿಕ್ರಿಯೆ ಎಂತಲೂ ವ್ಯಾಖ್ಯಾನ ನಡೆದಿದೆ. ಸ್ಥಾಪಿತ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡೇಳುವುದೇ ಗಣಾಚಾರ ಎಂದು ಸಾಹಿತ್ಯದಲ್ಲಿ ಬರೆಯಲಾಗುತ್ತಿದೆ. ಈ ಕುರಿತು ಕಳೆದ 30 ವರ್ಷಗಳಲ್ಲಿ ರಚಿತವಾದ ಒಂದೇ ಸೈದ್ಧಾಂತಿಕ ಒಲವಿನ ಸಾಹಿತ್ಯ ನೋಡುತ್ತ ಹೋದರೆ ಅಚ್ಚರಿಗಳು ಕಾಯ್ದಿವೆ. ಉದಾಹರಣೆಗೆ ಗಣಾಚಾರವೆಂಬುದು ಭಕ್ತರಲ್ಲದವರು, ಒಡೆಯರು, ಪ್ರಭುತ್ವವಾದಿಗಳು ಹಾಗೂ ಸನಾತನಿಗಳ ದಬ್ಬಾಳಿಕೆಗೆ ಶೋಷಣೆಯ ಅನ್ಯಾಯದ ವಿರುದ್ಧವಾಗಿ ಎತ್ತುವ ನ್ಯಾಯದ ಧ್ವನಿಯಾಗಿದೆ. ಈ ಎಲ್ಲ ವಾಕ್ಯಗಳು ಪ್ರಕಟಿತ ಸಾಹಿತ್ಯದಲ್ಲಿ ಬಂದವೇ ಆಗಿವೆ, ಯಾರು ಎಲ್ಲಿ ಬರೆದಿದ್ದಾರೆ ಎಂದು ಹೆಸರು ಹೇಳುವುದು ಬೇಡ.

ಅಸಲಿಗೆ ಗಣಾಚಾರವು ಶಿವ ಭಕ್ತಿ, ಧರ್ಮನಿಷ್ಠೆ, ನೈತಿಕ ಜವಾಬ್ದಾರಿ ಮತ್ತು ಸಾತ್ವಿಕ ಪ್ರತಿರೋಧದ ಆಚಾರ. ಅದು ಮೊದಲಿಗೆ ಅಂತರಂಗದ ಶಿಸ್ತು, ನಂತರ ಬಾಹ್ಯ ಪ್ರತಿಕ್ರಿಯೆ. ಆದರೆ ಅನ್ಯರು ಪಂಚಾಚಾರದಲ್ಲಿ ಗಣಾಚಾರವನ್ನೇ ಅಪವ್ಯಾಖ್ಯಾನಕ್ಕೆ ಆಯ್ಕೆ ಮಾಡಿಕೊಳ್ಳುವಲ್ಲಿ ಕಾರಣವಿದೆ. ಈ ರೀತಿ ವ್ಯಾಖ್ಯಾನಗಳ ಮೂಲ ಸಾಂಸ್ಕೃತಿಕ ಮಾರ್ಕ್ಸ್‌ವಾದ. ಇದು ಯಾವಾಗಲೂ ಜನರನ್ನು ಸ್ಥಾಪಿತ ಸಂಸ್ಕೃತಿಯ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತದೆ. ಅಷ್ಟೇ ಅಲ್ಲ ಅದನ್ನು ಸಂಪೂರ್ಣವಾಗಿ ನಾಶಮಾಡಲು ಬಯಸುತ್ತದೆ. ಹೀಗಾಗಿ ಕಮ್ಯುನಿಸ್ಟ್ ಪ್ರಭಾವಿತ ವ್ಯಾಖ್ಯಾನಗಳಲ್ಲಿ ಎಲ್ಲವನ್ನೂ ಸಾಮಾಜಿಕ ಚೌಕಟ್ಟಿನಲ್ಲಿ ನೋಡಲಾಗುತ್ತಿದೆ. ಗಣವೆಂದರೆ ಸಮಾಜ, ಸಮಾಜವೆಂದರೆ ವರ್ಗಸಂಘರ್ಷದ ಕ್ಷೇತ್ರ. ಹೀಗಾಗಿ ಅಲ್ಲಿ ಧರ್ಮ, ಸಂಸ್ಕೃತಿ, ಪರಂಪರೆ ಇವೆಲ್ಲವೂ ರಾಜಕೀಯ ಸಂಘರ್ಷದ ಸಾಧನಗಳನ್ನಾಗಿ ಮಾಡಲಾಗುತ್ತದೆ. ಇದೇ ಮನೋಭಾವ ಲಿಂಗಾಯತ ಚಿಂತನೆಗೆ ಒಳನುಗ್ಗಿದಾಗ, ಗಣಾಚಾರವು ತತ್ವ ನಿಷ್ಠೆ ಎಂಬ ಅರ್ಥದಿಂದ ಸರಿದು ಹೋರಾಟ, ಪ್ರತಿರೋಧ, ಉಗ್ರ ಪ್ರತಿಕ್ರಿಯೆ ಎಂಬ ಅರ್ಥಗಳಿಗೆ ಸೀಮಿತವಾಗುತ್ತದೆ. ಹೀಗಾಗಿ ಶಿವನಿಷ್ಠೆಯ ಗಣಾಚಾರಿಗಳನ್ನು ಕ್ರಾಂತಿಯ ಕಾವಲುಗಾರರನ್ನಾಗಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಇವರ ಅರ್ಥದಲ್ಲಿ ಗಣಾಚಾರಿಯು ಶತ್ರು ಎಂದು ಗುರುತಿಸಿದವರ ವಿರುದ್ಧ ಸದಾ ಸಂಘರ್ಷಕ್ಕೆ ಸಜ್ಜಾಗಿರುವ ವ್ಯಕ್ತಿ ಎನಿಸಿಕೊಳ್ಳುತ್ತಾನೆ. ಈ ಪ್ರವೃತ್ತಿ ಪುಸ್ತಕಗಳನ್ನು, ಸ್ವಾಮಿಗಳನ್ನು, ಸಮಾವೇಶಗಳನ್ನು ಬ್ಯಾನ್ ಮಾಡಿಸುವಲ್ಲಿಗೆ ಬಂದು ನಿಲ್ಲುತ್ತದೆ। ಈ ವ್ಯಾಖ್ಯಾನಗಳಿಗೂ ಒಂದೇ ಒಂದು ವಚನದ ಸಾಕ್ಷಿ ಇಲ್ಲ. ಎಲ್ಲ ಊರಾನ್ವಯಗಳೇ.

ಕಮ್ಯೂನಿಷ್ಟರ ಜೊತೆ ಜೊತೆಗೆ ಗಣಾಚಾರವನ್ನು ಜಗತ್ತಿನ ಇತರ ಧಾರ್ಮಿಕ-ರಾಜಕೀಯ ಪರಿಕಲ್ಪನೆಗಳೊಂದಿಗೆ ಹೋಲಿಸುವ ಪ್ರಯತ್ನಗಳು ಕಾಣಿಸುತ್ತವೆ. ವಿಶೇಷವಾಗಿ ಕೆಲವು ಲೇಖಕರು, ಭಾಷಣಕಾರರು ಮತ್ತು ಚಳವಳಿ ವಲಯಗಳು ಗಣಾಚಾರವನ್ನು ಕೇವಲ ತತ್ವನಿಷ್ಠ ಭಕ್ತನಾಗಿ ಅಲ್ಲ, ಧರ್ಮಕ್ಕಾಗಿ ಹೋರಾಡುವ ಯೋಧನಾಗಿ ರೂಪಿಸಲು ಯತ್ನಿಸುತ್ತಿವೆ. ಈ ಪ್ರವೃತ್ತಿಯಲ್ಲಿ ಸೆಮಿಟಿಕ್ ಧರ್ಮಗಳಲ್ಲಿ ಕಂಡುಬರುವ ಕಲ್ಪನೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಲಾಗುತ್ತದೆ. ಅಂದರೆ, ತನ್ನ ಧರ್ಮದ ರಕ್ಷಣೆಗೆ ಸದಾ ಸಂಘರ್ಷಕ್ಕೆ ಸಜ್ಜಾಗಿರುವ, ವಿರೋಧಿಯನ್ನು ಶತ್ರುವೆಂದು ಗುರುತಿಸುವ, ಹೋರಾಟವನ್ನೇ ಧರ್ಮದ ಮುಖ್ಯ ಅಭಿವ್ಯಕ್ತಿಯೆಂದು ನೋಡುವ ರೂಪಕವನ್ನು ಗಣಾಚಾರದ ಮೇಲೆ ಅಂಟಿಸಲಾಗುತ್ತಿದೆ.

ಈ ಅಪಾರ್ಥಗಳೆಲ್ಲವೂ ವಚನಗಳ ವ್ಯಾಖ್ಯಾನವಲ್ಲ. ಈ ಅಪವ್ಯಾಖ್ಯಾನಗಳು ಅಧ್ಯಾತ್ಮವನ್ನು ಹೊರಗಿಟ್ಟ, ರಾಜಕೀಯ ಭಾಷೆಯ ರೂಪಕಗಳು ಮಾತ್ರ. ಲಿಂಗಾಯತ ತತ್ವದಲ್ಲಿ ಗಣಾಚಾರವೆಂದರೆ ಭಕ್ತಿಯ ಶಿಸ್ತಿನ ಆಚಾರ. ತತ್ವದ ಮೌಲ್ಯಗಳನ್ನು ಸಾತ್ವಿಕವಾಗಿ ಉಳಿಸುವುದು. ಈ ಅಪಾಯವನ್ನು ಅರಿಯದೇ ಹೋದರೆ ಗಣಾಚಾರದ ಅರ್ಥವೇ ತಲೆಕೆಳಗಾಗುತ್ತದೆ. ಹೋರಾಟಗಾರ ಎಂಬ ರಾಜಕೀಯ ರೂಪಕದಲ್ಲಿ ಮೊದಲಿಗೆ ಶತ್ರು ಬೇಕಾಗುತ್ತದೆ; ಸಂಘರ್ಷ ಬೇಕಾಗುತ್ತದೆ; ಗುರುತಿನ ಆಧಾರದ ವಿಭಜನೆ ಬೇಕಾಗುತ್ತದೆ. ಆದರೆ ವಚನಗಳ ಗಣಾಚಾರದಲ್ಲಿ ಬೇಕಾಗಿರುವುದು ನಿಷ್ಠೆ, ಸಂಯಮ, ಆತ್ಮಪರಿಷ್ಕಾರ ಮತ್ತು ಧರ್ಮಬದ್ಧತೆ. ಅಲ್ಲಿ ಪ್ರತಿಕ್ರಿಯೆ ಇದ್ದರೂ ಅದು ನಿಯಂತ್ರಿತ; ಅಲ್ಲಿ ವಿರೋಧ ಇದ್ದರೂ ಅದು ತತ್ವಾಧಾರಿತ; ಅಲ್ಲಿ ಧೈರ್ಯ ಇದ್ದರೂ ಅದು ಅಹಂಕಾರದ ಪ್ರದರ್ಶನವಲ್ಲ.

ಅದೇ ಕಾರಣಕ್ಕೆ ಗಣಾಚಾರವನ್ನು ಅರ್ಥೈಸುವಾಗ ಕೆಲವು ಮೂಲಭೂತ ವ್ಯತ್ಯಾಸಗಳನ್ನು ಮರೆಯಬಾರದು. ಯಾವ ಅಧಾರ್ಮಿಕ ಸಿದ್ಧಾಂತಗಳ ಕೆಂಪು ಕನ್ನಡಕದಿಂದ ನೋಡಬಾರದು. ವಿದೇಶಿ ರಿಲಿಜನ್ನುಗಳ ಹೋರಾಟದ ರೂಪಕಗಳಲ್ಲಿ ನೋಡದೇ, ಶಿವಶರಣರ ವಚನಗಳ ಬೆಳಕಿನಲ್ಲಿ ನೋಡಬೇಕು. ಆಗ ನಿಜವಾದ ಗಣಾಚಾರವೆಂದರೆ ಏನು ಎಂಬುದು ಸ್ಪಷ್ಟವಾಗುತ್ತದೆ.

(ಲೇಖಕರು ಸಂಸ್ಕೃತಿ ಚಿಂತಕರು)

ಪ್ರತಿಕ್ರಿಯೆ

ಕೆ.ವಿ. ಚಂದ್ರಮೌಳಿ, ಮೈಸೂರು

ದೀರ್ಘಕಾಲಿಕ ಆರ್ಥಿಕ ಬೆಳವಣಿಗೆಗೆ ಅಡ್ಡಿ

'ಗಳಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ದೊಡ್ಡ ಸವಾಲು!' ಎಂಬ ಶೀರ್ಷಿಕೆಯಡಿ ಪ್ರಕಟವಾದ ಲೇಖನವು ಇಂದಿನ ಚುನಾವಣಾ ರಾಜಕೀಯದ ದಿಕ್ಕು, ಅದರ ತಾತ್ಕಾಲಿಕ ಆಕರ್ಷಣೆ ಮತ್ತು ಆಡಳಿತದ ದೀರ್ಘಕಾಲಿಕ ಜವಾಬ್ದಾರಿಗಳ ನಡುವಿನ ಅಂತರವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿದೆ. ಲೇಖಕರು ವಿಷಯವನ್ನು ಕೇವಲ ಅಭಿಪ್ರಾಯ ಮಟ್ಟದಲ್ಲಿ ಮಾತ್ರವಲ್ಲದೆ, ಸಮಗ್ರ ಅಂಕಿಅಂಶಗಳು, ಇತಿಹಾಸದ ಪಾಠಗಳು ಮತ್ತು ಹಣಕಾಸು ನಿಯಂತ್ರಣದ ವಾಸ್ತವಿಕತೆಯೊಂದಿಗೆ ವಿಶ್ಲೇಷಿಸಿರುವುದು ನಿಜಕ್ಕೂ ಶ್ಲಾಘನೀಯ. ಇಂತಹ ವಿಚಾರಪೂರ್ಣ ವಿಶ್ಲೇಷಣೆಗಳು ಸಾರ್ವಜನಿಕ ಚರ್ಚೆಯನ್ನು ಹೆಚ್ಚು ಜವಾಬ್ದಾರಿಯುತ ದಿಕ್ಕಿನಲ್ಲಿ ನಡೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಲೇಖನದಲ್ಲಿ ಉಲ್ಲೇಖಿಸಿರುವಂತೆ, ತಮಿಳುನಾಡಿನಂತಹ ಆರ್ಥಿಕವಾಗಿ ಬಲಿಷ್ಠ ರಾಜ್ಯದಲ್ಲಿಯೇ 2026-27ರ ವೇಳೆಗೆ ಸಾಲದ ಪ್ರಮಾಣವು ₹10.7 ಲಕ್ಷ ಕೋಟಿಯನ್ನು ತಲುಪುವ ಸಾಧ್ಯತೆ ಇರುವುದರಿಂದ, ಚುನಾವಣಾ ಗ್ಯಾರಂಟಿಗಳ ವಿಸ್ತಾರವು ಹಣಕಾಸಿನ ಮೇಲೆ ಎಷ್ಟು ಭಾರೀ ಒತ್ತಡ ಉಂಟುಮಾಡಬಹುದು ಎಂಬುದು ಸ್ಪಷ್ಟವಾಗುತ್ತದೆ. ಈ ಭರವಸೆಗಳನ್ನು ಈಡೇರಿಸಲು ವರ್ಷಕ್ಕೆ ₹1.5-2 ಲಕ್ಷ ಕೋಟಿ ಹೆಚ್ಚುವರಿ ವೆಚ್ಚ ಅಗತ್ಯವಿರಬಹುದು ಎಂಬ ಅಂದಾಜು, ರಾಜ್ಯದ ಹಣಕಾಸು ಸಮತೋಲನವನ್ನು ಗಂಭೀರವಾಗಿ ಹದಗೆಡಿಸುವ ಸೂಚನೆ ನೀಡುತ್ತದೆ. ಈಗಾಗಲೇ ರಾಜ್ಯದ ಆದಾಯದ ಪ್ರಮುಖ ಭಾಗವು ಬಡ್ಡಿ ಪಾವತಿಗೆ ಮೀಸಲಾಗಿರುವ ಸಂದರ್ಭದಲ್ಲಿ, ಇಂತಹ ಯೋಜನೆಗಳನ್ನು ಮುಂದುವರಿಸುವುದು ಹಣಕಾಸು ಕೊರತೆಯನ್ನು ಹೆಚ್ಚಿಸುವುದರ ಜೊತೆಗೆ ಅಭಿವೃದ್ಧಿ ಹೂಡಿಕೆಗಳನ್ನು ಹಿಂಬಾಲಿಸುವ ಅಪಾಯವನ್ನೂ ಹೊಂದಿದೆ.

ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ನಿಯಮಗಳು (FRBM) ರಾಜ್ಯಗಳ ಸಾಲಮಿತಿ ಮತ್ತು ಹಣಕಾಸು ಕೊರತೆಯನ್ನು ನಿಯಂತ್ರಿಸುವುದರಿಂದ, ಈ ರೀತಿಯ ಭಾರೀ ವೆಚ್ಚಗಳನ್ನು ನಿರ್ಬಂಧವಿಲ್ಲದೆ ಜಾರಿಗೆ ತರುವುದು ಕಾನೂನುಬದ್ಧವಾಗಿ ಸಾಧ್ಯವಿಲ್ಲ. ಹೀಗಾಗಿ, ಸರ್ಕಾರಗಳು ಹೆಚ್ಚುವರಿ ಸಾಲ ಪಡೆಯಲು ಕೇಂದ್ರದ ಅನುಮತಿಗೆ ಅವಲಂಬಿಸಬೇಕಾಗುತ್ತದೆ ಅಥವಾ ಮೂಲಸೌಕರ್ಯ, ಕೈಗಾರಿಕೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ವೆಚ್ಚವನ್ನು ಕಡಿಮೆ ಮಾಡುವಂತಹ ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಇದರ ಪರಿಣಾಮವಾಗಿ ದೀರ್ಘಕಾಲಿಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಧಕ್ಕೆಯಾಗುವ ಸಾಧ್ಯತೆ ಹೆಚ್ಚುತ್ತದೆ.

ಈ ಹಿನ್ನೆಲೆಯಲ್ಲಿ governance is the ultimate currency ಎಂಬ ಮಾತು ಕೇರಳದಲ್ಲಿ ನೈಜ ಅರ್ಥವನ್ನು ಪಡೆದಿದೆ. ಅಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಶಿಕ್ಷಣದ ವ್ಯಾಪ್ತಿ ಮತ್ತು ವಿಕೇಂದ್ರೀಕೃತ ಆಡಳಿತದ ಬಲದಿಂದ ಜನರು ಆಡಳಿತದ ಗುಣಮಟ್ಟವನ್ನು ಪ್ರಮುಖವಾಗಿ ಪರಿಗಣಿಸುತ್ತಾರೆ. ಆದರೆ ಇತರ ರಾಜ್ಯಗಳಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ, ಮತದಾರರ ನಿರ್ಧಾರಗಳಲ್ಲಿ ಭಾವನಾತ್ಮಕ ಸಂಬಂಧ-ಸಿನಿಮಾ ವ್ಯಕ್ತಿತ್ವದ ಆಕರ್ಷಣೆ, ನಾಯಕನ ವ್ಯಕ್ತಿಚಿತ್ರ-ಮುಖ್ಯ ಪಾತ್ರವಹಿಸುವುದು ಗಮನಾರ್ಹ. ಈ ರೀತಿಯ ಮನೋಭಾವವು ಕೆಲವೊಮ್ಮೆ ಆಡಳಿತದ ಸಾಮರ್ಥ್ಯ ಮತ್ತು ನೀತಿ ಸ್ಪಷ್ಟತೆಯಿಗಿಂತ ವ್ಯಕ್ತಿಪೂಜೆಗೆ ಹೆಚ್ಚಿನ ಮಹತ್ವ ನೀಡುವ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಇದು ಪ್ರಜಾಪ್ರಭುತ್ವದ ಗುಣಮಟ್ಟವನ್ನು ಕುಂದಿಸುವ ಅಪಾಯವನ್ನು ಒಳಗೊಂಡಿದೆ.

ವಿಜಯ್ ಅವರು ಆಡಳಿತದ ಹೊಣೆ ಹೊತ್ತ ನಂತರ ಎದುರಿಸಬೇಕಾಗಿರುವ ಸವಾಲುಗಳು ಬಹುಮಟ್ಟಿಗೆ ಗಂಭೀರವಾಗಿವೆ. ಮೊದಲನೆಯದಾಗಿ, ಚುನಾವಣಾ ಭರವಸೆಗಳನ್ನು ಈಡೇರಿಸಲು ಅಗತ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸುವುದು ದೊಡ್ಡ ಪ್ರಶ್ನೆಯಾಗಲಿದೆ. ಎರಡನೆಯದಾಗಿ, ಬಲಿಷ್ಠ ರಾಜಕೀಯ ಪ್ರತಿಸ್ಪರ್ಧಿಗಳ ನಡುವೆ ಆಡಳಿತದ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಕಷ್ಟಕರ. ಮೂರನೆಯದಾಗಿ, ಕೇಂದ್ರ-ರಾಜ್ಯ ಸಂಬಂಧಗಳು ಮತ್ತು ಅನುದಾನಗಳ ಮೇಲಿನ ಅವಲಂಬನೆ ಹಣಕಾಸು ನಿರ್ವಹಣೆಯನ್ನು ಸಂಕೀರ್ಣಗೊಳಿಸುತ್ತದೆ. ನಾಲ್ಕನೆಯದಾಗಿ, ಉಚಿತ ಯೋಜನೆಗಳ ಹೆಚ್ಚುವರಿ ಭಾರದಿಂದ ಉತ್ಪಾದಕ ಹೂಡಿಕೆಗಳು ಕುಗ್ಗಿ ಉದ್ಯೋಗ ಸೃಷ್ಟಿ ಹಿನ್ನಡೆಯಾಗುವ ಸಾಧ್ಯತೆ ಇದೆ. ಐದನೆಯದಾಗಿ, ಭ್ರಷ್ಟಾಚಾರ ಮುಕ್ತ ಆಡಳಿತದ ಭರವಸೆಯನ್ನು ನೈಜವಾಗಿ ಜಾರಿಗೊಳಿಸಲು ಬಲಿಷ್ಠ ಸಂಸ್ಥೆಗಳು, ಪಾರದರ್ಶಕ ವ್ಯವಸ್ಥೆಗಳು ಮತ್ತು ತಜ್ಞರ ತಂಡ ಅಗತ್ಯವಾಗುತ್ತದೆ.

ಇನ್ನೊಂದು ಮಹತ್ವದ ಅಂಶವೆಂದರೆ, ಇಂದಿನ ಮತದಾರರು ತಕ್ಷಣದ ಲಾಭಗಳತ್ತ ಹೆಚ್ಚು ಗಮನ ಹರಿಸುತ್ತಿರುವ ಸಂದರ್ಭದಲ್ಲಿ, ದೀರ್ಘಕಾಲಿಕ ಅಭಿವೃದ್ಧಿ ಮತ್ತು ಆರ್ಥಿಕ ಶಿಸ್ತಿನ ಮಹತ್ವವನ್ನು ಅರಿವು ಮಾಡಿಸುವುದು ರಾಜಕೀಯ ನಾಯಕತ್ವದ ದೊಡ್ಡ ಜವಾಬ್ದಾರಿಯಾಗಿದೆ. ಇಲ್ಲದಿದ್ದರೆ, ಗ್ಯಾರಂಟಿಗಳ ಆಕರ್ಷಣೆ ಭವಿಷ್ಯದಲ್ಲಿ ಆರ್ಥಿಕ ಸಂಕಷ್ಟಕ್ಕೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ.

ಒಟ್ಟಿನಲ್ಲಿ, ಈ ಲೇಖನವು ಜನಪ್ರಿಯ ರಾಜಕೀಯದ ಮಿತಿಗಳನ್ನು, ಹಣಕಾಸು ಶಿಸ್ತು ಮತ್ತು ಜವಾಬ್ದಾರಿಯುತ ಆಡಳಿತದ ಅಗತ್ಯತೆಯನ್ನು ಸ್ಪಷ್ಟವಾಗಿ ಮನದಟ್ಟುಗೊಳಿಸುತ್ತದೆ. ಸಾರ್ವಜನಿಕ ಚರ್ಚೆಗೆ ದಿಕ್ಕು ತೋರಿಸುವ ಇಂತಹ ಲೇಖನಗಳನ್ನು ಪ್ರಕಟಿಸುತ್ತಿರುವ ನಿಮ್ಮ ಪತ್ರಿಕೆಗೆ ಹಾಗೂ ಲೇಖಕರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:68, Issue: 295

ಸಮಾಚಾರ ಸಣ್ಣದಲ್ಲ

ದೇಶ ಎಂದರೆ ದೇವರು ಅಲ್ಲ: ಸಂಸದ ಒವೈಸಿ

ಹೈದರಾಬಾದ್: ವಂದೇಮಾತರಂ ಗೀತೆಗೆ ರಾಷ್ಟ್ರೀಯ ಗೀತೆ ಸ್ಥಾನಮಾನ ನೀಡಿ, ಶಾಸನಬದ್ಧ ರಕ್ಷಣೆ ಒದಗಿಸಿರುವ ಕೇಂದ್ರ ಸಚಿವ ಸಂಪುಟದ ನಿರ್ಧಾರವನ್ನು 'ಆಲ್ ಇಂಡಿಯ ಮಜ್ಲಿಸ್ ಎ ಇತ್ತೆಹಾದುಲ್ ಮುಸ್ಲಿಮೀನ್'(ಎಐಎಂಐಎಂ) ಪಕ್ಷದ ಮುಖಂಡ, ಲೋಕಸಭೆ ಸದಸ್ಯ ಅಸಾದುದ್ದೀನ್ ಒವೈಸಿ ತೀವ್ರವಾಗಿ ವಿರೋಧಿಸಿದ್ದಾರೆ.

ವಂದೇಮಾತರಂ ಗೀತೆ ದೇವತೆಯನ್ನು ಸ್ತುತಿ ಮಾಡುವ ಗೀತೆಯಾಗಿದೆ. ದೇಶ ಎಂದರೆ ದೇವತೆ, ದೇವರು ಅಲ್ಲ. ದೇವರ ಹೆಸರಿನಲ್ಲೇನೂ ದೇಶದ ಆಡಳಿತ ನಡೆಯುವುದಿಲ್ಲ ಎಂದು ಒವೈಸಿ ಕಿಡಿಕಾರಿದ್ದಾರೆ. ಜನಗಣಮನ ರಾಷ್ಟ್ರ ಗೀತೆಗೆ ವಂದೇಮಾತರಂ ಸಮಾನವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಂವಿಧಾನದ ಪೀಠಿಕೆಯು 'ಭಾರತದ ಪ್ರಜೆಗಳಾದ ನಾವು' ಎಂದೇ ಆರಂಭವಾಗುತ್ತದೆ. ದೇವರ-ದೇವತೆಯ ಉಲ್ಲೇಖ ಅಲ್ಲಿಲ್ಲ ಎಂದು ಗಮನ ಸೆಳೆದಿದ್ದಾರೆ.

ಟಿಸಿಎಸ್ ಮತಾಂತರ: ನಿದಾಖಾನ್ ಬಂಧನ

ನಾಸಿಕ್: ಮಹಾರಾಷ್ಟ್ರದ ನಾಸಿಕ್ ನಗರದಲ್ಲಿನ ಟಿಸಿಎಸ್ ಕಾಲ್‌ಸೆಂಟರ್‌ನಲ್ಲಿ ಹಿಂದೂ ಯುವತಿಯರಿಗೆ ಲೈಂಗಿಕ ಕಿರುಕುಳ ಮತ್ತು ಮತಾಂತರಕ್ಕೆ ಯತ್ನಿಸಿದ್ದ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್‌ಳನ್ನು ಛತ್ರಪತಿ ಸಂಭಾಜಿನಗರದಲ್ಲಿ ರಾಜ್ಯ ಪೊಲೀಸರು ಗುರುವಾರ ಬಂಧಿಸಿದ್ದಾರೆ. ನಂತರ ಆರೋಪಿಯನ್ನು ನ್ಯಾಯಾಧೀಶರೆದುರು ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ನಾಸಿಕ್ ನಗರಕ್ಕೆ ಕರೆದೊಯ್ಯಲಾಗಿದೆ.

ಟಿಸಿಎಸ್‌ನ ಉದ್ಯೋಗಿಗಳ ವಿರುದ್ಧ ದಾಖಲಾಗಿರುವ ಹಲವು ಎಫ್‌ಐಆರ್‌ಗಳಲ್ಲಿ ಸಂಸ್ಥೆಯ ಎಚ್‌ಆರ್ ಮುಖ್ಯಸ್ಥೆ ಸೇರಿದಂತೆ 7 ಜನರನ್ನು ಬಂಧಿಸಲಾಗಿದ್ದು, ನಿದಾ ಖಾನ್ ತಲೆಮರೆಸಿಕೊಂಡಿದ್ದಳು. 4 ದಿನಗಳಿಂದ ಛತ್ರಪತಿ ಸಂಭಾಜಿನಗರದ ನಾರೇಗಾಂವ್ ಪ್ರದೇಶದ ಕೈಸರ್ ಕಾಲೋನಿಯಲ್ಲಿರುವ ಫ್ಲಾಟ್‌ನಲ್ಲಿ ತನ್ನ ಪೋಷಕರು, ಸಹೋದರ ಮತ್ತು ಚಿಕ್ಕಮ್ಮನೊಂದಿಗೆ ತಂಗಿದ್ದ ನಿದಾಖಾನ್‌ಳನ್ನು ನಾಸಿಕ್ ಎಸ್‌ಐಟಿ ಮತ್ತು ಛತ್ರಪತಿ ಸಂಭಾಜಿನಗರ ಪೊಲೀಸ್ ಕಮಿಷನರೇಟ್, ರಾಜ್ಯ ಅಪರಾಧ ವಿಭಾಗದ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದರು. ಈ ಫ್ಲಾಟ್ ಮೇಲೆ 2 ದಿನದಿಂದ ಪೊಲೀಸರು ನಿಗಾ ಇಟ್ಟಿದ್ದರು.

ತೆಲಂಗಾಣ: 800 ವರ್ಷ ಶಿವಮಂದಿರ ನೆಲಸಮ

ವಾರಂಗಲ್: ತೆಲಂಗಾಣ ರಾಜ್ಯದ ವಾರಂಗಲ್ ಜಿಲ್ಲೆಯ ಖಾನಾಪುರ ಮಂಡಲದ ಅಶೋಕ್ ನಗರದಲ್ಲಿದ್ದ 800 ವರ್ಷಗಳಷ್ಟು ಹಳೆಯ ಶಿವ ದೇವಾಲಯವನ್ನು ಸರಕಾರಿ ಶಾಲೆ ನಿರ್ಮಾಣಕ್ಕಾಗಿ ನೆಲಸಮ ಮಾಡಲಾಗಿದೆ. ಕಾಕತೀಯ ರಾಜವಂಶದ ದೊರೆ ಗಣಪತಿ ದೇವ ಅವರ ಕಾಲದ (ಕ್ರಿಸ್ತಶಕ 1231) ಬೃಹತ್ ಶಿವ ಮಂದಿರ ಬೃಹತ್ ಶಿಲಾ ಸ್ತಂಭಗಳು, ಸುಂದರ ಕೆತ್ತನೆಗಳನ್ನು ಒಳಗೊಂಡಿದೆ.

ದೇಗುಲವನ್ನು ಜೆಸಿಬಿ ಮತ್ತು ಬುಲ್ಡೋಜರ್‌ಗಳನ್ನು ಬಳಸಿಕೊಂಡು ಗುರುವಾರ ನೆಲಸಮ ಮಾಡಲಾಗಿದೆ. ಸ್ಥಳದಲ್ಲಿ ತೆಲುಗು ಶಾಸನವೂ ಲಭ್ಯವಾಗಿದೆ. ಪುರಾತನ ಶಿವ ದೇಗುಲವನ್ನು ನೆಲಸಮ ಮಾಡಿರುವುದಕ್ಕೆ ಮಾನವ ಹಕ್ಕು ಹೋರಾಟಗಾರ, ವಕೀಲ ರಾಮರಾವ್ ಇಮ್ಮನೇನಿ ಎಂಬವರು ರಾಷ್ಟ್ರೀಯ ಸ್ಮಾರಕ ಸಂರಕ್ಷಣಾ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದಾರೆ. ಕೇಂದ್ರ ಸಂಸ್ಕೃತಿ ಸಚಿವಾಲಯದಡಿ ಬರುವ ಪುರಾತತ್ವ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದೆ. ದೇಗುಲ ನೆಲಸಮಕ್ಕೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ಧ ತೆಲಂಗಾಣ ಹೆರಿಟೇಜ್ ಕಾಯಿದೆ ಕಲಂ 30ರಡಿ ಕಾನೂನು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ರಾಜ್ಯಸಭೆ: ಎಡಿಎಂಕೆ ಷಣ್ಮುಗಂ ರಾಜೀನಾಮೆ

ಚೆನ್ನೈ: ಇತ್ತೀಚೆಗೆ ಕೊನೆಗೊಂಡ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಎಐಎಡಿಎಂಕೆ ಪಕ್ಷದ ರಾಜ್ಯಸಭಾ ಸದಸ್ಯ ಷಣ್ಮುಗಂ ಅವರು, ಮೈಲಂ ವಿಧಾನಸಭಾ ಕ್ಷೇತ್ರದಲ್ಲಿ ಜಯಗಳಿಸಿದ್ದು, ರಾಜ್ಯಸಭಾ ಸದಸ್ಯತ್ವಕ್ಕೆ ಗುರುವಾರ ರಾಜೀನಾಮೆ ಸಲ್ಲಿಸಿದ್ದಾರೆ. ಇದರಿಂದಾಗಿ ರಾಜ್ಯಸಭೆಯಲ್ಲಿನ 1 ಸ್ಥಾನ ತೆರವಾದಂತಾಗಿದೆ. 2022ರಂದು ರಾಜ್ಯಸಭೆಗೆ ಆಯ್ಕೆಯಾಗಿದ್ದ ವಣ್ಣಿಯಾರ್ ಸಮುದಾಯದ ಪ್ರಭಾವಿ ನಾಯಕ ಷಣ್ಮುಗಂ ಅವರ ಅವಧಿ ಇನ್ನೂ 2 ವರ್ಷಗಳವರೆಗಿತ್ತು.

{ ಕೋವೈ ಸತ್ಯನ್ } ಎಐಎಡಿಎಂಕೆ ವಕ್ತಾರ

ಟಿವಿಕೆ ಪಕ್ಷ(108)ಕ್ಕೆ ಸ್ಪಷ್ಟ ಬಹುಮತವಿಲ್ಲ. ಬೆಂಬಲಿಗ ಶಾಸಕರ ಸಂಖ್ಯೆ ಕೇಳುವುದು ರಾಜ್ಯಪಾಲರ ಕರ್ತವ್ಯ. ಟಿವಿಕೆಯ ಸರಕಾರ ರಚನೆ ಕನಸನ್ನು 5 ಶಾಸಕರ ಬೆಂಬಲದಿಂದ ನನಾಗಿಸುವುದು ಕಾಂಗ್ರೆಸ್‌ಗೆ ಸಾಧ್ಯವಿಲ್ಲ. ಟಿವಿಕೆ ಜತೆ ಸರಕಾರ ರಚನೆಯ ದೋಣಿ ಏರಿರುವ ಕಾಂಗ್ರೆಸ್ ದೋಣಿಗೆ ದುರಾಸೆಯ ತೂತು ಮಾಡಿದೆ. ಅದು ದೋಣಿ ಆದಷ್ಟೂ ಬೇಗ ಮುಳುಗಲು ನೆರವಾಗುತ್ತದೆ ಅಷ್ಟೆ.

ಕೇಂದ್ರದ ಅರ್ಜಿಗೆ ಸುಪ್ರೀಂ ಕೋರ್ಟ್ ಸಮ್ಮತಿ | ಕರ್ನಾಟಕ-ತ.ನಾಡು ನೀರು ಹಂಚಿಕೆ ವಿವಾದ | ಪೆನ್ನಾರ್ ಮೂಲ ನಂದಿ ಶ್ರೇಣಿ ಚೆನ್ನಕೇಶವ ಬೆಟ್ಟ

ಪೆನ್ನಾರ್ ನದಿ ನ್ಯಾಯಮಂಡಳಿ ರಚನೆಗೆ 6 ತಿಂಗಳ ಕಾಲಾವಕಾಶ

ದೆಹಲಿ: ಪೆನ್ನಾರ್(ಉತ್ತರ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ-ತಮಿಳುನಾಡು ನಡುವಿನ ವಿವಾದವನ್ನು ಸಮರ್ಪಕವಾಗಿ ಪರಿಹರಿಸಲು ಸಾಧ್ಯವಾಗುವಂತೆ ಅಂತರರಾಜ್ಯ ಜಲ ನ್ಯಾಯಮಂಡಳಿ ರಚನೆಗೆ ಕೇಂದ್ರ ಸರಕಾರಕ್ಕೆ ಆರು ತಿಂಗಳ ಸಮಯಾವಕಾಶ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ನ್ಯಾಯಮಂಡಳಿ ರಚಿಸಲು ಆರು ತಿಂಗಳ ಕಾಲಾವಕಾಶ ಕೋರಿ ಕೇಂದ್ರ ಸರಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ನ್ಯಾ. ವಿಕ್ರಂನಾಥ್ ಮತ್ತು ನ್ಯಾ.ಸಂದೀಪ್ ಮೆಹ್ತಾ ಅವರ ದ್ವಿಸದಸ್ಯ ಪೀಠ ಪುರಸ್ಕರಿಸಿದೆ. ಈ ವಿಷಯದಲ್ಲಿ ಸರಕಾರ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸವಿದೆ ಎಂದು ಪೀಠ ಹೇಳಿದೆ.

ನ್ಯಾಯಮಂಡಳಿ ರಚನೆಗೆ ಶಾಸನಬದ್ಧ ಮತ್ತು ಕಾರ್ಯವಿಧಾನದ ಅವಶ್ಯಕತೆಗಳ ಪೂರ್ಣಗೊಳಿಸಲು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ ಎಂಬುದು ಮನವರಿಕೆ ಆಗಿದೆ. ಅರ್ಜಿದಾರರು ನ್ಯಾಯಾಲಯದ ನಿರ್ದೇಶನಗಳನ್ನು ಆದಷ್ಟು ಬೇಗ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ ಎಂದು ಪೀಠ ಹೇಳಿದೆ.

ಅಂತರ-ಸಚಿವಾಲಯ ಸಮಾಲೋಚನೆಗಳು ಪೂರ್ಣಗೊಂಡಿವೆ. ವಿವಿಧ ಸಚಿವಾಲಯಗಳ ಅಭಿಪ್ರಾಯಗಳನ್ನು ಒಟ್ಟು ಮಾಡಿದ ನಂತರ ಕರಡು ಸಂಪುಟ ಟಿಪ್ಪಣಿಯನ್ನು ಜಲಶಕ್ತಿ ಖಾತೆ ಸಚಿವರು ಅನುಮೋದಿಸಿದ್ದಾರೆ. ಬಳಿಕ ಕರಡು ಸಂಪುಟ ಟಿಪ್ಪಣಿಯನ್ನು ಕೇಂದ್ರ ಸಚಿವ ಸಂಪುಟದ ಪರಿಗಣನೆಗಾಗಿ ಸಚಿವಾಲಯಕ್ಕೆ ಕಳುಹಿಸಲಾಗಿದೆ.



ನದಿಯ ಹರಿವಿನ ನಕ್ಷೆ.

ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಅಗತ್ಯ ಕ್ರಮಗಳನ್ನು ಆರಂಭಿಸಲಾಗಿದೆ ಎಂದು ಕೇಂದ್ರದ ಜಲಶಕ್ತಿ ಸಚಿವಾಲಯ ತನ್ನ ಅರ್ಜಿಯಲ್ಲಿ ಹೇಳಿಕೊಂಡಿದೆ.

ಸಚಿವ ಸಂಪುಟದ ಅನುಮೋದನೆ ನಂತರ ಅಂತಾರಾಜ್ಯ ನದಿ ನೀರು ವಿವಾದ ಕಾಯಿದೆ-1956ರ ಪ್ರಕಾರ ಪೆನ್ನಾರ್ ನದಿ ವಿವಾದ ನ್ಯಾಯಮಂಡಳಿಯ ಸದಸ್ಯರ ಹೆಸರನ್ನು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರಿಗೆ ಕಳುಹಿಸಲಾಗುತ್ತದೆ. ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರನ್ನು ಸಿಜೆಐ ನಾಮನಿರ್ದೇಶನ ಮಾಡಿದ ನಂತರ ಕಾನೂನು ವ್ಯವಹಾರಗಳ ಇಲಾಖೆ ಕರಡು ಅಧಿಸೂಚನೆ ಸಿದ್ಧಪಡಿಸುತ್ತದೆ. ನಂತರ ನ್ಯಾಯಮಂಡಳಿ ರಚನೆ ಅಧಿಸೂಚನೆ ಹೊರಡಿಲಾಗುತ್ತದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಕರ್ನಾಟಕ-ತ.ನಾಡು ತಕರಾರು

ಉತ್ತರ ಪಿನಾಕಿನಿ(ಪೆನ್ನಾರ್) ನದಿಯ ಮೂಲ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ನಂದಿ ಬೆಟ್ಟ ಶ್ರೇಣಿಯಲ್ಲಿ ಬರುವ ಚೆನ್ನಕೇಶವ ಬೆಟ್ಟದಲ್ಲಿ ನದಿಯ ಜನವಾಗುತ್ತದೆ. ನದಿಯ ಆರಂಭದ ಹಾಗೂ ಮೇಲಿನ ಭಾಗ ಕರ್ನಾಟಕದಲ್ಲಿ ಮತ್ತು ನದಿಯ ಕೆಳಭಾಗ ತಮಿಳುನಾಡಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರಿಕೊಳ್ಳುತ್ತದೆ.

ಮುಖ್ಯ ಪೆನ್ನಾರ್ ನದಿ ಮತ್ತು ಅದರ ಉಪನದಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಕರ್ನಾಟಕ ರಾಜ್ಯ ಕೈಗೊಂಡಿರುವ ವಿವಿಧ ಯೋಜನೆಗಳು ತಮಿಳುನಾಡು ರಾಜ್ಯ ಮತ್ತು ಜನರ ಹಿತಾಸಕ್ತಿಗಳ ಮೇಲೆ ಋಣಾತ್ಮಕವಾದ ಪರಿಣಾಮ ಬೀರಿದೆ ಎಂದು ದೂರಿರುವ ತಮಿಳುನಾಡು ಸರಕಾರ, 1956ರ ಕಾಯಿದೆಯ ಕಲಂ 3ರಡಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ಕರ್ನಾಟಕ ರಾಜ್ಯ ಈ ವಾದವನ್ನು ವಿರೋಧಿಸಿದೆ. ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಲಭ್ಯವಾಗುವ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳಲು ಯೋಜಿಸಲಾಗಿದೆ. ಉಳಿದ 2 ಟಿಎಂಸಿಗೂ ಹೆಚ್ಚಿನ ನೀರನ್ನು ತಮಿಳುನಾಡಿಗೆ ಬಿಡಲಾಗಿದೆ. ತಮಿಳುನಾಡಿನ ಅವಶ್ಯಕತೆಗಳನ್ನು ಪೂರೈಸಲು ಇಷ್ಟು ನೀರು ಸಾಕಾಗುತ್ತದೆ ಎಂಬುದು ಕರ್ನಾಟಕದ ವಾದವಾಗಿದೆ. ಕರ್ನಾಟಕ ಸರಕಾರದ ಪರ ಹಾಜರಾಗಿದ್ದ ವಕೀಲ ನಿಶಾಂತ್ ಪಾಟೀಲ್, ವಾಸ್ತವವಾಗಿ, ಇದೊಂದು ಸಣ್ಣ ವಿಷಯ. ತಮಿಳುನಾಡು ವೃಥಾ ದೊಡ್ಡದಾಗಿಸುತ್ತಿದೆ ಎಂದು ವಾದ ಮಂಡಿಸಿದರು.

ಚಂದ್ರನಾಥ್ ರಥ್ ಹತ್ಯೆ: ಬಿಹಾರ ಹಂತಕರಿಗೆ 40 ಲಕ್ಷ ರುಪಾಯಿ ಸುಪಾರಿ

ಶಾರ್ಪ್ ಶೂಟರ್ ವಿಮಾನದಲ್ಲಿ ಬಾಂಗ್ಲಾಗೆ ಪರಾರಿ

ಚಂದ್ರನಾಥ ರಥ್ ಹತ್ಯೆಯಾದ ಸ್ಥಳದಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿರುವ ಎಸ್‌ಐಟಿ ತಂಡ.

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದ ಬಿಜೆಪಿ ನಾಯಕ, ಭಾವಿ ಮುಖ್ಯಮಂತ್ರಿ ಎಂದೇ ಬಿಂಬಿತವಾಗಿರುವ ನೂತನ ಶಾಸಕ ಸುವೇಂದು ಅಧಿಕಾರಿ ಅವರ ಪರಮಾಪ್ತ ರಾಜಕೀಯ ತಂತ್ರಜ್ಞ ಚಂದ್ರನಾಥ್ ರಥ್ ಹತ್ಯೆಯ ತನಿಖೆಯನ್ನು ವಿಶೇಷ ತನಿಖಾ ತಂಡ(ಎಸ್‌ಐಟಿ) ಚುರುಕುಗೊಳಿಸಿದೆ. ರಥ್ ಅವರ ಹತ್ಯೆಗೆ 40 ಲಕ್ಷ ರು.ಗಳಿಗೆ ಸುಪಾರಿ ನೀಡಿರುವುದು ಹಾಗೂ ಹತ್ಯೆಯಲ್ಲಿ ಬಿಹಾರದ ಶಾರ್ಪ್ ಶೂಟರ್‌ಗಳ ಕೈವಾಡವಿರುವುದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ.

ಚಂದ್ರನಾಥ್ ರಥ್ ಹತ್ಯೆಯನ್ನು ಬಹಳ ಯೋಜಿತ ರೀತಿಯಲ್ಲಿ ನಡೆಸಲು 40 ಲಕ್ಷ ರು.ಗಳಿಗೆ ಸುಪಾರಿ ನೀಡಲಾಗಿದೆ. ರಥ್ ಅವರನ್ನು ಗುಂಡಿಕ್ಕಿ ಕೊಲ್ಲಲೆಂದೇ ಬಿಹಾರದಿಂದ ಇಬ್ಬರು ಶಾರ್ಪ್ ಶೂಟರ್‌ಗಳು ಬಂದಿದ್ದರು. ಚಂದ್ರನಾಥ್ ರಥ್ ಅವರ ಸಂಚರಿಸುವ ಮಾರ್ಗ, ಸಂಚಾರದ ಸಮಯ ಅರಿಯಲು ಹಂತಕರು 5 ದಿನಗಳಿಂದ ನಿಗಾ ಇರಿಸಿದ್ದರು ಎಂಬುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೇ 5ರ ಬುಧವಾರ ರಾತ್ರಿ 10 ಗಂಟೆಯಲ್ಲಿ ಚಂದ್ರನಾಥ್ ಅವರು ಜೆಸೋರ್ ರಸ್ತೆ ಮೂಲಕ ಮನೆಗೆ ಮರಳುತ್ತಿದ್ದಾಗ ಮಳೆ ಬಿದ್ದಿದ್ದರಿಂದ ರಸ್ತೆಯಲ್ಲಿ ನೀರು ನಿಂತಿತ್ತು. ಹಾಗಾಗಿ ಅವರ ಕಾರಿನ ಚಾಲಕ ವೇಗ ತಗ್ಗಿಸಿದ್ದ. ಆಗಲೇ ಒಂದು ಬಿಳಿ ಬಣ್ಣದ ಸ್ಕಾರ್ಪಿಯೊ ಕಾರು ರಸ್ತೆಗೆ ಅಡ್ಡಲಾಗಿ ಬಂದು ನಿಂತಿದೆ. ಅಷ್ಟರಲ್ಲೇ 2 ಮೋಟಾರ್ ಬೈಕ್‌ಗಳಲ್ಲಿ ಬಂದ 4 ಮಂದಿ ರಥ್ ಅವರ ಕಾರನ್ನು ಸಮೀಪಿಸಿದರು. ಅವರಲ್ಲಿಬ್ಬರು ಕಾರಿನ ಮುಂಬದಿಯ ಎರಡೂ ಕಿಟಕಿಗಳ ಬಳಿ ಬಂದು ಸಮೀಪದಿಂದ ಗುಂಡಿನ ದಾಳಿ ನಡೆಸಿ ಚಂದ್ರನಾಥರನ್ನು ಕೊಂದಿದ್ದಾರೆ. ಚಾಲಕ ಬುದ್ದದೇವ್ ಬೇರಾ ಅವರಿಗೂ ಗುಂಡೇಟು ಬಿದ್ದಿದೆ. ಗುಂಡಿಕ್ಕಿದ ಬಳಿಕ ಹಂತಕರು ನಕಲಿ ಐಡಿ ಕಾರ್ಡ್ ಬಳಸಿಕೊಂಡು ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ವಿಮಾನವೇರಿ ಬಾಂಗ್ಲಾದೇಶಕ್ಕೆ ಹಾರಿ ಹೋಗಿರಬಹುದು ಎಂದು ಶಂಕಿಸಲಾಗಿದೆ.

ಪ್ರಸ್ತುತ ಸಿಐಡಿ ಮತ್ತು ವಿಶೇಷ ತನಿಖಾ ತಂಡದ(ಎಸ್‌ಐಟಿ) ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸ್ಥಳದಲ್ಲಿದ್ದ ರಕ್ತದ ಮಾದರಿ, ವಾಹನಗಳ ಚಕ್ರದ ಗುರುತು ಮತ್ತಿತರ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ.

ಕಾರಿನಲ್ಲಿ 3ನೇ ವ್ಯಕ್ತಿ

ಹಂತಕರ ತಂಡ ಸ್ಕಾರ್ಪಿಯೋ ಕಾರಿನ ಮುಂಬದಿ ಆಸನದಲ್ಲಿದ್ದ ಚಂದ್ರನಾಥ ರಥ್ ಮತ್ತು ಚಾಲಕ ಬುದ್ಧದೇವ್ ಬೇರಾ ಅವರತ್ತ ಗುಂಡಿನ ದಾಳಿ ನಡೆಸಿದಾಗ, ಅದೇ ಕಾರಿನಲ್ಲಿ 3ನೇ ವ್ಯಕ್ತಿಯೊಬ್ಬನಿದ್ದ. ಆತ ಹಿಂಬದಿ ಆಸನದಲ್ಲಿದ್ದ. ಆತನ ಹೆಸರು ಮಿಂಟು. ಹಂತಕರು ರಥ್ ಅವರತ್ತ ಗುಂಡು ಹಾರಿಸುತ್ತಲೇ ಎರಡೂ ಸೇಟಿನ ಮಧ್ಯ ಕಾಲಿಡುವ ಜಾಗದಲ್ಲಿ ಅಡಗಿಕೊಂಡ. ಹಾಗಾಗಿ ಆತ ಯಾವುದೇ ಅಪಾಯವಿಲ್ಲದೇ ಪಾರಾಗಿದ್ದಾನೆ. ಸದ್ಯ ಮಿಂಟುವನ್ನು ಎಸ್‌ಐಟಿ ಅಧಿಕಾರಿಗಳ ತಂಡ ಪ್ರಶ್ನೆ ಮಾಡಿ ಮಾಹಿತಿ ಸಂಗ್ರಹಿಸಿದೆ ಎಂದು ತಿಳಿದುಬಂದಿದೆ.

ಶಾರ್ಪ್‌ಶೂಟರ್‌ಗೆ ಸ್ಥಳೀಯರ ನೆರವು

ಸ್ಥಳೀಯ ಕ್ರಿಮಿನಲ್ ಒಬ್ಬ ಬಿಹಾರದ ಶಾರ್ಪ್‌ಶೂಟರ್‌ಗಳಿಗೆ ವಸತಿ ಮತ್ತು ವಾಹನ ವ್ಯವಸ್ಥೆ ಮಾಡಿ ಕೊಟ್ಟಿದ್ದ. ಹಂತಕರಿಗೆ ನೀಡಿದ ಬೈಕ್ ಬಿಧಾನ್ ನಗರದ ಹಳೆಯ ವಾಹನಗಳ ಮಾರಾಟ ಮಳಿಗೆಯಿಂದ ಕಳವು ಮಾಡಿದ್ದಾಗಿದೆ. ಅದರ ಇಂಜಿನ್ ಮತ್ತು ಚಾಸಿ ಸಂಖ್ಯೆಯನ್ನು ಉಜ್ಜಿ ಅಳಿಸಲಾಗಿದೆ, ಡಬ್ಲ್ಯುಬಿ 44 - ಜೆ 1990 ಸಂಖ್ಯೆಯ ನಕಲಿ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ಹಂತಕರ ತಂಡ ಒಟ್ಟು ಒಂದು ಸಿಲ್ವರ್ ಬಣ್ಣದ ಕಾರು, 2 ಮೋಟಾರ್ ಬೈಕ್‌ಗಳನ್ನು ಬಳಸಿ ಕೊಂಡಿದೆ. ನಾಲ್ಕೂ ವಾಹನಗಳು ಕಳವು ಮಾಡಿದವು, ನಕಲಿ ನಂಬರ್ ಪ್ಲೇಟ್ ಹೊಂದಿವೆ ಎಂಬುದು ದೃಢಪಟ್ಟಿದೆ. ಕಾರು ಮತ್ತು 1 ಬೈಕ್ ಕೃತ್ಯ ನಡೆದ ಸ್ಥಳದಿಂದ ಹಲವು ಕಿಮೀಗಳಾಚೆ ಅನಾಥವಾಗಿ ನಿಂತಿದ್ದು, ಬಳಿಕ ತನಿಖಾ ತಂಡದ ಕಣ್ಣಿಗೆ ಬಿದ್ದಿವೆ. ಹಂತಕರು ಬಳಸಿದ್ದ 1 ಮೋಟಾರ್ ಬೈಕ್ ಮತ್ತು ಕಾರನ್ನು ವಶಪಡಿಸಿ ಕೊಳ್ಳಲಾಗಿದೆ. ಚಂದ್ರನಾಥ್ ಅವರ ಚಲನವಲದ ಬಗ್ಗೆ ಅವರದೇ ಆಪ್ತ ವಲಯದವರು ಹಂತಕರಿಗೆ ಮಾಹಿತಿ ಸೋರಿಕೆ ಮಾಡಿರಬಹುದು ಎಂಬ ಅನುಮಾನದಲ್ಲಿ ಆಪ್ತರ ಮೊಬೈಲ್ ಕಾಲ್ ವಿವರಗಳನ್ನು ತನಿಖಾ ತಂಡ ಪರಿಶೀಲಿಸುತ್ತಿದೆ.

ಭಾರತದಲ್ಲಿ ವಿಧ್ವಂಸಕ ದಾಳಿಗೆ ಐಎಸ್‌ಐ ಸಂಚು

ದೆಹಲಿ ಐತಿಹಾಸಿಕ ದೇಗುಲ, ಹರಿಯಾಣ ಡಾಬಾ, ಸೇನೆ ಶಿಬಿರ ದಾಳಿ ಗುರಿ

ಶಹಬಾಜ್ ಭಟ್ಟಿ ತಂಡದಿಂದ 3 ಸ್ಥಳಗಳ ಫೋಟೊ-ಮಾಹಿತಿ ಪಾಕ್‌ಗೆ ರವಾನೆ

ದೆಹಲಿ: ದೆಹಲಿ, ಹರಿಯಾಣ ಸೇರಿದಂತೆ ಭಾರತದ ವಿವಿಧ ಪ್ರಮುಖ ಸ್ಥಳಗಳಲ್ಲಿ ಭಯೋತ್ಪಾದಕ ದಾಳಿ ನಡೆಸಲು ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಯೋಜಿಸಿದ್ದ ಸಂಚನ್ನು ದೆಹಲಿ ಪೊಲೀಸ್ ವಿಶೇಷ ಘಟಕ ಬಯಲಿಗೆಳೆದಿದೆ.

ಐಎಸ್‌ಐನ ಈ ಸಂಚಿಗೆ ಭಾರತದಲ್ಲಿ ನೆರವಾಗುತ್ತಿದ್ದ 9 ಮಂದಿಯನ್ನು ದೆಹಲಿ ಪೊಲೀಸರ ವಿಶೇಷ ತನಿಖಾ ತಂಡ ಗುರುವಾರ ಬಂಧಿಸಿದೆ. ಜತೆಗೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಅಪರಾಧ ಕೃತ್ಯಗಳಿಗೆ ಬಳಸುವ ಸಾಮಗ್ರಿಗಳನ್ನ ವಶಪಡಿಸಿಕೊಂಡಿದೆ.

ಬಂಧಿತರ ವಿಚಾರಣೆ ವೇಳೆ ಐಎಸ್‌ಐ ಮತ್ತು ಶಹಜಾದ್ ಭಟ್ಟಿ ಮಾಡ್ಯೂಲ್ ಜಂಟಿಯಾಗಿ ನಡೆಸಲು ಉದ್ದೇಶಿಸಿದ್ದ ಭಯೋತ್ಪಾದಕ ಸಂಚು ಬಹಿರಂಗವಾಗಿದೆ. ಈ ಸಂಚಿನಲ್ಲಿ ದೆಹಲಿಯಲ್ಲಿನ ಐತಿಹಾಸಿಕ ದೇವಾಲಯ, ಹರಿಯಾಣ ರಾಜ್ಯದ ಹಿಸ್ಸಾರ್‌ನಲ್ಲಿರುವ ಸೇನಾ ಶಿಬಿರ ಮತ್ತು ಸೋನಿಪತ್ ಮಾರ್ಗದಲ್ಲಿರುವ ಪ್ರಮುಖ ಡಾಬಾ ಕೂಡಾ ದಾಳಿಯ ಗುರಿಗಳಾಗಿದ್ದವು ಎಂದು ತನಿಖಾಧಿಕಾರಿಗಳು ಶುಕ್ರವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಬಂಧಿತರಾಗಿರುವ 9 ಮಂದಿಯಲ್ಲೊಬ್ಬ ದಾಳಿ ನಡೆಸಲು ಪ್ರಮುಖ ಸ್ಥಳಗಳನ್ನು ಗುರುತಿಸುವುದಕ್ಕಾಗಿ ದೆಹಲಿಯ ಐತಿಹಾಸಿಕ ದೇವಾಲಯ ಹಾಗೂ ಹರಿಯಾಣದ ಹಿಸ್ಸಾರ್‌ನಲ್ಲಿರುವ ಸೇನಾ ಶಿಬಿರ, ಸೋನಿಪತ್ ಮಾರ್ಗದ ಡಾಭಾಗೆ ಭೇಟಿ ನೀಡಿ, ಸಂಪೂರ್ಣ ಸ್ಥಳ ವೀಕ್ಷಣೆ ನಡೆಸಿ ಫೋಟೊಗಳನ್ನು ತೆಗೆದು ಪಾಕ್ ಮೂಲದ ಸೋಷಿಯಲ್ ಮೀಡಿಯ ಹ್ಯಾಂಡ್ಲರ್‌ಗೆ ಕಳುಹಿಸಿಕೊಟ್ಟಿದ್ದ.

ಶಹಬಾಜ್ ಭಟ್ಟಿ: ಪಾಕಿಸ್ತಾನದಲ್ಲಿನ ಪಂಜಾಬ್ ಪ್ರಾಂತ್ಯದ ನಿವಾಸಿಯಾದ ಶಹಬಾಜ್ ಭಟ್ಟಿ ಒಬ್ಬ ಗ್ಯಾಂಗ್ ಲೀಡರ್, ಅಪರಾಧ ಪ್ರಪಂಚದಲ್ಲಿ ಅಪಹರಣ, ಹತ್ಯೆ, ದರೋಡೆ ಪ್ರಕರಣಗಳಲ್ಲಿ ತೊಡಗಿಸಿಕೊಂಡಿದ್ದವನು. ಬಳಿಕ ಐಎಸ್‌ಐನ ಸಂಪರ್ಕಕ್ಕೆ ಬಂದು ಭಯೋತ್ಪಾದಕ ಚಟುವಟಿಕೆಗಳಿಗೆ ವಿವಿಧ ಬಗೆಯಲ್ಲಿ ನೆರವಾಗುತ್ತಿದ್ದ. ಕೆಲವೊಮ್ಮೆ ದುಬೈ, ಪೋರ್ಚುಗಲ್, ಗಲ್ಫ್ ದೇಶಗಳಲ್ಲಿ ಇದ್ದುಕೊಂಡು ಅಲ್ಲಿಂದಲೇ ಅಪರಾಧ ಕೃತ್ಯಗಳನ್ನು ತನ್ನ ಜಾಲದ ಮೂಲಕ ನಡೆಸುತ್ತಾನೆ. ಹಾಗಾಗಿಯೇ ಈತ ಐಎಸ್‌ಐನ ಪೋಸ್ಟರ್ ಬಾಯ್ ಎನಿಸಿಕೊಂಡಿದ್ದಾನೆ ಎಂದು ತಿಳಿದುಬಂದಿದೆ.

ಶಹಬಾಜ್ ಭಟ್ಟಿ (ಎಡಚಿತ್ರ). ದೆಹಲಿ ಪೊಲೀಸರು ಬಂಧಿಸಿದ ಶಹಬಾಜ್ ಭಟ್ಟಿ ಸಹಚರರು.

ಸೇನೆಶಿಬಿರ, ಡಾಬಾ, ಉ.ಪ್ರ. ಪೊಲೀಸರು ಗುರಿ

ದೆಹಲಿ-ಸೋನಿಪತ್ ಹೆದ್ದಾರಿಯಲ್ಲಿರುವ ಹರಿಯಾಣದ ಜನಪ್ರಿಯ ಡಾಬಾ ಕೂಡ ಪಾಕ್ ಐಎಸ್‌ಐನ ದಾಳಿಯ ಗುರಿಯಾಗಿತ್ತು. ಪ್ರತಿದಿನ ಸಾವಿರಾರು ಜನ ಈ ಡಾಬಾಗೆ ಭೇಟಿ ನೀಡುತ್ತಾರೆ. ಹ್ಯಾಂಡ್ ಗ್ರನೇಡ್ ಎಸೆದು ಹೆಚ್ಚಿನ ಜನರನ್ನು ಕೊಲ್ಲಬೇಕೆಂಬುದು ದಾಳಿ ಉದ್ದೇಶವಾಗಿತ್ತು. ಅಲ್ಲದೇ, ಹರಿಯಾಣದ ಹಿಸ್ಸಾರ್‌ನಲ್ಲಿರುವ ಸೇನಾ ಶಿಬಿರದ ಮೇಲೆಯೂ ದಾಳಿ ನಡೆಸುವುದು ಮತ್ತು ಉತ್ತರ ಪ್ರದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿರುವ ಕೆಲ ಅಧಿಕಾರಿಗಳನ್ನು ಕೊಲ್ಲುವುದು ಈ ಸಂಚಿನ ಭಾಗವಾಗಿತ್ತು. ದೇವಸ್ಥಾನದ ಮೇಲಿನ ದಾಳಿಗೆ ಮುನ್ನ ಉತ್ತರ ಪ್ರದೇಶದ ಕೆಲವು ಪೊಲೀಸ್ ಅಧಿಕಾರಿಗಳು, ಅರೆಸೇನಾಪಡೆ ಅಧಿಕಾರಿಗಳನ್ನು ಕೊಲ್ಲುವುದೂ ಸಂಚಿನ ಭಾಗವಾಗಿತ್ತು ಎಂದು ಬಂಧಿತರು ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾರೆಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪುದುಚೇರಿ ಸರಕಾರ ಶುಭ ಘಳಿಗೆ ನಿರೀಕ್ಷೆ

ಪುದುಚೇರಿ: 30 ಸದಸ್ಯ ಬಲದ ಪುದುಚೇರಿ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 18 ಕ್ಷೇತ್ರಗಳಲ್ಲಿ ಜಯ ಗಳಿಸಿರುವ 'ಎಐಎನ್‌ಆರ್‌ಸಿ' ಪಕ್ಷ ಮತ್ತೊಮ್ಮೆ ಹೊಸದಾಗಿ ಸರಕಾರ ರಚಿಸಲಿದ್ದು, ಶುಭ ಘಳಿಗೆಗಾಗಿ ಕಾಯುತ್ತಿದೆ. ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈವರೆಗೆ 4 ಬಾರಿ ಮುಖ್ಯಮಂತ್ರಿ ಆಗಿರುವ ಎನ್.ರಂಗಸ್ವಾಮಿ ಅವರು 5ನೇ ಬಾರಿಗೆ ಸಿಎಂ ಆಗಿ ಮುಂದುವರಿಯಲಿದ್ದಾರೆ. ಪ್ರಮಾಣವಚನ ಸ್ವೀಕಾರಕ್ಕೆ ಶುಭ ಮುಹೂರ್ತಕ್ಕಾಗಿ ಕಾಯುತ್ತಿದ್ದಾರೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ. 76 ವರ್ಷದ ರಾಮಸ್ವಾಮಿ ಅವರು ಸಿಎಂ ಅಗಿದ್ದರೂ ರಾಜ್ಯದಲ್ಲಿ 'ಯಮಹಾ ಆರ್‌ಎಕ್ಸ್ 100 ರಾಮಸ್ವಾಮಿ' ಎಂದೇ ಜನಪ್ರಿಯರಾಗಿದ್ದಾರೆ.



ಇರಾನ್‌ನ ಡ್ರೋನ್, ಕ್ಷಿಪಣಿ ಹೊಡೆದುರುಳಿಸಿದ ಯುಎಇ

ಟೆಹರಾನ್: ಪಶ್ಚಿಮ ಏಷ್ಯಾದಲ್ಲಿ ಫೆ.28ರಂದು ಶುರುವಾದ ಅಮೆರಿಕ- ಇಸ್ರೇಲ್ ನೇತೃತ್ವದ ಯುದ್ಧ ಕಳೆದ ಕೆಲವು ದಿನಗಳಿಂದ ನಿಲುಗಡೆಗೆ ಬಂದಿತ್ತು. ಈಗ ಸೇನಾ ಸಂಘರ್ಷ ಮತ್ತೆ ಶುರುವಾಗಿದೆ. ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮೇಲೆ ಇರಾನ್ ಡ್ರೋನ್, ಕ್ಷಿಪಣಿಗಳಿಂದ ಶುಕ್ರವಾರ ದಾಳಿ ನಡೆಸಿದೆ. ಈ ದಾಳಿಗಳನ್ನು ಯುಎಇ ಸೇನೆ ಹಿಮ್ಮೆಟ್ಟಿಸಿದೆ. ಇರಾನ್‌ನ ಡ್ರೋನ್, ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ.

ದೇಶದಲ್ಲಿ ಅಲ್ಲಲ್ಲಿ ಬಿದ್ದಿರುವ ಡ್ರೋನ್, ಕ್ಷಿಪಣಿಗಳ ಅವಶೇಷ ಗಳನ್ನು ನಾಗರಿಕರು ಯಾರೂ ಮುಟ್ಟಬಾರದು, ಹತ್ತಿರ ಹೋಗಬಾರದು ಎಂದು ಯುಎಇ ರಕ್ಷಣಾ ಸಚಿವಾಲಯ ಸಾರ್ವಜನಿಕ ರನ್ನು ಎಚ್ಚರಿಸಿದೆ. ಇನ್ನೊಂದೆಡೆ, ಹೊರ್ಮುಜ್ ಜಲಸಂಧಿ ಪ್ರವೇಶಿಸಲು ಯತ್ನಿಸಿದ ಅಮೆರಿಕದ ನೌಕಾಪಡೆಯ 3 ಹಡಗುಗಳ ಮೇಲೆ ಇರಾನ್ ಕರಾವಳಿ ಕಾವಲು ಪಡೆ ದಾಳಿ ನಡೆಸಿದೆ. ಅದಕ್ಕೆ ಪ್ರತಿಯಾಗಿ ಇರಾನ್ ಸೈನಿಕ ನೆಲೆಗಳ ಮೇಲೆ ಅಮೆರಿಕ ಕೂಡಾ ದಾಳಿ ನಡೆಸಿದೆ.

ಕೇರಳ ಸಿಎಂ ಹುದ್ದೆ ಸ್ಪರ್ಧಿಗಳ ಬೆಂಬಲಿಗರ ಪೋಸ್ಟರ್ ವಾರ್

ತಿರುವನಂತಪುರಂ: ಕೇರಳ ಕಾಂಗ್ರೆಸ್‌ನಲ್ಲಿ ಕಿತ್ತಾಟ ಶುರುವಾಗಿದೆ. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿರುವ ಕಾಂಗ್ರೆಸ್ ನೇತೃತ್ವದ 'ಯುಡಿಎಫ್'ಗೆ ಮುಖ್ಯಮಂತ್ರಿ ಆಯ್ಕೆಯೇ ಕಗ್ಗಂಟಾಗಿದೆ.

ಯುಡಿಎಫ್ ಒಕ್ಕೂಟದಲ್ಲಿ ಅತ್ಯಧಿಕ ಶಾಸಕ ಬಲ ಹೊಂದಿರುವ ಕಾಂಗ್ರೆಸ್‌ನಲ್ಲಿ ಮೂವರು ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿದ್ದಾರೆ. ತೀವ್ರ ಪೈಪೋಟಿ ಇರುವುದರಿಂದ ಸಿಎಂ ಅಭ್ಯರ್ಥಿ ಅಯ್ಕೆಯನ್ನು ಶಾಸಕಾಂಗ ಪಕ್ಷವು ವರಿಷ್ಠರ ತೀರ್ಮಾನಕ್ಕೆ ಬಿಟ್ಟಿದೆ.

ಕೆಸಿವಿ ಹೋರ್ಡಿಂಗ್‌ಗೆ ಗ್ರೀಸ್ ಬಳಿದ ಕಿಡಿಗೇಡಿಗಳು.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾದ ಕೆ.ಸಿ.ವೇಣುಗೋಪಾಲ್ ಅವರತ್ತ ಹೆಚ್ಚಿನ ಶಾಸಕರ ಒಲವಿದೆ ಎನ್ನಲಾಗಿದೆ. ಉಳಿದಂತೆ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರೂ ಸಿಎಂ ಹುದ್ದೆಗೆ ಪ್ರಬಲ ಸ್ಪರ್ಧಿಯಾಗಿದ್ದಾರೆ. ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ.ಸತೀಶನ್ ಅವರೂ ಸ್ಪರ್ಧೆಯಲ್ಲಿದ್ದಾರೆ. ಈ ಮಧ್ಯೆ, ಮೂವರೂ ಸಿಎಂ ಹುದ್ದೆ ಹುರಿಯಾಳುಗಳ ಪರವಾಗಿ ಅಭಿಮಾನಿಗಳು, ಬೆಂಬಲಿಗರು ಹೋರಾಟ, ಬೆಂಬಲ ಪ್ರದರ್ಶನ ನಡೆಸಲಾರಂಭಿಸಿದ್ದಾರೆ. ರಾಜಧಾನಿಯ ಪ್ರಮುಖ ರಸ್ತೆಗಳಲ್ಲಿ ಮೂವರೂ ನಾಯಕರ ದೊಡ್ಡ ಹೋರ್ಡಿಂಗ್‌ಗಳ ಪ್ರದರ್ಶನವೂ ಜೋರಾಗಿ ನಡೆದಿದೆ. ಮೂರೂ ನಾಯಕರ ಬೆಂಬಲಿಗರು ಹೋರ್ಡಿಂಗ್‌ಗಳ ಮೂಲಕವೇ ಹೋರಾಟ ಜೋರಾಗಿಸಿದ್ದಾರೆ.

ಈ ಮಧ್ಯೆ, ತಿರುವನಂತಪುರದ ಇಂದಿರಾ ಭವನದ ಬಳಿಕ ಪ್ರದರ್ಶಿಸಲಾಗಿರುವ ಕೆ.ಸಿ.ವೇಣುಗೋಪಾಲ್ ಅವರ ಹೋರ್ಡಿಂಗ್ ಮೇಲೆ ಕೆಲವರು ಕಪ್ಪು ಮಸಿ, ಗ್ರೀಸ್ ಸುರಿದು ವಿರೂಪಗೊಳಿಸಿದ್ದಾರೆ. ಇನ್ನೊಂದೆಡೆ, ಕಣ್ಣೂರು ಜಿಲ್ಲೆಯ ಇರಿಕ್ಕೂರು, ಅಲಪ್ಪುಳದಲ್ಲಿ ವೇಣುಗೋಪಾಲ್ ವಿರುದ್ಧವಾದ ಭಿತ್ತಿಪತ್ರಗಳೂ ಕಾಣಿಸಿಕೊಂಡಿವೆ. ಅದರ ಮಧ್ಯೆ, ಸತೀಶನ್ ಪರವಾದ ಪೋಸ್ಟರ್‌ಗಳು ರಾರಾಜಿಸುತ್ತಿವೆ. ರಾಜ್ಯದ ವಿವಿಧೆಡೆ ವಿ.ಡಿ.ಸತೀಶನ್ ಪರವಾಗಿ ಬೆಂಬಲಿಗರು ಮೆರವಣಿಗೆಗಳನ್ನು ನಡೆಸಿದ್ದಾರೆ.

ಕಾಂಗ್ರೆಸ್ ಜತೆ ಕೂರಲ್ಲ, ಪ್ರತ್ಯೇಕ ಆಸನ ನೀಡಿ: ಡಿಎಂಕೆ

ದೆಹಲಿ: ತಮಿಳುನಾಡಿನಲ್ಲಿ ಡಿಎಂಕೆ ಮಿತ್ರಪಕ್ಷವಾಗಿದ್ದ ಕಾಂಗ್ರೆಸ್ ದಿಢೀರ್ ಎಂಬಂತೆ ಅಧಿಕಾರದಾಸೆಯಿಂದ ಟಿವಿಕೆ ಪಕ್ಷದ ಜತೆಗೆ ಹೋಗಿರುವುದು ದಶಕಗಳ ಕಾಲದ ಕಾಂಗ್ರೆಸ್-ಡಿಎಂಕೆ ಮೈತ್ರಿಯನ್ನು ಕೊನೆಗೊಳಿಸಿದೆ. ಇದರ ಪರಿಣಾಮ ಸಂಸತ್‌ವರೆಗೂ ಮುಟ್ಟಿದೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದರ ಪಕ್ಕ ಕೂರಲು ಡಿಎಂಕೆ ಸಂಸದರು ನಿರಾಕರಿಸಿದ್ದು, ಪ್ರತ್ಯೇಕ ಆಸನದ ಸಾಲು ವ್ಯವಸ್ಥೆ ಮಾಡುವಂತೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಕೋರಿದ್ದಾರೆ.

ತಮಿಳುನಾಡು ವಿಧಾನಸಭೆ ಚುನಾವಣೆ ವೇಳೆ ಹಠ ಹಿಡಿದು ಡಿಎಂಕೆ ನೇತೃತ್ವದ ಮೈತ್ರಿಕೂಟದ ಭಾಗವಾದ ಕಾಂಗ್ರೆಸ್ 28 ಕ್ಷೇತ್ರಗಳನ್ನು ಬಿಡಿಸಿಕೊಂಡು ಸ್ಪರ್ಧೆ ಮಾಡಿ 5 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಆದರೆ, ಫಲಿತಾಂಶ ಬಳಿಕ ಡಿಎಂಕೆ ಮೈತ್ರಿಕೂಟ ತೊರೆದು, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿ ಸರಕಾರ ರಚನೆಗೆ ಸಿದ್ಧವಾಗಿರುವ ಟಿವಿಕೆ ಪಕ್ಷದ ಜತೆಗೆ ಗುರುತಿಸಿಕೊಂಡಿದೆ. 'ಕಾಂಗ್ರೆಸ್ ಮೋಸ ಮಾಡಿದೆ, ಡಿಎಂಕೆ ಬೆನ್ನಿಗೆ ಇರಿದಿದೆ' ಎಂದು ಪಕ್ಷದ ನಾಯಕರು, ಕಾರ್ಯಕರ್ತರು ಕಿಡಿಕಾರುತ್ತಿದ್ದಾರೆ.

ಲೋಕಸಭೆಯಲ್ಲಿ ಡಿಎಂಕೆ ನಾಯಕಿಯಾಗಿರುವ ಕನಿಮೊಳಿ(ಸ್ಟಾಲಿನ್ ಸೋದರಿ), ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು, ತಮ್ಮ ಪಕ್ಷದ ಸಂಸದರಿಗೆ ಪ್ರತ್ಯೇಕ ಆಸನ ವ್ಯವಸ್ಥೆಗೆ ಮನವಿ ಮಾಡಿದ್ದಾರೆ. ಪತ್ರದಲ್ಲಿ ಕಾಂಗ್ರೆಸ್ ವಿರುದ್ಧ ಕಟು ಶಬ್ದ ಬಳಸಿದ್ದಾರೆ. ಕಾಂಗ್ರೆಸ್ ಪಕ್ಷ ಮೈತ್ರಿಗೆ ಮೋಸ ಮಾಡಿ ಅಧಿಕಾರದ ಬೆನ್ನು ಬಿದ್ದಿದೆ. ವಿರೋಧಿ ಬಣವನ್ನು ಬೆಂಬಲಿಸುತ್ತಿದೆ. ಸದನದಲ್ಲಿ ಆ ಪಕ್ಷದ ಸಂಸದರ ಪಕ್ಕ ಕೂರಲು ಸಾಧ್ಯವಿಲ್ಲ ಎಂದಿದ್ದಾರೆ. ಮುಂದಿನ ಹಂತದಲ್ಲಿ ಇದು 26 ಪ್ರತಿಪಕ್ಷಗಳ 'ಇಂಡಿಯ' ಒಕ್ಕೂಟಕ್ಕೆ ಹೊಡೆತ ನೀಡಿ ದೊಡ್ಡ ಬಿರುಕು ಮೂಡಿಸುವ ಸಾಧ್ಯತೆಯಿದೆ ಎಂದು ವಿಶ್ಲೇಷಣೆ ಮಾಡಲಾಗಿದೆ.

ನಟ ವಿಜಯ್ ಮನೆ ಹೊರಗೆ ಕಣ್ಣೀರ್ಗರೆದ ಅಭಿಮಾನಿ

ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆ ಫಲಿತಾಂಶ ಮೇ 4ರಂದು ಪ್ರಕಟವಾಗಿ 4 ದಿನಗಳೇ ಕಳೆದರೂ ಅತ್ಯಧಿಕ ಕ್ಷೇತ್ರಗಳಲ್ಲಿ ಜಯ ಸಾಧಿಸಿರುವ ಟಿವಿಕೆ ಪಕ್ಷಕ್ಕೆ 'ಸ್ಪಷ್ಟ ಬಹುಮತ' ಸಿಗದ ಕಾರಣ ಸರಕಾರ ರಚನೆಗೆ ಅವಕಾಶವಾಗಿಲ್ಲ. ಭಾರೀ ನಿರೀಕ್ಷೆಯಿಟ್ಟುಕೊಂಡು ಟಿವಿಕೆ ಮತದಾನ ಮಾಡಿರುವ ನಟ ವಿಜಯ್ ಅವರ ಅಭಿಮಾನಿಗಳನ್ನು ಈಗಿನ ಬೆಳವಣಿಗೆ ಕಳವಳಕ್ಕೀಡು ಮಾಡಿದೆ.

ಚೆನ್ನೈನ ನೀಲಂಕರೈ ಪ್ರದೇಶದಲ್ಲಿರುವ ವಿಜಯ್ ನಿವಾಸದ ಬಳಿ ಪತ್ನಿ ಸಮೇತ ಗುರುವಾರ ಬೆಳಗ್ಗೆ ಬಂದ, ಟಿವಿಕೆ ಪಕ್ಷದ ಧ್ವಜವನ್ನು ಕೊರಳಿಗೆ ಸುತ್ತಿಕೊಂಡಿದ್ದ ಅಭಿಮಾನಿಯೊಬ್ಬರು ಗೇಟಿನಾಚೆಯೇ ನಿಂತು, 'ಅಣ್ಣಾ ಇನ್ನೂ ಸಿಎಂ ಆಗಲಿಲ್ಲ' ಎಂದು ಗೋಳಾಡಿದ್ದಾರೆ.

ಗೇಟಿನ ಎರಡೂ ಬದಿಯಿರುವ ಗಣಪತಿ ವಿಗ್ರಹಗಳಿಗೆ ಹೂವು ಅರ್ಪಿಸಿ, ಮಂಡಿಯೂರಿ ಕೈಮುಗಿದು, 'ವಿಜಯ್ ಅಣ್ಣನನ್ನು ಬೇಗ ಸಿಎಂ ಮಾಡು ದೇವರೇ' ಎಂದು ಪ್ರಾರ್ಥಿಸಿದ್ದಾರೆ. ಮಾಧ್ಯಮ ಸಂಸ್ಥೆ ಬಳಿ ಕಣ್ಣೀರಿಡುತ್ತಾ ಮಾತನಾಡಿ, 'ವಿಜಯ್ ಅಣ್ಣಾ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುವುದನ್ನು ನೋಡಬೇಕು ಎಂಬುದೇ ತಮ್ಮ ಮನದಾಸೆ' ಎಂದಿದ್ದಾರೆ. ಜನರು ಟಿವಿಕೆ ಪಕ್ಷಕ್ಕೆ ಹೆಚ್ಚು ಸ್ಥಾನ ಗೆಲ್ಲಿಸಿಕೊಟ್ಟರೂ ಸರಕಾರ ರಚನೆಗೆ ಅವಕಾಶವಾಗದೇ ಇರುವುದಕ್ಕೆ ನೊಂದುಕೊಂಡಿದ್ದಾರೆ.

ಚಾನೆಲ್‌ಗಳು ಏನೇ ಹೇಳಲಿ, ಸಿಎಂ ಆಗುವುದು ವಿಜಯ್ ಅಣ್ಣನೇ. ಎಷ್ಟೇ ಅಡೆತಡೆ ಬಂದರೂ ಅವರು ಎದುರಿಸುತ್ತಾರೆ. ಅಣ್ಣಾ ಬಹಳ ಹೋರಾಟ ಮಾಡಿ ಗೆದ್ದು ಬಂದಿದ್ದಾರೆ. ಆದರೆ, ಕೆಲವರು ಅಡ್ಡಿಪಡಿಸುತ್ತಿರುವುದು ನೋವು ತರುತ್ತಿದೆ. ಭಾವಿ ಸಿಎಂ ಮನೆ ಮುಂದೆ ಒಬ್ಬ ಪೊಲೀಸ್ ಕೂಡಾ ಇಲ್ಲ. ವಿಚಿತ್ರ ಎನಿಸುತ್ತಿದೆ, ತುಂಬಾ ನೋವಾಗುತ್ತಿದೆ ಎಂದು ಅಭಿಮಾನ ಕಣ್ಣೀರ್ಗರೆದಿದ್ದಾರೆ. ಈ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ಸಮಾಚಾರ ಸಣ್ಣದಲ್ಲ

ಹಿಂದುಳಿದ ವರ್ಗಗಳ ಆಶಾಕಿರಣ ಯಡಿಯೂರಪ್ಪ

ಬೆಳಗಾವಿ: 50 ವರ್ಷಗಳ ಸಾರ್ಥಕ ರಾಜಕೀಯ ಜೀವನ ಪೂರೈಸಿದ ಯುಡಿಯೂರಪ್ಪಾಜಿ ಅವರು ಕರ್ನಾಟಕದ

ಮಣ್ಣಿನಲ್ಲಿ ಹುಟ್ಟಿ, ಆ ಮಣ್ಣಿನ ಸುಗಂಧವನ್ನೇ ತಮ್ಮ ಜೀವನದ ಶಕ್ತಿಯನ್ನಾಗಿ ವ ' ಾ ಡಿ ಕ ' ೂ ಂ ಡ ' ನಾಯಕರೆಂದರೆ ಅದು ಬಿ. ಎಸ್. ಯಡಿಯೂರಪ್ಪಾಜಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ಒಬ್ಬ ಯುವಕ, ತಮ್ಮ ಪರಿಶ್ರಮ, ದೃಢಸಂಕಲ್ಪ ಮತ್ತು ಜನಸೇವೆಯ ಮನೋಭಾವದಿಂದ ರಾಜ್ಯದ ಶಿಖರವರೆಗೆ ಏರಿದ ಕಥೆ , ಇದು ಕೇವಲ ಜೀವನಚರಿತ್ರೆ ಅಲ್ಲ, ಒಂದು ಪ್ರೇರಣೆಯ ಮಹಾಗಾಥೆ ಎಂದು ಬಿಜೆಪಿ ಒಬಿಸಿ ಮೋರ್ಚಾ ಬೆಳಗಾವಿ ಗ್ರಾಮಂತರ ಜಿಲ್ಲೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ಈ ಹಡಪದ ತಿಳಿಸಿದರು. ಶಿವಮೊಗ್ಗ ಜಿಲ್ಲೆಯ ಬೂಕನಕೇರೆಯ ಮಣ್ಣಿನಲ್ಲಿ ಬೆಳೆದ ಯಡಿಯೂರಪ್ಪ ಅವರು, ಬಾಲ್ಯದಲ್ಲಿಯೇ ಸಂಕಷ್ಟಗಳನ್ನು ಎದುರಿಸಿದವರು. ಆದರೆ ಆ ಸಂಕಷ್ಟಗಳು ಅವರನ್ನು ಕುಗ್ಗಿಸಲಿಲ್ಲ ತ್ ಬದಲಿಗೆ, ಅವರನ್ನು ಇನ್ನಷ್ಟು ಗಟ್ಟಿಯಾಗಲು ಕಾರಣವಾದವು. ಜನರ ಸಮಸ್ಯೆಗಳನ್ನು ತನ್ನದೇ ಸಮಸ್ಯೆಯೆಂದುಕೊಂಡು ಸೇವೆಯ ದಾರಿಗೆ ಕಾಲಿಟ್ಟವರು ಎಂದರು.

ನಾಳೆ ಹುಕ್ಕೇರಿಯಲ್ಲಿ ವಿದ್ಯುತ್ ವ್ಯತ್ಯಯ

ಹುಕ್ಕೇರಿ: ತಾಲೂಕಿನ ದಡ್ಡಿ 110/11 ಕೆವಿ ವಿದ್ಯುತ್ ಉಪ ಕೇಂದ್ರದಲ್ಲಿತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಮೇ 10.ಬೆಳಗ್ಗೆ 8 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ದಡ್ಡಿ ವಿದ್ಯುತ್ ಉಪ ಕೇಂದ್ರದಲ್ಲಿ ವ್ಯಾಪ್ತಿಯಲ್ಲಿ ಮನಗುತ್ತಿ, ಮಾಸ್ತಿಹೋಳಿ, ನರಸಿಂಪೂರ, ಮೊದಗಾ, ದಡ್ಡಿ, ಶೆಟ್ಟಿಹಳ್ಳಿ, ಸಲಾಮವಾಡಿ, ನಾಗನೂರಕೆ.ಎಮ್., ಮಸ್ತಿ .ಕೋಟ, ಬಿದ್ರೇವಾಡಿ, ಅತ್ತಿಹಾಳ, ಅಲದಾಳ, ಮಾನಗಾಂವ, ಬೋಳಶ್ಯಾನಟ್ಟಿ, ದೊಂಡಗಟ್ಟಿ, ಬೆನಕನಹೊಳಿ, ಖವನೆವಾಡಿ, ಬೆಳ್ಳಂಕಿ, ಮಾರನಹೋಳಿ, ನಾಗನೂರ ಕೆ.ಡಿ.ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದ್ದು ಗ್ರಾಹಕರು ಸಹಕರಿಸಬೇಕು ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಬಡ್ಡಿ ಮಣ್ಣಿನೊಂದಿಗೆ ಬೆರೆಯುವ ಆಟ

ಮೂಡಲಗಿ : ಅಪ್ಪಟ ದೇಶಿ ಕ್ರೀಡೆಯಾದ ಕಬಡ್ಡಿ ಮಣ್ಣಿನೊಂದಿಗೆ ಬೇರೆತು ಆಡುವ ಆಟ. ಆಟದ ಸೊಗಡು, ವೈಶಿಷ್ಟ್ಯ, ಚಾಕು ಚಕ್ಕತೆ ನೋಡುಗರನ್ನು ರೋಮಾಂಚನಗೊಳಿಸುತ್ತದೆ ಎಂದು ಹಿರಿಯ ನಿವೃತ್ತ ಗ್ರಂಥಪಾಲಕ ಹಾಗೂ ಪತ್ರಕರ್ತ ಬಾಲಶೇಖರ ಬಂದಿ ಅಭಿಪ್ರಾಯ ಪಟ್ಟರು. ಅವರು ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಹಾಗೂ ಕಲಾ ವಾಣಿಜ್ಯ ಮತ್ತು ಬಿಸಿಎ ಮಹಾವಿದ್ಯಾಲಯದ ಮೈದಾನದಲ್ಲಿ ಮುಕ್ತಾಯವಾದ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 3 ನೇ ವಲಯ ಹಾಗೂ ಅಂತರ್‌ವಲಯ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ಬಹುಮಾನ ವಿತರಣೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಚಾಂಪಿಯನ್ ತಂಡಗಳಿಗೆ ಪಾರಿತೋಷಕಗಳನ್ನು ವಿತರಿಸಿ ಮಾತನಾಡಿದರು. ಮೂಡಲಗಿ ಶಿಕ್ಷಣ ಸಂಸ್ಥೆಯ ಚೇರಮನ್ ವೆಂಕಟೇಶ ಸೋನವಾಲಕರ ಮಾತನಾಡಿದರು. ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿದ ಮೂಡಲಗಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಆರ್‌ಪಿ ಸೋನವಾಲ್ಕರ್ ಚಾಂಪಿಯನ್ ತಂಡಗಳಿಗೆ ಪಾರಿತೋಷಕಗಳನ್ನು ವಿತರಿಸಿದರು.ಸಮಾರಂಭದಲ್ಲಿ ಮಲೀಕ್ ಸಾಬ್ ಪಾಶ್ಚಾಪುರ್,ಲಕ್ಷ್ಮಣ ಅಡಿಹುಡಿ, ಸಂಗಪ್ಪ ಸೂರಣ್ಣವರ್ ,ಕಾಲೇಜ್ ಆಡಳಿತಾಧಿಕಾರಿ ಡಾ ಎಸ್‌ಎಲ್ ಚಿತ್ರಗಾರ, ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ ಎಂ ಕೆ ಕಂಕನವಾಡಿ, ಡಾ ಎಲ್ ಬಿ ಮಣ್ಣಾಪುರ, ಪವನ ಕುಮಾರ ಕೆ, ಸಂತೋಷ ಮುಗಳಿ, ಶಿವಾಜಿ ಮಾಲೋಜಿ, ಎಸ್ ಎಮ್ ಹಳ್ಳೂರ ಎ ಎಸ್ ಮಿಶಿ ನಾಯಿಕ ಮುಂತಾದವರು ಉಪಸ್ಥಿತರಿದ್ದರು.

ಅಗಲಿದ ಜೀವ

ರತ್ನವ್ವಾ ವೀರಭದ್ರನವರ

ಯಮಕನಮರಡಿ: ಸಮೀಪದ ಹಂಚಿನಾಳ ಗ್ರಾಮದ

ರಹವಾಸಿ (ಹಾಲಿ ಉಳ್ಳಾಗಡ್ಡಿ-ಖಾನಾಪೂರ) ದ ರತ್ನವ್ವಾ ಈರಪ್ಪಾ ವೀರಭದ್ರನವರ, (82) ಇತ್ತಿಚೆಗೆ ನಿಧನರಾದರು, ಮೃತರಿಗೆ ಮೂವರು ಪುತ್ರಿಯು ಸೇರಿದಂತೆ ಅಪಾರ ಬಂಧು-ಬಳಗವನ್ನಗಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಬಿ.ವೈ.ರಾಘವೇಂದ್ರ } ಸಂಸದ

ದಕ್ಷಿಣ ಭಾರತದಲ್ಲಿ ಪಕ್ಷವನ್ನು ಬೆಳೆಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಬಗರ್ ಹುಕುಂ ಸಾಗುವಳಿ ಚೀಟಿ ಸೇರಿದಂತೆ ಹಲವು ವಿಚಾರಗಳಿಗೆ ಅವರು ಹೋರಾಟ ನಡೆಸಿದರು. ನಿರಂತರ ಭಿನ್ನಮತ, ಜಗಳಗಳ ನಡುವೆ ರಾಜಕೀಯ ಜೀವನ ನಡೆಸಿದರು. ಅವರೊಬ್ಬ ಅಜಾತಶತ್ರು ಎಂದು ಹೇಳಲು ಆಗದು.

ಬಿಎಸ್‌ವೈರಿಂದ ಚಳಿಗಾಲ ಅಧಿವೇಶನದ ಕೊಡುಗೆ | ಮಾಜಿ ಶಾಸಕ ಜಗದೀಶ ಹೇಳಿಕೆ

ಸಮಾವೇಶಕ್ಕೆ ಸಹಸ್ರಾರು ಜನ

ವಿಶ್ವವಾಣಿ ಸುದ್ದಿಮನೆ ಬೈಲಹೊಂಗಲ

ಬಿಜೆಪಿ ಪಕ್ಷವನ್ನು ರಾಜ್ಯದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೇರಿಸಿದ ಕೀರ್ತಿಯ, ಹಿರಿಯ ಮುತ್ಸದ್ದಿ, ಜನಪರ, ರೈತಪರ ಹೋರಾಟಗಳ ಮೂಲಕ ಜನಮನ್ನಣೆ ಪಡೆದ ಮಾಜಿ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಬೈಲಹೊಂಗಲ ವಿಧಾನಸಭಾ ಕ್ಷೇತ್ರದಿಂದ ಸಾವಿರಾರು ಕಾರ್ಯಕರ್ತರು, ಅವರ ಅಭಿಮಾನಿಗಳು ಪಾಲ್ಗೊಳ್ಳಲಿದ್ದೇವೆ ಎಂದು ಮಾಜಿ ಶಾಸಕ ಜಗದೀಶ ಮೆಟಗುಡ್ಡ ಹೇಳಿದರು.

ನಗರದ ತಮ್ಮ ಗೃಹ ಕಚೇರಿಯಲ್ಲಿ ಶುಕ್ರವಾರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸೇವೆಯನ್ನೆ ತಮ್ಮ ಸಾಧನೆಯ ಮೆಟ್ಟಿಲನ್ನಾಗಿಸಿಕೊಂಡ ಯಡಿಯೂರಪ್ಪ ಅವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿ 50 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಚಿತ್ರದುರ್ಗದಲ್ಲಿ ನಡೆಯಲಿರುವ ರಾಜ್ಯಮಟ್ಟದ ಸಮಾರಂಭಕ್ಕೆ 5 ಲಕ್ಷಕ್ಕೂ ಹೆಚ್ಚು ಜನತೆ ಸೇರಲಿದ್ದು, ಬೈಲಹೊಂಗಲ ಕ್ಷೇತ್ರದಿಂದಲೂ ಸಾವಿರಾರು ಕಾರ್ಯಕರ್ತರು ಕಾರ್ಯಕ್ರಮಕ್ಕೆ ತೆರಳಿದ್ದಾರೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಹಲವಾರು ಸಭೆಗಳನ್ನು ಸಭೆಗಳನ್ನು ನಡೆಸಲಾಗಿದ್ದು, ಅಭಿಮಾನಿಗಳು, ಕಾರ್ಯಕರ್ತರು

ನಾವು ಶಾಸಕರಾಗಿದ್ದಾಗ ಬೈಲಹೊಂಗಲ ನಗರಕ್ಕೆ ಎಂದು ಮರೆಯಲಾಗದ ಒಳಚರಂಡಿ, ಶುದ್ಧಕುಡಿಯುವ ನೀರು, ನೀರಾವರಿ ಯೋಜನೆಗಳು ಸೇರಿ ದೊಡ್ಡ ಮಟ್ಟದ ಅನುದಾನದ ಯೋಜನೆಗಳಿಂದ ಮತಕ್ಷೇತ್ರ ಬಿಎಸ್ ಯಡಿಯೂರಪ್ಪ ಅವರ ಮುಖ್ಯಮಂತ್ರಿ ಅವಧಿಯಲ್ಲಿ ಅಭಿವೃದ್ಧಿ ಕಂಡಿದೆ.
-ಜಗದೀಶ ಮೆಟಗುಡ್ಡ, ಮಾಜಿ ಶಾಸಕ

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರಿಗೆ ಹರಸಲು ಉತ್ಸುಕರಾಗಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರು ಹೋರಾಟದ ರಾಜಕಾರಣದ ಮೂಲಕ ಮುಖ್ಯಮಂತ್ರಿಯಾಗಿ ಬೆಳೆದ ನಾಯಕರು. ರೈತಪರ ಬಜೆಟ್, ಬೆಳಗಾವಿ ಸುವರ್ಣಸೌದ, ಚಳಿಗಾಲ ಅಧಿವೇಶನ ಕೊಡುಗೆ, ಭಾಗ್ಯಲಕ್ಷ್ಮೀ, ನೆರೆಹಾವಳಿಯಲ್ಲಿ ಮನೆ ಕಳೆದುಕೊಂಡವರಿಗೆ ಮನೆ ನಿರ್ಮಾಣಕ್ಕೆ 5 ಲಕ್ಷ ರು., ಮಠಮಾನ್ಯಗಳಿಗೆ ಅನುದಾನ ಸೇರಿ ಅವರ ಆಡಳಿತಾವಧಿಯಲ್ಲಿ ನೀರಾವರಿ, ಗ್ರಾಮೀಣ ಅಭಿವೃದ್ಧಿ, ರಸ್ತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿದ್ದಾರೆ.. ನಾವು ಶಾಸಕರಾಗಿದ್ದಾಗ ಬೈಲಹೊಂಗಲ ನಗರಕ್ಕೆ ಎಂದು ಮರೆಯಲಾಗದ ಒಳಚರಂಡಿ, ಶುದ್ಧಕುಡಿಯುವ ನೀರು, ನೀರಾವರಿ ಯೋಜನೆಗಳು ಸೇರಿ ದೊಡ್ಡ ಮಟ್ಟದ ಅನುದಾನದ ಯೋಜನೆಗಳಿಂದ ಮತಕ್ಷೇತ್ರ ಅವರ ಮುಖ್ಯಮಂತ್ರಿ ಅವಧಿಯಲ್ಲಿ ಅಭಿವೃದ್ಧಿ ಕಂಡಿದೆ.

ಅವರ ಕೊಡುಗೆ ಸದಾ ಸ್ಮರಣೀಯವಾಗಿರಲಿದೆ. ಅವರ ರಾಜಕೀಯ ಜೀವನದ ಐವತ್ತು ವರ್ಷದ ಪಯಣವನ್ನು ಸ್ಮರಣೀಯವಾಗಿಸಲು ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ ಮೇ 9ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ನಾಯಕರು ಭಾಗವಹಿಸಲಿದ್ದಾರೆ. ಈ ಸಮಾವೇಶ ರಾಜ್ಯ ರಾಜಕೀಯದಲ್ಲಿ ಹೊಸ ಉತ್ಸಾಹ ಮೂಡಿಸುವುದರ ಜೊತೆಗೆ ಪಕ್ಷ ಸಂಘಟನೆಗೆ ಇನ್ನಷ್ಟು ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಎಲ್ ಇ ನಿರ್ದೇಶಕ, ಉದ್ಯಮಿ ವಿಜಯ ಮೆಟಗುಡ್ಡ ಮಾತನಾಡಿ, ಮೆಟಗುಡ್ಡ ಕುಟುಂಬದೊಂದಿಗೆ ಯಡಿಯೂರಪ್ಪಜೀ ಹಾಗೂ ಅವರ ಕುಟುಂಬದವರು ಬಹಳ ಅನ್ಯೋನ್ಯತೆಯ ಸಮಂದ ಹೊಂದಿದೆ ನಮ್ಮ ಚಿಕ್ಕಪ್ಪ ಜಗದೀಶ ಮೆಟಗುಡ್ಡ ಶಾಸಕರಾಗಿದ್ದಾಗ ಮಂತ್ರಿ ಪದವಿಯ ಸಮಾನದ ಮೈಸೂರ ಮಿನರಲ್ಸ್ ನಿಗಮದ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಅಲ್ಲದೆ ಅಧಿಕಾರ ಇಲ್ಲದಾಗಲೂ ಜನಪರ ಯೋಜನೆಗಳಿಗೆ ಯಡಿಯೂರಪ್ಪ ಸದಾ ಸಹಕಾರ ನೀಡಿದ್ದಾರೆ. ಅವರ ಅಭಿಮಾನೋತ್ಸವವನ್ನೂ ಅದ್ದೂರಿಯಾಗಿ ಆಚರಿಸಲು ಕ್ಷೇತ್ರದಿಂದ ಕಾರ್ಯಕರ್ತರನ್ನು ಸೇರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಬಿಜೆಪಿ ಮಂಡಲ ಅಧ್ಯಕ್ಷ ಸುಭಾಷ ತುರಮರಿ, ಮುಖಂಡರಾದ ಗುರು ಮೆಟಗುಡ್ಡ, ಸುನೀಲ ಮರಕುಂಭಿ, ಲಕ್ಕಪ್ಪ ಕಾರಗಿ, ಪ್ರಪೂಲ ಪಾಟೀಲ, ಸಚನ ಖಿಡಿ, ಸಂತೋಷ ಹಡಪದ ಮುಂತಾದವರು ಇದ್ದರು.

ಕಳವು ಪ್ರಕರಣ: ಬಂಧನ

ರಾಮದುರ್ಗ: ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇವಲ 48 ಘಂಟೆ ಯಲ್ಲಿಯೇ ಖದೀಮರ ಹಡೆಮುರಿ ಕಟ್ಟುವಲ್ಲಿ ರಾಮದುರ್ಗ ತಾಲೂಕಿನ ಕಟಕೋಳ ಪೊಲೀಸರು ಯಶಸ್ವಿಯಾಗಿದ್ದಾರೆ.

ಘಟನೆಯಲ್ಲಿ ಆರೋಪಿಗಳಾದ ಬೆಳಗಾವಿ ಜಿಲ್ಲೆ ಮೂಡಲಗಿ ತಾಲೂಕಿನ ಕಮಲದಿನ್ನಿ ನಿವಾಸಿ ಹಣಮಂತ ಯಲ್ಲಪ್ಪ ಮಾರಾಪೂರ (27) ಹಾಗೂ ಹೊಸಕೋಟಿ ಗ್ರಾಮದ ನಿವಾಸಿ ಹಸೀನಾ ಅಪ್ಪಾಸಾಬ ನದಾಫ್ (24) ಅವರನ್ನು ಚಿನ್ನಾಭರಣ ಸಮೇತ ಪೊಲೀಸರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲೂಕಿನ ಹೊಸಕೋಟಿ ಗ್ರಾಮದ ನಿವಾಸಿ ಹಾಗೂ ವಸತಿ ನಿಲಯದ ಮೇಲ್ವಿಚಾರಕಿ ದಿಲ್ಶಾದ್ ಸೈದುಸಾಬ ನದಾಫ ಅವರು ತಮ್ಮ ಮನೆ ಕಳ್ಳತನವಾದ ಕುರಿತು ನೀಡಿದ ದೂರಿನ ಅನ್ವಯ, ಖದೀಮರ ಪತ್ತೆಗೆ ಜಾಲ ಬೀಸಿದ ಪೊಲೀಸರು, ಕಳ್ಳತನವಾದ ರು. 21 ಲಕ್ಷಕ್ಕೂ ಅಧಿಕ ಮೊತ್ತದ 154.06 ಗ್ರಾಂ. ಬಂಗಾರದ ಆಭರಣ ಹಾಗೂ ರು. 11,250 ಮೊತ್ತದ 45 ಗ್ರಾಂ. ಬೆಳ್ಳಿಯ ಆಭರಣ ವಶಪ ಡಿಸಿಕೊಂಡಿದ್ದಾರೆ. ಸಿಪಿಐ ವಿನಾಯಕ ಬಡಿಗೇರ ಅವರ ನೇತೃತ್ವದಲ್ಲಿ ಪಿಎಸ್‌ಐ ಬಸವರಾಜ ಕೊಣ್ಣೂರೆ, ಅಪರಾಧ ವಿಭಾಗದ ಸಿಬ್ಬಂದಿಗಳಾದ ಎಸ್. ಎಸ್. ವಜ್ರಮಟ್ಟಿ, ಎಂ.ಸಿ ಮನ್ನಿಕೇರಿ, ಎಂ.ಆರ್. ಲದ್ದಿ, ಎಸ್.ಎಫ್ ಭಾಂಗಿ, ವಿ.ಆರ್. ಗಲಬಿ, ಸಹಾಯಕರಾದ ಆರ್.ಬಿ ಗೋಕಾಕ, ಡಿ.ಎಚ್. ನದಾಫ, ಬಿ.ಎಸ್. ಚುಂಚನೂರ, ವಿನೋದ ಠಕ್ಕನ್ನವರ, ಸಚೀನ ಪಾಟೀಲ ಅವರನ್ನು ಒಳಗೊಂಡ ತಂಡ ಕಳ್ಳತನ ಪ್ರಕರಣ ಬೇಧಿಸಿದ್ದಾರೆ.

ಕಳ್ಳತನ ಬೇಧಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನಾಭರಣ ವಶಪಡಿಸಿಕೊಂಡ ಕಟಕೋಳ ಪೊಲೀಸರು.

ಕಬಡ್ಡಿ: ಮೂಡಲಗಿ ಕಾಲೇಜ್ ಚಾಂಪಿಯನ್

ಮೂಡಲಗಿ: ಮೂಡಲಗಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಹಾಗೂ ಕಲಾ ವಾಣಿಜ್ಯ ಮತ್ತು ಬಿಸಿಎ ಮಹಾ ವಿದ್ಯಾಲಯಗಳ ಆತಿಥ್ಯದಲ್ಲಿ ಎರಡು ದಿನಗಳ ಕಾಲ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಂತರ ವಲಯ ಪುರುಷರ ಕಬಡ್ಡಿ ಟೂರ್ನಿಯಲ್ಲಿ ಮೂಡಲಗಿ ಬಿಪಿಎಡ್ ಕಾ ಲೇಜ್ ಚಾಂಪಿಯನ್ಶಿಪ್ ಪಡೆದುಕೊಂಡಿತು ಮೂಡಲಗಿಯ ಎಂ ಪಿ ಇಡಿ ಕಾಲೇಜು ತಂಡ ರನ್ನರ್‌ಆಪ್ ಆಯಿತು. ಅಂತಿಮ ಪಂದ್ಯದಲ್ಲಿ ಬಿ ಪಿ ಇಡಿ ಕಾಲೇಜ್ ತಂಡ ಮೂಡಲಗಿ ಎಂ ಪಿ ಇಡಿ ಕಾಲೇಜನ್ನು 20-18 ಅಂಕಗಳ ಅಂತರದಲ್ಲಿ ಪರಾಭ ವಗೊಳಿಸಿತು. ಇದಕ್ಕೂ ಪೂರ್ವದಲ್ಲಿ ಸೌದತ್ತಿ ಎಸ್ವಿಎಸ್ವಿ ಕಾಲೇಜ್ ತಂಡ ವಿಜಯಪುರದ ಸರ್ಕಾರಿ ಪದವಿ ಕಾಲೇಜ್ ತಂಡವನ್ನು 26-6 ಅಂಕಗಳ ಅಂತರದಲ್ಲಿ ಪರಾಭ ವಗೊಳಿಸಿ ತೃತೀಯ ಸ್ಥಾನವನ್ನು ಪಡೆದಿಕೊಂಡಿತು. ಸೌದತ್ತಿ ಎಸ್ವಿಎಸ್ವಿ ಕಾಲೇಜ್ ತಂಡದ ಹನುಮಂತ ಬಜೇರಿ ಉತ್ತಮ ದಾಳಿಗಾರ, ಮೂಡಲಗಿ ಬಿಪಿಎಡ್ ಕಾಲೇಜಿನ ಮಹೇಶ್ ಕೆಮ್ಮನ್ನಕೋಳ ಉತ್ತಮ ಹಿಡಿತಗಾರ ಹಾಗೂ ಎಂಪಿಎಡ್ ಕಾಲೇಜಿನ ಮಲ್ಲು ಸುಳ್ಳನ್ನವರ ಸರ್ವೋತ್ತಮ ಆಟಗಾರ ಪ್ರಶಸ್ತಿಗೆ ಭಾಜನರಾಗಿ ಟ್ರೋಫಿಗಳನ್ನು ಪಡೆದಿಕೊಂಡರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಂತರ ವಲಯ ಪುರುಷರ ಕಬಡ್ಡಿ ಟೂರ್ನಿಯಲ್ಲಿ ಚಾಂಪಿಯನ್ಶಿಪ್ ಪಡೆದುಕೊಂಡ ಮೂಡಲಗಿ ಬಿಪಿಎಡ್ ತಂಡ ಮತ್ತು ರನ್ನರ್‌ಆಪ್ ಪಡೆದ ಮೂಡಲಗಿಯ ಎಂ ಪಿ ಇಡಿ ಕಾಲೇಜು ತಂಡಕ್ಕೆ ಬಹುಮಾನ ವಿತರಿಸಲಾಯಿತು.

ಕನ್ನಡ ಬೆಳೆಸುವಲ್ಲಿ ಕಸಾಪ ಕೊಡುಗೆ ಅಪಾರ

ಯಮಕನಮರಡಿ: ಕನ್ನಡ ಭಾಷೆ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಹುಕ್ಕೇರಿಯ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸ್ತುತ್ಯಾರ್ಹವಾದದು ಎಂದು ಹಿರಿಯ ಸಾಹಿತಿ ಎಸ್.ಎಂ. ಶಿರೂರ ಹೇಳಿದರು,

ಅವರು ಯಮಕನಮರಡಿ ಎನ್.ಎಸ್. ಎಫ್ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹುಕ್ಕೇರಿ ತಾಲೂಕ ಘಟಕದಿಂದ ಆಯೋಜಿಸಿದ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನೆ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಸಸಿ ಮರವಾದಂತೆ ಅಂದು ಬೆಳೆಸಿದ ಸಾಹಿತ್ಯ ಪರಿಷತ್ತ್ ಇಂದು ಹೆಮ್ಮರವಾಗಿ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಮಹತ್ತರವಾದ ಕಾರ್ಯ ಮಾಡುತ್ತಿದೆ, ಕ,ಸಾ,ಪ, ಅಧ್ಯಕ್ಷರು ಶಾಲಾ-ಕಾಲೇಜುಗಳಲ್ಲಿ ಒಂದಲ್ಲ ಒಂದು ಕನ್ನಡ ಪರ ಕಾರ್ಯಕ್ರಮ ನಿಯೋಜಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದರು, ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಕನ್ನಡ ಉಪನ್ಯಾಸಕ ಶಿವಾನಂದ ಮಠಪತಿ ಕನ್ನಡ ಪರಿಷತ್ ನಡೆದು ಬಂದ ದಾರಿ ಕುರಿತು

ಯಮಕನಮರಡಿಯ ಎನ್.ಎಸ್.ಎಫ್. ಶಾಲೆಯಲ್ಲಿ ನಡೆದ ಕಸಾಪ 112 ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಎಸ್.ಎಂ. ಶಿರೂರ ಅವರು ಉದ್ಘಾಟಿಸಿದರು.

ಉಪನ್ಯಾಸ ನೀಡಿ ಕನ್ನಡಿಗರಲ್ಲಿ ಐಕ್ಯತೆ ಸಾಹಿತ್ಯ ಸಂಸ್ಕೃತಿಯನ್ನು ಮೂಡಿಸುವಲ್ಲಿ ಸಾಹಿತ್ಯ ಪರಿಷತ್ತಿನ ಪಾತ್ರ ಅನನ್ಯವಾದದ್ದು, ಪ್ರಸ್ತುತ ಸನ್ನಿವೇಶದಲ್ಲಿ ಯುವ ಜನಾಂಗಕ್ಕೆ ಭಾಷೆ ಬಗ್ಗೆ ಅಭಿಮಾನ ಸಾಂಸ್ಕೃತಿಕ ಚಿಂತನೆ ಒಳಪಡಿಸುವ ಅಗತ್ಯತೆ ಇದ್ದು, ಪರಿಷತ್ತಿನ ಚಟುವಟಿಕೆಗಳಲ್ಲಿ ಯುವ ಜನಾಂಗವು ಪಾಲ್ಗೊಳ್ಳುವಂತೆ ಮಾಡಬೇಕೆಂದು ಶಿವಾನಂದ ಮಠಪತಿ ಹೇಳಿದರು, ಬಸವ ಶ್ರೀ ಕಾಯಕ ರತ್ನ ಪ್ರಶಸ್ತಿ ಪಡೆದ ಸಮಾಜ ಸೇವಕ ವಿನೋದ ಜಗಜಂಪಿ, ಗೀತಾ ಬಸ್ತವಾಡಿ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸತ್ಕಾರಿಸಲಾಯಿತು. ಹಿರಿಯ ಸಾಹಿತಿ ಎಲ್. ವ್ಹಿ. ಪಾಟೀಲ, ಶಿವನಗೌಡ ಅತ್ಯಾಳಿ, ಶಶಿಕಾಂತ ಹಟ್ಟಿ, ಪ್ರಕಾಶ ಹೊಸಮನಿ, ಕಿರಣ ನೇಸರಿ, ಅನುರಾಧ ಕಾಪಸಿ, ಸಿ.ಎಂ ದರಬಾರೆ, ಶಾಲೆ ಶಿಕ್ಷಕರು ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು,

ಬಿಎಸ್‌ವೈ ನನ್ನ ರಾಜಕೀಯ ಮಾರ್ಗದರ್ಶಿ ಆದವರು

ಬೈಲಹೊಂಗಲ: ನನ್ನ ರಾಜಕೀಯ ಜೀವನದ ಮೊದಲ ಹೆಜ್ಜೆ ಇಟ್ಟ ಸಮಯದಲ್ಲಿ ನನಗೆ ದಿಕ್ಕು ತೋರಿಸಿದವರು, ಧೈರ್ಯ ತುಂಬಿದವರು ನಮ್ಮ ರೈತನಾಯಕ ಬಿ

ಎಸ್ ಯಡಿಯೂರಪ್ಪ ಅವರೆ. ಅವರ ವಿಶ್ವಾಸ, ಆಶೀರ್ವಾದ ಮತ್ತು ಮಾರ್ಗದರ್ಶನವೇ ನನ್ನ ಪಯಣಕ್ಕೆ ಅಡಿಗಲ್ಲಾಯಿತು ಎಂಬುದು ನನ್ನ ಹೆಮ್ಮೆಯ ಸಂಗತಿ,'' ಎಂದು ಮಾಜಿ ಶಾಸಕ ಹಾಗೂ ಕೆ ಎಲ ಇ ನಿರ್ದೇಶಕ ಡಾ. ವಿಶ್ವನಾಥ ಪಾಟೀಲ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.

ಅವರ ಪ್ರಕಾರ, ಯಡಿಯೂರಪ್ಪ ಅವರೊಂದಿಗೆ ಇರುವ ಸಂಬಂಧ ಕೇವಲ ರಾಜಕೀಯದ ಮಿತಿಯಲ್ಲಿ ಸೀಮಿತವಾಗಿರಲಿಲ್ಲ. ''ನಮ್ಮ ನಡುವಿನ ಬಾಂಧವ್ಯ ರಾಜಕೀಯ ಸಂಬಂಧವಲ್ಲS ಅದು ಕುಟುಂಬದ ಆತ್ಮೀಯತೆಯ ನಂಟು.

''ಅವರ ಸರಳತೆ, ನಿಸ್ವಾರ್ಥತೆ ಹಾಗೂ ಜನಪರ ಮನೋಭಾವವನ್ನು ನಾನು ಅತ್ಯಂತ ಹತ್ತಿರದಿಂದ ಅನುಭವಿಸಿದ್ದೇನೆ. ನನ್ನ ಮೇಲೆ ಅವರು ತೋರಿದ ಪ್ರೀತಿ, ಕಾಳಜಿ ಮತ್ತು ನಂಬಿಕೆ ನನ್ನ ಜೀವನದ ಅಮೂಲ್ಯ ಸಂಪತ್ತು,'' ಎಂದು ಡಾ.ವಿಶ್ವನಾಥ ಪಾಟೀಲ ಹೇಳಿದ್ದಾರೆ. ಯಡಿಯೂರಪ್ಪ ಅವರ ನಾಯಕತ್ವದ ಕುರಿತು ಮಾತನಾಡಿದ ಅವರು, ''ನಿಷ್ಠೆ, ಧೈರ್ಯ ಹಾಗೂ ಬಡವರಿಗಾಗಿ ಮಿಡಿಯುವ ಹೃದಯ ಹೊಂದಿದಂತಹ ಮಹಾನ್ ವ್ಯಕ್ತಿತ್ವ ಅಪರೂಪ. ಅವರು ಕೇವಲ ರಾಜಕಾರಣಿಯಲ್ಲ, ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಾಯಕ. ''ಇಂತಹ ಮಹಾನಾಯಕನ ಅಭಿಮಾನೋತ್ಸವದಲ್ಲಿ ಭಾಗಿಯಾಗುವುದು ನನಗೆ ಗೌರವ ಮಾತ್ರವಲ್ಲ, ಅದು ನನ್ನ ಬದುಕಿನ ಸ್ಮರಣೀಯ ಕ್ಷಣವಾಗಿದೆ ಎಂದರು.

ನಿಸ್ವಾರ್ಥ ಸೇವೆಯಿಂದ ಪ್ರಗತಿ ಸಾಧ್ಯ

ಯಮಕನಮರಡಿ: ನಿಸ್ವಾರ್ಥದಿಂದ ಕೆಲಸ ಮಾಡಿದ್ದಲ್ಲಿ ಸಂಘ-ಸಂಸ್ಥೆಗಳು ಪ್ರಗತಿಯತ್ತ ಸಾಗುತ್ತವೆ ಎಂದು ಕ್ಯಾರಗುಡ್ಡದ ಅವುಜೇಕರ ಆಶ್ರಮದ ಶ್ರೀ ಅಭಿನವ ಮಂಜುನಾಥ ಮಹಾಸ್ವಾಮಿಗಳು ಹೇಳಿದರು,

ಅವರು ಸಮೀಪದ ಮಸರಗುಪ್ಪಿ ಗ್ರಾಮದಲ್ಲಿ ಮಸರಗುಪ್ಪಿ ಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ಉದ್ಘಾಟಿಸಿ ಮಾತನಾಡಿ, ಸ್ವಾರ್ಥ ಇದ್ದರೆ ಅದು ಶವದ ಪೆಟ್ಟಿಗೆ ಇದ್ದಂತೆ ಎಂದರು.

ಸಾವಯವ ಗೊಬ್ಬರ ಬಳಕೆಗೆ ಸಲಹೆ

ಹುಕ್ಕೇರಿ: ರಾಸಾಯನಿಕಗೊಬ್ಬರ ಜಾಸ್ತಿ ಹಾಕಿದ್ರೆ ಮಣ್ಣು ಹಾಳಾಗುತ್ತೆ. ಮಣ್ಣು ಹಾಳಾದರೆ ಬೆಳೆ ಕಡಿಮೆ ಬರುತ್ತೆ.ಅದಕ್ಕೆ ಸಾವಯವಗೊಬ್ಬರ ಬಳಸಿ'' ಎಂದು ಸಹಾಯಕ ಕೃಷಿ ನಿರ್ದೇಶಕರಾದ ಆರ್.ಬಿ.ನಾಯ್ಕರ ರೈತರಿಗೆ ಸಲಹೆ ನೀಡಿದರು.

ತಾಲೂಕಿನ ಸಾರಾಪುರ ಗ್ರಾಮದಲ್ಲಿ ಭೂಮಿ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆ, ಬೀಜೋಪಚಾರ ಆಂದೋಲನ ಮತ್ತು ಕೀಟನಾಶಕ ಕುರಿತು ಆಯೋಜಿಸಿದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ವರ್ಷಗಳೂ ಗತಿದಷ್ಟು ಮಣ್ಣಿನ ಶಕ್ತಿ ಕಡಿಮೆ ಆಗಿದೆ. ಪ್ರತಿ ವರ್ಷರಾಸಾಯನಿಕಗೊಬ್ಬರ ಉಪಯೋಗಿಸಿ ಮಣ್ಣಿನ ಸತ್ವ ಕಳೆದುಕೊಂಡಿದೆ. ರೈತರು ನೀರಿಕ್ಷೆ ಮಾಡಿದಷ್ಟು ಬೆಳೆಯ ಇಳುವರಿ ಬರುತ್ತಿಲ್ಲ.ಕೊಟ್ಟಿಗೆಗೊಬ್ಬರ, ಸೊಪ್ಪು-ಸದೆಗೊಬ್ಬರ, ಎರೆಹುಳು ಗೊಬ್ಬರ ಹಾಕಿ.ಇದರಿಂದ ಮಣ್ಣು ಮೆತ್ತಗಾಗುತ್ತೆ.ನೀರು ಹಿಡಿದಿಟ್ಟುಕೊಳ್ಳುತ್ತೆ.ಬೆಳೆ ಚೆನ್ನಾಗಿ ಬರುತ್ತೆ. ಖರ್ಚು ಕ ಡಿಮೆಯಾಗುತ್ತದೆ. ರಾಸಾಯನಿಕ ಗೊಬ್ಬರಕ್ಕೆ ಒಂದು ಎಕರೆಗೆ 8 ಸಾವಿರ ರೂಪಾಯಿ ಖರ್ಚಾದರೆ, ಸಾವಯವಕ್ಕೆ 2-3 ಸಾವಿರ ಸಾಕು. ದುಡ್ಡು ಉಳಿಯುತ್ತೆ.

ಹಸಿರೆಲೆ ಗೊಬ್ಬರ ಮಾಡಿ ಮಳೆಗಾಲದ ಮೊದಲು ಡಯಂಚಾ ಸೆಣಬು ಬಿತ್ತಿ. 40 ದಿನಕ್ಕೆ ಉಳುಮೆ ಮಾಡಿ.ಇದರಿಂದ ಮಣ್ಣಿಗೆ ಶಕ್ತಿ ಬರುತ್ತೆ. ಬಿತ್ತಿದ ಬೆಳೆಯ ಇಳುವರಿಗೆ ಹೆಚ್ಚಾಗುತ್ತದೆ ಎಂದು ರೈತರಿಗೆ ಸಲಹೆ ನೀಡಿದರು.

ಕೃಷಿ ಅಧಿಕಾರಿ ಶಿವಾನಂದ ಕಮತ ಅವರು ಮಾತನಾಡಿ ಜಮೀನಿಗೆ ಶಕ್ತಿ ನೀಡುವಂತ ಜೀವಾಮೃತ ತಯಾರಿಕೆ ವಿಧಾನ ಕುರಿತು ವಿವರಿಸಿದರು.

ಆತ್ಮ ಯೋಜನೆ ಅಧಿಕಾರಿ ಸಮೀರ್‌ಲೋಕಾಪುರ ಅವರು ಕಡಿಮೆ ಭೂಮಿಯಲ್ಲಿ ಹೆಚ್ಚಿನ ಆದಾಯ ನೀಡುವ ಬೆಳೆಗಳ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಗ್ರಾಮ ಪಂಚಾಯತಿ ಅಭಿವೃದ್ಧಿಅಧಿಕಾರಿ ಅಮೃತಾ ಶಿರಹಟ್ಟಿ, ಗ್ರಾ.ಪಂ ಸದ್ಯರು, ಸಂಜೀವಿನಿ ಒಕ್ಕೂಟದ ಸಿಬ್ಬಂದಿ, ರೈತರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಹುಕ್ಕೇರಿ ತಾಲೂಕಿನ ಸಾರಾಪೂರ ಗ್ರಾಮದಲ್ಲಿ ಭೂಮಿ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆಯನ್ನು ಸಹಾಯಕ ಕೃಷಿ ನಿರ್ದೇಶಕರಾದ ಆರ್.ಬಿ.ನಾಯ್ಕರ ಉದ್ಘಾಟಿಸಿದರು.

ಶಿಕ್ಷಣದ ಜತೆ ಸಂಸ್ಕಾರ ಅಗತ್ಯ

ನಗರದ ಶ್ರೀ ಸಿದ್ದಲಿಂಗೇಶ್ವರ ಬಿ.ಸಿ.ಎ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಬಿ.ಸಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೋಡುಗೆ ಕಾರ್ಯಕ್ರಮವನ್ನು ಕಾರಾಗೃಹದ ಜೈಲರ ಸುಷ್ಮಾ ಒಡಗೇರಿ ಅವರು ಉದ್ಘಾಟಿಸಿದರು.

ಗೋಕಾಕ: ತಂದೆ ತಾಯಿಗಳ ತ್ಯಾಗಕ್ಕೆ ತಕ್ಕ ಪ್ರತಿಫಲ ದೊರಕಿಸಿಕೊಡುವ ಬಹುದೊಡ್ಡ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಕಾರಾಗೃಹದ ಜೈಲರ ಸುಷ್ಮಾ ಒಡಗೇರಿ ಹೇಳಿದರು.

ಗುರುವಾರದಂದು ನಗರದ ಶ್ರೀ ಸಿದ್ದಲಿಂಗೇಶ್ವರ ಬಿ.ಸಿ.ಎ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಬಿ.ಸಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೋಡುಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಪಡೆದು ಒಳ್ಳೆಯ ನಾಗರಿಕರಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭಾವಂತರಿಗೆ ಹೆಚ್ಚಿನ ಅವಕಾಶ ಇದ್ದು, ತಾವು ಪ್ರತಿಭಾವಂತರಾಗಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು. ವೇದಿಕೆಯಲ್ಲಿ ಆಡಳಿತಾಧಿಕಾರಿ ಅಡಿವೇಶ ಗವಿಮಠ, ಅರ್ಪನಾ ಕುಲಕರ್ಣಿ,ಅರ್ಬನ್ ಬ್ಯಾಂಕ್ ನಿರ್ದೇಶಕ ಮಹಾಂತೇಶ ಕಲ್ಲೋಳಿ, ಪ್ರವಿತ್ರಾ ಡಿಸೋಜಾ ಉಪಸ್ಥಿತರಿದ್ದರು.

ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ 2027ರ ಮೇ 4ಕ್ಕೆ

ಸಂಕೇಶ್ವರ : ಮುಂಬರುವ 2027ರ ಮೇ 4ರಿಂದ ಸಂಕೇಶ್ವರದ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವವು ಪ್ರಾರಂಭವಾಗಲಿದೆ ಎಂದು ಯಾತ್ರಾ ಕಮಿಟಿ ಪ್ರಮುಖ ಹಕ್ಕುದಾರರಾದ ಕುನಾಲ್ ಪಾಟೀಲ(ಖಾತೇದಾರ) ಇಂದಿಲ್ಲಿ ಹೇಳಿದರು.

ಪಟ್ಟಣದ ಮಹಾಲಕ್ಷ್ಮೀ ಮಂದಿರದಲ್ಲಿ ಶುಕ್ರವಾರ ಸಂಜೆಕರೆಯಲಾದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಮಿಟಿಯವರು, ಇದೇ 2026ರ ಜುಲೈ 21ರಂದು ಹವಾಲ್ದಾರಅವರ ಮನೆಯಿಂದ ಬೆಳಿಗ್ಗೆ 8 ಗಂಟೆಗೆಕೋಣ ಬಿಡುವಕರ್ಯಕ್ರಮ ನಡೆಯಲಿದೆಎಂದು ಹೇಳಿದರು.

2027ರ ಮಂಗಳವಾರಮೇ. 4ರಿಂದ ಮಹಾಲಕ್ಷ್ಮೀ ಮಹಾಯಾತ್ರೆ ಪ್ರಾರಂಭವಾಗಲಿದ್ದು, ಮೇ.4ರಂದು ಮುಂಜಾನೆ 8 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಬಳಿಕ ಬೆಳಗ್ಗೆ 8ರಿಂದ 9 ಗಂಟೆಯ ಒಳಗೆ ಖಾತೇದಾರ ಪಾಟೀಲ ಮನೆತನದಿಂದ ಹಾಲಗಂಬ ನಿಲ್ಲಿಸುವ ಕರ್ಯಕ್ರಮ, ಸಂಜೆ 4.30 ನಂತರ ಸೀಮೆಯಿಂದ ಲಕ್ಷ್ಮೀದೇವಿಯನ್ನು ತರುವುದು ಕಾರ್ಯ ಕ್ರಮ ನಡೆಯಲಿದೆ. ಅದೇ ದಿನ ಸಂಜೆ 6 ಗಂಟಗೆದೀಪಕ ಅಸೂದೆ ಅವರಿಂದ ಅಕ್ಕಿ ಬೀಳುವ ಕಾರ್ಯ ಕ್ರಮ ನಡೆಯಲಿದೆ ಎಂದು ನುಡಿದರು. 2027ರ ಮಂಗಳವಾರ ಮೇ. 11ರಂದು

ಸುದ್ದಿಗೋಷ್ಠಿಯಲ್ಲಿ ಯಾತ್ರಾ ಕಮೀಟಿ ಪ್ರಮುಖ ಹಕ್ಕುದಾರರಾದ ಕುನಾಲ್ ಪಾಟೀಲ(ಖಾತೇದಾರ) ಅವರು ಮಾತನಾಡಿದರು.

ಸಂಜೆ 6 ಗಂಟೆಗೆ ಮುಖ್ಯ ಅತಿಥಿಗಳಿಂದ ಮಹಾಲಕ್ಷ್ಮೀದೇವಿಗೆ ಪೂಜಾ ಹಾಗೂ ಉಡಿ ತುಂಬುವಕರ್ಯಕ್ರಮ ನಡೆಯಲಿದೆ. ಅದೇ ದಿನ ರಾತ್ರಿ 8 ಗಂಟೆಗೆ ಮಹಾಲಕ್ಷ್ಮೀದೇವಿ ಏಳುವುದು ಮತ್ತು ಹಕ್ಕುದಾರರ ಮನೆಗೆ ಹೋಗಿ ಉಡಿ ತುಂಬಿಸಿಕೊಳ್ಳುವ ಕರ್ಯಕ್ರಮ ನಡೆಯಲಿದೆ.

ಅದೇ ರೀತಿ 12 ಮೇ 2027ರಂದು ಬೆಳಗ್ಗೆ 5.30ಗಂಟೆ ಒಳಗೆ ಲಕ್ಷ್ಮೀದೇವಿ ಸ್ಥಾಪನೆ ಮಾಡುವದು. ಮುಂಜಾನೆ 8 ಗಂಟೆಯೊಳಗೆ ಕೋಣದ ಮೆರವಣಿಗೆ ಮಾಡಿರಂಗದಲ್ಲಿ ಬಿಡುವ ಕರ್ಯಕ್ರಮ ನಡೆಯಲಿದೆ. ಮೇ. 13 ಮತ್ತು 14ರಂದು ಪಟ್ಟಣದ ಎಲ್ಲ ಸಮಾಜದ ಭಕ್ತಾಧಿಗಳಿಂದ ದೀಡ್ ನಮಸ್ಕಾರ (ದಂಡವತ್) ದೇವಿಗೆ ಉಡಿ ತುಂಬುವಕರ್ಯಕ್ರಮ ನೆರವೇರಲಿದೆ. ಮೇ.15ರ 2027ರಂದು 2 ಗಂಟೆಯ ನಂತರ ಲಕ್ಷ್ಮೀದೇವಿಯನ್ನು ಸೀಮೆಗೆ ಕಳಿಸಿಕೊಡುವ ಕರ್ಯಕ್ರಮ ಜರುಗಲಿದೆ ಎಂದು ಖಾತೇದಾರ ಕುನಾಲ್ ಪಾಟೀಲ ಹೇಳಿದರು. ಯಾತ್ರಾ ಕಮೀಟಿಯ ಅಧ್ಯಕ್ಷ ಅಪ್ಪಾಸಾಹೇಬ ಶಿರಕೋಳಿ, ಗೌರವಾಧ್ಯಕ್ಷ ಸುನೀಲ ಪರ್ವತರಾವ್, ಕರ್ಯದರ್ಶಿ ಬಸನಗೌಡ ಪಾಟೀಲ ಉಪಕರ್ಯದರ್ಶಿ ಮಲ್ಲಿಕಾರ್ಜುನ ದೇಸಾಯಿ, ಹಕ್ಕುದಾರರಾದ ಗಿರೀಶ ಕುಲಕರ್ಣಿ,ಅಪ್ಪಾಸಾಹೇಬ ಶೆಟ್ಟಿಮನಿ, ಸಂತೋಷ ಹವಾಲ್ದಾರ್,ಬಸವಣ್ಣಿ ಕರ್ದೇಗೌಡ ಇವರುಗಳು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಬೆಟಗೇರಿ ದೇವರ ಜಾತ್ರೆ

ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮದ ಬೀರಸಿದ್ದೇಶ್ವರ ದೇವರ ಜಾತ್ರಾ ಮಹೋತ್ಸವ ಹಾಗೂ ದಾನಿಗಳಿಗೆ ಸತ್ಕಾರ ಸಮಾರಂಭ ಇದೇ ಶನಿವಾರ ಮೇ.9ರಿಂದ ರವಿವಾರ ಮೇ.11ರವರೆಗೆ ವಿಜೃಂಭನೆಯಿಂದ ನಡೆಯಲಿದೆ.

ಮೇ 9ರಂದು ಬೆಳಗ್ಗೆ 8ಗಂಟೆಗೆ ಬೀರಸಿದ್ದೇಶ್ವರ ದೇವರ ಗದ್ದುಗೆ ಮಹಾಪೂಜೆ, ವಜಿಹಾಭಿಷೇಕದ ಬಳಿಕ ಜಾತ್ರಾ ಮಹೋತ್ಸವದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದು, ಸಾಯಂಕಾಲ 5 ಗಂಟಗೆ ಪುರದೇವರ ಹಾಗೂ ಪರಸ್ಥಳದ ವಿವಿಧ ದೇವರ ವಾಲಗ ಕೂಡುವ ಕಾರ್ಯಕ್ರಮ ಜರುಗಿ, ಮಮದಾಪುರ ಮತ್ತು ಗೋಸಬಾಳದ ಬೀರಸಿದ್ದೇಶ್ವರ ಪಲ್ಲಕ್ಕಿ, ಮುಗಳಿಹಾಳದ ಮಾಳಿಂಗರಾಯ ದೇವರ ಪಲ್ಲಕ್ಕಿ ಬರಮಾಡಿಕೊಳ್ಳುವ ಕಾರ್ಯಕ್ರಮ ಸಡಗರದಿಂದ ಜರುಗಲಿವೆ. ಮೇ.10ರಂದು ಬೆಳಗ್ಗೆ 6 ಗಂಟಗೆ ಬೀರಸಿದ್ದೇಶ್ವರ ದೇವರ ಗದ್ದುಗೆ ಮಹಾಪೂಜೆ, ವಜಿಹಾಭಿಷೇಕ ನಡೆದು, ಮುಂಜಾನೆ 7 ಗಂಟಗೆ ಪಲ್ಲಕ್ಕಿ ಉತ್ಸವ, ಮುಂಜಾನೆ 11.30 ಗಂಟೆಗೆ ದಾನಿಗಳಿಗೆ ಸತ್ಕಾರ, ಮಹಾಪ್ರಸಾದ ನಡೆಯಿತು.

ಸುಣಧೋಳಿಯ ಅಭಿನವ ಶಿವಾನಂದ ಸ್ವಾಮಿಜಿ ಸಾನಿಧ್ಯ, ಮಮದಾಪೂರದ ಮೌನ ಮಲ್ಲಿಕಾರ್ಜುನ ಸ್ವಾಮಿಜಿ ನೇತೃತ್ವ, ಶಾಸಕ ಬಾಲಚಂದ್ರ ಜಾರಕಿಹೊಳಿ, ಸರ್ವೋತ್ತಮ ಜಾರಕಿಹೊಳಿ ಉದ್ಘಾಟನೆ, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ರಾಜೇಂದ್ರ ಸಣ್ಣಕ್ಕಿ, ಗ್ರಾಪಂ ಮಾಜಿ ಅಧ್ಯಕ್ಷ ಬಸವಂತ ಕೋಣಿ ಜ್ಯೋತಿ ಪ್ರಜ್ವಲಿಸಿದ್ದಾರೆ. ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಗಣ್ಯರು,

ಸಂತ-ಶರಣರು, ಗ್ರಾಪಂ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಸದಸ್ಯರು, ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಅನ್ನಸಂತರ್ಪನೆ ನೆರವೇರಿಸಲಿದ್ದಾರೆ. ರಾತ್ರಿ 9.30ಗಂಟೆಗೆ ಮುತ್ತೊರು ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ ಮತ್ತು ಸೋಲ್ಲಾಪೂರ ಗೇನಸಿದ್ದ ಗಾಯನ ಸಂಘದವರಿಂದ ಡೊಳ್ಳಿನ ಗಾಯನ ನಡೆಯಲಿದೆ. ಮೇ.11ರಂದು ಮುಂಜಾನೆ 8ಗಂಟೆಗೆ ಬೀರಸಿದ್ದೇಶ್ವರ ದೇವರ ಗದ್ದುಗೆ ಪೂಜೆ, ಅಭಿಷೇಕ, ಭಂಢಾರ ಒಡೆಯುವ ಕಾರ್ಯಕ್ರಮದ ಬಳಿಕ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಸ್ಥಳೀಯ ಬೀರಸಿದ್ದೇಶ್ವರ ಕಮೀಟಿ ಕಾರ್ಯದರ್ಶಿ ಮಾಯಪ್ಪ ಬಾಣಸಿ, ಸದಾಶಿವ ಕುರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಮೇ 31ಕ್ಕೆ

ಕಾರವಾರ: ಉತ್ತರ ಕನ್ನಡ ಜಿಲ್ಲಾ ಸರಕಾರಿ ನೌಕರರ ಪತ್ತಿನ ಸಹಕಾರಿ ಸಂಘ ನಿಯಮಿತಿ ಕಾರವಾರ ಇದರ ಸಂಘದ ಸದಸ್ಯರುಗಳ ಮಕ್ಕಳಲ್ಲಿ 2026 ರ ಮಾರ್ಚ್/ಏಪ್ರಿಲ್ ತಿಂಗಳಲ್ಲಿ ಜರುಗಿದ್ದ 10 ನೇ ತರಗತಿ ಪರೀಕ್ಷೆಯಲ್ಲಿ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಪ್ರಥಮವಾಗಿ ಹಾಜರಾದ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಗಳಿಸಿದ 3 ವಿದ್ಯಾರ್ಥಿಗಳಿಗೆ ಸಂಘದ ವತಿಯಿಂದ ಸನ್ಮಾನಿಸಿ ನಗದು ಬಹುಮಾನ ನೀಡಲಾಗುವುದು. ಸಂಘದಲ್ಲಿ ಸದಸ್ಯರಾದವರ ಮಕ್ಕಳು ಮಾತ್ರ ಈ ಸೌಲಭ್ಯಕ್ಕೆ ಅರ್ಹರಾಗಿದ್ದು, ಮಾರ್ಚ್/ ಏಪ್ರಿಲ್ 2026 ರಲ್ಲಿ ನಡೆದ 10 ನೇ ತರಗತಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯ ಪ್ರಥಮ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು. ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸದಸ್ಯರುಗಳ ಮಕ್ಕಳು ಮಾತ್ರ ಈ ಬಹುಮಾನಕ್ಕೆ ಅರ್ಹರಾಗಿರುತ್ತಾರೆ. ಕ್ರಮವಾಗಿರುವ ಅರ್ಹ ಅರ್ಜಿಗಳಲ್ಲಿ ಗರಿಷ್ಠ ಅಂಕಗಳಿಸಿದ ಎಸ್.ಎಸ್.ಎಲ್.ಸಿ ಮೊದಲ 3 ವಿದ್ಯಾರ್ಥಿಗಳಿಗೆ ಹಾಗೂ ದ್ವಿತೀಯ ಪಿಯುಸಿಯಲ್ಲಿ ಪ್ರಥಮ ಪರೀಕ್ಷೆಯ ಅಂಕ ಪಟ್ಟಿಯ ದೃಢೀಕೃತ ಅಂಕ ಪ್ರತಿ ಹಾಗೂ ಸಂಘಧ ಸದಸ್ಯತ್ವ ಸಂಖ್ಯೆಯೊಂದಿಗೆ ಅರ್ಜಿಯನ್ನು ಸಂಘದ ಕಾರ್ಯದರ್ಶಿಗಳಿಗೆ ಮೇ 31 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯದರ್ಶಿ ಮೊ.ಸಂ: 8217879585 ನ್ನು ಸಂಪರ್ಕಿಸುವಂತೆ ಸಂಘದ ಪ್ರಕಟಣೆ ತಿಳಿಸಿದೆ.

ತಿಪ್ಪೇಸ್ವಾಮಿಗೆ ಡಾಕ್ಟರೇಟ್ ಪದವಿ

ಕಾರವಾರ: ಕಾರವಾರದ ಸರಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಕೈಗಾರಿಕ ರಸಾಯನಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕ

ತಿಪ್ಪೇಸ್ವಾಮಿ ಎ.ಸಲ್ಲಿಸಿರುವ ""Synthesis, Structural magnetic and electrochemical properties of doped ferrites nanoparticles" ಎಂಬ ಸಂಶೋಧನಾ ಮಹಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯ 35ನೇ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದೆ. ಶಿವಮೊಗ್ಗ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರೊ.ಜಿ.ಕೃಷ್ಣಮೂರ್ತಿ ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಬಿಜೆಪಿ ಸರಕಾರದಿಂದ ಕೇವಲ ಸುಳ್ಳು ಭರವಸೆ

ಹುಬ್ಬಳ್ಳಿ: ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರ ಎಲ್ಲ ಕ್ಷೇತ್ರಗಳಲ್ಲೂ ವಿಫಲವಾಗಿದೆ ಎಂದು ವಿಧಾನ ಪರಿಷತ್ ನ ಮುಖ್ಯ ಸಚೇತಕ ಸಲೀಂ ಅಹ್ಮದ್ ಕಿಡಿಕಾರಿದ್ದಾರೆ. ನಗರದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಕ್ಕೆ ಬರುವ ಮುನ್ನ ನಿರುದ್ಯೋಗ ಸಮಸ್ಯೆ ಬಗೆಹರಿಸುವುದಾಗಿ ಮತ್ತು ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರೂ. ಹಾಕುವುದಾಗಿ ಬಿಜೆಪಿ ಸುಳ್ಳು ಭರವಸೆ ನೀಡಿ ಜನರನ್ನು ವಂಚಿಸಿದೆ ಎಂದು ಟೀಕಿಸಿದರು. 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಜಯಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಉಪಚುನಾವಣೆಗಳಲ್ಲಿ ಎರಡೂ ಕಡೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಇದಕ್ಕೆ ಸಾಕ್ಷಿ. ನಮ್ಮ ಸರಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿದ್ದು, ನುಡಿದಂತೆ ನಡೆದ ತೃಪ್ತಿ ನಮಗಿದೆ. ಬಿಜೆಪಿಯ ಸುಳ್ಳು ಪ್ರಚಾರಕ್ಕೆ ಮತದಾರರು ಮರಳಾಗುವುದಿಲ್ಲ ಎಂದರು.

ಫ್ಲೈ ಓವರ್ ಕಾಮಗಾರಿ ಶಾಸಕರಿಂದ ಪರಿಶೀಲನೆ

ಹುಬ್ಬಳ್ಳಿ: ನಗರದ ಸಂಚಾರ ದಟ್ಟಣೆ ನಿವಾರಿಸುವಲ್ಲಿ ನಿರ್ಮಾಣವಾಗುತ್ತಿರುವ ಬಹುನಿರೀಕ್ಷಿತ ಫ್ಲೈ ಓವರ್ ಕಾಮಗಾರಿಯನ್ನು ಶಾಸಕ ಮಹೇಶ ಟೆಂಗಿನಕಾಯಿ ಶುಕ್ರವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು. ಹಳೆ ಕೋರ್ಟ್ ವೃತ್ತದಿಂದ ಕೆನರಾ ಹೋಟೆಲ್ವ ರೆಗಿನ ರಸ್ತೆ ಕಾಮಗಾರಿಯನ್ನು ವೀಕ್ಷಿಸಿದ ಶಾಸಕರು, ಕೆಲಸದ ಪ್ರಗತಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕಾಮಗಾರಿಯ ಸ್ಥಳದಲ್ಲಿ ಸಂಚಾರಕ್ಕೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಸೂಚಿಸಿದರು. ನಗರದ ಹೃದಯಭಾಗದಲ್ಲಿ ನಡೆಯುತ್ತಿರುವ ಈ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಕಾಮಗಾರಿ ಸಾಗಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಉಪ ಮೇಯರ್‌ಸಂತೋಷ ಚವ್ಹಾಣ, ರವಿ ನಾಯಕ, ಅಧಿಕಾರಿಗಳು ಉಪಸ್ಥಿತರಿದ್ದರು.

ಧ್ವನಿ ಆರೋಗ್ಯ ರಕ್ಷಣೆಗೆ ಕಾರ್ಯಾಗಾರ ಮೇ 10ಕ್ಕೆ

ಧಾರವಾಡ: ಸಂಗೀತ ಗಾಯಕರು ಹಾಗೂ ಧ್ವನಿ ಕಲಾವಿದರು ತಮ್ಮ ಧ್ವನಿ ಆರೋಗ್ಯ ಕಾಪಾಡಿಕೊಳ್ಳುವ ಹಿತದೃಷ್ಟಿಯಿಂದ ಧಾರವಾಡದಲ್ಲಿ ವಾಯ್ಸ್ ಕಲ್ಚರ್ ವರ್ಕ್ ಶಾಪ್ ಮೇ 10 ರಂದು ನಡೆಯಲಿದೆ ಎಂದು ಭಾರತೀಯ ಸಂಗೀತ ವಿದ್ಯಾಲಯದ ಅಧ್ಯಕ್ಷೆ ಡಾ. ಸೌಭಾಗ್ಯಾ ಕುಲಕರ್ಣಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಸಂಗೀತ ವಿದ್ಯಾಲಯ, ಬಿಎಂಎ ಬ್ರಾಂಚ್ ಧಾರವಾಡ, ಸಂಸ್ಕಾರ ಭಾರತೀಯ ಧಾರವಾಡ ವತಿಯಿಂದ ಕಾರ್ಯಕ್ರಮ ನಡೆಯಲಿದೆ ಎಂದರು. ಮುಖ್ಯ ಅತಿಥಿಯಾಗಿ ಕರ್ನಾಟಕ ವಿವಿ ಕುಲಸಚಿವ ಡಾ.ಎಮ್.ಎಚ್. ಅಗಡಿ, ಪುಣೆಯ ಡಾ.ಮಿಲಿಂದ ಭೋವಿ, ಡಾ.ಜಗದೀಶ ನಿರಡಿ, ಡಾ. ಶ್ರೀಧರ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಶಿಧರ ನರೇಂದ್ರ, ಶಶಿಧರ ಕುಲಕರ್ಣಿ ಇದ್ದರು.

ಮೇ 12ಕ್ಕೆ ಹಾವೇರಿಯಲ್ಲಿ ಮಿನಿ ಉದ್ಯೋಗ ಮೇಳ

ಹಾವೇರಿ: ಹಾವೇರಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ವಿವಿಧ ಖಾಸಗಿ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಭರ್ತಿ ಮಾಡಿಕೊಳ್ಳಲು ''ಮಿನಿ ಉದ್ಯೋಗ ಮೇಳ''ವನ್ನು ಮೇ 12 ರಂದು ಬೆಳಿಗ್ಗೆ 10 ಗಂಟೆಗೆ ಹಾವೇರಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಈ ಮೇಳದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಹಾಗೂ ಯಾವುದೆ ಪದವಿ ಪಡೆದ ಉದ್ಯೋಗಾಕಾಂಕ್ಷಿಗಳು ಭಾಗವಹಿಸಬಹು ದಾಗಿದೆ. ತಮ್ಮ ಬಯೋಡಾಟಾ ಮತ್ತು ಆಧಾರ್‌ಕಾರ್ಡ್ ಝರಾಕ್ಸ್ ಪ್ರತಿಯೊಂದಿಗೆ ಹಾಜರಾಗಲು ತಿಳಿಸಿದೆ. ಮಾಹಿತಿಗಾಗಿ ಮೊ. 8748981288 ಹಾಗೂ ಮೊ.9019317247 ಸಂಪರ್ಕಿಸಬಹು ದೆಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಸಲೀಂ ಅಹ್ಮದ್ } ವಿಧಾನ ಪರಿಷತ್ ಸದಸ್ಯ

ಶೃಂಗೇರಿ ಕ್ಷೇತ್ರದ ಮರು ಎಣಿಕೆ ಪ್ರಕ್ರಿಯೆಯಲ್ಲಿ ದೊಡ್ಡ ಮಟ್ಟದ ಷಡ್ಯಂತ್ರ ನಡೆದಿದೆ. ಮತಪತ್ರಗಳನ್ನು ಟ್ಯಾಂಪರ್‌ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಲಾಗಿದೆ. ಚುನಾವಣಾ ಆಯೋಗದ ಅಧಿಕಾರಿಗಳೂ ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ. ಅಂದು ಸಿಂಧು ಆಗಿದ್ದ ಮತಗಳು ಇಂದು ಅಸಿಂಧು ಆಗಿದ್ದು ಹೇಗೆ? ಇದು ನೇರವಾದ ಮತ ಚೋರಿತನ ಅಲ್ಲದೇ ಮತ್ತೇನು ?

ಕವಿವಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ | ಪ್ರೊ. ಬಸವರಾಜ ಕಲ್ಗುಡಿ ಚಾಲನೆ

ಶ್ರೇಣೀಕೃತ ಸಮಾಜ ಸೃಷ್ಟಿಸಿದ ತಾತ್ವಿಕ ಚಿಂತನೆ

ಧಾರವಾಡ: ಕನ್ನಡ ನಾಡಿನಲ್ಲಿ ಹಲವಾರು ಧರ್ಮಗಳು ಸಾಮರಸ್ಯದ ಬಾಳ್ವೆಯ ಅರಿವು ಮತ್ತು ಅನುಭಾವವನ್ನು ನೀಡಿದವು ಎಂದು ಬೆಂಗಳೂರು ವಿವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಬಸವರಾಜ ಕಲ್ಗುಡಿ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವವಿದ್ಯಾಲಯ ಶ್ರೀ ಬಸವೇಶ್ವರ ಪೀಠ ಕವಿವಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಿದ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಸಾಮರಸ್ಯ ಹೊಂದಿದ ಜೀವನ ನಡೆಸಲು ಅನೇಕ ಧರ್ಮಗಳು ತಾತ್ವಿಕ ಚಿಂತನೆಗಳನ್ನು ಹೊಂದಿವೆ. ಕೇರಳದಲ್ಲಿ ನಾರಾಯಣ ಗುರು ಅವರು ಅದ್ವೈತ ಸಿದ್ಧಾಂತವನ್ನು ಬಳಸಿಕೊಂಡು ಕ್ರಾಂತ್ರಿಯ ಮೂಲಕ ಅಮಾನವೀಯ ಕೃತ್ಯದ ಕುರಿತು ಪ್ರತಿಭಟಿಸಿದರು.

ದೇಶದಲ್ಲಿ ಅನೇಕ ತಾತ್ವಿಕ ಧಾರ್ಮಿಕ ಚಿಂತನೆಗಳು ತಮ್ಮದೇ ವಿಚಾರ ತತ್ವಗಳನ್ನು ನೀಡಿದವು. ಕೆಲವು ತಾತ್ವಿಕ ಚಿಂತನೆಗಳು ಶ್ರೇಣೀಕೃತ ಸಮಾಜ ಕಟ್ಟಿದವು. ಜೈನ ಮತ್ತು ಬೌದ್ಧ ಧರ್ಮಗಳು ಕನ್ನಡ ನಾಡಿನಲ್ಲಿ ಸಮರಸದ ಬಾಳ್ವೆಯ ಅರಿವು ನೀಡಿದವು. ಅಲ್ಲಮ ಮತ್ತು ಮುಧುರ ಚೆನ್ನರು ಜ್ಞಾನ ಮತ್ತು ಅರಿವಿನ ಸಾಮರಸ್ಯ ನಡೆಸಲು ವಿಶೇಷ ಸಂದೇಶ ನೀಡಿದರು. ಉತ್ತರ ಕರ್ನಾಟಕ ಕನ್ನಡ ಸಾಹಿತ್ಯ ತನ್ನದೇ ಆದ ಪರಂಪರೆ ಸೌಹಾರ್ದತೆ, ಸಹನೆ ಸಾಮರಸ್ಯ ಒಳಗೊಂಡಿದೆ ಎಂದರು. ಕರ್ನಾಟಕ ವಿವಿ ಪ್ರಭಾರ ಕುಲಸಚಿವ ಪ್ರೊ.ಎ.ಎಚ್.ಅಗಡಿ ಮಾತನಾಡಿ, 12ನೇ ಶತಮಾನದಲ್ಲಿ ವಚನಕಾರರು ತಮ್ಮ ವಚನಗಳ ಮೂಲಕ ಕಾಯಕದ ಸಂದೇಶ ನೀಡಿದ್ದಾರೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಪ್ರೊ.ಎ.ಎಂ. ಖಾನ್ ಮಾತನಾಡಿ, ಭಾರತದಲ್ಲಿ ವಿಭಿನ್ನವಾದ ಪರಂಪರೆ ಬೆಳೆಸುವಲ್ಲಿ ಅನುಭಾವ ಸಹಾಯಕವಾಗಿದೆ ಎಂದರು.

ಶಿಕ್ಷಣದ ಮೂಲಕ ಮನುಷ್ಯನಲ್ಲಿ ಉತ್ತಮ ಸಂಸ್ಕಾರ ಬೆಳೆಸುತ್ತದೆ. ಎಲ್ಲಾ ಧರ್ಮಗಳು ಶಾಂತಿ ಮತ್ತು ಸಾಮರಸ್ಯ ಮೂಡಿಸುವಲ್ಲಿ ಸಹಾಯಕವಾಗಿವೆ ಎಂದರು.

ಅನುಭಾವದ ಪರಿಕಲ್ಪನೆ ಕುರಿತು ಬೆಂಗಳೂರು ವಿವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಬಸವರಾಜ ಕಲ್ಗುಡಿ ಮಾತನಾಡಿ, ಅನುಭಾವ ಎನ್ನುವುದು ನಮ್ಮನ್ನು ನಾವು ಅರಿಯುವುದು. ಅನೇಕ ವಚನಕಾರರು ಅನುಭಾವ ಕುರಿತು ಸ್ಪಷ್ಟ ಪರಿಕಲ್ಪನೆ ಹೊಂದಿದ್ದರು. ಅನುಭಾವಕ್ಕೆ ಒಂದು ಚರಿತ್ರೆ ಇದೆ ಎಂದರು ಎಂದರು.

ಬೆಳಗಾವಿ ಜೆ.ಎನ್.ಎಮ.ಸಿ ವಿವಿಯ ಡಾ. ಅವಿನಾಶ ಕವಿ ಮಾತನಾಡಿ, 12ನೇ ಶತಮಾನದಲ್ಲಿ ಎಲ್ಲಾ ವರ್ಗದ ಜನರಿಗೆ ಸಹಬಾಳ್ವೆ ನೀಡುವಲ್ಲಿ ಶರಣ ಸಂಸ್ಕೃತಿ ಒಂದು ಕ್ರಾಂತಿ ಎಂದು ಕರೆಯಲಾಯಿತು. ವಚನಕಾರರು ಅನುಭಾವದ ಪರಂಪರೆಯನ್ನು ಕೊಟ್ಟು ಹೋಗಿದ್ದಾರೆ. ಅನುಭಾವಕ್ಕೆ ಸಾಹಿತ್ಯದಲ್ಲಿ ಅನೇಕ ವ್ಯಾಖ್ಯಾನವನ್ನು ನೀಡಲಾಗಿದೆ. ಅನುಭಾವ ಕೇವಲ ಧಾರ್ಮಿಕ ಪರಂಪರೆಗೆ ಸಿಮಿತವಾಗಿಲ್ಲ ಎಂದರು.

ತುಮಕೂರು ವಿವಿಯ ಪ್ರಾಧ್ಯಾಪಕಿ ಡಾ. ಗೀತಾ ವಸಂತ ಅವರು ದಾಸ ಸಾಹಿತ್ಯದಲ್ಲಿ ಅನುಭಾವ ಕುರಿತು, ಹಂಪಿ ವಿವಿ ಪ್ರಾಧ್ಯಾಪಕ ಪ್ರೊ.ವೆಂಕಟಗಿರಿ ದಳವಾಯಿ ತಳಸಮುದಾಯದ ಸಾಹಿತ್ಯದಲ್ಲಿ ಅನುಭಾವ ಕುರಿತು ಮಾತನಾಡಿದರು.

ಕವಿವಿ ಮೌಲ್ಯಮಾಪನ ಕುಲಸಚಿವ ಡಾ.ಎ.ಎಂ. ಕಡಕೋಳ, ಶ್ರೀಬಸವೇಶ್ವರ ಪೀಠದ ಸಂಯೋಜಕ ಡಾ.ನಿಜಲಿಂಗಪ್ಪ ಮಟ್ಟಿಹಾಳ, ಸಿಂಡಿಕೇಟ್ ಸದಸ್ಯರಾದ ಶ್ಯಾಮ ಮಲ್ಲನಗೌಡರ, ರಾಬರ್ಟ್ ದದ್ದಾಪೂರಿ, ಪ್ರೊ.ವೀರಣ್ಣ ರಾಜೂರ, ಡಾ.ಕೆ. ಆರ್.ದುರ್ಗಾದಾಸ, ಡಾ.ಈರಣ್ಣ ಇಂಜನಗೇರಿ, ಪ್ರೊ.ಶಿರಾಳಶೆಟ್ಟಿ, ಸೇರಿದಂತೆ ಪ್ರಾಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಲಬುರಗಿ ಕೇಂದ್ರೀಯ ವಿವಿ ಪ್ರಾಧ್ಯಾಪಕಿ ಡಾ. ಜಯದೇವಿ ಜಂಗಮಶೆಟ್ಟಿ ವಚನ ಸಂಗೀತವನ್ನು ನಡೆಸಿಕೊಟ್ಟರು.

ಧಾರವಾಡದ ಕರ್ನಾಟಕ ವಿವಿಯ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣವನ್ನು ಗಣ್ಯರು ಉದ್ಘಾಟಿಸಿದರು.

ಶಿಕ್ಷಣ ಶುಲ್ಕದ ಹೆಸರಿನಲ್ಲಿ ಹಗಲು ದರೋಡೆ

ಹಾವೇರಿ: ಡೊನೇಷನ್ ಹಾವಳಿ ವಿರೋಧಿಸಿ ಜಿಲ್ಲಾ ಶಿಕ್ಷಣ ರೆಗುಲೇಟಿಂಗ್ ಪ್ರಾಧಿಕಾರ ರಚಿಸುವಂತೆ, ಹಣ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಎಸ್‌ಎಫ್‌ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ್ ಪೂಜಾರ್‌ಮಾತನಾಡಿ, ಸರಕಾರದ ನಿಯಮಗಳ ಪ್ರಕಾರ ನಿಗದಿಪಡಿಸಿದಂತೆ ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಶುಲ್ಕ ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ. ಇದಕ್ಕೂ ಹೆಚ್ಚು ಸಂಗ್ರಹಿಸುವುದು ಕಾನೂನಿನ ಪ್ರಕಾರ ಅಪರಾಧ, ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಕ ತರಗತಿಗೆ ಪ್ರವೇಶ ಪರೀಕ್ಷೆ ನಡೆಸಬಾರದು ಎಂದು ಶಿಕ್ಷಣ ಹಕ್ಕು ಕಾಯ್ದೆ ಹೇಳುತ್ತದೆ. ಪ್ರವೇಶ ಪರೀಕ್ಷೆ ನಡೆಸುವ ಶಾಲೆಗಳಿಗೆ 25 ಸಾವಿರ ರೂ. ದಂಡ ಹಾಕಬೇಕೆಂದು ಕಾಯಿದೆ ಹೇಳಿದೆ. ವಿದ್ಯಾರ್ಥಿಗಳ ಸಂಖ್ಯೆ, ಕಲಿಕಾ ಮಾಧ್ಯಮ, ಶುಲ್ಕದ ವಿವರ, ಕ್ರೀಡಾಂಗಣ, ಶೌಚಾಲಯ, ಶಿಕ್ಷಕರ ಸಂಖ್ಯೆ, ಮಾಹಿತಿಯನ್ನು ಶಾಲಾ ಆವರಣದಲ್ಲಿ ಪ್ರಕಟಿಸಬೇಕೆಂದು ಶಿಕ್ಷಣ ಇಲಾಖೆ ಆದೇಶಿಸಿದೆ. ಆದರೆ, ಇದನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಜಾರಿ ಮಾಡಿಲ್ಲ. ಡಿ.ಡಿ.ಪಿ.ಐ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದನ್ನು ಪರಿಶಿಲಿಸಬೇಕೆಂದು ಹೇಳಿದ್ದರೂ ಪರಿಶೀಲನೆ ಮಾಡಿಲ್ಲ ಎಂದು ಪ್ರತಿಭಟನಾಕಾರರು ಹರಿಹಾಯ್ದರು.

2009ರ ಆರ್.ಟಿ.ಇ ಕಾಯಿದೆ ಜಾರಿಯಾದರೂ ಸಮರ್ಪಕ ಪಾಲನೆಯಾಗುತ್ತಿಲ್ಲ. ಬಹುತೇಕ ಖಾಸಗಿ ಶಾಲೆಗಳಲ್ಲಿ ಲಕ್ಷಾಂತರ ರೂ. ವರೆಗೂ ಹಣ ವಸೂಲಿ ಮೂಲಕ ಹಗಲು ದರೋಡೆ ಮಾಡುತ್ತಿದ್ದಾರೆ. ಕೆಲ ಪ್ರತಿಷ್ಠಿತ ಪಿಯು ಕಾಲೇಜುಗಳು ಜೆಇಇ ನೀಟ್, ಸಿಇಟಿ ಹೆಸರಿನಲ್ಲಿ ಶಾಲಾ ಕಾಲೇಜುಗಳು ಅನಧಿಕೃತ ಟ್ಯೂಟರಿಯಲ್ಸ್ ನಡೆಸುತ್ತಿವೆ ಎಂದು ಆರೋಪಿಸಿದರು. ಮತ್ತೊಂದೆಡೆ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿವೆ. ಈಗಾಗಲೆ ಖಾಸಗಿ ಶಾಲೆಗಳಲ್ಲಿ ದಾಖಲಾತಿ ಹೆಸರಲ್ಲಿ ಡೊನೇಷನ್ ಮನಬಂದತೆ ವಸೂಲಿ ಮಾಡಲಾಗುತ್ತಿದೆ ಎಂದು ದೂರಿದರು.

ಕಾಲೇಜ್ ಘಟಕದ ಅಧ್ಯಕ್ಷ ಚೈತ್ರಾ ಕೊರವರ ಮಾತನಾಡಿ, ಶಾಲೆಗಳಲ್ಲಿ ಪ್ರವೇಶ ಪರೀಕ್ಷೆ ನಡೆಸುವುದರ ಜೊತೆಗೆ ನೋಟ್ಬುಕ್, ಶಾಲಾ ಬ್ಯಾಗ್, ಬೂಟು, ಬಟ್ಟೆ, ಜಾಮಿಟ್ರಿ ಬಾಕ್ಸ್ ಕಡ್ಡಾಯವಾಗಿ ಆಯಾ ಶಾಲೆಗಳಲ್ಲಿ ಕೊಳ್ಳಬೇಕೆಂದು ಶಾಲೆಗಳನ್ನು ಅಂಗಡಿಯಾಗಿಸಿವೆ ಎಂದರು.

ಜಿಲ್ಲಾ ಮುಖಂಡರಾದ ಕೃಷ್ಣ ನಾಯ್ಕ, ಮಾಲತೇಶ್ ಇಚ್ಚಂಗಿ, ಪುನೀತ್ ಕುಮಾರ್, ಬೀರಪ್ಪ, ಮನು ಎನ್, ನಾಗರಾಜ್ ಎಂ ವೈ, ನವೀನ್ ಬ ಕೆ, ಕುಮಾರ ಸಿ, ಮಾಲತೇಶ್ ಸಿ, ಆಕಾಶ್ ಕೆ, ಪರಶುರಾಮ ಮಾದರ, ಪ್ರದೀಪ ಲಮಾಣಿ, ಮಲ್ಲಿಕಾರ್ಜುನ ಹಡಪದ, ಉಮೇಶ್ ಡಿ ಎಸ್, ಸಿದ್ದಲಿಂಗೇಶ, ಯಶವಂತ, ಮಾಲತೇಶ್ ಕೆ ಟಿ, ಮಜಮಿಲ್ ಅಕ್ಕುವಳ್ಳಿ, ನಂದೀಶ್ ಎಲ್, ಕಿರಣ್ ಕುಮಾರ್, ರಾಜು, ಮಹಾಂತೇಶ್, ಹಾಗೂ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹಾವೇರಿಯಲ್ಲಿ ಡೊನೇಷನ್ ಹಾವಳಿ ವಿರೋಧಿಸಿ ಎಸ್‌ಎಫ್‌ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನರೇಗಾ ಯೋಜನೆಗೆ ವೇಗ, ದಿನಕ್ಕೆ 370 ರು. ಕೂಲಿ

ಹಾವೇರಿ: ಹಾವೇರಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಪರಿಣಾಮಕಾರಿಯಾಗಿ ಜಾರಿಯಾಗುತ್ತಿದ್ದು, ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಒದಗಿಸಲಾಗುತ್ತಿದೆ ಎಂದು ಜಿಪಂ ಉಪ ಕಾರ್ಯದರ್ಶಿ ಡಾ.ಪುನಿತ್ ಅವರು ತಿಳಿಸಿದ್ದಾರೆ.

ಜಿಲ್ಲೆಯ 223 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 8,600ಕ್ಕೂ ಅಧಿಕ ಕೂಲಿಕಾರರು ವಿವಿಧ ಕಾಮಗಾರಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮಸ್ಥರಿಗೆ ಊರಿನಲ್ಲೇ ಕೆಲಸ ಲಭ್ಯವಾಗುತ್ತಿದ್ದು ವಲಸೆ ಕಡಿಮೆಯಾಗಿ ಕುಟುಂಬಗಳ ಆರ್ಥಿಕ ಸ್ಥಿತಿಗೂ ನೆರವಾಗುತ್ತಿದೆ. ಬಡ ಕುಟುಂಬಗಳಿಗೆ ವರ್ಷಕ್ಕೆ ಕನಿಷ್ಠ 100 ದಿನಗಳ ಕೂಲಿ ಆಧಾರಿತ ಉದ್ಯೋಗ ಒದಗಿಸುವುದು ಈ ಯೋಜನೆ ಉದ್ದೇಶ. ಈ ಯೋಜನೆಯಡಿ ಕೆರೆ ಅಭಿವೃದ್ಧಿ, ಮಳೆ ನೀರು ಸಂಗ್ರಹ, ತೋಟಗಾರಿಕೆ, ಹಳ್ಳಿಗಳ ರಸ್ತೆ ಅಭಿವೃದ್ಧಿ, ಶಾಲಾ ಅವರಣ ಸುಧಾರಣೆ, ಅಂಗನವಾಡಿ ಕಟ್ಟಡ ಸುತ್ತಮುತ್ತಲಿನ ಕಾಮಗಾರಿಗಳು, ನೀರು ಹರಿವಿನ ಕಾಲುವೆ, ಗದ್ದೆ ಬದು ನಿರ್ಮಾಣ ಶಾಶ್ವತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಈಗಾಗಲೇ ಸುಮಾರು 26,000ಕ್ಕೂ ಅಧಿಕ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಹಂತ ಹಂತವಾಗಿ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಕಾಮಗಾರಿಗಳನ್ನು ಆರಂಭಿಸಲಾಗುತ್ತಿದೆ. ವಿಶೇಷವಾಗಿ ಮಹಿಳಾ ಕೂಲಿಕಾರರು, ಹಿರಿಯ ನಾಗರಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಈ ಯೋಜನೆ ಪ್ರಮುಖ ಆಧಾರವಾಗುತ್ತಿದೆ. ಕೂಲಿಕಾರರಿಗೆ ಪ್ರತಿದಿನ 370 ರು. ಕೂಲಿ ನೀಡಲಾಗುತ್ತಿದೆ. ಕೂಲಿ ಮೊತ್ತ ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಜಮೆಯಾಗುವುದರಿಂದ ಪಾರದರ್ಶಕತೆ ಮತ್ತು ಭದ್ರತೆ ಹೆಚ್ಚಿದೆ. ಗ್ರಾಮೀಣ ಪ್ರದೇಶದ ಜನರು ತಮ್ಮ ಊರಿನಲ್ಲಿಯೇ ಕೆಲಸ ಮಾಡಿ ಆದಾಯಗಳಿಸುವ ಮೂಲಕ ಕುಟುಂಬದ ಖರ್ಚು,ಮಕ್ಕಳ ಶಿಕ್ಷಣ, ಆರೋಗ್ಯ, ಇತರೆ ಅಗತ್ಯಗಳನ್ನು ಪೂರೈಸಿಕೊಳ್ಳಲು ನೆರವಾಗುತ್ತಿದೆ. ಗ್ರಾಮಸ್ಥರು ತಮ್ಮ ಹಕ್ಕಿನ ಉದ್ಯೋಗ ಪಡೆದು ಯೋಜನೆಯ ಸದುಪಯೋಗ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ.

ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಸಂಬಂಧಿಸಿದ ಗ್ರಾಮ ಪಂಚಾಯತಿಯನ್ನು ಸಂಪರ್ಕಿಸಬಹುದಾಗಿದೆ. ಉಚಿತ ಸಹಾಯವಾಣಿ ಸಂಖ್ಯೆ 8277506000 ಗೆ ಕರೆ ಮಾಡಿ ಮಾಹಿತಿಯನ್ನು ಪಡೆಯಬಹುದು ಎಂದು ಉಪ ಕಾರ್ಯದರ್ಶಿ ಮನವಿ ಮಾಡಿಕೊಂಡಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಖಾತರಿ ಕೆಲಸ ಒದಗಿಸಲಾಗುತ್ತಿದೆ.

ಕಸಾಪ ಸಂಸ್ಥಾಪನಾ ದಿನಾಚರಣೆ | ವಿದ್ಯಾರ್ಥಿಗಳಿಗೆ ಸನ್ಮಾನ

ವಿದ್ಯಾರ್ಥಿಗಳು ಸಮಾಜಮುಖಿಯಾಗಿ ಬೆಳೆಯಲಿ

ರಟ್ಟೀಹಳ್ಳಿ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ 112ನೇ ಕಸಾಪ ಸಂಸ್ಥಾಪನಾ ದಿನ ಹಾಗೂ ತಾಲೂಕಿನ ವಿವಿಧ ಶಾಲಾ-ಕಾಲೇಜುಗಳ ಎಸ್‌ಎಸ್‌ಎಲ್ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಪಟ್ಟಣದ ಪ್ರಿಯದರ್ಶಿನಿ ವಿದ್ಯಾಲಯದಲ್ಲಿ ನಡೆಯಿತು.

ಕಬ್ಬಿಣಕಂತಿಮಠದ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಗಳು ಆಶೀರ್ವಚನ ನೀಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜಮುಖಿಯಾಗಿ ಬೆಳೆಯಬೇಕು ಎಂದು ಸಲಹೆ ನೀಡಿದರು. ಪ್ರಾಚಾರ್ಯರಾದ ಕೊಣತಿ ಅವರು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಿಂದ ಕನ್ನಡದ ಅಭಿವೃದ್ಧಿಗೆ ನೀಡುತ್ತಿರುವ ಕೊಡುಗೆಗಳ ಬಗ್ಗೆ ತಿಳಿಸಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷ ರವೀಂದ್ರ ಮುದಿಯಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಟ್ಟೀಹಳ್ಳಿ ತಾಲೂಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆ ಶ್ಲಾಘನೀಯವಾಗಿದ್ದು, ಇಂತಹ ಸನ್ಮಾನ ವಿದ್ಯಾರ್ಥಿಗಳಲ್ಲಿ ಪ್ರೇರಣೆ ಹೆಚ್ಚಿಸುತ್ತವೆ ಎಂದು ಹೇಳಿದರು. ತಾಕಸಾಪ ಅಧ್ಯಕ್ಷರಾದ ಎಂ.ಸಿ. ತುಮ್ಮಿನಕಟ್ಟಿ ಅವರು ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳಾದ ನೀವು ತಂದೆ-ತಾಯಿ, ಗುರುಗಳು ಮತ್ತು ಸಮಾಜದ ಹೆಮ್ಮೆ. ನಿಮ್ಮ ಸಾಧನೆಯೊಂದಿಗೆ ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಶ್ರಮಿಸಬೇಕು ಎಂ ದರು.

ಈ ವೇಳೆ ಎಸ್‌ಎಸ್‌ಎಲ್ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಸುರೇಶ ಮಲ್ಲಾಡದ ಸ್ವಾಗತಿಸಿದರು. ಹೇಮಣ್ಣ ಮಕರಿ ನಿರೂಪಿಸಿದರು. ಪ್ರತಿಭಾ ಪುರಸ್ಕಾರ ಸನ್ಮಾನವನ್ನು ಹೊಸರಾಯಪ್ಪ ನಿರ್ವಹಿಸಿದರು. ವಂದನಾರ್ಪಣೆ ಬಿರೇಶ ಕಲ್ಲೆಣ್ಣ ಸಲ್ಲಿಸಿದರು.

ಎನ್.ಸಿ. ಕಠಾರೆ, ಶ್ರೀ ಗಣೇಶಣ್ಣ ವೆರ್ಣೇಕರ್, ಗುಡ್ಡಾಚಾರಿ ಕಮ್ಮಾರ, ಪ್ರಾಚಾರ್ಯರಾದ ಎ.ಜಿ. ರಾಘವೇಂದ್ರ, ಎಸ್.ಬಿ. ಪಾಟೀಲ್, ಡಾ.ಮಂಜುನಾಥ ತಲ್ಲೂರ, ಶಿವಾನಂದ ಪೂಜಾರ, ಮಲ್ಲಿಕಾರ್ಜುನ ಹೇರಕಾರ, ಕುಸುಮಾವತಿ ಮೇಗಳಮನಿ ಇದ್ದರು.

ರಟ್ಟೀಹಳ್ಳಿ ಪ್ರಿಯದರ್ಶಿನಿ ವಿದ್ಯಾಲಯದಲ್ಲಿ ಕಸಾಪ ಸಂಸ್ಥಾಪನಾ ದಿನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ನಾನಾ ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾವೇರಿ ತಾಲೂಕಿನ ಕುರುಬಗೊಂಡ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕರಾದ ಬಸವರಾಜ ಶಿವಣ್ಣನವರ ಭೂಮಿ ಪೂಜೆ ನೆರವೇರಿಸಿದರು.

ಹಾವೇರಿ: ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಹಾವೇರಿ ತಾಲೂಕಿನ ಕುರುಬಗೊಂಡ, ದೇವಿಹೊಸೂರು, ವಿವಿಧ ಗ್ರಾಮಗಳಲ್ಲಿ 2.49ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರಾದ ಬಸವರಾಜ ಶಿವಣ್ಣನವರ ಚಾಲನೆ ನೀಡಿದರು. ಕುರುಬಗೊಂಡ ಗ್ರಾಮದಲ್ಲಿ 30ಲಕ್ಷ ರೂ., ವೆಚ್ಚದಲ್ಲಿ ಕುರುಬಗೊಂಡ-ಹೊಂಬರಡಿ ರಸ್ತೆ ಅಭಿವೃದ್ಧಿ, 30ಲಕ್ಷ ರೂ., ವೆಚ್ಚದಲ್ಲಿ ಕರುಬಗೊಂಡದಿಂದ ಬ್ಯಾಡಗಿ ರಸ್ತೆ, 75ಲಕ್ಷ ರೂ., ವೆಚ್ಚದಲ್ಲಿ ಕಬ್ಬೂರು ತಾಂಡಾದಿಂದ ಸೂಡಂಬಿ ರಸ್ತೆಯವರೆಗೆ ಮುಂದುವರೆದ ಕಾಮಗಾರಿ, 80ಲಕ್ಷ ರೂ., ವೆಚ್ಚದಲ್ಲಿ ಎಂ.ಎ. ತಿಮ್ಮಾಪುರದಿಂದ ಶಿವಾಜಿನಗರ ತಾಂಡಾ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿದರು. ದೇವಿಹೊಸೂರು ಗ್ರಾಮದ ಆಯುಷ್ಮಾನ್ ಆರೋಗ್ಯ ಮಂದಿರದಲ್ಲಿ 5ಲಕ್ಷ ರೂ. ವೆಚ್ಚದಡಿ ನಿರ್ಮಿಸಿರುವ ಭೋಜನ ಕೊಠಡಿ ಉದ್ಘಾಟಿಸಿದರು. ದೇವಿಹೊಸೂರು ಉರ್ದು ಪ್ರೌಢ ಶಾಲೆಯಲ್ಲಿ 14ಲಕ್ಷ ರೂ., ವೆಚ್ಚದ ಕೊಠಡಿ ನಿರ್ಮಾಣ ಕಾಮಗಾರಿಗೆ, ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಸಿಸಿ ಗಟಾರ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಇದ್ದರು.

ಗುರು ಶಿಷ್ಯರ ಸಮಾಲೋಚನಾ ಸಭೆ | ಕಾಶಿ ಪೀಠ, ರಂಭಾಪುರಿ ಪೀಠದ ಶ್ರೀಗಳ ಸೂಚನೆ

ಪಂಚಗ್ರಹ ಹಿರೇಮಠದ ಆಸ್ತಿ ಪರಭಾರೆ ಸಲ್ಲದು

ವಿಶ್ವವಾಣಿ ಸುದ್ದಿಮನೆ, ಕುಂದಗೋಳ:

ಪಟ್ಟಣದ ಪಂಚಗ್ರಹ ಹಿರೇಮಠ ಕಾಶಿ ಪೀಠದ ಶಾಖಾ ಮಠವಾಗಿದ್ದು, ಸನಾತನ ಮಠದ ಪರಂಪರೆಯನ್ನು ಮುಂದುವರಿಸಿ ಮಠದ ಆಸ್ತಿಗಳನ್ನು ಪರಭಾರೆ ಮಾಡದೆ ಧರ್ಮ ಜಾಗೃತಿ ಮಾಡುವಂತೆ ಮಠದ ಶಿತಿಕಂಠೇಶ್ವರ ಸ್ವಾಮೀಜಿಗೆ ಸೂಚಿಸಲಾಗಿದೆ ಎಂದು ಕಾಶಿ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಪಟ್ಟಣದ ಪಂಚಗ್ರಹ ಹಿರೇಮಠದಲ್ಲಿ ಶುಕ್ರವಾರ ನಡೆದ ಗುರು ಶಿಷ್ಯರ ಸಮಾಲೋಚನಾ ಸಭೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಠದ ಭಕ್ತರು ಶಿತಿಕಂಠೇಶ್ವರ ಸ್ವಾಮೀಜಿಯವರು ಮಠದ ಆಸ್ತಿಯನ್ನು ಪರಬಾರೆ ಮಾಡುತ್ತಿದ್ದು ಅಲ್ಲದೆ ಮಠದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದು ಮಠದ ಶ್ರೀಗಳ ವಿರುದ್ಧ ಅನೇಕ ಆರೋಪ, ದೂರುಗಳನ್ನು ಗಮನಿಸಿದ್ದೇವೆ ಎಂದರು. ಮಠದ ಶ್ರೀಗಳು ಸಹ ಎಲ್ಲ ತಪ್ಪುಗಳನ್ನು ಮನ್ನಿಸುವಂತೆ ಕೋರಿಕೊಂಡಿದ್ದಾರೆ. ಇನ್ನು ಮುಂದೆ ಮಠದ ಪರಂಪರೆಗೆ ಚ್ಯುತಿ ಬರದಂತೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯ ನೆರವೇರಿಸುತ್ತಾರೆ. ಧಾರ್ಮಿಕ ಕಾರ್ಯಕ್ರಮಗಳಿಗೆ ಆರ್ಥಿಕ ನೆರವನ್ನು ಭಕ್ತರಿಂದ ದೇಣಿಗೆ ಸಂಗ್ರಹಿಸಿ ಧರ್ಮದ ಕಾರ್ಯ ನೆರವೇರಿಸಬೇಕು. ಈಗಿನ ಶ್ರೀಗಳು ಮಠದ ಆಸ್ತಿ ಪರಬಾರೆ ಮಾಡುವಂತಿಲ್ಲ. ಒಂದೊಮ್ಮೆ ನಿಯಮ ಪಾಲಿಸದಿದ್ದರೆ ಪೀಠದಿಂದ ಪದಚ್ಯುತಿಗೊಳಿಸಲಾಗುವುದೆಂದು ಷರತ್ತುಗಳನ್ನು ಛಾಪಾ ಕಾಗದದಲ್ಲಿ ಬರೆಸಲಾಗಿದೆ. ಯಾವುದೆ ಭಕ್ತರು ಆತಂಕಕ್ಕೆ ಒಳಗಾಗಬಾರದು, ಈ ಮೊದಲು ಮಠದೊಂದಿಗೆ ಇರುವ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಭಕ್ತರಿಗೆ ಸೂಚಿಸಿದರು.

ಬಾಳೆ ಹೊನ್ನೂರಿನ ರಂಭಾಪುರಿ ಪೀಠದ ಶ್ರೀ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಸ್ವಾಮಿಜಿ ಮಾತನಾಡಿ, ಈ ಮಠದ ಪರಂಪರೆ ಪುರಾತನವಾಗಿದ್ದು ವಿಜಯಪುರದ ದೊರೆ ಆದಿಲ್ ಶಾ ಈ ಮಠಕ್ಕೆ 96 ಎಕರೆ ಜಮೀನು ಇನಾಂ ನೀಡಿದ್ದರು. ಈಗಿನ ಶ್ರೀಗಳುಪೀಠಾಧಿಪತಿಗಳಾಗಿ 29 ವರ್ಷವಾಗಿದ್ದು ರಜತ ಮೋಹೋತ್ಸವ ಏರ್ಪಡಿಸಿದರೆ ಸಂತಸವಾಗಿತ್ತಿತ್ತು ಆದರೆ ಶ್ರೀಗಳ ವಿರುದ್ಧ ಭಕ್ತರು ದೂರು ಕೊಡಲು ಬಂದಿದ್ದು ವಿಷಾದದ ಸಂಗತಿ ಎಂದರು.

ಶ್ರೀಗಳು ಹಿಂದಿನ ತಪ್ಪುಗಳನ್ನು ಒಪ್ಪಿಕೊಂಡಿದ್ದಾರೆ. ಪ್ರಾಯಶ್ಚಿತವಾಗಿ 48 ದಿನಗಳ ಕಾಲ ತೀರ್ಥ ಕ್ಷೇತ್ರದಲ್ಲಿ ಮಂಡಲ ಪೂಜೆ ನೆರವೇರಿಸಿ ನಂತರ ಶ್ರೀಮಠಕ್ಕೆ ಬಂದು ಧರ್ಮದ ಕಾರ್ಯ ಎತ್ತಿ ಹಿಡಿಯುವಂತೆ ಸೂಚಿಸಲಾಗಿದೆ. ಎಂದರು. ಪಂಚಗ್ರಹ ಹಿರೇಮಠದ ಶ್ರೀ ಶಿತಿಕಂಠೇಶ್ವರ ಸ್ವಾಮಿಜಿ ಮಾತನಾಡಿ, ಉಭಯ ಶ್ರೀಗಳು ಸೂಚಿಸಿದಂತೆ ನಡೆದುಕೊಂಡು ಹೋಗುತ್ತೇನೆ ಎಂದು ಹೇಳಿದರು. ಮುಕ್ತಿಮಂದಿರದ ವಿಮಲ ರೇಣುಕ ಸ್ವಾಮಿಜಿ ಮಾತನಾಡಿದರು. ಶಾಸಕ ಪಾಟೀಲ ಮಾತನಾಡಿ, ಮಠದ ಅಭಿವೃದ್ದಿಗೆ ಈಗಾಗಲೆ 10 ಲಕ್ಷ ಮಂಜೂರು ಮಾಡಿದ್ದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಹ 10 ಲಕ್ಷ ಬಿಡುಗಡೆಗೊಳಿಸಲಿದ್ದಾರೆ ಎಂದು ಹೇಳಿದರು. ಮಾಜಿ ಶಾಸಕರಾದ ಎಸ್.ಐ. ಚಿಕ್ಕನಗೌಡ್ರ, ಎಮ್.ಎಸ್ ಅಕ್ಕಿ ಮಾತನಾಡಿ, ಆಸ್ತಿ ಮಾರಾಟದ ವಿರುದ್ಧ ಮಾತ್ರ ಭಕ್ತರ ಹೋರಾಟವಿತ್ತು ಎಂದರು. ಮುಖಂಡರಾದ ಸೋಮರಾವ ದೇಸಾಯಿ, ಶಿವಾನಂದ ಬೆಂತೂರ, ಎ.ಬಿ. ಉಪ್ಪಿನ, ರಮೇಶ ಕೊಪ್ಪದ, ಸತೀಶ್ ಕೊಬ್ಬಯ್ಯನವರ, ಸುರೇಶ ಸವಣೂರ, ಶಂಕರಗೌಡ ದೊಡಮನಿ, ಫಕ್ಕೀರೇಶ ನಾವಳ್ಳಿ, ಉಮೇಶ ಹೆಬಸೂರ, ಗುರು ಪಾಟೀಲ ಮಲ್ಲಿಕಾರ್ಜುನ್ ಕುನ್ನೂರ, ರಟ್ಟಿಗೇರಮಠ ಇದ್ದರು.



ಕುಂದಗೋಳದ ಪಂಚಗ್ರಹ ಹಿರೇಮಠದಲ್ಲಿ ಶುಕ್ರವಾರ ನಡೆದ ಗುರು ಶಿಷ್ಯರ ಸಮಾಲೋಚನಾ ಸಭೆಯಲ್ಲಿ ಕಾಶಿ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಆರೆಂಜ್ ಕ್ಯಾಪ್
ಹೆನ್ರಿಕ್ ಕ್ಲಾಸೆನ್
ಹೈದರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್
ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಹೈದರಾಬಾದ್	11	7	4	14
ಪಂಜಾಬ್	10	6	3	13
ಬೆಂಗಳೂರು	10	6	4	12
ರಾಜಸ್ಥಾನ್	10	6	4	12
ಗುಜರಾತ್	10	6	4	12
ಚೆನ್ನೈ	10	5	5	10
ಕೋಲ್ಕತಾ	10	4	5	9
ಡೆಲ್ಲಿ	11	4	7	8
ಮುಂಬೈ	10	3	7	6
ಲಖನೌ	10	3	7	6

8 ಪುಟಗಳ ನಿರ್ದೇಶನ ಫ್ರಾಂಚೈಸಿಗಳಿಗೆ ರವಾನೆ, 48 ಗಂಟೆಗಳೊಳಗೆ ಜಾರಿಗೆ ಆದೇಶ
ಆಟಗಾರರ ಕೊಠಡಿಗೆ ಅನುಮತಿಯಿಲ್ಲದೇ ಪ್ರವೇಶವಿಲ್ಲ | ಹನಿಟ್ರ್ಯಾಪ್ ಬಗ್ಗೆ ಎಚ್ಚರಿಕೆ

ಐಪಿಎಲ್ ಆಟಗಾರರು, ಮಾಲೀಕರಿಗೆ ಬಿಸಿಸಿಐ ನಿರ್ಬಂಧ

ಮುಂಬೈ: ಐಪಿಎಲ್ 2026ರ ಆವೃತ್ತಿಯಲ್ಲಿ ಗರಿಷ್ಠ ವಿವಾದಗಳು ಸೃಷ್ಟಿಯಾಗಿವೆ. ರಾಜಸ್ಥಾನ್ ರಾಯಲ್ಸ್ ತಂಡದ ವ್ಯವಸ್ಥಾಪಕ ರೋಮಿ ಭಿಂದರ್ ಡಗೌಟ್‌ನಲ್ಲಿ ಮೊಬೈಲ್ ಉಪಯೋಗಿಸಿದ್ದು, ನಂತರ ತಂಡದ ನಾಯಕ ರಿಯಾನ್ ಪರಾಗ್ ಡ್ರೆಸ್ಸಿಂಗ್ ಕೊಠಡಿಯಲ್ಲಿ ಇ-ಸಿಗರೇಟ್ ಸೇದಿದ್ದು ಸೇರಿ ಹಲವು ವಿವಾದಗಳನ್ನು ಗಂಭೀರವಾಗಿ ಪರಿಗಣಿಸಿರುವ ಬಿಸಿಸಿಐ, ಐಪಿಎಲ್ ಆಟಗಾರರು ಮತ್ತು ಫ್ರಾಂಚೈಸಿ ಮಾಲೀಕರಿಗೆ 8 ಪುಟಗಳ ನಿರ್ದೇಶನಗಳನ್ನು ಕಳುಹಿಸಿದೆ. ಆಟಗಾರರ ಹೋಟೆಲ್ ಕೊಠಡಿಗಳಿಗೆ ಯಾರೇ ಹೊರಗಿನವರು ಪ್ರವೇಶಿಸಬೇಕಾದರೂ ಮುಂಚಿತವಾಗಿ ಲಿಖಿತ ಅನುಮತಿ ಪಡೆದಿರಬೇಕು, ಫ್ರಾಂಚೈಸಿ ಮಾಲೀಕರು ಮೈದಾನಕ್ಕೆ ನುಗ್ಗಿ ಆಟಗಾರರೊಂದಿಗೆ ಅತಿಯಾದ ಆತ್ಮೀಯತೆ ತೋರುವುದನ್ನು ನಿಲ್ಲಿಸಬೇಕು. ಇದು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಬಿಸಿಸಿಐ ಸೂಚನೆಗಳಲ್ಲಿ ತಿಳಿಸಲಾಗಿದೆ.

ಹನಿಟ್ರ್ಯಾಪ್ ನಡೆಯುವ ಸಾಧ್ಯತೆಯಿರುವುದರಿಂದ ಅನಧಿಕೃತ ವ್ಯಕ್ತಿಗಳ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ. ಈ ರೀತಿಯ ಯಾವುದಾದರೂ ಘಟನೆಗಳು ನಡೆದಿರುವುದನ್ನು ಆಧಾರವಾಗಿಟ್ಟುಕೊಂಡು ಬಿಸಿಸಿಐ ಈ ಸೂಚನೆ ಹೊರಡಿಸಿದೆಯಾ ಅಥವಾ ಸಂಭಾವ್ಯ ಅಪಾಯ ತಪ್ಪಿಸುವುದು ಇದರ ಉದ್ದೇಶವೇ ಎಂದು ಖಚಿತವಾಗಿಲ್ಲ. ಆಟಗಾರರು ಅನುಮತಿ ಪಡೆಯದೆಯೇ ಯಾವಯಾವುದೋ ಸಂದರ್ಭಗಳಲ್ಲಿ ಹೊರಹೋಗುತ್ತಿದ್ದಾರೆ. ಇದಕ್ಕೂ ಬಿಸಿಸಿಐ ನಿರ್ಬಂಧ ವಿಧಿಸಿದೆ.

ಮಾಲೀಕರಿಗೂ ನಿಯಮ: ಪಂದ್ಯದ ವೇಳೆ ಮಾಲೀಕರು ಆಟಗಾರರೊಂದಿಗೆ ಸಂವಹನ ನಡೆಸುತ್ತಿರುವುದು ಮತ್ತು ಮೈದಾನದಲ್ಲಿ ಅಪ್ಪಿಕೊಳ್ಳುವುದು ಅಥವಾ ಅತಿಯಾದ ಆಪ್ತತೆ ತೋರುವುದನ್ನು ಬಿಸಿಸಿಐ ಗಂಭೀರವಾಗಿ ಪರಿಗಣಿಸಿದೆ. ಇದು ಪಂದ್ಯದ ಸಂಪ್ರದಾಯ ಹಾಗೂ ತಂಡದ ಕಾರ್ಯವಿಧಾನಕ್ಕೆ ಧಕ್ಕೆ ತರುತ್ತದೆ ಎಂದು ಮಂಡಳಿ ತಿಳಿಸಿದೆ. ರಾಜಸ್ಥಾನ್ ರಾಯಲ್ಸ್ ನಾಯಕ ರಿಯಾನ್ ಪರಾಗ್ ಮತ್ತು ಯಜುವೇಂದ್ರ ಚಹಲ್ ಅವರು ಡ್ರೆಸ್ಸಿಂಗ್ ಕೊಠಡಿಯಲ್ಲಿ ಇ-ಸಿಗರೇಟ್ ಸೇದಿದ್ದನ್ನು ಬಿಸಿಸಿಐ ಗಂಭೀರವಾಗಿ ಪರಿಗಣಿಸಿದೆ. ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಕಠಿಣ ಸಂದೇಶ ನೀಡಿ, ಭಾರತೀಯ ಕಾನೂನಿನ ಪ್ರಕಾರ ಇ-ಸಿಗರೇಟ್ ಬಳಕೆಯು ಶಿಕ್ಷಾರ್ಹ ಅಪರಾಧವಾಗಿದ್ದು, ಸ್ಟೇಡಿಯಂ, ಡ್ರೆಸ್ಸಿಂಗ್ ರೂಮ್ ಮತ್ತು ಹೋಟೆಲ್‌ಗಳಲ್ಲಿ ಇದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದಿದ್ದಾರೆ.

ಫ್ರಾಂಚೈಸಿಗಳ ಜವಾಬ್ದಾರಿ: ಈ ಮಾರ್ಗಸೂಚಿ ಬಂದ 48 ಗಂಟೆಗಳ ಒಳಗೆ ತಂಡದ ವ್ಯವಸ್ಥಾಪಕರು ಆಟಗಾರರಿಗೆ ಮಾಹಿತಿ ನೀಡಬೇಕು ಮತ್ತು ಅವರಿಂದ ಸಹಿ ಪಡೆದ ದೃಢೀಕರಣ ಪತ್ರವನ್ನು ಹೊಂದಿರಬೇಕು. ಅತಿಥಿಗಳ ಭೇಟಿಯ ಬಗ್ಗೆ ದಿನನಿತ್ಯದ ದಾಖಲೆಯನ್ನು ನಿರ್ವಹಿಸಬೇಕು. ನಿಯಮ ಉಲ್ಲಂಘನೆಯಾದಲ್ಲಿ ತಕ್ಷಣವೇ ಐಪಿಎಲ್ ಕಾರ್ಯಾಚರಣೆ ತಂಡಕ್ಕೆ ಸ್ವಯಂ-ವರದಿ ನೀಡಬೇಕು. ನಿಯಮಗಳನ್ನು ಮೀರಿದಲ್ಲಿ ಬಿಸಿಸಿಐ ಕ್ರಮಗಳನ್ನು ಕೈಗೊಳ್ಳಲಿದೆ. ಫ್ರಾಂಚೈಸಿ ಅಥವಾ ವ್ಯಕ್ತಿಗೆ ಅಧಿಕೃತ 'ಶೋಕಾಸ್ ನೋಟಿಸ್' ಜಾರಿ ಮಾಡಲಾಗುತ್ತದೆ. ಭಾರೀ ಮೊತ್ತದ ದಂಡ ವಿಧಿಸಲಾಗುತ್ತದೆ, ಆಟಗಾರ ಅಥವಾ ಸಿಬ್ಬಂದಿಯನ್ನು ಪ್ರಸಕ್ತ ಅಥವಾ ಮುಂದಿನ ಆವೃತ್ತಿಗಳಿಂದ ಅಮಾನತುಗೊಳಿಸಬಹುದು, ಕಾನೂನು ಉಲ್ಲಂಘನೆಯಾದಲ್ಲಿ ಪ್ರಕರಣವನ್ನು ಪೊಲೀಸ್ ಇಲಾಖೆಗೆ ಒಪ್ಪಿಸಲಾಗುತ್ತದೆ.



ಇವು ನಿರ್ಬಂಧಗಳು

1. ತಂಡದ ವ್ಯವಸ್ಥಾಪಕರ ಲಿಖಿತ ಅನುಮತಿ ಇಲ್ಲದೆ ಯಾವುದೇ ಆಟಗಾರ ಅಥವಾ ಸಿಬ್ಬಂದಿಯ ಹೋಟೆಲ್ ಕೊಠಡಿಗೆ ಹೊರಗಿನ ಯಾರೂ ಪ್ರವೇಶಿಸುವಂತಿಲ್ಲ. ಆಟಗಾರರು, ಸಿಬ್ಬಂದಿಯ ಜೊತೆಗೆ ಅವರ ಸಂಬಂಧ ಏನೇ ಇದ್ದರೂ, ಲಿಖಿತ ಅನುಮತಿ ಬೇಕೇಬೇಕು.
2. ಅತಿಥಿಗಳನ್ನು ಕೇವಲ ಹೋಟೆಲ್ ಲಾಬಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ಭೇಟಿ ಮಾಡಬೇಕು. ಕೊಠಡಿಯವರೆಗೆ ಕರೆದೊಯ್ಯಲು ವ್ಯವಸ್ಥಾಪಕರ ಅನುಮತಿ ಕಡ್ಡಾಯ.
3. ಆಟಗಾರರು ಯಾವುದೇ ಸಮಯದಲ್ಲಿ ಹೋಟೆಲ್ ಬಿಟ್ಟು ಹೊರಹೋಗಬೇಕಿದ್ದಲ್ಲಿ ಸಂಬಂಧಪಟ್ಟ ಭದ್ರತಾ ಅಧಿಕಾರಿ (ಸೆಕ್ಯುರಿಟಿ ಲಿಯಯಿಸನ್ ಆಫೀಸರ್-ಎಸ್‌ಎಲ್‌ಒ) ಅಥವಾ ತಂಡದ ಐಕ್ಯತಾ ಅಧಿಕಾರಿಯ (ಟೀಮ್ ಇಂಟೆಗ್ರಿಟಿ ಆಫೀಸರ್) ಅನುಮತಿ ಪಡೆದಿರಬೇಕು.

ಇಂದು ಐಎಸ್‌ಎಲ್ ಪಂದ್ಯ

ಬೆಂಗಳೂರು, ಜಮ್ಶೆಡ್‌ಪುರ ಮುಖಾಮುಖಿ

ಬೆಂಗಳೂರು: ಐಎಸ್‌ಎಲ್ ಈ ಬಾರಿಯ ಆವೃತ್ತಿಯಲ್ಲಿ ಬೆಂಗಳೂರು ಎಫ್‌ಸಿ ಶನಿವಾರ ಜಮ್ಶೆಡ್‌ಪುರದ ಜೆಆರ್‌ಡಿ ಟಾಟಾ ಕ್ರೀಡಾ ಸಂಕೀರ್ಣದಲ್ಲಿ ಜಮ್ಶೆಡ್‌ಪುರ ತಂಡವನ್ನು ಎದುರಿಸಲಿದೆ. ಇದುವರೆಗೆ 11 ಪಂದ್ಯವನ್ನಾಡಿರುವ ಬೆಂಗಳೂರು ಕೇವಲ 4 ಗೆಲುವುಗಳೊಂದಿಗೆ 17 ಅಂಕ ಗಳಿಸಿ, ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ. ಇನ್ನೊಂದು ಕಡೆ ಜಮ್ಶೆಡ್‌ಪುರ 11 ಪಂದ್ಯಗಳಲ್ಲಿ 6 ಗೆಲುವುಗಳೊಂದಿಗೆ 21 ಅಂಕ ಗಳಿಸಿ 2ನೇ ಸ್ಥಾನದಲ್ಲಿದೆ. ಈ ಆವೃತ್ತಿಯಲ್ಲಿ ಬೆಂಗಳೂರಿಗೆ ಇನ್ನೊಂದು ಪಂದ್ಯ ಬಾಕಿಯಿದೆ. ಬೆಂಗಳೂರು ಜಮ್ಶೆಡ್‌ಪುರ ಎಫ್‌ಸಿಯ ಪ್ರಶಸ್ತಿಯ ಕನಸಿಗೆ ಅಡ್ಡಿಯಾಗಲು ಸಜ್ಜಾಗಿದೆ. ಇತ್ತೀಚಿನ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಬೆಂಗಳೂರು ತಂಡವು ಮತ್ತೆ ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದ್ದರೆ, ಅಂಕಪಟ್ಟಿಯ ಅಗ್ರಸ್ಥಾನದ ಹತ್ತಿರವಿರುವ ಜಮ್ಶೆಡ್‌ಪುರ ಎಫ್‌ಸಿ ಪ್ರಶಸ್ತಿ ರೇಸ್‌ನಲ್ಲಿ ಭದ್ರವಾಗಿ ನೆಲೆಯೂರಲು ಪ್ರಯತ್ನಿಸುತ್ತಿದೆ.

ಜೆಆರ್‌ಡಿ ಟಾಟಾ ಕ್ರೀಡಾ ಸಂಕೀರ್ಣದಲ್ಲಿ ನಡೆದ ಐಎಸ್‌ಎಲ್ ಪಂದ್ಯಗಳ ಇತಿಹಾಸದಲ್ಲಿ ಜಮ್ಶೆಡ್‌ಪುರ ತಂಡವು ಅಲ್ಪ ಮುನ್ನಡೆ ಹೊಂದಿದೆ. ಇಲ್ಲಿ ನಡೆದ 8 ಪಂದ್ಯಗಳಲ್ಲಿ ಆತಿಥೇಯರು 3ರಲ್ಲಿ ಗೆದ್ದಿದ್ದರೆ, ಬೆಂಗಳೂರು ಎಫ್‌ಸಿ 2ರಲ್ಲಿ ಜಯಗಳಿಸಿದೆ. ಉಳಿದ 3 ಪಂದ್ಯಗಳು ಡ್ರಾನಲ್ಲಿ ಅಂತ್ಯಗೊಂಡಿವೆ. ಪಂದ್ಯದ ಸಿದ್ಧತೆಗಳ ಕುರಿತು ಮಾತನಾಡಿದ ಬಿಎಫ್‌ಸಿ ಮುಖ್ಯ ತರಬೇತುದಾರ ಪೆಪ್ ಮುನ್ನೋಜ್, ತಂಡವು ಮೈದಾನದಲ್ಲಿ ಉತ್ತಮ ಪ್ರಗತಿ ಸಾಧಿಸುತ್ತಿದೆ. ಆಟಗಾರರು ಈಗ ಹೆಚ್ಚು ಸ್ಪಷ್ಟ ಉದ್ದೇಶದೊಂದಿಗೆ ಆಡುತ್ತಿದ್ದು, ನಾವು ರಕ್ಷಣೆ ಮತ್ತು ಆಕ್ರಮಣ ಎರಡರಲ್ಲೂ ಇನ್ನು ಸುಧಾರಿಸಬೇಕಿದೆ. ಗೋಲು ದಾಖಲಾಗದಂತೆ ತಡೆಯಲು ಮತ್ತು ಸಿಕ್ಕ ಅವಕಾಶಗಳನ್ನು ನಿಖರವಾಗಿ ಬಳಸಿಕೊಳ್ಳಲು ನಾವು ಹೆಚ್ಚು ಆಕ್ರಮಣಕಾರಿಯಾಗಬೇಕಿದೆ ಎಂದರು.

ಜಮ್ಶೆಡ್‌ಪುರ ತಂಡವು ಮೊಹಮ್ಮದ್ ಸನನ್ ಮತ್ತು ಮಾದಿಕ್ ತಲಾಲ್ ಅವರ ವೇಗವನ್ನು ನಂಬಿಕೊಂಡಿದೆ. ಇತ್ತ ಬೆಂಗಳೂರು ತಂಡದ ಭರವಸೆಯ ಆಟಗಾರ ರಾಹುಲ್ ರೋಷನ್ ಸಿಂಗ್ ಮಾತನಾಡಿ, ನಾವು ಚೆಂಡನ್ನು ನಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳುವ ಯಶಸ್ವಿಯಾಗುತ್ತಿದ್ದೇವೆ, ಆದರೆ ಅಂತಿಮ ಹಂತದಲ್ಲಿ ಗೋಲು ಗಳಿಸುವಲ್ಲಿ ಹೆಚ್ಚು ನಿಖರತೆ ಬೇಕು. ಸಣ್ಣ ತಪ್ಪುಗಳನ್ನು ತಡೆದರೆ ನಾವು ಖಂಡಿತ ನಮ್ಮದೇ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಆಶಿಕ್ ಕುರುನಿಯನ್ ಮತ್ತು ನಿಲಿಲ್ ಪೂಜಾರಿ ಗಾಯದ ಸಮಸ್ಯೆಯಿಂದ ಹೊರಗುಳಿದಿರುವುದು ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ಈ ಬಗ್ಗೆ ಮಾಹಿತಿ ನೀಡಿದ ಪೆಪ್, ನಿಲಿಲ್ ಚೇತರಿಸಿಕೊಳ್ಳಲು ಕನಿಷ್ಠ 10 ದಿನ ಬೇಕು ಹಾಗೂ ಆಶಿಕ್ ಒಂದು ತಿಂಗಳ ಕಾಲ ವಿಶ್ರಾಂತಿ ಪಡೆಯಲಿದ್ದಾರೆ ಎಂದು ತಿಳಿಸಿದರು.

ಕೋಲ್ಕತಾ ಪ್ರಬಲ ಸಂಘಟಿತ ದಾಳಿ | ಡೆಲ್ಲಿ ಪರ ನಿಸ್ಸಂಕ 50, ತಂಡ 142/8
ಕೋಲ್ಕತಾದ ಫಿನ್ ಅಲೆನ್ ಸ್ಫೋಟಕ 100, ಕೆಕೆಆರ್‌ಗೆ 8 ವಿಕೆಟ್ ಗೆಲುವು

ಡೆಲ್ಲಿ ಮೇಲೆ ಕೋಲ್ಕತಾ ರೈಡ್

ದೆಹಲಿ: ಅಂಕಪಟ್ಟಿಯಲ್ಲಿ ಕೆಳಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಕೋಲ್ಕತಾ ನೈಟ್‌ರೈಡರ್ಸ್ ತಂಡಗಳು ಶುಕ್ರವಾರ ದೆಹಲಿಯಲ್ಲಿ ಸೆಣಸಾಟ ನಡೆಸಿದವು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಡೆಲ್ಲಿ ತಂಡ ಕುಸಿತ ಅನುಭವಿಸಿತು. ಅದು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 142 ರನ್ ಗಳಿಸಿತು. ರನ್ ಬೆನ್ನತ್ತಿದ ಕೋಲ್ಕತಾ ರೈಡರ್ಸ್ 14.2 ಓವರ್‌ಗಳಲ್ಲಿ 2 ವಿಕೆಟ್‌ಗೆ 147 ರನ್ ಗಳಿಸಿ, 8 ವಿಕೆಟ್‌ಗಳಿಂದ ಜಯ ಸಾಧಿಸಿತು. ಕೋಲ್ಕತಾ ಪರ ವೇಗಿ ಅನುಕೂಲ್ ರಾಯ್ 31 ರನ್ ನೀಡಿ 2 ವಿಕೆಟ್ ಪಡೆದರು. ಇನ್ನೊಬ್ಬ ವೇಗಿ ಕಾರ್ತಿಕ್ ತ್ಯಾಗಿ 25 ರನ್ ನೀಡಿ 2 ವಿಕೆಟ್ ಪಡೆದರು. ವೈಭವ್ ಅರೋರಾ, ಸುನೀಲ್ ನಾರಾಯಣ್, ಕ್ಯಾಮೆರಾನ್ ಗ್ರೀನ್ ತಲಾ 1 ವಿಕೆಟ್ ಪಡೆದರು.

ಮೊದಲು ಬ್ಯಾಟ್ ಮಾಡಿದ ಡೆಲ್ಲಿ ಆರಂಭ ಸಾಮಾನ್ಯವಾಗಿತ್ತು. ನಿಧಾನಗತಿಯಲ್ಲಿ ಬ್ಯಾಟ್ ಬೀಸಿದ ಅದು 49 ರನ್ ಗಳಿಸಲು 5 ಓವರ್ ಬಳಸಿಕೊಂಡಿತು. ಸ್ಫೋಟಕ ಬ್ಯಾಟರ್ ಕೆ.ಎಲ್. ರಾಹುಲ್ (23) ಮೊದಲಿಗರಾಗಿ ಔಟಾದರು. ತಂಡದ ಮೊತ್ತ 74 ರನ್‌ಗಳಾಗಿದ್ದಾಗ ನಿತೀಶ್ ರಾಣಾ ವಿಕೆಟ್ ಉರುಳಿತು. 89 ರನ್‌ಗಳಾಗುವಾಗ ಪಟಪಟನೇ 5 ವಿಕೆಟ್ ಕಳೆದುಕೊಂಡು ತತ್ತರಿಸಿತು. ಈ ಹಂತದಲ್ಲಿ ಅದರ ಮೊತ್ತದಲ್ಲಿ ಮಹತ್ವದ ಬದಲಾವಣೆಯಾಗುವ ಯಾವುದೇ ನಿರೀಕ್ಷೆಗಳಿರಲಿಲ್ಲ.

ಆರಂಭಿಕ ಪಾಥುಮ್ ನಿಸ್ಸಂಕ ಬಲವಾಗಿ ಬ್ಯಾಟ್ ಬೀಸಿದ್ದರಿಂದ ತಂಡದ ಮೊತ್ತ ತುಸು ಉಬ್ಬಿತು. ಇಲ್ಲವಾದಲ್ಲಿ ಇನ್ನೂ ಕಳಪೆ ಸ್ಥಿತಿಯನ್ನು ಎದುರಿಸಬೇಕಾಗುತ್ತಿತ್ತು. 29 ಎಸೆತ ಎದುರಿಸಿದ ಅವರು 5 ಬೌಂಡರಿ, 3 ಸಿಕ್ಸರ್‌ಗಳ ನೆರವಿನಿಂದ 50 ರನ್ ಸಿಡಿಸಿದರು. ರಾಹುಲ್ ಜೊತೆ ಸೇರಿ ಪಾಥುಮ್ ಮೊದಲ ವಿಕೆಟ್‌ಗೆ 49 ರನ್ ಕೂಡಿಸಿದ್ದೇ ಉತ್ತಮ ಜತೆಯಾಟ ಎನ್ನುವುದು ತಂಡದ ಬ್ಯಾಟಿಂಗ್ ವೈಫಲ್ಯವನ್ನು ತೋರಿಸುತ್ತದೆ. ನಾಯಕ ಅಕ್ಷರ್ ಪಟೇಲ್ ವೈಫಲ್ಯ ಮುಂದುವರಿಯಿತು. ಈ ಪಂದ್ಯದಲ್ಲವರು 22 ಎಸೆತ ಎದುರಿಸಿ ಬರೀ 11 ರನ್ ಗಳಿಸಿದರು! ಅಶುತೋಷ್ ಶರ್ಮಾ 28 ಎಸೆತಗಳಲ್ಲಿ 39 ರನ್ ಗಳಿಸಿದರು. ಇದರಲ್ಲಿ ತಲಾ 3 ಬೌಂಡರಿ, 3 ಸಿಕ್ಸರ್‌ಗಳಿದ್ದವು. ಉಳಿದಂತೆ ಇತರೆ ಬ್ಯಾಟರ್‌ಗಳ ಸಾಧನೆ ಅಷ್ಟಕ್ಕಷ್ಟೇ. ಬಂದವರೆಲ್ಲ ಹಾಗೆಯೇ ವಾಪಸ್ ಮರಳಿದರು.

ಸಂಕ್ಷಿಪ್ತ ಸ್ಕೋರ್: ಡೆಲ್ಲಿ ಕ್ಯಾಪಿಟಲ್ಸ್ 20 ಓವರ್, 142/8 (ನಿಸ್ಸಂಕ 50, ಅಶುತೋಷ್ 39, ಅನುಕೂಲ್ 31ಕ್ಕೆ 2). ಕೋಲ್ಕತಾ 14.2 ಓವರ್, 147/2 (ಫಿನ್ ಅಲೆನ್ 100, ಗ್ರೀನ್ 33)

ಪಾಥುಮ್ ನಿಸ್ಸಂಕ



ಅಶುತೋಷ್ ಶರ್ಮಾ

ರಾಜಸ್ಥಾನ್ VS ಗುಜರಾತ್

ಜೈಪುರ: ರಾಜಸ್ಥಾನ್ ರಾಯಲ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಶನಿವಾರ ಮುಖಾಮುಖಿಯಾಗಲಿವೆ. ಈ ಎರಡೂ ತಂಡಗಳು ಸದ್ಯ ತಲಾ 10 ಪಂದ್ಯವಾಡಿ ತಲಾ 6 ಜಯ, ತಲಾ 4 ಸೋಲುಗಳೊಂದಿಗೆ ಸಮನಾಗಿ 12 ಅಂಕ ಹೊಂದಿವೆ. ರನ್‌ರೇಟ್‌ನಲ್ಲಿ ಗುಜರಾತ್ ತುಸು ಹಿನ್ನಡೆ ಹೊಂದಿದೆ. ಇಲ್ಲಿ ಗೆದ್ದ ತಂಡ ಅಂಕಪಟ್ಟಿಯಲ್ಲಿ ಮೇಲೇರಲಿದೆ. ಗುಜರಾತ್ ತಂಡದಲ್ಲಿ ಯಾವುದೇ ಬದಲಾವಣೆಯಾಗುವ ಸಾಧ್ಯತೆಯಿಲ್ಲ. ವೇಗಿ ಕಗಿಸೋ ರಬಾಡ ತಂಡದ ಪ್ರಧಾನ ಶಕ್ತಿ. ರಾಜಸ್ಥಾನ್ ತಂಡದಲ್ಲಿ ವೈಭವ್ ಸೂರ್ಯವಂಶಿ, ಧ್ರುವ ಜುರೆಲ್ ಮೇಲೆ ಹೆಚ್ಚಿನ ನಿರೀಕ್ಷೆಯಿದೆ.

ಮುಖಾಮುಖಿ

ಒಟ್ಟು ಪಂದ್ಯ	ರಾಜಸ್ಥಾನ್ ಜಯ	ಗುಜರಾತ್ ಜಯ	ಫಲಿತಾಂಶ ಇಲ್ಲ
9	3	6	0

ಸ್ಥಳ : ಜೈಪುರ, ಸವಾಯಿ ಮಾನ್ ಸಿಂಗ್ ಮೈದಾನ
ಸಮಯ : ರಾತ್ರಿ 7.30
ನೇರಪ್ರಸಾರ : ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮಹಿಳಾ ಡಬಲ್ಸ್: ವೈದೇಹಿ-ಜುಜಾನಾ, ಕ್ಸೆನಿಯಾ-ನೆಪ್ಲಿಯ್ ಫೈನಲ್‌ಗೆ

ತುಮಕೂರು ಟೆನಿಸ್: ಸೆಮಿಫೈನಲ್‌ಗೆ ವೈದೇಹಿ ಚೌಧರಿ, ಝೀಲ್ ದೇಸಾಯಿ

ತುಮಕೂರು: ಇಲ್ಲಿನ ಜಿಲ್ಲಾ ಟೆನಿಸ್ ಮೈದಾನದಲ್ಲಿ ಶುಕ್ರವಾರ ನಡೆಯುತ್ತಿರುವ ತುಮಕೂರು ಓಪನ್ ಟೆನಿಸ್ ಕೂಟದಲ್ಲಿ ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ ಸೆಮಿಫೈನಲ್ ತಲುಪಿದ್ದಾರೆ. ಅಗ್ರ ಶ್ರೇಯಾಂಕಿತೆ ಜಸ್ಟಿನ್ ಮಿಕುಲ್ ಸ್ಕೈಟ್, 2ನೇ ಶ್ರೇಯಾಂಕಿತೆ ಜುಜಾನಾ ಪಾವ್ಲಿಕೊವ್ಸ್ಕಾ ಕೂಡ ಸೆಮಿಫೈನಲ್‌ನಲ್ಲಿದ್ದಾರೆ. ವೈದೇಹಿ ಶನಿವಾರ ಮೊದಲ ಸೆಮಿಫೈನಲ್‌ನಲ್ಲಿ ಜಸ್ಟಿನಾ ಎದುರು ಸೆಣಸಾಡಲಿದ್ದಾರೆ. ಝೀಲ್ ಎರಡನೇ ಸೆಮಿಫೈನಲ್‌ನಲ್ಲಿ ಪಾವ್ಲಿಕೋವ್ಸ್ಕಾ ಅವರ ಸವಾಲು ಎದುರಿಸಲಿದ್ದಾರೆ. ಇನ್ನು ಮಹಿಳಾ ಡಬಲ್ಸ್ ಪಂದ್ಯಗಳಲ್ಲಿ ಭಾರತದ ವೈದೇಹಿ ಚೌಧರಿ-ಪೋಲೆಂಡ್‌ನ ಜುಜಾನಾ ಪಾವ್ಲಿಕೋವ್ಸ್ಕಾ ಜೋಡಿ, ಕ್ಸೆನಿಯಾ ಲಸ್ಕುಟೊವಾ-ಎಲಿನಾ ನೆಪ್ಲಿಯ್ ಜೋಡಿ ಫೈನಲ್‌ಗೇರಿದೆ. ವೈದೇಹಿ ಜೋಡಿ 6-1, 6-2ರಿಂದ ಆಕಾಂಕ್ಷಾ ನಿಟ್ಟೂರೆ-ಮಿಚಿಕಾ ಒಜೆಕಿ ಜೋಡಿಯನ್ನು ಮಣಿಸಿತು. ಕ್ಸೆನಿಯಾ ಜೋಡಿ 6-1, 6-2ರಿಂದ ಶ್ರಾವ್ಯಾ ಚಿಲಕುಲಪುಡಿ-ಜೀಲ್ ದೇಸಾಯಿಯನ್ನು ಮಣಿಸಿತು. 3ನೇ ಶ್ರೇಯಾಂಕಿತ ವೈದೇಹಿ 2 ಗಂಟೆ 40 ನಿಮಿಷಗಳ ಕಾಲ ನಡೆದ ರೋಮಾಂಚಕಾರಿ ಹಣಾಹಣಿಯಲ್ಲಿ 6ನೇ ಶ್ರೇಯಾಂಕಿತ ಎಕಟೆರಿನಾ ಯಾಶಿನಾ ಅವರನ್ನು 6-4, 6-7(5), 7-5 ಸೆಟ್‌ಗಳಿಂದ ಸೋಲಿಸಿದರು. ಮೊದಲ ಸೆಟ್‌ನಲ್ಲಿ ಗೆದ್ದ ವೈದೇಹಿ, 2ನೇ ಸೆಟ್ ಕಳೆದುಕೊಂಡರು. 3ನೇ ಸೆಟ್ ಗೆದ್ದು ಮುಂದಿನ ಸುತ್ತಿಗೇರಿದರು.

ನಾಲ್ಕನೇ ಶ್ರೇಯಾಂಕಿತೆ ಜೀಲ್ ದೇಸಾಯಿ 2 ಗಂಟೆ 52 ನಿಮಿಷಗಳ ಕಾಲ ನಡೆದ ಮ್ಯಾರಥಾನ್ ಸ್ಪರ್ಧೆಯಲ್ಲಿ ಅರಿನಾ ಅರಿಫುಲ್ಲಿನಾ ವಿರುದ್ಧ 4-6, 6-3, 7-5 ಅಂತರದಿಂದ ಜಯ ಸಾಧಿಸಿದರು. ಮೊದಲನೇ ಸೆಟ್‌ನಲ್ಲಿ ಸೋತ ಅವರು, 2 ಮತ್ತು 3ನೇ ಸೆಟ್‌ನಲ್ಲಿ ಗೆಲುವು ಸಾಧಿಸಿದರು. ಒಂಬತ್ತು ಡಬಲ್ ಫಾಲ್ಟ್‌ಗಳನ್ನು ಮಾಡಿದರೂ, ಜೀಲ್ ಅಸಾಧಾರಣ ಹೋರಾಟದ ಮೂಲಕ ಸೋಲನ್ನು ತಪ್ಪಿಸಿಕೊಂಡರು.

ವೈದೇಹಿ

ಝೀಲ್

ಮಹಿಳಾ ತಂಡ ಐತಿಹಾಸಿಕ ಸಾಧನೆ, ಸೆಮೀಸ್‌ಗೇರಿದರೆ ವಿಶ್ವಕಪ್‌ಗೆ ಅರ್ಹತೆ

ಅ-17 ಏಷ್ಯಾ ಫುಟ್ಬಾಲ್ ಕ್ವಾ.ಫೈನಲ್‌ಗೆ ಭಾರತ

ಸುಝೌ (ಚೀನಾ): 17 ವಯೋಮಿತಿ ಭಾರತ ಮಹಿಳಾ ಫುಟ್‌ಬಾಲ್ ತಂಡ ಐತಿಹಾಸಿಕ ಸಾಧನೆ ಮಾಡಿದೆ. ಶುಕ್ರವಾರ ಅದು ಸುಝೌನಲ್ಲಿ ನಡೆದ ಎಎಫ್‌ಸಿ ಏಷ್ಯಾ ಕಪ್ ಬಿ ಗುಂಪಿನ ಲೀಗ್ ಪಂದ್ಯದಲ್ಲಿ 4-0 ಅಂತರದಿಂದ ಲೆಬನಾನ್ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್‌ಗೇರಿದೆ. ಈ ವಯೋಮಿತಿಯಲ್ಲಿ ಇದೇ ಮೊದಲ ಬಾರಿ ಭಾರತೀಯ ತಂಡವೊಂದು ಈ ಸಾಧನೆ ಮಾಡಿದೆ. 2004ರಲ್ಲಿ ಭಾರತ 19 ವಯೋಮಿತಿ ತಂಡ ಮಾತ್ರ ಕ್ವಾರ್ಟರ್ ಫೈನಲ್‌ಗೇರಿದ್ದ ಸಾಧನೆ ಮಾಡಿತ್ತು.

ಸಿ ಗುಂಪಿನ ಪಂದ್ಯದಲ್ಲಿ ಫಿಲಿಪ್ಪೀನ್ಸ್ ಮತ್ತು ಚೀನಾ ತೈಪೆ ಪಂದ್ಯ ಶೂನ್ಯ ಗೋಲುಗಳೊಂದಿಗೆ ಡ್ರಾಗೊಂಡಿತು. ಈ ತಂಡಗಳ ಪೈಕಿ ಯಾವುದೇ ಒಂದು ತಂಡ 12 ಗೋಲುಗಳ ಅಂತರದಿಂದ ಗೆಲುವು ಸಾಧಿಸಿದರೆ ಕ್ವಾರ್ಟರ್ ಫೈನಲ್‌ಗೇರುವ ಅಸಾಧಾರಣ ಸವಾಲು ಪಡೆದಿದ್ದವು. ಅದು ಆಗದೇ ಇರುವುದರಿಂದ ಭಾರತ ಕ್ವಾರ್ಟರ್ ಫೈನಲ್‌ಗೇರಿದ್ದು, ಮೇ 11ರಂದು ಚೀನಾ ತಂಡವನ್ನು ಎದುರಿಸಲಿದೆ.

ಭಾರತ ಇನ್ನೊಂದು ಐತಿಹಾಸಿಕ ಸಾಧನೆಗೂ ಸಜ್ಜಾಗಿದೆ. ಒಂದು ವೇಳೆ ಭಾರತ ಸೆಮಿಫೈನಲ್‌ಗೇರಿದರೆ, ಈ ವರ್ಷದ ಅ-17 ವಯೋಮಿತಿ ಫಿಫಾ ವಿಶ್ವಕಪ್‌ಗೂ ಅರ್ಹತೆ ಪಡೆಯಲಿದೆ. ಇದೇ ಮೊದಲ ಬಾರಿಗೆ ಆ ಸಾಧನೆ ಮಾಡಿದ ದಾಖಲೆಯೂ ನಿರ್ಮಾಣವಾಗಲಿದೆ.

ವಿಟಾಕೀಸ್

3 ಈಡಿಯೇಟ್ಸ್ ಜತೆಯಾದ ವಿಕ್ಕಿ

ರಾಜ್ ಕುಮಾರ್ ಹಿರಾನಿ ನಿರ್ದೇಶನದ 3 ಈಡಿಯೇಟ್ಸ್ ಅದ್ಭುತ ಯಶಸ್ಸು ಕಂಡಿತ್ತು. ಆ ಖುಷಿಯಲ್ಲಿರುವ ರಾಜ್ ಕುಮಾರ್, ಈಗ 3 ಈಡಿಯೇಟ್ಸ್ ಮುಂದಿನ ಭಾಗವನ್ನು ನಿರ್ದೇಶನ ಮಾಡಲು ತಯಾರಿ ನಡೆಸಿದ್ದಾರೆ. ಮುಂದಿನ ಭಾಗಕ್ಕೆ 4 ಈಡಿಯೇಟ್ಸ್ ಎಂಬ ಶೀರ್ಷಿಕೆ ಇಡಲಾಗಿದೆ. ಮೊದಲ ಭಾಗದಲ್ಲಿ ಅಮೀರ್ ಖಾನ್, ಮಾಧವನ್, ಶರ್ಮನ್ ಅಭಿನಯಿಸಿದ್ದರು. ಈ ಭಾಗದಲ್ಲಿಯೂ ಈ ಮೂವರು ಅಭಿನಯಿಸಲಿದ್ದು, ಅವರ ಜತೆಗೆ ವಿಕ್ಕಿ ಕೌಶಲ್ ಕೂಡ ನಟಿಸಲಿದ್ದಾರೆ. ಇನ್ನು ನಾಯಕಿಯಾಗಿ ಕರೀನಾ ಕಪೂರ್ ಅಭಿನಯಿಸುವುದು ಖಚಿತವಾಗಿದೆ. ಹಿಂದೆ ಕಾಲೇಜು ಕಥೆ ಹೇಳಿದ್ದ ಹಿರಾನಿ ಈಗ ಕೌಟುಂಬಿಕ ಸ್ಟೋರಿಯನ್ನು ಕಟ್ಟಿಕೊಡಲಿದ್ದಾರೆ. ಈಗಾಗಲೇ ಸಿನಿಮಾದ ಕಥೆ ಪೂರ್ಣ ಗೊಂಡಿದ್ದು ಇನ್ನೇನು ಚಿತ್ರತಂಡ ಶೂಟಿಂಗ್ ಗೆ ತೆರಳಲಿದೆ.

ಅಂತು 3 ಈಡಿಯೇಟ್ಸ್ ಮೂಲಕ ಮತ್ತೊಂದು ಹಿಟ್ ಸಿನಿಮಾ ಕೊಡಲು ಹಿರಾನಿ ಸಿದ್ಧವಾಗಿದ್ದಾರೆ. ಸತತ ಸೋಲಿನಿಂದ ಕಂಗೆಟ್ಟದ್ದ ಅಮೀರ್ ಖಾನ್ ಈ ಸಿನಿಮಾ ಮೂಲಕ ಗೆಲುವಿನ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿದ್ದಾರೆ.



ಅಸುರನ ಕೈಯಲ್ಲಿ ಪಾರಿಜಾತ

ಸ್ಯಾಂಡಲ್‌ವುಡ್‌ನಲ್ಲಿ ಭರವಸೆಯನ್ನು ಮೂಡಿಸಲು ಅಸುರರು ಬರುತ್ತಿದ್ದಾರೆ. ಕನ್ನಡದ ದಿಗ್ಗಜ ನಟರು ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, ಪಾರಿಜಾತ ಎಂಬ ಸೂಕ್ಷ್ಮ ಎಳೆಯನ್ನು ಕಲಾತ್ಮಕವಾಗಿ ಚಿತ್ರೀಕರಿಸಿ ಅಸುರನ ಕೈಯಲ್ಲಿ ಪಾರಿಜಾತ ಎಂಬ ವಿಭಿನ್ನ ಶೀರ್ಷಿಕೆಯ ಚಿತ್ರವನ್ನು ಮೀಕ್ಷಾ ಪಿಚ್ಚರ್ ಸಂಸ್ಥೆ ನಿರ್ಮಾಣ ಮಾಡಿದೆ. ಇತಿಹಾಸ ಹಾಗೂ ಆಧುನಿಕತೆಯನ್ನು ನೈಜತೆಗೆ ತಕ್ಕಂತೆ ಕಥೆ, ಚಿತ್ರಕಥೆ ಬರೆದು ವಾಸ್ತವ ಸ್ಥಿತಿಯೊಂದಿಗೆ ಬೆಳ್ಳಿತೆರೆಯ ಮೇಲೆ ಈ ಕಥೆಯನ್ನು ನಿರ್ದೇಶಕ ತೇಜಸ್ವಿ ವಿಘ್ನೇಶ್ ಕಟ್ಟಿಕೊಡುತ್ತಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿ, ಸೆನ್ಸಾರ್ ಕೂಡ ಮುಗಿಸಿರುವ ಈ ಚಿತ್ರದ ಟ್ರೇಲರ್ ಡಿ ಬೀಟ್ಸ್ ಯೂಟ್ಯೂಬ್ ಚಾನಲ್ ನಲ್ಲಿ ಬಿಡುಗಡೆಯಾಗಿದ್ದು, ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ಇದೇ ಸಂದರ್ಭದಲ್ಲಿ ಚಿತ್ರದ ಮೊದಲ ಪೋಸ್ಟರ್ ಸಹ ಬಿಡುಗಡೆಯಾಗಿದೆ. ಶೀರ್ಷಿಕೆಯಲ್ಲೇ ಎಲ್ಲರ ಗಮನ ಸೆಳೆದಿರುವ ಈ ಚಿತ್ರ ಮೇ 22ರಂದು ಬಿಡುಗಡೆಯಾಗುತ್ತಿದೆ.

ಅಸುರರ ಕೈಯಲ್ಲಿ ಪಾರಿಜಾತ ಎಂಬ ಜೀವನದ ಹೂವು ಹೇಗೆ ಸಿಲುಕಿಕೊಳ್ಳುತ್ತದೆ ಎನ್ನುವುದೇ ಚಿತ್ರದ ಕಥೆ. ಮನುಷ್ಯ ಪ್ರಸ್ತುತ ಜೀವನದಲ್ಲಿ ತನಗೆ ಬೇಕಾದ ವಸ್ತು ಸಿಗದೇ ಇದ್ದಾಗ ಯಾವ ರೀತಿ ಮನುಷ್ಯತ್ವವನ್ನು ಮರೆತು ರಾಕ್ಷಸ ಗುಣವನ್ನು ತಾಳುತ್ತಾನೆ ಎಂಬುದನ್ನು ಚಿತ್ರದಲ್ಲಿ ಆಂತರಿಕವಾಗಿ ವ್ಯಕ್ತಿಯ ಭಾವನೆಯನ್ನು ಕಟ್ಟಿಕೊಟ್ಟಿದ್ದಾರೆ ನಿರ್ದೇಶಕರು. ಪ್ರಮೋದ್ ಶೆಟ್ಟಿ ಹಾಗೂ ಪ್ರದೀಪ್ ಪೂಜಾರಿ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕರಾಗಿ ಕಾರ್ತಿಕ್, ಯಶ್ ಶೆಟ್ಟಿ ನಟಿಸಿದ್ದಾರೆ.

ಪಾರಿಜಾತ ಎಂಬ ಕಲ್ಪನೆಯ ಪಾತ್ರದಲ್ಲಿ ಕಿರುತೆರೆ ನಟಿಯಾಗಿರುವ ರಜನಿ ನಟಿಸಿದ್ದಾರೆ. ಪೋಷಕ ಕೆ.ಎಸ್.ಶ್ರೀಧರ್, ಮಂಜುನಾಥ್ ಹೆಗಡೆ, ಮಮತಾ, ಡಾಕ್ಟರ್ ಲೀಲಾ ಮೋಹನ್, ವಿಮರ್ಶ ಗೌಡ, ಪ್ರಭೀಕ್ ಮೊಗವೀರ್, ಸಂತೋಷ್, ನಿಶಾ ಕೊಪ್ಪಳೇಕರ್, ಕೀರ್ತನ್, ಮುಂತಾದವರು ತಾರಾ ಬಳಗದಲ್ಲಿದ್ದಾರೆ. ರಾಕೇಶ್ ಸಿ ತಿಲಕ್ ಛಾಯಾಗ್ರಹಣ ಅದ್ಭುತವಾಗಿ ಮೂಡಿಬಂದಿದೆ. ಅಲ್ಲದೆ ಕ್ರಿಸ್ಟೋಫರ್ ಜಾಯ್ಸನ್ ಅವರ ಸಂಗೀತ ನಿರ್ದೇಶನದಲ್ಲಿ ಬಂದಿರುವ ಹಾಡುಗಳು ಸುಮಧುರವಾಗಿದ್ದು, ನವೀನ್ ಸಾಹಸ ನಿರ್ದೇಶನ ಮಾಡಿದ್ದಾರೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆದಿದೆ.

ದಾಖಲೆ ಬರೆದ ಪೆದ್ದಿ

ರಾಮ್ ಚರಣ್ ಅಭಿನಯದ ಪೆದ್ದಿ ಜೂನ್ 4ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಅದಕ್ಕೂ ಮೊದಲೇ ಹೊಸ ದಾಖಲೆ ಬರೆದಿದೆ. ಅಮೇರಿಕಾದಲ್ಲಿ ಪೆದ್ದಿ ಚಿತ್ರದ ಮುಂಗಡ ಬುಕ್ಕಿಂಗ್ ಒಪೆನ್ ಆಗಿದ್ದು ಅಲ್ಲಿ ದಾಖಲೆ ಬೆಲೆಯ ಟಿಕೆಟ್ ಗಳು ಮಾರಾಟವಾಗಿವೆ. ಒಂದೇ ದಿನದಲ್ಲಿ ಬರೋಬ್ಬರಿ ಒಂದು ಕೋಟಿ ರು. ಟಿಕೆಟ್‌ಗಳು ಮಾರಾಟವಾಗಿದ್ದು ಆ ಮೂಲಕ ಹೊಸ ದಾಖಲೆ ಬರೆದಿದೆ. ಈ ಹಿಂದೆ ಪವನ್ ಕಲ್ಯಾಣ್ ಅಭಿನಯದ ಒಜಿ ಚಿತ್ರದ ಮುಂಗಡ ಟಿಕೆಟ್‌ಗಳು ಎಪ್ಪತ್ತೈದು ಲಕ್ಷ ರು. ನಷ್ಟು ಮಾರಾಟವಾಗಿದ್ದವು. ಈಗ ಪೆದ್ದಿ ಆ ದಾಖಲೆಯನ್ನು ಮುರಿದಿದೆ. ಬುಚ್ಚಿ ಬಾಬು ಸನ ನಿರ್ದೇಶನದ ಪೆದ್ದಿ ಗ್ರಾಮೀಣ ಭಾಗದ ಕಥೆಯನ್ನು ಒಳಗೊಂಡಿದೆ. ಕ್ರಿಕೆಟ್ ಆಟದ ಜತೆಗೆ ಕುಸ್ತಿಯ ಕಥೆಯೂ ಸಿನಿಮಾದಲ್ಲಿದೆ. ರಾಮ್ ಚರಣ್ ಈ ಚಿತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿದ್ದು, ಸಿಕ್ಸ್ ಪ್ಯಾಕ್ ಅವತಾರದಲ್ಲಿ ಮಿಂಚಿದ್ದಾರೆ. ಜಾನ್ವಿ ಕಪೂರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಶ್ರುತಿ ಹಾಸನ್ ಹಾಡೊಂದಕ್ಕೆ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಎ.ಆರ್.ರೆಹಮಾನ್ ಸಂಗೀತ ಸಿನಿಮಾದ ಹೈಲೈಟ್ ಆಗಿದ್ದು, ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಮಿಲಿಯನ್ ಗಟ್ಟಲೇ ಹಿಟ್ ಆಗಿವೆ. ಪೆದ್ದಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಅದ್ದೂರಿಯಾಗಿ ನಿರ್ಮಾಣವಾಗಿದೆ.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 09.05.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸಾರ್ವಜನಿಕ
ಸೇವೆಯ
ಸಾರ್ಥಕ ಕ್ಷಣ



50ರ

ರಾಜಕೀಯ ಪರ್ವ

ಬಿ.ಎಸ್.ವೈ

ಬಿಎಸ್‌ವೈ
ಅಭಿಮಾನೋತ್ಸವ
ಸಂಭ್ರಮದ
ಹೊಸ್ತಿಲಿನಲ್ಲಿ
ವಿಶ್ವವಾಣಿ
ವಿಶೇಷ ಸಂಚಿಕೆ



ಜನಾನುರಾಗಿ ಜನನಾಯಕ

ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯಾದ್ಯಂತ ಸಂಘಟಿಸಿದ್ದ ಬಿಎಸ್‌ವೈ

ರೈತ, ಕಾರ್ಮಿಕರ ಪರವಾಗಿ ಹಲವು ಪಾದಯಾತ್ರೆ, ಧರಣಿ, ಸತ್ಯಾಗ್ರಹ

ಅಧಿಕಾರದಲ್ಲಿರುವುದಕ್ಕಿಂತ, ಪ್ರತಿಪಕ್ಷ ಸ್ಥಾನದಲ್ಲಿ ಕೂತೇ ಸರಕಾರವನ್ನು ತಿವಿದಿದ್ದ ಯಡಿಯೂರಪ್ಪ

ರಾಜಕರಣಕ್ಕೆ ಬರುವ ಹಾದಿ ಕಷ್ಟವಲ್ಲ. ಆದರೆ ಬಂದ ಬಳಿಕ ಆ ಹಾದಿಯಲ್ಲಿ ಎಷ್ಟು ದೂರ ಕ್ರಮಿಸಲು ಸಾಧ್ಯವೆನ್ನುವುದೇ ಸವಾಲು. ಈ ಸವಾಲನ್ನು ಮೆಟ್ಟಿನಿಂತು, ರಾಜ್ಯವೇ ಮೆಚ್ಚುವಂತೆ ಜನಪರ ಧ್ವನಿಯಾಗಿ ಕರ್ನಾಟಕದ ಮಾಸ್ ಲೀಡರ್ ಎನ್ನುವ ಹೆಸರು ಪಡೆದಿದ್ದು ಬೂಕನಕೆರೆ ಸಿದ್ದಲಿಂಗಯ್ಯ ಯಡಿಯೂರಪ್ಪ(ಬಿ.ಎಸ್.ಯಡಿಯೂರಪ್ಪ) ಎಂದರೆ ಅತಿಶಯೋಕ್ತಿಯಲ್ಲ.

ಹಳೆ ಮೈಸೂರು ಪ್ರಾಂತ್ಯದಲ್ಲಿ ಹುಟ್ಟಿ, ಕೆಲಸ ಅರಸಿಕೊಂಡು ಮಲೆನಾಡಿನ ಹೆಬ್ಬಾಗಿಲಿನಂತಿರುವ ಶಿವಮೊಗ್ಗಕ್ಕೆ ಬಂದು, ಅಲ್ಲಿ ಕ್ಲಾರ್ಕ್ ಆಗಿ ಜೀವನದ ಸಾರ್ಥಕತೆ ಕಂಡುಕೊಂಡಿದ್ದರೆ, ಇಂದು ಯಡಿಯೂರಪ್ಪನವರು 'ನಿವೃತ್ತಿ ಜೀವನ' ಸಾಗಿಸಬಹುದಾಗಿತ್ತು. ಆದರೆ ಕಾರುಕೂನಿಕೆ ಯೊಂದಿಗೆ, ಸಮಾಜದಲ್ಲಿರುವ ಅಂಕು- ಡೊಂಕು ಗಳನ್ನು ಸರಿಪಡಿಸುವ ಧ್ವನಿಯಾಗಿ, ಕಾರ್ಮಿಕರ ಹಿತಾಸಕ್ತಿಗೆ ಹೋರಾಟದ ಹಾದಿ ತುಳಿದಿದ್ದ ರಿಂದಲೇ, ಇಂದು ಯಡಿಯೂರಪ್ಪನವರ ಹೆಸರು ರಾಜ್ಯವಷ್ಟೇ ಅಲ್ಲದೇ, ರಾಷ್ಟ್ರ ರಾಜಕಾರಣದಲ್ಲಿ ವಿಶಿಷ್ಟ ಹೆಸರಾಗಿ ಅಚ್ಚಳಿಯದೇ ಉಳಿದಿದೆ.

ಹಾಗೇ ನೋಡಿದರೆ, ಲಿಂಗಾಯತ ಸಮುದಾಯದ ಮಾಸ್ ಲೀಡರ್ ಆಗಿರುವ ಯಡಿ ಯೂರಪ್ಪನವರದ್ದು ಪ್ರಬಲ ಸಮು ದಾಯವೇನಲ್ಲ. ಬಣಜಿಗ ಲಿಂಗಾಯತ ಕುಟುಂಬದಿಂದ ಬಂದು, ಮುಂದಿನ ಕೆಲವೇ ವರ್ಷದಲ್ಲಿ ಇಡೀ ಲಿಂಗಾಯತ ಸಮುದಾಯದ ವಿಶ್ವಾಸವನ್ನು ಗಳಿಸುವಲ್ಲಿ, ಮಂಡ್ಯ ಜಿಲ್ಲೆಯ ಬೂಕನಕೆರೆಯಿಂದ ಬಂದು ಶಿಕಾರಿಪುರದಲ್ಲಿ ತಮ್ಮ ಭದ್ರಕೋಟೆಯನ್ನು ನಿರ್ಮಿಸಿಕೊಳ್ಳುವಲ್ಲಿ ಯಡಿಯೂ ರಪ್ಪನವರ ಶ್ರಮದಾನ ಆಲೋಚನೆಗೆ ಮೀರಿದ್ದು.

ಶಿಕಾರಿಪುರದಲ್ಲಿ ತಮ್ಮ ಸ್ಥಾನ ಭದ್ರಪಡಿಸುವ ಜತೆಜತೆಗೆ ದಕ್ಷಿಣ ಭಾರತದಲ್ಲಿ ನೆಲೆಕಂಡುಕೊಳ್ಳಲು ಪರದಾಡುತ್ತಿದ್ದ ಬಿಜೆಪಿಯನ್ನು ಕರ್ನಾಟಕದಲ್ಲಿ 'ಬಲಿಷ್ಠ ಪಕ್ಷವನ್ನಾಗಿ' ರೂಪಿಸುವಲ್ಲಿ, ಪಕ್ಷದ ಬಾವುಟ ಕಟ್ಟಲು ಜನರಿಲ್ಲದ ರಾಜ್ಯದಲ್ಲಿ ಮೂರು ಬಾರಿ ಅಧಿಕಾರದ ಗದ್ದುಗೆಗೆ ಏರಿಸುವಲ್ಲಿ ಯಡಿಯೂರಪ್ಪನವರ ಪಾತ್ರ ಮಹತ್ವದ್ದಾಗಿದೆ. ಸಣ್ಣ ವಯಸ್ಸಿನಲ್ಲಿಯೇ ಸಂಘ ಪರಿವಾರದ ಒಡನಾಟವನ್ನು ಹೊಂದಿದ್ದ ಯಡಿಯೂರಪ್ಪನ ವರಲ್ಲಿ ಭವಿಷ್ಯದ ನಾಯಕನನ್ನು ಕಂಡ ವರಿಷ್ಠರು, ಕರ್ನಾಟಕದಲ್ಲಿ ಬಿಜೆಪಿಯನ್ನು ಕಟ್ಟುವ ಜವಾಬ್ದಾರಿ ನೀಡಿದ್ದರು. ಕೇವಲ ಒಂದು ಸೀಟು ಗೆಲ್ಲುವುದರೊಂದಿಗೆ ಕಮಲ ವನ್ನು ವಿಧಾನಸಭೆಗೆ ಪ್ರವೇಶಮಾಡುವಂತೆ ಮಾಡಿದ್ದ ಯಡಿಯೂರಪ್ಪ ಅವರು ಮುಂದಿನ ಎರಡುವರೆ ಮೂರು ದಶಕದಲ್ಲಿ, ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರದ ಗದ್ದುಗೆ ಹಿಡಿಯು ವಂತೆ ಮಾಡಿದ್ದು ಇಂದಿಗೂ ಇತಿಹಾಸ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಿಜೆಪಿಯನ್ನು ಒಪ್ಪದೇ, ಪ್ರಾದೇಶಿಕ ಹಾಗೂ ಕಾಂಗ್ರೆಸ್ ಪ್ರಾಬಲ್ಯವಿದ್ದಾಗಲೂ ಯಡಿಯೂರಪ್ಪ ಅವರು ಜನಪರ ಧ್ವನಿ ಎತ್ತುವಲ್ಲಿ ಎಂದಿಗೂ ಹಿಂದೆ ಬೀಳಲಿಲ್ಲ. ವಿಧಾನಸಭೆಯಲ್ಲಿ ಒಂದಂಕಿ ಶಾಸಕರ ಸಂಖ್ಯೆಯಿದ್ದರೂ ಸಾರ್ವಜನಿಕ ಸಮಸ್ಯೆಯನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ತನಕ ಬಿಡಲಿಲ್ಲ. ಪ್ರತಿಪಕ್ಷ ನಾಯಕರಾಗಿ, ಶಾಸಕರಾಗಿ ಯಡಿಯೂರಪ್ಪ ಅವರು ಕೂತಿದ್ದಾರೆ ಎಂದರೆ, ಆಡಳಿತ ಪಕ್ಷದ ನಾಯಕರಿಗೆ ಯಡಿಯೂರಪ್ಪ ನವರ ಬೆಂಕಿಯುಂಡೆಯಂತಹ ಪ್ರಶ್ನೆಗಳನ್ನು ಅರಗಿಸಿಕೊಂಡು, ಉತ್ತರಿಸಬೇಕಾದ ಇಕ್ಕಟ್ಟಿಗೆ ಸಿಲುಕುತ್ತಿದ್ದದ್ದು ಸತ್ಯ. ಶಾಸಕರ ಸಂಖ್ಯಾಬಲವಿಲ್ಲದಿದ್ದರೂ ಜನರ ಸಮಸ್ಯೆ ಎತ್ತಿದ್ದಾಗ ತಾರ್ತಿಕ ಅಂತ್ಯ ಸಿಗುವ ತನಕ ಬಾವಿಗಿಳಿದು ಇಡೀ ಸದನದ ನಡಾವಳಿಗಳು ನಡೆಯದಂತೆ ಸರಕಾರವನ್ನು ಕಟ್ಟಿಹಾಕಿರುವ, ಸತ್ಯಾಗ್ರಹ, ಅಹೋರಾತ್ರಿ ಧರಣಿ ನಡೆಸಿರುವ ಅದೆಷ್ಟೋ ಉದಾಹರಣೆಗಳಿವೆ. ಈ ಕಾರಣಕ್ಕಾಗಿಯೇ ಈಗಲೂ 'ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು' ಎನ್ನುವ ಘೋಷಣೆ ಪ್ರಚಲಿತದಲ್ಲಿದೆ.

ಯಡಿಯೂರಪ್ಪನವರ ಹೋರಾಟಗಳು ಸದನದೊಳಗೆ ಎಷ್ಟು ಸದ್ದು ಮಾಡಿವೆಯೋ ಅದಕ್ಕೆ 10 ಪಟ್ಟು ಸದನದೊಳಗೆ, ರಸ್ತೆಯಲ್ಲಿ ನಡೆಸಿರುವ ಹೋರಾಟಗಳು ಸದ್ದು ಮಾಡಿವೆ. ರೈತರ ಸಮಸ್ಯೆ, ಕಾರ್ಮಿಕರ ಮೇಲಿನ ದೌರ್ಜನ್ಯ, ನೀರಾವರಿ ಯೋಜನೆ, ಸರಕಾರದ ಭ್ರಷ್ಟಾಚಾರ ನೀತಿ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ರಾಜ್ಯದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪಾದಯಾತ್ರೆ ನಡೆಸಿರುವ, ಸರಕಾರವನ್ನು 'ಒಂಟಿಕಾಲಿ'ನಲ್ಲಿ ನಿಲ್ಲಿಸಿ ಕೆಲಸ ಮಾಡುವಂತೆ ಮಾಡಿರುವ ಅದೆಷ್ಟೋ ಉದಾಹರಣೆಗಳಿವೆ. ಯಡಿ ಯೂರಪ್ಪ ಅವರು 2018ರಲ್ಲಿ ಶಿಕಾರಿಪುರದಿಂದ ಅಂತಿಮ ಬಾರಿಗೆ ವಿಧಾನಸಭೆಗೆ ಆಯ್ಕೆಯಾದ ಆರಂಭದ ಒಂದುವರೆ ವರ್ಷ ಪ್ರತಿಪಕ್ಷ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು. ಆರಂಭದಲ್ಲಿ 'ವಯಸ್ಸಿನ' ಕಾರಣಕ್ಕೆ ಯಡಿಯೂರಪ್ಪ ನವರು ಕೊಂಚ ತಣ್ಣಗಾಗಿರಬಹುದೆಂದೇ ಅನೇಕರು ಭಾವಿಸಿದ್ದರು. ಆದರೆ ತಮ್ಮ ಎಂದಿನ ಶೈಲಿಯಲ್ಲಿ ಸರಕಾರವನ್ನು ತರಾಟೆಗೆ ತೆಗೆದುಕೊಂಡ ಅದೆಷ್ಟೋ ನಿದರ್ಶನಗಳಿವೆ.

ಪ್ರತಿಪಕ್ಷದಲ್ಲಿ ಇದಿದ್ದೇ ಹೆಚ್ಚು: ರಾಜ್ಯದಲ್ಲಿ ರಾಜಕೀಯ ಮೀರಿ ಯಡಿಯೂರಪ್ಪ ಅವರನ್ನು ಬಹುತೇಕರು ಪ್ರಶ್ನಾತೀತ ನಾಯಕ ಎಂದು ಬಣ್ಣಿಸುತ್ತಾರೆ. ಇಡೀ ಜೀವನವನ್ನು ಹೋರಾಟಕ್ಕೆ ಮುಡಿಪಾಗಿಟ್ಟ ಯಡಿಯೂರಪ್ಪ ಅವರು ಅಧಿಕಾರದ ಗದ್ದುಗೆ ಕೂತಿದ್ದು ಮಾತ್ರ ತೀರಾ ಕಡಿಮೆ ಸಮಯ. ಮೊದಲಿಗೆ ಬಿಜೆಪಿಯನ್ನು ಕಟ್ಟುವಲ್ಲಿಯೇ ಬಹುಪಾಲು ಸಮಯ ಕಳೆದ ಅವರು, ಬಳಿಕ ಎದುರಾಗುವ 'ರಾಜಕೀಯ ಸಂಘರ್ಷ', ನಂಬಿಕೆ ದ್ರೋಹದ ಕಾರಣಕ್ಕೆ ಅಧಿಕಾರವನ್ನು ಪೂರ್ಣ ಪ್ರಮಾಣದಲ್ಲಿ ಅನುಭವಿಸಲು ಸಾಧ್ಯವಾಗಲೇ ಇಲ್ಲ. 1983ರಲ್ಲಿಯೇ ವಿಧಾನಸಭೆ ಪ್ರವೇಶಿಸಿದ್ದ ಯಡಿಯೂರಪ್ಪ ಅವರು ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಕೂತಿದ್ದು ಮಾತ್ರ 2006ರಲ್ಲಿ ಅಂದರೆ, ಬರೋಬ್ಬರಿ ಎರಡು ದಶಕಗಳ ಕಾಲ ಪ್ರತಿಪಕ್ಷ ಮೊಗಸಾಲೆಯಲ್ಲಿಯೇ ಕಳೆದಿದ್ದಾರೆ. ಇದಾದ ಬಳಿಕವೂ ಬಿಜೆಪಿ, ಕೆಜೆಪಿಯ ಸೋಲು-ಗೆಲುವಿನ ಕಾರಣಕ್ಕೆ ಪ್ರತಿಪಕ್ಷ ಸ್ಥಾನದಲ್ಲಿಯೇ ಹೆಚ್ಚು ಸಮಯ ಸವೆದರು. ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರೂ, ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದು ಮಾತ್ರ 1907 ದಿನಗಳು ಅಂದರೆ ಐದು ವರ್ಷ ಎರಡು ತಿಂಗಳು 22ದಿನಗಳು ಮಾತ್ರ. ಇನ್ನು ಜೆಡಿಎಸ್‌ನೊಂದಿಗಿನ ಸಮ್ಮಿಶ್ರ ಸರಕಾರದ ಅವಧಿಯಲ್ಲಿ 612 ದಿನ ಉಪಮುಖ್ಯಮಂತ್ರಿಯಾಗಿದ್ದರು.

ಉಪಮುಖ್ಯಮಂತ್ರಿಯಾಗಿದ್ದ ಅವಧಿ

ಫೆ.3,2006ರಿಂದ ಅ.08, 2007(612 ದಿನ)

ಸಾರ್ವಜನಿಕ ಜೀವನದಲ್ಲಿ ಹೇಗಿತ್ತು ಬಿಎಸ್‌ವೈ ಪ್ರಯಾಣ

1972 ಶಿಕಾರಿಪುರ ತಾಲೂಕಿನ ಜನ ಸಂಘದ ಅಧ್ಯಕ್ಷರಾಗಿ ಸಕ್ರಿಯ ರಾಜಕಾರಣ ಪ್ರವೇಶ.

1975 ಶಿಕಾರಿಪುರ ಪುರಸಭೆ ಸದಸ್ಯ ರಾಗಿ ಆಯ್ಕೆ, 1977ರಲ್ಲಿ ಅಧ್ಯಕ್ಷ.

1980 ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ.

1983 ಮಾಜಿ ಸಚಿವ ವೆಂಕಟಪ್ಪರವ ರನ್ನು ಸೋಲಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶ.

1985 1985ರಿಂದ 1988ವರೆಗೆ ಬಿಜೆಪಿ ಜಿಲ್ಲಾಧ್ಯಕ್ಷ

1988 ರಾಜ್ಯಾಧ್ಯಕ್ಷ, 1992 ರಲ್ಲಿ ರಾಷ್ಟ್ರೀಯ ಕಾರ್ಯ ದರ್ಶಿಯಾಗಿ ಆಯ್ಕೆ

1994 ವಿಧಾನಸಭೆ ಪ್ರತಿಪಕ್ಷದ ನಾಯಕ.

1999 ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರ ಕ್ಷೇತ್ರದಿಂದ ಸೋಲು.

1999 ಮತ್ತೆ ರಾಜ್ಯಾಧ್ಯಕ್ಷ, 2000ರಲ್ಲಿ ವಿಧಾನ ಪರಿಷತ್ ಸದಸ್ಯ.

2004 ಐದನೇ ಬಾರಿಗೆ ವಿಧಾನಸಭೆ ಪ್ರವೇಶ, ಮತ್ತೊಮ್ಮೆ ಪ್ರತಿಪಕ್ಷದ ನಾಯಕ.

2006 ಸಮ್ಮಿಶ್ರ ಸರಕಾರ ರಚನೆ. ಡಿಸಿಎಂ ಆಗಿ ಆರ್ಥಿಕ, ಅಬಕಾರಿ ಖಾತೆ ನಿರ್ವಹಣೆ

2007 ನ. 12ರಿಂದ 17ರವರೆಗೆ 7 ದಿನ ಮಾತ್ರ ಸಿಎಂ

2008 ಮೇ 30ರ ಶುಕ್ರವಾರ ಕರ್ನಾಟಕದ 25 ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ.

2011 ಜುಲೈ 31ರಂದು ಮುಖ್ಯಮಂತ್ರಿಗಳ ಸ್ಥಾನಕ್ಕೆ ರಾಜೀನಾಮೆ ಪತ್ರ ಸಲ್ಲಿಸಿದರು.

2014 2014ರ ಲೋಕಸಭಾ ಚುನಾವಣೆಯಲ್ಲಿ 3,63,305 ಮತಗಳ ಅಂತರದಿಂದ ಗೆಲುವು

2018 ಮೇ 17ರಿಂದ ಮೇ 19ವರೆಗೆ 2 ದಿನ ಮಾತ್ರ ಕರ್ನಾಟಕದ ಸಿಎಂ

2019 ಜುಲೈ 26ರಂದು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ.





ಸಕ್ರಿಯರಾಗಿದ್ದಾಗ ಕಠಿಣ ದಿನಚರಿ

ಸಾರ್ವಜನಿಕ ಜೀವನದಲ್ಲಿರುವಾಗ ಒಂದೇ ರೀತಿಯ ದಿನಚರಿಯನ್ನು ಕಾಪಾಡಿಕೊಳ್ಳುವುದು ಸುಲಭದ ಕೆಲಸವಲ್ಲ. ಅದರಲ್ಲಿಯೂ ಅಧಿಕಾರದಲ್ಲಿದ್ದಾಗ ನಿತ್ಯ ನೂರಾರು ಕಾರ್ಯದೊತ್ತಡ, ಕೆಲಸಗಳ ನಡುವೆ ತಮಗೆಂದು ಸಮಯ ಮೀಸಲಿಡುವ ರಾಜಕಾರಣಿಗಳ ಸಂಖ್ಯೆ ತೀರಾ ಕಡಿಮೆ. ಆದರೆ ಈ ವಿಷಯದಲ್ಲಿ ಯಡಿಯೂರಪ್ಪ ಕೊಂಚ ಭಿನ್ನವಾಗಿ ಕಾಣುತ್ತಾರೆ. ದಿನ 24ಗಂಟೆಯೂ ರಾಜಕಾರಣ ಆಗುಹೋಗುಗಳ ಬಗ್ಗೆ ಆಲೋಚಿಸಿದ್ದರೂ, ಯಡಿಯೂರಪ್ಪ ಅವರು ಬೆಳಗ್ಗೆ ಸಮಯದಲ್ಲಿ ಕಠಿಣ ದಿನಚರಿಯನ್ನು ಪಾಲಿಸುತ್ತಿದ್ದರು. ಸದ್ಯ ಸಕ್ರಿಯ ರಾಜಕಾರಣದಿಂದ ವಿರಾಮ ಪಡೆದಿದ್ದರೂ, ದಿನಚರಿಯಲ್ಲಿ ಮಾತ್ರ ಭಾರಿ ಬದಲಾವಣೆಯಾಗಿಲ್ಲ ಎನ್ನುತ್ತಾರೆ ಆಪ್ತರು. ಮುಖ್ಯಮಂತ್ರಿಯಾಗಿ ದ್ದಾಗ ಹಾಗೂ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದ ಹತ್ತು ಹಲವು ಆಯಕಟ್ಟಿನ ಸ್ಥಾನವನ್ನು ಅಲಂಕರಿಸಿ, ರಾಜ್ಯದಲ್ಲಿ ಮಾಸ್ ಲೀಡರ್ ಎನ್ನುವ ಪಟ್ಟ ಪಡೆದಿದ್ದರೂ, ಅವರ ದಿನಚರಿ ಮಾತ್ರ ಹಲವು ದಶಕಗಳಿಂದ ಬದಲಾಗಿಲ್ಲ. ಅಧಿಕಾರದಲ್ಲಿ ಇರಲಿ, ಬಿಡಲಿ ತಮ್ಮ ದಿನಚರಿಯಲ್ಲಿ ಯಾವುದೇ ಕಾರಣಕ್ಕೂ ಬದಲಾಯಿಸಿಕೊಳ್ಳದ ಅವರು, ದಿನವಿಡೀ ತಮ್ಮನ್ನು ತಾವು ವಿವಿಧ ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮುಂಜಾನೆ 5ಗಂಟೆಗೆ ದಿನ ಆರಂಭವಾದರೆ ರಾತ್ರಿಯವರೆಗೆ ತನಕ ಒಂದಿಲ್ಲೊಂದು ಕೆಲಸದಲ್ಲಿ ನಿರತರಾಗಿರುತ್ತಾರೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೆಲವೊಮ್ಮೆ ರಾತ್ರಿ 10ರ ತನಕ ಸಭೆ ನಡೆಸಿದ ಉದಾಹರಣೆಗಳಿವೆ. ಮಧ್ಯೆ ಕೆಲ ಗಂಟೆ ವಿಶ್ರಾಂತಿ ಎನ್ನುವುದು ಬಿಟ್ಟರೆ ಆ ಇಳಿ ವಯಸ್ಸಿನಲ್ಲಿಯೂ ಒಂದಿಲ್ಲೊಂದು ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಿದ್ದರು. ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ಬಳಿಕ ಕುಟುಂಬ ಸದಸ್ಯರೊಂದಿಗೆ ಸಮಯ ಕಳೆಯುತ್ತಿದ್ದಾರೆ ಹೊರತು, ಈ ಹಿಂದೆ ಅಧಿಕಾರದಲ್ಲಿದ್ದಾಗ ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯಾದ್ಯಂತ ಓಡಾಡುತ್ತಿದ್ದರು. ಈಗಲೂ ರಾಜ್ಯ ಪ್ರವಾಸ ಮಾಡುವ ಆಸಕ್ತಿಯನ್ನು ಹೊಂದಿರುವ ಯಡಿಯೂರಪ್ಪ ಅವರ ಮನೆ ಮುಂದೆ, ಈಗಲೂ ನಿತ್ಯ ಸಾವಿರಾರು ಮಂದಿ ತಮ್ಮ ಕಷ್ಟಗಳ ಪರಿಹಾರ ಅರಸಿ ಬರುತ್ತಾರೆ.

ಮುಖ್ಯಮಂತ್ರಿಯಾಗಿದ್ದ ಅವಧಿ

- ನ.07,2007ರಿಂದ ನ.19,2007(ಎಂಟು ದಿನ)
- ಮೇ.30,2008ರಿಂದ ಆ.04,2011(734 ದಿನ)
- ಮೇ.17,2018ರಿಂದ ಮೇ.23, 2018 (6 ದಿನ)
- ಜುಲೈ.26, 2019ರಿಂದ ಜುಲೈ.28,2021 (733 ದಿನ)

ಹೇಗಿತ್ತು ದಿನಚರಿ?

ಬೆ.5: ಯಡಿಯೂರಪ್ಪ ಅವರು ಎಲ್ಲಿಯೇ ಇರಲಿ. ತಮ್ಮ ವಾಕಿಂಗ್ ಅನ್ನು ಮಾತ್ರ ಎಂದಿಗೂ ತಪ್ಪಿಸುವುದಿಲ್ಲ. ದಶಕಗಳಿಂದ ರೂಢಿಸಿಕೊಂಡು ಬಂದಿರುವ ಈ ಅಭ್ಯಾಸವನ್ನು ಯಡಿಯೂರಪ್ಪನವರು ಈಗಲೂ ಮುಂದುವರಿಸಿದ್ದಾರೆ. ಬೆ.5ಕ್ಕೆ ಏಳುವ ಬಿಎಸ್‌ವೈ ಕೆಲ ಕಾಲ ವಾಕಿಂಗ್ ಬಳಿಕ ವ್ಯಾಯಮ ಮಾಡುವುದನ್ನು ರೂಢಿಸಿಕೊಂಡಿದ್ದಾರೆ.

ಬೆ.8.30: ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆಪ್ತ ಕಾರ್ಯದರ್ಶಿ, ಹಿರಿಯ ಅಧಿಕಾರಿಗಳು ಹಾಗೂ ಗುಪ್ತಚರ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದ ಯಡಿಯೂರಪ್ಪ ಅವರು, ಇಡೀ ದಿನ ಕಾರ್ಯಕ್ರಮದ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಆದರೆ ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದ ಬಳಿಕ ಆಪ್ತ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸುತ್ತಾರೆ.

ಬೆ.6: ಅಧಿಕಾರದಿಂದ ಕೆಳಗೆ ಇಳಿದರೂ, ರಾಜ್ಯ, ರಾಷ್ಟ್ರದಲ್ಲಾಗುತ್ತಿರುವ ಬೆಳವಣಿಗೆಯನ್ನು ತಿಳಿಯುವ ಹುಮ್ಮಸ್ಸು ಮಾತ್ರ ಯಡಿಯೂರಪ್ಪ ಅವರಿಗೆ ಕಡಿಮೆಯಾಗಿಲ್ಲ. ಆದ್ದರಿಂದ ವಾಕಿಂಗ್ ಮುಗಿದ ಕೂಡಲೇ ದಿನಪತ್ರಿಕೆಗಳನ್ನು ಓದುತ್ತಾರೆ. ಪ್ರಮುಖವಾಗಿ ರಾಜಕೀಯ ವಿಶ್ಲೇಷಣೆ, ಸಂಪಾದಕೀಯ, ಅಂಕಣಗಳನ್ನು ಓದಿ, ಪ್ರಮುಖ ಎನಿಸುವ ಅಂಶಗಳನ್ನು ಬರೆದಿಟ್ಟುಕೊಳ್ಳುತ್ತಾರೆ.

ಬೆ.7: ಅಪಾರ ದೈವಭಕ್ತರಾಗಿರುವ ಯಡಿಯೂರಪ್ಪ ಅವರು ಪೂಜೆ ಇಲ್ಲದೇ ಮನೆಯಿಂದ ಆಚೆ ಹೋಗುವುದಿಲ್ಲ. ಸ್ನಾನ ಮುಗಿಸಿದ ಬಳಿಕ ದೇವರ ಪೂಜೆ ನೇರವೇರಿಸಿದ ಬಳಿಕವೇ, ಮುಂದಿನ ಕಾರ್ಯಕ್ಕೆ ಅಣಿಯಾಗುವುದು.

ಬೆ.8: ಪೂಜೆಯ ಬಳಿಕ ಉಪಹಾರ ಸೇವಿಸುವ ಅವರು, ಈ ವೇಳೆ ಪ್ರಮುಖ ನಾಯಕರೊಂದಿಗೆ ಸಭೆಗಳಿದ್ದರೆ ಅದನ್ನು ಆಗಲೇ ಮುಗಿಸಿಕೊಳ್ಳುತ್ತಾರೆ.

ಕುಟುಂಬಕ್ಕೆ ಸಮಯ

ಅಧಿಕಾರದಲ್ಲಿ ಇರುವ ದಿನವಿಡೀ ಮನೆಯಿಂದ ಆಚೆಯೇ ಇರುತ್ತಿದ್ದ ಯಡಿಯೂರಪ್ಪ ಅವರು, ಅಧಿಕಾರದಿಂದ ಕೆಳಗೆ ಇಳಿದ ಬಳಿಕ ಕುಟುಂಬದೊಂದಿಗೆ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ಮೊಮ್ಮಕ್ಕಳು ಹಾಗೂ ಸಂಬಂಧಿಗಳೊಂದಿಗೆ ಸಮಯ ಕಳೆಯಲು ಬಯಸಿರುವ ಯಡಿಯೂರಪ್ಪ ಅವರು ಕಳೆದ ಎರಡು ಮೂರು ವರ್ಷದಲ್ಲಿ ತುಂಬು ಕುಟುಂಬದೊಂದಿಗೆ ವಿದೇಶಕ್ಕೆ ಫ್ಯಾಮಿಲಿ ಟ್ರಿಪ್ ಸಹ ಹೋಗಿದ್ದರು.

ಬೆ.9.30: ಅಧಿಕಾರದಿಂದ ಕೆಳಗೆ ಇಳಿದಿದ್ದರೂ ಯಡಿಯೂರಪ್ಪ ಅವರ ಜನಪ್ರಿಯತೆ ಕಡಿಮೆಯಾಗಿಲ್ಲ. ಈಗಲೂ ಅವರ ಮನೆಗೆ ನಿತ್ಯ ನೂರಾರು ಕಾರ್ಯಕರ್ತರು, ಶಾಸಕರು, ಸಚಿವರು ಆಗಮಿಸುತ್ತಾರೆ. ಬೆಳಗ್ಗಿನ ಸಮಯದಲ್ಲಿ ಈ ಎಲ್ಲರೊಂದಿಗೆ ಚರ್ಚಿಸುವ ಅವರು, ಬಳಿಕ ಕಾರ್ಯಕ್ರಮಗಳಿದ್ದರೆ ಅದರಲ್ಲಿ ಭಾಗಿಯಾಗುವುದು ಅಥವಾ ವಿಶ್ರಮಿಸುತ್ತಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಚಿತ್ರದುರ್ಗದಲ್ಲಿ ನಡೆಯುತ್ತಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸುಸ್ವಾಗತ

ರಾಜಾಹುಲಿ ಜೀವನದ ಹೆಜ್ಜೆಗುರುತು

ದಕ್ಷಿಣ ಭಾರತದಲ್ಲಿ ಪಕ್ಷದ ಬಾವುಟ ಕಟ್ಟಲು ಕಾರ್ಯಕರ್ತರಿಲ್ಲದ ಸಮಯದಲ್ಲಿ, ಪಕ್ಷದ ಜವಾಬ್ದಾರಿಯನ್ನು ಹೊತ್ತವರು ಬಿ.ಎಸ್.ಯಡಿಯೂರಪ್ಪ. ಸಾರ್ವಜನಿಕ ಜೀವನಕ್ಕೆ ಕಾಲಿಟ್ಟು 50 ವರ್ಷ ಸಂದಿರುವ ಈ ಸಮಯದಲ್ಲಿ ಯಡಿಯೂರಪ್ಪನವರ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದ 50 ಮೈಲುಗಲ್ಲುಗಳು ಇಲ್ಲಿವೆ.

01 1943ರ ಫೆ.27ರಂದು ಜನನ ಸಿದ್ದಲಿಂಗಪ್ಪ ಹಾಗೂ ಪುಟ್ಟತಾಯಮ್ಮ ದಂಪತಿಯ ಮಗನಾಗಿ ಜನನ

02 ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಹುಟ್ಟಿ, ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ ಪೂರ್ಣಗೊಳಿಸಿದರು.

03 ಮಂಡ್ಯದ ಸರಕಾರಿ ಪಿಯು ಕಾಲೇಜಿನಲ್ಲಿ ಶಿಕ್ಷಣ, ಬಳಿಕ ಮೈಸೂರು ವಿವಿಯಲ್ಲಿ ಪದವಿ ವ್ಯಾಸಾಂಗ

04 ಹುಟ್ಟಿ, ಬೆಳೆದಿದ್ದು ಮಂಡ್ಯದಲ್ಲಾದರೂ, ಕರ್ಮಭೂಮಿಯನ್ನಾಗಿ ಶಿಕಾರಿಪುರ ಆಯ್ಕೆ

05 ಸಣ್ಣವಯಸ್ಸಿನಿಂದಲೂ ಸಂಘದ ಶಾಖೆಯ ಸಕ್ರಿಯ ಕಾರ್ಯಕರ್ತ; ಬಲಪಂಥೀಯ ಚಿಂತನೆಗಳಿಂದ ಪ್ರೇರಿತ

06 1965ರಲ್ಲಿ ಶಿಕಾರಿಪುರಕ್ಕೆ ಶಿಫ್ಟ್; 1967ಕ್ಕೆ ಸಂಬಂಧಿಯೊಬ್ಬರ ಅಕ್ಕಿ ಮಿಲ್‌ನಲ್ಲಿ ಕ್ಲರ್ಕ್ ಆಗಿ ಕಾರ್ಯಾರಂಭ

07 ಕಾರ್ಯನಿರ್ವಹಿಸುತ್ತಿದ್ದ ಅಕ್ಕಿ ಮಿಲ್ ಮಾಲೀಕರ ಪುತ್ರಿಯನ್ನೇ 1967ರಲ್ಲಿ ವರಿಸಿದ ಯಡಿಯೂರಪ್ಪ

08 1972ರಲ್ಲಿ ಶಿಕಾರಿಪುರ ಪಟ್ಟಣ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆ, 1980ರಲ್ಲಿ ಜನಸಂಘದ ತಾಲೂಕು ಅಧ್ಯಕ್ಷರಾಗಿ ಸೇವೆ

09 1975ರ ತುರ್ತು ಪರಿಸ್ಥಿತಿಯಲ್ಲಿ ಬಳ್ಳಾರಿ ಹಾಗೂ ಶಿವಮೊಗ್ಗದ ಕಾರಾಗೃಹದಲ್ಲಿ ಹಲವು ತಿಂಗಳ ಕಾಲ ಬಂಧಿ

10 1983ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರದಿಂದ ಆಯ್ಕೆ



11 2007ರ ನ.12ರಿಂದ ನ.19ರವರೆಗೆ ಏಳು ದಿನ ಮೊದಲ ಅವಧಿಗೆ ಸಿಎಂ ಆಗಿದ್ದ ಬಿಎಸ್‌ವೈ

12 1985ರಲ್ಲಿ ಶಿವಮೊಗ್ಗ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಣೆ

13 ಶಿಕಾರಿಪುರ ಕ್ಷೇತ್ರದಿಂದ ಆರು ಬಾರಿ ವಿಧಾನಸಭೆ ಆಯ್ಕೆ

14 2011ರಲ್ಲಿ ಗಣಿ ಹಗರಣದ ಆರೋಪದಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ, ಜೈಲು ಸೇರುವ ಸನ್ನಿವೇಶ

15 2018ರ ಮೇ 18ರಂದು ಸಿಎಂ ಆದ 55 ಗಂಟೆಗಳಲ್ಲಿ ಬಹುಮತ ಸಾಬೀತುಪಡಿಸಲಾಗದೇ ರಾಜೀನಾಮೆ.

16 1988ರಲ್ಲಿ ಮೊದಲ ಬಾರಿಗೆ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಆಯ್ಕೆ

17 ಇಂತಹ ಹತ್ತಾರು 'ಅಗ್ನಿ ಪರೀಕ್ಷೆ' ಗೆದ್ದ ಛಾತಿ ಯಡಿಯೂರಪ್ಪ ಅವರದ್ದು.

18 ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ಯಡಿಯೂರಪ್ಪ ಪಾತ್ರ ಅಪಾರ

19 ಒಮ್ಮೆ ವಿಧಾನಪರಿಷತ್, ಲೋಕಸಭೆಯಲ್ಲಿ ಸೇವೆ ಸಲ್ಲಿಸಿರುವ ಯಡಿಯೂರಪ್ಪ

20 2013ರ ಚುನಾವಣೆ ವೇಳೆಗೆ ಬಿಜೆಪಿ ವಿರುದ್ಧ ತೊಡೆತಟ್ಟಿ 'ಕೆಜೆಪಿ' ಪಕ್ಷ ಕಟ್ಟಿದ ಬಿಎಸ್‌ವೈ

21 ಆರೋಗ್ಯ ಕವಚ ಯೋಜನೆಯಡಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತುರ್ತು ಸೇವೆ ವಾಹನಗಳು ಜನರ ಬಳಕೆಗೆ ಬಿಡುಗಡೆ.

22 1994, 2004ರಲ್ಲಿ ವಿಧಾನಸಭಾ ಪ್ರತಿಪಕ್ಷ ನಾಯಕನಾಗಿ ಸರಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸಿದ್ದ ಬಿಎಸ್‌ವೈ

23 ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ' ನಡುಗುವುದು ಎನ್ನುವ ಮಾತು ಅವರ 'ಗಟ್ಟಿತನ'ಕ್ಕೆ ಸಾಕ್ಷಿ

24 ಹೊಸ ಪಕ್ಷ ಕಟ್ಟಿ ಚುನಾವಣೆಗೆ ಹೋದ ಯಡಿಯೂಪ್ಪ ಅವರನ್ನು ಎರಡನೇ ವರ್ಷದಲ್ಲಿ ವಾಪಸು ಕರೆತಂದ ಬಿಜೆಪಿ

25 ಕರೋನಾದಿಂದ ಮೃತಪಟ್ಟ ವ್ಯಕ್ತಿಯ ಬಿಪಿಎಲ್ ಕುಟುಂಬಕ್ಕೆ ತಲಾ 1 ಲಕ್ಷ ರುಪಾಯಿ ಆರ್ಥಿಕ ನೆರವು.

26 80ರ ದಶಕದಲ್ಲಿ ರೈತರ ಪರವಾಗಿ ರಾಜ್ಯದ ಹಲವು ಭಾಗದಲ್ಲಿ ಪಾದಯಾತ್ರೆ

27 ಪಕ್ಷ ಸಂಘಟನೆ, ಸರಕಾರದ ವೈಫಲ್ಯ ವಿರೋಧಿಸಿ 2010ರಲ್ಲಿ ಬೆಂಗಳೂರು-ಬೆಳಗಾವಿ ಪಾದಯಾತ್ರೆ

28 2016ರಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾಗಿ ನೇಮಕ; ಸೊರಗಿದ್ದ ಸಂಘಟನೆಗೆ ಚೇತನ

29 2014ರ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗದಿಂದ ಸ್ಪರ್ಧಿಸಿ 363,305 ಮತಗಳ ಅಂತರದಲ್ಲಿ ಗೆಲುವು

30 ದೇಶದಲ್ಲಿಯೇ ಮೊದಲ ಬಾರಿಗೆ ಲಾಕ್‌ಡೌನ್ ಮಾಡುವ ಮಹತ್ವದ ತೀರ್ಮಾನ ಕೈಗೊಂಡಿದ್ದು ಯಡಿಯೂರಪ್ಪ

31 ಪಕ್ಷ ಮೀರಿ ಇಡೀ ಲಿಂಗಾಯತ ಸಮುದಾಯ ಮಾಸ್ ಲೀಡರ್

32 ದಕ್ಷಿಣ ಭಾರತದಲ್ಲಿ ಕಮಲ ಅರಳುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಯಡಿಯೂರಪ್ಪ

33 2018ರ ವಿಧಾನಸಭಾ ಚುನಾವಣೆಯಲ್ಲಿ ನೂರರ ಗಡಿ ದಾಟಿದರೂ, ಬಾರದ ಮ್ಯಾಜಿಕ್ ನಂಬರ್

34 2019ರಲ್ಲಿ ಜೆಡಿಎಸ್ -ಕಾಂಗ್ರೆಸ್ ಅಂತಃಕಲಹದಿಂದ ಪಕ್ಷ ಬಿಟ್ಟು ಬಿಜೆಪಿಗೆ ಬಂದ 14 ಶಾಸಕರು

35 ಕರೋನಾ ಸಮಯದಲ್ಲಿ ಮಾದರಿ ಆಡಳಿತ ನೀಡಿದ್ದ ಯಡಿಯೂರಪ್ಪ ನೇತೃತ್ವದ ಕರ್ನಾಟಕ ಸರಕಾರ

36 ಜೆಡಿಎಸ್‌ನೊಂದಿಗೆ ಸೇರಿ 2006ರಲ್ಲಿ ದಕ್ಷಿಣ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿ ಸರಕಾರ ಅಧಿಕಾರಕ್ಕೆ

37 ಉಪಮುಖ್ಯಮಂತ್ರಿ, ಆರ್ಥಿಕ ಸಚಿವರಾಗಿ ದೇಶದಲ್ಲಿ ಮೊದಲ ಕೃಷಿ ಬಜೆಟ್ ಮಂಡಿಸಿದ ಕೀರ್ತಿ

38 ಈ ಶಾಸಕರ ಸಂಖ್ಯಾಬಲದೊಂದಿಗೆ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ

39 ಮುಖ್ಯಮಂತ್ರಿಯಾಗಿ ಮೊದಲ ಅವಧಿಯಲ್ಲಿ ಹೆಣ್ಣು ಮಗು ಹುಟ್ಟಿಗೆ

40 2019ರಲ್ಲಿ ಅಧಿಕಾರವಹಿಸಿ ಕೊಳ್ಳುತ್ತಿದ್ದಂತೆ ಎದುರಾದ ಪ್ರವಾಹ ಪರಿಸ್ಥಿತಿಯನ್ನು ಏಕಾಂಕಿಯಾಗಿ ನಿರ್ವಹಣೆ

41 ಒಪ್ಪಂದದಂತೆ 20 ತಿಂಗಳ ಅಧಿಕಾರ ನೀಡದ ಜೆಡಿಎಸ್; ಮೈತ್ರಿಯಿಂದ ಹೊರ ನಡೆದ ಬಿಜೆಪಿ

42 ಕರ್ನಾಟಕದ ಬಿಜೆಪಿಯ ಬಹುತೇಕ ಮೊದಲುಗಳಿಗೆ ಯಡಿಯೂರಪ್ಪ 'ಸಾಕ್ಷಿ'

43 2008ರಲ್ಲಿ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ.

44 ರಾಜ್ಯದಲ್ಲಿ ಮೊದಲ ಬಾರಿಗೆ ಶೂನ್ಯ ಬಡ್ಡಿ ದರದಲ್ಲಿ ರೈತರ ಕೃಷಿ ಸಾಲ ಯೋಜನೆ ಜಾರಿ.

45 **ಸಕ್ರಿಯ ರಾಜಕೀಯ ದಿಂದ ಹಿಂದೆ ಸರಿದರೂ ಸಾಮಾಜಿಕ**

46 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ

47 ಮ್ಯಾಜಿಕ್ ನಂಬರ್‌ಗೆ ಏಳು ಶಾಸಕರ ಕೊರತೆಯಾದಾಗ ಆಪರೇಷನ್ ಕಮಲದ ಮೂಲಕ ಬಹುಮತ

48 ಬಿಪಿಎಲ್ ಕಾರ್ಡ್ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ 'ಭಾಗ್ಯಲಕ್ಷ್ಮೀ' ಬಾಂಡ್ ವಿತರಣೆ

49 ಹಳ್ಳಿಗಳ ಸುಧಾರಣೆ ಯೋಜನೆ ಯಲ್ಲಿ ರು. 4,385 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಯೋಜನೆ ಜಾರಿ

50 ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಬಳಿಕ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯರಾಗಿ ಬಡ್ತಿ



ಹೆಣ್ಣು ಮಕ್ಕಳಿಗೆ ಭಾಗ್ಯ ತಂದ ಬಾಂಡ್

ಹೆಣ್ಣು ಭ್ರೂಣ ಹತ್ಯೆ ತಪ್ಪಿಸಲು ಕ್ರಾಂತಿಕಾರಕ ತೀರ್ಮಾನ | ಗ್ರಾಮಗಳ ಚಿತ್ರಣವನ್ನೇ ಬದಲಿಸಲು ಸಾವಿರಾರು ಕೋಟಿ ಮೀಸಲು | ಹಿಂದುತ್ವದ ಉಳಿವಿಗಾಗಿ ಹಲವು ಐತಿಹಾಸಿಕ ಕಾಯಿದೆ ಜಾರಿ

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರದ ಗದ್ದುಗೆಯನ್ನು ಹಿಡಿಯುವಲ್ಲಿ ಬಿ.ಎಸ್.ಯಡಿಯೂರಪ್ಪನವರ ಶ್ರಮ ಪ್ರಶ್ನಾತೀತ. ಪ್ರತಿಪಕ್ಷ ಶಾಸಕರಾಗಿ, ನಾಯಕರಾಗಿ ಸರಕಾರದ ಅಂಕು-ಡೊಂಕುಗಳನ್ನು ತಿದ್ದುತ್ತಿದ್ದ ಯಡಿಯೂರಪ್ಪ ಅವರಿಗೆ ಅಧಿಕಾರ ಸಿಗುತ್ತಿದ್ದಂತೆ, ಸಾರ್ವಜನಿಕ ಜೀವನದಲ್ಲಿ ತಾವು ಕಂಡಿದ್ದ ಸಂಕಷ್ಟಗಳಿಗೆ ಪರಿಹಾರ ಹುಡುಕುವ ಪ್ರಯತ್ನವನ್ನು ಮಾಡಿದ್ದರು.

ಅದರಲ್ಲಿಯೂ ಮಹಿಳೆ, ರೈತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನಪರ ಅಭಿವೃದ್ಧಿ ಹಾಗೂ ಉನ್ನತಿಗಾಗಿ ಯಡಿಯೂರಪ್ಪ ನಾಯಕತ್ವದ ಬಿಜೆಪಿ ಸರಕಾರ ವಿಶೇಷ ಕಾರ್ಯಕ್ರಮ ಜಾರಿಗೊಳಿಸಲಾಗಿತ್ತು. ಈ ವರ್ಗದ ಜನರ ಶೈಕ್ಷಣಿಕ ಮಟ್ಟ ಹೆಚ್ಚಿಸಲು ನಿರುದ್ಯೋಗಿ ಯುವ ಯುವತಿಯರಿಗೆ ತರಬೇತಿ, ಬಡವರಿಗೆ ಸಾಲ ಸೌಲಭ್ಯ ಮತ್ತು ಸಮುದಾಯದ ರೈತರಿಗೆ ನೀರಾವರಿ ಸೌಲಭ್ಯಕ್ಕೆ ಆದ್ಯತೆ ನೀಡಲಾಗಿತ್ತು.

ಮುಖ್ಯವಾಗಿ ವಿಶೇಷ ಘಟಕ ಯೋಜನೆಯಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗಿತ್ತು. ಯಡಿಯೂರಪ್ಪ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಂದರೆ 2009-10ನೇ ಸಾಲಿನಲ್ಲಿ 1296ಕೊಟಿ ರು. ಹಾಗೂ 2010-11 ರಲ್ಲಿ 1950ಕೋಟಿ ರು,ಗಳನ್ನು ಒದಗಿಸಲಾಗಿತ್ತು. ರಾಜ್ಯದಲ್ಲಿ 609 ವಸತಿ ನಿಲಯ ಹಾಗೂ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಒಟ್ಟಾರೆ 83717 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿತ್ತು.

ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ಪರಿಗಣಿಸಿ, ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚಕ್ಕಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಸಿಕ 650 ರು. ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಮಾಸಿಕ 750 ರು. ಮಂಜೂರು ಮಾಡಲಾಗಿತ್ತು. 4.15 ಲಕ್ಷ ವಿದ್ಯಾರ್ಥಿಗಳು ಈ ಯೋಜನೆ ಸೌಲಭ್ಯ ಪಡೆಯುತ್ತಿದ್ದರು. ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಬಾಬು ಜಗಜೀವನ್ ರಾಮ್ ಭವನ ನಿರ್ಮಿಸಲು 20 ಕೋಟಿ ರು., ಬೆಂಗಳೂರು ನಗರದಲ್ಲಿ 2 ಎಕರೆ ಜಮೀನನಲ್ಲಿ 5 ಕೋಟಿ ರು ವೆಚ್ಚದಲ್ಲಿ ಭವನ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅಲ್ಲದೆ ಯಡಿಯೂರಪ್ಪ ನಾಯಕತ್ವದ ಸರಕಾರದಲ್ಲಿ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಅಭಿವೃದ್ಧಿಗಾಗಿ ನೀಡಲಾಗಿತ್ತು.

ಬಡವರ ಪಾಲಿನ ಭಾಗ್ಯಲಕ್ಷ್ಮೀ

ಹೆಣ್ಣು ಹುಟ್ಟಿದರೆ ಮುಂದೇನು ಎನ್ನುವ ಕಾರಣಕ್ಕೆ ಭ್ರೂಣಹತ್ಯೆ ಯಂತಹ ಪೈಶಾಚಿಕ ಕೃತ್ಯವನ್ನು ತಡೆಯಲು ಹಾಗೂ ಹೆಣ್ಣು ಮಗುವಿನ ವಿದ್ಯಾಭ್ಯಾಸಕ್ಕೆ ಯಾವುದೇ ಸಮಸ್ಯೆಯಾಗದಂತೆ ಕ್ರಮವಹಿಸಲು ಯಡಿಯೂರಪ್ಪ ಅವರು ಹಲವು ಭಾಗ್ಯಲಕ್ಷ್ಮೀ ಬಾಂಡ್‌ಗಳನ್ನು ಪರಿಚಯಿಸಿದರು.

ಯಡಿಯೂರಪ್ಪ ಅವರು ಬಡ ಕುಟುಂಬದಲ್ಲಿ ಹೆಣ್ಣು ಮಗಳು ಜನಿಸಿದಲ್ಲಿ ಮರುಗುವ ಕಾಲವನ್ನು ದೂರ ಮಾಡಿದವರು ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ಎಂದರೆ ಅತಿಶಯೋಕ್ತಿಯಲ್ಲ. ಸರಕಾರ ಮಹತ್ವಾಕಾಂಕ್ಷೆ ಭಾಗ್ಯಲಕ್ಷ್ಮೀ ಯೋಜನೆ ಬಡ ಕುಟುಂಬದ ನಿಜವಾದ ಕಷ್ಟವನ್ನು ದೂರ ಮಾಡಿತ್ತಲ್ಲದೆ, ಸಮಾಜದ ಪರಿವರ್ತನೆಗೆ ಕ್ರಾಂತಿಕಾರಿ ಪರಿಣಾಮ ಬೀರಿದೆ. ಇದರ ಪ್ರಯೋಜನ ಪಡೆದ ಲಕ್ಷಾಂತರ ಕುಟುಂಬಕ್ಕೆ ಈ ಯೋಜನೆ ವರದಾನವಾಗಿದೆ.

ಒಟ್ಟಾರೆಯಾಗಿ 8,69,227 ಫಲಾನುಭವಿಗಳು ಈ ಯೋಜನೆಯ ಫಲ ಪಡೆದುಕೊಂಡಿದ್ದಾರೆ. 11.5 ಲಕ್ಷ ಕಡು ಬಡ ಹೆಣ್ಣು ಮಕ್ಕಳು ಭಾಗ್ಯಲಕ್ಷ್ಮಿಯ ಫಲಾನುಭವಿಗಳಾಗಿದ್ದಾರೆ. ಈ ಮೂಲಕ ಬೃಹತ್ ಮಟ್ಟದಲ್ಲಿ ಕಡು ಬಡ ಕುಟುಂಬದ ಮನೆ ದೀಪ ಬೆಳಗಿದಂತಾಗಿದ್ದು, ಕುಟುಂಬದಲ್ಲಿನ ಕಷ್ಟ ದೂರ ಮಾಡಿರುವ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತಿದೆ. ಇವರಲ್ಲಿ ಅನೇಕರಿಗೆ ಈಗಾಗಲೇ ಬಾಂಡ್‌ಗಳ ಮೊತ್ತವೂ ಪಾವತಿಯಾಗಿದೆ. ಹೆಣ್ಣು ಮಕ್ಕಳು ಓದಿ ವಿದ್ಯಾವಂತರಾಗಿ, ಎಲ್ಲರೊಂದಿಗೆ ಸ್ವಾಭಿಮಾನದಿಂದ ನಿಂತಾಗ ದೇಶಕ್ಕೆ ಹೆಮ್ಮೆಯ ಸಂಗತಿ. ಭೂ ಹಂಚಿಕೆ, ಕುಡಿಯುವ ನೀರು ಒದಗಿಸುವುದು ಎಷ್ಟು ಮಟ್ಟಿಗೆ ಮಹತ್ವವೋ, ನಿರಂತರ ತುಳಿತಕ್ಕೆ ಒಳಗಾಗಿರುವ ಸ್ತ್ರೀಯರ ರಕ್ಷಣೆಗಾಗಿ ಇಂತಹ ರಚನಾತ್ಮಕ, ಅಭ್ಯುದಯದ ಮೂಲಕ ಯೋಜನೆಗಳು ಅತ್ಯಂತ ಅಗತ್ಯ. ಈ ನಿಟ್ಟಿನಲ್ಲಿ ಅಂದಿನ ಬಿಜೆಪಿ ಸರಕಾರ ದಿಟ್ಟ ಹೆಜ್ಜೆ ಇಟ್ಟಿದೆ.

ಇದಲ್ಲದೆ 18 ವರ್ಷದ ಬಳಿಕ ಫಲಾನುಭವಿ ಹೆಣ್ಣುಮಕ್ಕಳು ಹಣ ಸಂದಾಯವಾಗಲು ಯಾವುದೇ ಮಧ್ಯವರ್ತಿಯ ಸಹಾಯ ಅಗತ್ಯವಿಲ್ಲದೆ, ಅವರಿಗೆ ಹಣ ನೇರವಾಗಿ ಫಲಾನುಭವಿಗಳಿಗೆ ಸೇರುವಂತೆ ಅಗತ್ಯ ಕ್ರಮಕೈಗೊಳ್ಳಲಾಗಿತ್ತು. ಮತ್ತು ಆಕೆ ವಿದ್ಯಾವಂತೆ ಆಗಬೇಕೆಂಬ ಆಶಯ ಪೂರ್ಣವಾಗುತ್ತಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ 2 ಹೆಣ್ಣು ಮಕ್ಕಳಿಗೆ ಸರಕಾರ ನಿಶ್ಚಿತ ಠೇವಣಿ ಹೂಡುತ್ತದೆ. ಇಬ್ಬರಿಗೂ ಈ ಯೋಜನೆ ಅನ್ವಯವಾಗುವಂತೆ ಮಾಡಲಾಗಿದ್ದು, ಮೊದಲ ಮಗುವಿನ ಹೆಸರಲ್ಲಿ 19300 ರು. ಹಾಗೂ 2ನೇ ಮಗುವಿನ ಹೆಸರಲ್ಲಿ 18350 ರು, ಮೊತ್ತವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡುವಂತೆ ಯೋಜನೆ ರೂಪಿಸಲಾಗಿದ್ದು, ಈ ಮೊತ್ತ ಫಲಾನುಭವಿಗೆ 18 ವರ್ಷ ಕಳೆದ ಬಳಿಕ ಒಂದು ಲಕ್ಷ ರು. ಲಭಿಸುವಂತೆ ಯೋಜಿಸಲಾಗಿತ್ತು.

ಸ್ವಾವಲಂಬನೆಯ ಕಲ್ಪನೆ

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಅಧಿಕಾರ ವಿಕೇಂದ್ರೀಕರಣ ಮಾಡುವತ್ತ ದಿಟ್ಟ ಹೆಜ್ಜೆ ಇಟ್ಟ ಅಂದಿನ ಬಿಜೆಪಿ ಸರಕಾರ, ಇಡೀ ರಾಷ್ಟ್ರದ ಗಮನ ಸೆಳೆದು, ಯೋಜನೆ ಅನುಷ್ಠಾನಗಳ ಕಾರ್ಯವೈಖರಿಗೆ ಶಹಬಾಸ್‌ಗಿರಿ ಪಡೆದುಕೊಂಡಿತು. ಮಹಾತ್ಮಾ ಗಾಂಧೀಜಿ ಕಂಡಿದ್ದ ಗ್ರಾಮಸ್ವರಾಜ್ ಕಲ್ಪನೆಯಲ್ಲಿ ಗ್ರಾಮಗಳ ಅಭಿವೃದ್ಧಿಯಿಂದಷ್ಟೇ ದೇಶದ ಅಭಿವೃದ್ಧಿ ಸಾಧ್ಯ ಎಂಬ ಅಂಶವನ್ನು ಮನಗಂಡು, ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸುವತ್ತ ಕ್ರಮಕಯಗೊಳ್ಳಲಾಗಿತ್ತು. ಇದಕ್ಕಾಗಿ 3037 ಕೋಟಿ ರು.ಗಳಿಗೂ ಹೆಚ್ಚಿನ ಅನುದಾನವನ್ನು ಗ್ರಾಮಗಳ ಅಭಿವೃದ್ಧಿಗೆ ಮೀಸಲಿಡಲಾಗಿತ್ತು.

ಕಾರ್ಮಿಕರ ಬಾಳಿನ ನಂದಾದೀಪ

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ನಿಜ ಅರ್ಥದಲ್ಲಿ ಕಾರ್ಮಿಕರ ಪಾಲಿನ ನಂದಾದೀಪವಾಗಿದ್ದರು. ಕಾರ್ಮಿಕರ ಬಾಳಿಗೆ ಭದ್ರತೆ ಒದಗಿಸಲು ಅವರು ಕೈಗೊಂಡ ಹಲವು ಸುಧಾರಣೆಯ ಕ್ರಮಗಳಿಂದ, ಕಾರ್ಮಿಕರ ಕುಟುಂಬಗಳು ನೆಮ್ಮದಿಯ ನಾಳೆಗಳನ್ನು ಕಾಣುವಂತಾಯಿತು. ಅವರು ಮಾಡಿದ ಇತರೆ ಸುಧಾರಣೆಗಳು ಹೀಗಿವೆ.

- ಅಸಂಘಟಿತ ಕಾರ್ಮಿಕರಿಗೆ ಪಿಂಚಣಿಯನ್ನು ಪ್ರತಿ ವರ್ಷ 1200 ರು.ನಂತೆ 3 ವರ್ಷ ನೀಡಿಕೆ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆ.
- ಗಾರ್ಮೆಂಟ್ಸ್ ಕಲ್ಯಾಣಕ್ಕಾಗಿ ಮತ್ತು ಸೇವಾ ಭದ್ರತೆಗೆ ಕ್ರಮ
- ಸಮೂಹ ಸಾರಿಗೆ ಕ್ರಾಂತಿ ಬಡವರ ಅನುಕೂಲಕ್ಕೆ -ಅಟಲ್ ಸಾರಿಗೆ.
- ವಿದ್ಯುತ್ ಉತ್ಪಾದನೆ 8,000 ಮೆಗಾವ್ಯಾಟ್ ಉತ್ಪಾದನೆ.



ವಸತಿ

ರಾಜ್ಯದಲ್ಲಿ ಬಡ, ಶೋಷಿತ ವರ್ಗಕ್ಕೆ ನೆರವು ನೀಡಲು ಬಿ.ಎಸ್.ಯಡಿಯೂರಪ್ಪ ಕೈಗೊಂಡ ಯೋಜನೆಗಳು ಹತ್ತಾರು. ಸರಕಾರದ 20 ಅಂಶಗಳ ಕಾರ್ಯಕ್ರಮ ಅನುಷ್ಠಾನದಲ್ಲಿ 2009ರಲ್ಲಿ 7ರ ಸ್ಥಾನವಿದ್ದು, 2010ರಲ್ಲಿ 2ನೇ ಸ್ಥಾನಕ್ಕೆ ತಲುಪಿದೆ. ರಾಜ್ಯದ ಸಾಧನೆ ಶೇ.90 ರಷ್ಟಾಗಲು ಯಡಿಯೂರಪ್ಪ ಅವರು ತೆಗೆದುಕೊಂಡ ಅಭಿವೃದ್ಧಿಪರ ಕೆಲಸಗಳೆ ಕಾರಣವಾದವು. ಆಸರೆ ಯೋಜನೆಯಡಿ 62,324 ಮನೆಗಳ ನಿರ್ಮಾಣ, 270 ಪೂರ್ಣಗೊಂಡ ಬಡಾವಣೆಗಳು ಬಿಎಸ್‌ವೈ ಅವರ ಸಾಧನೆಗೆ ಸಾಕ್ಷ್ಯ ಒದಗಿಸುತ್ತಿವೆ. ಆಶ್ರಯ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ 2010-11ನೇ ಸಾಲಿನಲ್ಲಿ 1.5ಲಕ್ಷಕ್ಕೂ ಅಧಿಕ ನಿವೇಶನಗಳನ್ನು ನೀಡಿದ್ದು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ 3 ಲಕ್ಷಕ್ಕೂ ಅಧಿಕ ಮನೆಗಳ ನಿರ್ಮಾಣ ಕಾರ್ಯ ಯಡಿಯೂರಪ್ಪ ಅವರ ಆಡಳಿತದ ಸಮಯದಲ್ಲಿ ನಡೆಯಿತು.

ರಾಜ್ಯದಲ್ಲಿ ಕ್ರಾಂತಿಕಾರಕ ಅಭಿವೃದ್ಧಿ ತಂದ ಬಿಎಸ್‌ವೈ ಯೋಜನೆಗಳು

- ಭಾಗ್ಯಲಕ್ಷ್ಮಿ ಯೋಜನೆಯಿಂದ 11.4 ಲಕ್ಷ ಹೆಣ್ಣು ಮಕ್ಕಳಿಗೆ ಪ್ರಯೋಜನ.
- 14 ಲಕ್ಷ ರೈತರಿಗೆ 7 ಸಾವಿರ ಕೋಟಿ ರು. ಕೃಷಿ ಸಾಲ ನೀಡಿಕೆ.
- 6.41 ಲಕ್ಷ ಮಹಿಳಾ ಸಹಕಾರಿ ಸಂಘಗಳ ಹಾಲು ಉತ್ಪಾದಕರಿಗೆ 400 ಕೋಟಿ ರು ಪ್ರೋತ್ಸಾಹ ಧನ ವಿತರಣೆ.
- ಸುವರ್ಣ ಗ್ರಾಮೋದಯ ಯೋಜನೆಗೆ 400 ಕೋಟಿ ರು. ನೀಡಿಕೆ
- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಶೇ.50 ಮಹಿಳೆಯರಿಗೆ ಮೀಸಲು
- ಆರೋಗ್ಯ ಕವಚದಿಂದ 7.6 ಲಕ್ಷ ಜೀವಗಳ ರಕ್ಷಣೆ
- 12 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ
- ಸಾಮಾಜಿಕ ಭದ್ರತೆ, ಹಿರಿಯ ನಾಗರಿಕರು, ಅಂಗವಿಕಲರು, ವಿಧವೆಯರು ಮುಂತಾದ 45 ಲಕ್ಷ ಬಡ ಮಂದಿಗೆ ಪಿಂಚಣಿ
- ಸಾವಯವ ಕೃಷಿಯಲ್ಲಿ 2011-12ನೇ ಸಾಲಿನಲ್ಲಿ 200 ಕೋಟಿ ರು ನೀಡಿಕೆ
- ನಿರಂತರ ಜ್ಯೋತಿ, ಸತತ 24 ಗಂಟೆ 3 ಫೇಸ್ ವಿದ್ಯುತ್ ಪೂರೈಕೆ
- ಕೌಶಲ್ಯ ಅಭಿವೃದ್ಧಿ ಯೋಜನೆಯಡಿ 10 ಸಾವಿರಕ್ಕೂ ಅಧಿಕ ಫಲಾನುಭವಿಗಳಿಗೆ ಲಾಭ
- ಕೆರೆಗಳ ಪುನಶ್ಚೇತನಕ್ಕೆ 1,000 ಕೋಟಿ ರು. ಅನುದಾನ

ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರದ ಅವಧಿಯಲ್ಲಿ ರಾಷ್ಟ್ರ ಹಾಗೂ ರಾಜ್ಯ ಸರಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಮುಂಚೂಣಿಯಲ್ಲಿತ್ತು ಎಂಬ ಅಂಶವನ್ನು ಮರೆಯುವಂತಿಲ್ಲ. ರಾಷ್ಟ್ರಮಟ್ಟದಲ್ಲಿ ಪ್ರಮುಖ 10 ರಾಜ್ಯಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಯೋಜನೆಗಳ ಅನುಷ್ಠಾನದ ವಿಭಾಗದಲ್ಲಿ 2 ನೇ ಸ್ಥಾನ ಪ್ರಾಪ್ತವಾಗಿತ್ತು. ಆಹಾರ ಭದ್ರತೆ, ಉದ್ಯೋಗ ಖಾತರಿ, ಅಂತ್ಯೋದಯ ಅನ್ನ, ಪಡಿತರ ವಿತರಣೆ ಗ್ರಾಮೀಣ ರಸ್ತೆ, ವಿದ್ಯುತ್ ಪೂರೈಕೆ ಸೇರಿದಂತೆ ಇತ್ಯಾದಿ ಯೋಜನೆಗಳಲ್ಲಿ ಶಿಸ್ತು ಕಾಪಾಡಿ, ಸರಕಾರದ ಅನಗತ್ಯ ವೆಚ್ಚಗಳನ್ನು ಕಡಿವಾಣ ಹಾಕಲಾಗಿತ್ತು. ಸಂಪನ್ಮೂಲ ಕ್ರೂಢೀಕರಣದಲ್ಲಿ ಹಲವು ರಾಜ್ಯಗಳು ವಿವಿಧ ತೊಡಕುಗಳನ್ನು ಅನುಭವಿಸುತ್ತದೆ. ಆದರೆ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ಹಣಕಾಸಿನ ಇಕ್ಕಟ್ಟಿನ ಮಧ್ಯೆಯೂ ಸಮರ್ಥವಾಗಿ ಯೋಜನೆ ರೂಪಿಸಿ ನುಷ್ಠಾನಗೊಳಿಸಲಾಗಿತ್ತು. ವರಮಾನ ಹಾಗೂ ಖರ್ಚು ವೆಚ್ಚಗಳ ಬಗ್ಗೆ ಸಮತೋಲನ, ವಾಣಿಜ್ಯ, ಅಬಕಾರಿ ಮೋಟಾರು ವಾಹನ ತೆರಿಗೆ ವಿಚಾರದಲ್ಲಿ ಸಾಕಷ್ಟು ಸುಧಾರಣೆ ತರಲಾಗಿತ್ತು.

ವಾರಪೂರ್ತಿ ಪಡಿತರ ನೀಡಿದ ಜನಾನುರಾಗಿ

ರಾಜ್ಯದಲ್ಲಿ ಅಪೌಷ್ಠಿಕತೆ ಹೆಚ್ಚಿದ ಹಿನ್ನೆಲೆಯಲ್ಲಿ ಬಡಜನರಿಗೆ ಗುಣಮಟ್ಟದ ಆಹಾರ ನೀಡಿದ .ಯಡಿಯೂರಪ್ಪ, ಕಟ್ಟುನಿಟ್ಟಾದ ಪಡಿತರ ವ್ಯವಸ್ಥೆಯನ್ನು ಜಾರಿ ತಂದಿದ್ದರು. ಬಿಪಿಎಲ್ ಚೀಟಿದಾರರು ತಿಂಗಳು ಪೂರ್ತಿ ಆಹಾರ ಪಡೆದು ಅನುಕೂಲವಾಗುವಂತೆ ನ್ಯಾಯಬೆಲೆ ಅಂಗಡಿಗಳಲ್ಲಿ 'ಅನ್ನಪೂರ್ಣ ಆಹಾರ ಭಂಡಾರ' ಎಂಬ ಯೋಜನೆಯನ್ನು ಜಾರಿಗೆ ತಂದಿದ್ದರು. ಡಾ.ಎಂ.ಡಿ.ನಂಜುಂಡಪ್ಪ ಅವರ ಸಮಿತಿ ನೀಡಿದ್ದ ವರದಿಯಲ್ಲಿ ಹಿಂದುಳಿದ ತಾಲೂಕುಗಳನ್ನು ಗುರುತಿಸಲಾಗಿತ್ತು. ಈ ತಾಲೂಕುಗಳಲ್ಲಿರುವ ಜನರ ಜೀವನ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಈ ಹೊಸ ವ್ಯವಸ್ಥೆ ತರಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವತಿಯಿಂದ ಮಾದರಿ ನ್ಯಾಯಬೆಲೆ ಅಂಗಡಿಯನ್ನು ತೆರೆದು ಪಡಿತರ ಹಂಚುವ ವ್ಯವಸ್ಥೆ ತರಲಾಯಿತು. ಪ್ರತಿ ಅಂಗಡಿಗೆ ಕನಿಷ್ಠ 3,000 ಬಿಪಿಎಲ್ ಪಡಿತರ ಚೀಟಿಗಳಿಗೆ ಪಡಿತರ ನೀಡಲು ಸೂಚಿಸಲಾಗಿತ್ತು. ಯೋಜನೆ ಜಾರಿಗೂ ಮುನ್ನ ಬಳ್ಳಾರಿ ಜಿಲ್ಲೆಯಲ್ಲಿ ಪ್ರಯೋಗ ನಡೆದಿತ್ತು. ಹಿಂದುಳಿದ ಜಿಲ್ಲೆಗಳಿಗೆ ಮೊದಲ ಆದ್ಯತೆ ನೀಡಿ ಯೋಜನೆ ಜಾರಿಗೊಳಿಸಲಾಯಿತು. ಆಯಾ ಜಿಲ್ಲಾಧಿಕಾರಿಗಳಿಗೆ ಯೋಜನೆ ಜಾರಿಯ ಜವಾಬ್ದಾರಿ ನೀಡಲಾಗಿತ್ತು. ಈ ಅಂಗಡಿಗಳು ವಾರದ ಎಲ್ಲ ದಿನಗಳಲ್ಲೂ ತೆರೆದಿರುತ್ತಿತ್ತು. ಬೆ.8ರಿಂದ ಆರಂಭವಾಗಿ ರಾತ್ರಿ 8ರವರೆಗೂ ಪಡಿತರ ವಿತರಣೆ ಮಾಡಲು ಯೋಜನೆ ರೂಪಿಸಲಾಗಿತ್ತು. ಈ ವ್ಯವಸ್ಥೆ ತಂದ ಬಳಿಕ ಸಾಮಾನ್ಯ ಜನರು ವಾರದ ಯಾವುದೇ ದಿನದಲ್ಲಿ ತಮಗೆ ರಾಜ್ಯ ಸರಕಾರ ನಿಗದಿಪಡಿಸಿದ್ದ ಆಹಾರ ಧಾನ್ಯವನ್ನು ಪಡೆಯಬಹುದಿತ್ತು. ನಿತ್ಯದ ಕೆಲಸಗಳಿಗಾಗಿ ತಾಲೂಕು ಕೇಂದ್ರಗಳಿಗೆ ಬರುತ್ತಿದ್ದ ಜನರು ಈ ಯೋಜನೆಯನ್ನು ಬಳಸಿಕೊಳ್ಳುತ್ತಿದ್ದರು.

ಗ್ರಾಮೀಣರಿಗೆ ನೆರವು

ಗ್ರಾಮೀಣ ಪ್ರದೇಶಗಳಲ್ಲಿ ಸಂಚಾರ ಸುಗಮವಾಗಲು ರಸ್ತೆಗಳನ್ನು ಅಭಿವೃದ್ಧಿಪಡಿಸಲು ಬಿ.ಎಸ್.ಯಡಿಯೂರಪ್ಪ ಹೆಚ್ಚು ಅನುದಾನ ನೀಡಿದರು. 2010-11 ರ ಸಾಲಿನಲ್ಲಿ 250 ಕೋಟಿ ವೆಚ್ಚದಲ್ಲಿ ಹಳ್ಳಿಗಳ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಯಿತು. ಏಕಪಥ ರಸ್ತೆಗಳನ್ನು ದ್ವಿಪಥ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲು ತಮ್ಮ ಆಡಳಿತದ ಅವಧಿಯಲ್ಲಿ 3,000 ಕೋಟಿ ರು. ವೆಚ್ಚ ಮಾಡಿದ್ದರು. ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ 737 ಕೋಟಿ ರು., ರಾಜ್ಯದ ಕಾಶ್ಮೀರವಾಗಿರುವ ಕೊಡಗು ಜಿಲ್ಲೆಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು 25ಕೋಟಿ ರು., ಬಿಡುಗಡೆ ಮಾಡಲಾಯಿತು. ರಸ್ತೆ ನಿರ್ಮಾಣ ಮಾಡುವಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿ, ಟೆಂಡರ್ ಪ್ರಕ್ರಿಯೆಗಳನ್ನು ಪಾರದರ್ಶಕತೆಯನ್ನು ತಂದರು. ಆಗಿನ ಕಾಲದಲ್ಲಿ ಸರಕಾರಿ ಬಸ್ಸುಗಳು ಹಳ್ಳಿಗಳ ಕಡೆಗೆ ಮುಖ ಮಾಡುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ 'ನಿಮ್ಮ ಊರಿಗೆ, ನಮ್ಮ

ಸಾರಿಗೆ' ಎಂಬ ಯೋಜನೆ ತಂದ ಬಿಎಸ್‌ವೈ ನೇತೃತ್ವದ ಸರಕಾರ, ರಾಜ್ಯದ ಹಳ್ಳಿಹಳ್ಳಿಗಳಿಗೂ ಸಮರ್ಪಕ ಸಂಚಾರ ವ್ಯವಸ್ಥೆ ನೀಡಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡ್ಯ ಹಾಗೂ ಮೈಸೂರು ಗ್ರಾಮಾಂತರ ವಿಭಾಗವನ್ನು ತೆರೆದು ಗ್ರಾಮೀಣರಿಗೆ ಉತ್ತಮ ಸಂಚಾರ ವ್ಯವಸ್ಥೆ ಕಲ್ಪಿಸಲಾಯಿತು. ಚಾಮರಾಜನಗರ ವಿಭಾಗವನ್ನು ಇದೇ ಅವಧಿಯಲ್ಲಿ ರೂಪಿಸಿದ್ದರಿಂದ ಜನರಿಗೆ ಹೆಚ್ಚು ಅನುಕೂಲವಾಯಿತು.

ಜಾಗತಿಕ ಬಂಡವಾಳ ಹೂಡಿಕೆ

ರಾಜ್ಯದಲ್ಲಿ ಕೈಗಾರಿಕಾ ಹೊಸ ಪರ್ವವನ್ನು ಸೃಷ್ಟಿಸಿದ ಶ್ರೇಯಸ್ಸು ಬಿ.ಎಸ್.ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಕೈಗಾರಿಕೆಗಳ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಐ.ಟಿ ಮತ್ತು ಬಿ.ಟಿ ಉತ್ತೇಜನಕ್ಕಾಗಿ ಲಕ್ಷಾಂತರ ಕೋಟಿ ರು.ಗಳ ಜಾಗತಿಕ ಬಂಡವಾಳ ಹೂಡಿಕೆಗೆ ಅವರು ಅವಕಾಶ ಮಾಡಿಕೊಟ್ಟರು. ಇದರಿಂದ 3.93 ಲಕ್ಷ ಕೋಟಿ ರು. ಬಂಡವಾಳ ಹೂಡಿಕೆ ರಾಜ್ಯಕ್ಕೆ ಹರಿದುಬಂದಿತ್ತು. 389 ಕೈಗಾರಿಕಾ ಯೋಜನೆಗಳ ಒಪ್ಪಂದ, 10 ಲಕ್ಷ ಹೊಸ ಉದ್ಯೋಗದ ನಿರೀಕ್ಷೆ, 250 ಕೋಟಿ ರು.ಗೂ ಹೆಚ್ಚು ಬಂಡವಾಳ ಹೂಡಿಕೆಯ 113 ಬೃಹತ್ ಯೋಜನೆಗಳಿಗೆ ಅಂದಿನ ಸರಕಾರ ಅನುಮೋದನೆ ನೀಡಿತ್ತು. ಇಲ್ಲಿಯವರೆಗೆ ಒಟ್ಟು 1,666ಯೋಜನೆಗಳಿಗೆ ಅನುಮೋದನೆ ಹಾಗೂ ಸುಮಾರು 15.19 ಲಕ್ಷ ಮಂದಿಗೆ ಉದ್ಯೋಗಾವಕಾಶ ದೊರಕಿದೆ. ಕೈಗಾರಿಕಾ ರಂಗದ ಉತ್ತೇಜನಕ್ಕಾಗಿ ಉದ್ದಿಮೆದಾರರುಗಳ ಬಂಡವಾಳ ಹೂಡಿಕೆಗೆ ಸರಕಾರ ತೆರಿಗೆ ವಿನಾಯಿತಿ ಸಬ್ಸಿಡಿ ನೀಡಿಕೆ ಮತ್ತು ರಾಜ್ಯದಲ್ಲಿ ಹಸಿರು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಕರ್ನಾಟಕವು ಬಂಡವಾಳ ಹೂಡಿಕೆಗೆ ಅತ್ಯಂತ ಪ್ರಶಸ್ತ ಸ್ಥಳವಾಗಿರುತ್ತದೆ ಎಂದು ಭಾರತೀಯ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ಮಹಾ ಮಂಡಳಿಯ ಏಪ್ರಿಲ್ 7, 2011ರ ವರದಿಯಲ್ಲಿ ಪ್ರಕಟಿತವಾಗಿದೆ. ಇದಕ್ಕೆಲ್ಲಾ ಬಿಎಸ್‌ವೈ ಕಾರಣರಾಗಿದ್ದಾರೆ.

ಜನರ ಸಂಕಷ್ಟಗಳ ಪರಿಹಾರಕ್ಕೆ ನೂರಾರು ಯೋಜನೆ; ಮೊದಲ ಬಾರಿಗೆ ಕೃಷಿ ಬಜೆಟ್ ನೀಡಿದ ರೈತ ನಾಯಕ

ಅಧಿಕಾರಕ್ಕೆ ಬಂದಾಗಲೆಲ್ಲ ಸರಣಿ ಸವಾಲು

ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ದಶಕಗಳ ಕಾಲ ಹೋರಾಡಿದ ಯಡಿಯೂರಪ್ಪ ಅವರು ಅಧಿಕಾರಕ್ಕೆ ಬಂದ ಬಳಿಕವೂ ಹೋರಾಟದ ಹಾದಿಯೇ ಆಗಿದೆ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ 2008ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿಯ ಸಾರಥ್ಯವನ್ನು ವಹಿಸಿದ್ದು ಯಡಿಯೂರಪ್ಪ ಅವರು. ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ರಾಜ್ಯದಲ್ಲಿ ಭಾರಿ ಪ್ರವಾಹ ಪರಿಸ್ಥಿತಿ ಎದುರಾಯಿತು. ಈ ವೇಳೆ ರಾಯಚೂರು, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾರಿ ಪ್ರಮಾಣದ ಪ್ರವಾರ ಪರಿಸ್ಥಿತಿ ಎದುರಾಗಿತ್ತು. ಆದರೂ ಯಡಿಯೂರಪ್ಪ ಅವರು ಧೃತಿಗೆಡದೇ ಸಮರ್ಥವಾಗಿ ಆಡಳಿತ ನಡೆಸಿ, ರಾಜ್ಯದ ಜನರಿಗೆ ಯಾವುದೇ ಸಮಸ್ಯೆಯಾಗದ ರೀತಿಯಲ್ಲಿ ಎಚ್ಚರ ವಹಿಸಿದರು.

ಇನ್ನು ಎರಡನೇ ಬಾರಿಗೆ ಅಧಿಕಾರಕ್ಕೆ ಬರುತ್ತಿದ್ದಂತೆ ರಾಜ್ಯಾದ್ಯಂತ ಪ್ರವಾಹ ಎದುರಾಯಿತು. ಈ ವೇಳೆ ಕರ್ನಾಟಕದಲ್ಲಿ ಸಚಿವ ಸಂಪುಟವೂ ರಚನೆಯಾಗಿರಲಿಲ್ಲ. ಆದರೆ ಕರ್ನಾಟಕದ ಅರ್ಧಕ್ಕಿಂತ ಹೆಚ್ಚು ಜಿಲ್ಲೆಗಳು ಪ್ರವಾಹಕ್ಕೆ ಸಿಲುಕಿದ್ದವು. ಆದರೆ ಇದನ್ನು ಸವಾಲಾಗಿ ಸ್ವೀಕರಿಸಿದ ಯಡಿಯೂರಪ್ಪ ಅವರು, ಏಕಾಂಗಿಯಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ, ಜನರ ಸಂಕಷ್ಟಕ್ಕೆ ನೆರವಾದರು.

ಪ್ರವಾಹದಿಂದ ಚೇತರಿಸಿಕೊಳ್ಳುವ ಮೊದಲೇ ಇಡೀ ವಿಶ್ವವನ್ನು ಕಾಡಿದ ಕರೋನಾ ಸಮಯದಲ್ಲಿ ಅಭಿವೃದ್ಧಿ ಬದಿಗೊತ್ತಿ, ಜೀವಕ್ಕೆ ಒತ್ತು ನೀಡುವ ಕಾರ್ಯವನ್ನು ಯಡಿಯೂರಪ್ಪ ಅವರು ಮಾಡಿದರು. ರಾಜ್ಯದ ಜನತೆಯ ಜೀವಕ್ಕೆ ಕಂಟಕವಾಗಿರುವ ಕರೋನಾ ಸೋಂಕು ನಿಯಂತ್ರಿಸುವ ಸಲುವಾಗಿ ಯಡಿಯೂರಪ್ಪ ಇತರೆ ಅಭಿವೃದ್ಧಿಗಳನ್ನು ಬದಿಗೊತ್ತಿದ್ದಾರೆ. ಸೋಂಕು ಕಡಿವಾಣಕ್ಕೆ ಮೊದಲ ಆದ್ಯತೆ ನೀಡಿ ಇಡೀ ದೇಶವೇ ಮೆಚ್ಚುವಂತಹ ಕ್ರಮಗಳನ್ನು ಕೈಗೊಂಡಿದ್ದಾರೆ. ರಾಜ್ಯದಲ್ಲಿ ಸೋಂಕು ಪತ್ತೆಯಾಗುತ್ತಿದ್ದಂತೆ ಎಚ್ಚೆತ್ತು ಲಾಕ್ ಡೌನ್‌ನಂತಹ ಕ್ರಮ ಕೈಗೊಂಡು ಜನರ ಜೀವ ಉಳಿಸುವ ಕಾರ್ಯದಲ್ಲಿ ಮಗ್ನರಾದರು. ತಮ್ಮ ವಯಸ್ಸನ್ನು ಲೆಕ್ಕಿಸದೆ ಯಡಿಯೂರಪ್ಪ ಅವರು ಸತತವಾಗಿ ಸಭೆಗಳನ್ನು ನಡೆಸಿದ್ದರು. ರಾಜ್ಯದ ಆರ್ಥಿಕತೆಯಮೇಲೆಪೆಟ್ಟು ಬಿದ್ದರೂ ಜನರ ಆರೋಗ್ಯದ ದೃಷ್ಟಿಯಿಂದ ಕರೋನಾ ಸೋಂಕು ತಡೆಯಲು 40 ದಿನಗಳಿಗೂ ಹೆಚ್ಚು ಕಾಲ ಇಡೀ ರಾಜ್ಯವನ್ನೇಸ್ತಬ್ಧಗೊಳಿಸಿದರು.

ಈ ವೇಳೆ ರಾಜ್ಯ ಮತ್ತು ಅನ್ಯ ರಾಜ್ಯಗಳ ಜನರಿಗೆ ಯಾವುದೇ ತೊಂದರೆಯಾಗಬಾರದು ಎಂಬ ಕಾರಣಕ್ಕಾಗಿ ಊಟ, ವಸತಿಯ ಸೌಲಭ್ಯಗಳನ್ನು ಕಲ್ಪಿಸಿ ಸೈಎನಿಸಿಕೊಂಡರು. ಯಡಿಯೂರಪ್ಪ ಅವರು ಕೈಗೊಂಡಿರುವ ಕ್ರಮಗಳನ್ನು ಗಮನಿಸಿದ ಇತರೆ ರಾಜ್ಯಗಳ ಮುಖ್ಯಮಂತ್ರಿಗಳು, ರಾಜ್ಯದ ಪ್ರತಿಪಕ್ಷನಾಯಕರುಸಹಮೆಚ್ಚುಗೆ ವ್ಯಕ್ತಪಡಿಸಿದರು. ಬಜೆಟ್ ಅಧಿವೇಶನದ ವೇಳೆ ಕಾಣಿಸಿಕೊಂಡ ಮಹಾಮಾರಿ ಸೋಂಕು ತಡೆಯುವ ಸಂಬಂಧ ಅಧಿವೇಶನವನ್ನು ಮೊಟಕುಗೊಳಿಸಿ ರಾಜ್ಯದ ಜನತೆಯತ್ತ ಹೆಚ್ಚಿನ ಗಮನಹರಿಸಿದರು. ಪ್ರತಿನಿತ್ಯ ಸಭೆಗಳನ್ನು ನಡೆಸಿದರು. ಜನರ ಆರೋಗ್ಯದ ದೃಷ್ಟಿಯಿಂದ ಸಕಲ ರೀತಿಯ ಕಾರ್ಯಗಳನ್ನು ಕೈಗೊಳ್ಳಲು ಟೊಂಕಕಟ್ಟಿ ನಿಂತರು. ಯಾವುದೇ ಆರ್ಥಿಕ ಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡಿದ್ದರೂ ಜನಸಾಮಾನ್ಯರ ಜೀವನಕ್ಕೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗಬಾರದು ಎಂಬ ಕಾರಣಕ್ಕಾಗಿ ಸಚಿವರು, ಐಎಎಸ್ ಅಧಿಕಾರಿಗಳು ಮತ್ತು ರಾಜ್ಯ ಸರಕಾರದ ಅಧಿಕಾರಿಗಳ ತಂಡವನ್ನು ರಚಿಸಿದರು. ಸೋಂಕು ನಿವಾರಣೆಗೆ ಸಕಲ ರೀತಿಯ ಕ್ರಮಗಳನ್ನು ಕೈಗೊಂಡರು.

ರಾಜ್ಯದಲ್ಲಿ ಕಳೆದ 118 ವರ್ಷಗಳಲ್ಲಿ ಅತಿ ಹೆಚ್ಚು ಸರಾಸರಿ ಮಳೆ ದಾಖಲಾಗಿತ್ತು. 25 ಜಿಲ್ಲೆಗಳ 119 ತಾಲೂಕುಗಳನ್ನು ಪ್ರವಾಹ ಪೀಡಿತ ಎಂದು ಘೋಷಿಸಲಾಯಿತು. ಸರಕಾರ ತಕ್ಷಣ ಕಾರ್ಯಪ್ರವೃತ್ತವಾಗಿ ಕೇಂದ್ರ ಸರಕಾರದ ಸಹಕಾರದೊಂದಿಗೆ ಜನರ ಸ್ಥಳಾಂತರ, ಜಾನುವಾರುಗಳ ರಕ್ಷಣೆಗೆ ಕ್ರಮಕೈಗೊಂಡಿತು.

ಈ ಸಂದರ್ಭದಲ್ಲಿ ಅಪಾರ ಆಸ್ತಿಪಾಸ್ತಿ ನಷ್ಟ ಸಂಭವಿಸಿದ ಹಿನ್ನೆಲೆಯಲ್ಲಿ ಕ್ಷಿಪ್ರಗತಿಯಲ್ಲಿ ಅತ್ಯಂತ ಪಾರದರ್ಶಕವಾಗಿಪರಿಹಾರವಿತರಣೆಗೆ ಕ್ರಮವಹಿಸಲಾಯಿತು. ಕೇಂದ್ರ ಸರಕಾರವು 1869 ಕೋಟಿ ರು. ಪರಿಹಾರ ಒದಗಿಸಿದೆ. ಪರಿಹಾರ ವಿತರಣೆ, ಮೂಲಸೌಕರ್ಯ ದುರಸ್ತಿ ಮತ್ತಿತರ ಪರಿಹಾರ ಕಾರ್ಯಗಳಿಗೆ ರಾಜ್ಯ ಸರಕಾರ ಒಟ್ಟು 6108 ಕೋಟಿ ರು. ಮಂಜೂರು ಮಾಡಿದ್ದು, ಎನ್‌ಡಿಆರ್‌ಎಫ್ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚಿನ ಪರಿಹಾರ ನೀಡಿದರು.

- ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ 10 ಕೋಟಿ ರು. ಅನುದಾನ
- ಶ್ರವಣಬೆಳಗೊಳ ಬಾಹುಬಲಿ ದೇವಸ್ಥಾನ ಸಂಕೀರ್ಣಕ್ಕೆ 5 ಕೋಟಿ ರು. ಅನುದಾನ
- ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರು. ಅನುದಾನ
- ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರು.ಅನುದಾನ
- ನಾಗಮಂಗಲ ಶ್ರೀ ಆದಿಚುಂಚನಗಿರಿ ಕ್ಷೇತ್ರಕ್ಕೆ 5 ಕೋಟಿ ರು.ಅನುದಾನ
- ತುಮಕೂರಿನ ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರಕ್ಕೆ 10 ಕೋಟಿ ರು. ಅನುದಾನ
- ಮಾನಸ ಸರೋವರ ಯಾತ್ರಿಗಳಿಗೆ ಆರ್ಥಿಕ ನೆರವು
- ಕಲಬುರ್ಗಿಯ ದೇವಲಗಾಣಗಾಪುರದಲ್ಲಿರುವ ದತ್ತಾತ್ರೇಯ ಪೀಠಕ್ಕೆ 2 ಕೋಟಿ ರು. ಅನುದಾನ
- ಚಿಕ್ಕಮಗಳೂರು ರಂಭಾಪುರಿಯಲ್ಲಿರುವ ಸೋಮೇಶ್ವರ ಕ್ಷೇತ್ರಕ್ಕೆ 3 ಕೋಟಿ ರು. ಅನುದಾನ
- ಚಿಕ್ಕಮಗಳೂರಿನ ಹರಿಹರಪುರ ಕ್ಷೇತ್ರಕ್ಕೆ 1 ಕೋಟಿ ರು. ಅನುದಾನ
- ಕರ್ನಾಟಕದ ಶ್ರೀ ಅಯ್ಯಪ್ಪಸ್ವಾಮಿ ಭಕ್ತರಿಗೆ ಅತಿಥಿ ಗೃಹ ನಿರ್ಮಾಣಕ್ಕೆ 5 ಕೋಟಿ ರು. ಅನುದಾನ
- ಸವದತ್ತಿಯ ಶ್ರೀ ರೇಣುಕಾ ದೇವಿ ಯಲ್ಲಮ್ಮ ದೇವಸ್ಥಾನಕ್ಕೆ 5 ಕೋಟಿ ರು. ಅನುದಾನ
- ಚಿಕ್ಕಮಗಳೂರಿನ ದತ್ತಪೀಠ ಅಭಿವೃದ್ಧಿಗೆ 5 ಕೋಟಿ ರು. ಅನುದಾನ
- ಉಡುಪಿಯ ಮಧ್ವಾಚಾರ್ಯ ಪೀಠಕ್ಕೆ 2 ಕೋಟಿ ರು. ಅನುದಾನ
- ದಕ್ಷಿಣ ಕನ್ನಡ ಜಿಲ್ಲೆಯ ವೇಣೂರು ದಿಗಂಬರ ದೇವಸ್ಥಾನ ಜೀರ್ಣೋದ್ಧಾರಕ್ಕೆ 2 ಕೋಟಿ ರು. ಅನುದಾನ
- ತಿರುಮಲ ಯಾತ್ರಾರ್ಥಿಗಳಿಗೆ ಅತಿಥಿ ಗೃಹ ನಿರ್ಮಾಣಕ್ಕೆ ಆರ್ಥಿಕ ನೆರವು

ಗಣಿ ಅಕ್ರಮಕ್ಕೆ ತಡೆ

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಗಣಿ ಅವ್ಯವಹಾರ ತಡೆಯಲು ಕಠಿಣ ಕ್ರಮ ಕೈಗೊಂಡಿದ್ದರು. ಅವರು ಕೈಗೊಂಡ ಕ್ರಮಗಳು ಇಂದಿಗೂ ಮಾದರಿಯಾಗಿವೆ. ನೈಸರ್ಗಿಕ ಸಂಪತ್ತು ಉಳಿಸಿ, ಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಅಂದಿನ ಬಿಜೆಪಿ ಸರಕಾರ ಕೈಗೊಂಡ ಕ್ರಮ ಐತಿಹಾಸಿಕವಾದುದು. ಗಣಿ ಅದಿರು ರಫ್ತಿನ ವಿಷಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಮನಗಂಡು, ರಾಜ್ಯ ನೈಸರ್ಗಿಕ ಸಂಪತ್ತನ್ನು ಕಾಪಾಡುವ ದೃಷ್ಟಿಯಿಂದ ಗಣಿ ಅದಿರು ರಫ್ತು ನಿಷೇಧಕ್ಕೆ ಆದೇಶ ಹೊರಡಿಸಲಾಗಿತ್ತು. ಇಂತಹ ದಿಟ್ಟ ಕ್ರಮ ಕೈಗೊಂಡ ರಾಜ್ಯಗಳಲ್ಲಿ ಕರ್ನಾಟಕವೇ ಪ್ರಥಮ ಸ್ಥಾನದಲ್ಲಿ ನಿಂತಿದೆ. ಇಂತಹ ಕಠಿಣ ಕ್ರಮಗಳಿಗೆ ಬಿಎಸ್‌ವೈ ಉತ್ತಮ ಉದಾಹರಣೆಯಾಗಿದ್ದಾರೆ.

ಬರಪೀಡಿತರಿಗೆ ನೆರವು

ಬಿಎಸ್‌ವೈ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಉತ್ತರ ಕರ್ನಾಟಕ ಹಲವು ಜಿಲ್ಲೆಗಳಲ್ಲಿ ನೆರೆ ಬಂದು ಆಸ್ತಿ, ಜೀವ ಹಾನಿಗಳಾಗಿತ್ತು. ಇದನ್ನು ಸಮರ್ಥವಾಗಿ ನಿಭಾಯಿಸಿದ ಬಿಎಸ್‌ವೈ, ಪ್ರವಾಹ ಪೀಡಿತರಿಗೆ ಅಗತ್ಯ ಪರಿಹಾರ ಒದಗಿಸಿದ್ದರು. ರಾಜ್ಯದಲ್ಲಿ ಈ ಹಿಂದೆಂದೂ ನಡೆಯದ ಭೀಕರ ನೆರೆ ಹಾವಳಿಗೆ ಸಿಲುಕಿ ಸಂಕಷ್ಟದಲ್ಲಿದ್ದ ಸಂತ್ರಸ್ತರ ನೆರವಿಗಾಗಿ ಆಸರೆ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಡಲಾಗಿತ್ತು. ಸರಕಾರಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮನೆ ಕಟ್ಟಿಕೊಡುವ ಯೋಜನೆಯನ್ನು ಅಂದಿನ ಬಿಜೆಪಿ ಸರಕಾರ ರೂಪಿಸಿತ್ತು. ಕೇಂದ್ರ ಗೃಹ ಸಚಿವರಾಗಿದ್ದ ಪಿ. ಚಿದಂಬರಂ ಅವರು 3 ವರ್ಷಗಳಲ್ಲಿ ಇಷ್ಟೊಂದು ಮನೆಗಳನ್ನು ಕಟ್ಟಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಬಿ.ಎಸ್ .ಯಡಿಯೂರಪ್ಪ ಅವರು ಕೇವಲ ಒಂದು ವರ್ಷದ ಅವಧಿಯಲ್ಲಿ ಮನೆಗಳನ್ನು ಕಟ್ಟಿಸಿ ನೆರೆ ಸಂತ್ರಸ್ತರಿಗೆ ಹಂಚಲು ವ್ಯವಸ್ಥೆ ಮಾಡಿದ್ದರು. ಇದು ದೇಶದಲ್ಲಿ ಒಂದು ದಾಖಲೆಯಾಗಿ ಉಳಿದಿದೆ.

ದಲಿತ ಕುಟುಂಬಗಳಿಗೆ ಹೋಳಿಗೆ ಊಟ

ರಾಜ್ಯದ ವಿವಿಧ ಜಿಲ್ಲೆಗಳ ದಲಿತರ ಮನೆಗೆ ಹೋಗಿದ್ದ ವೇಳೆ ನೀಡಿದ ಸತ್ಕಾರಕ್ಕೆ ಪ್ರತಿಯಾಗಿ ಕೃತಜ್ಞತೆ ಸಲ್ಲಿಸಲು ಯಡಿಯೂರಪ್ಪ ಅವರು 2017ರ ಆ.28ರಂದು ತಮ್ಮ ಡಾಲರ್ಸ್ ಕಾಲೋನಿ ನಿವಾಸದಲ್ಲಿ ಕೃತಜ್ಞತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅಂದು ಡಾಲರ್ಸ್ ಕಾಲೋನಿಯಲ್ಲಿರುವ ಧವಳಗಿರಿಯಲ್ಲಿ ಹಬ್ಬದ ಸಂಭ್ರಮ ಇತ್ತು. ಪಕ್ಷದ ವತಿಯಿಂದ ನಡೆಸಿದ ಅಭಿಯಾನದ ಅಂಗವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಉಪಾಹಾರ, ಊಟ ಸೇವಿಸಿದ ದಲಿತ ಕುಟುಂಬಗಳನ್ನು ತಮ್ಮ ಮನೆಗೆ ಕರೆದು ಊಟ ಹಾಕಿ ಕೃತಜ್ಞತೆ ಸಲ್ಲಿಸಿದರು. ಇದಲ್ಲದೇ, ಪುರುಷರಿಗೆ ಒಂದು ಜತೆ ಪಂಚೆ- ಅಂಗಿ, ಶಲ್ಯ ಮತ್ತು ಮಹಿಳೆಯರಿಗೆ ಒಂದು ಜತೆ ಸೀರೆ, ಹೂವು-ಹಣ್ಣು ನೀಡಿ ಯಡಿಯೂರಪ್ಪ ಅವರು ಧನ್ಯವಾದ ಸಮರ್ಪಿಸಿದರು. ರಾಜ್ಯದ ವಿವಿಧ ಜಿಲ್ಲೆಯಿಂದ ಆಗಮಿಸಿದ ದಲಿತ ಕುಟುಂಬಗಳಿಗೆ ಭೋಜನದ ನಂತರ ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು. ಯಡಿಯೂರಪ್ಪ ಅವರು ತಮ್ಮ ಮನೆಗೆ ಕರೆದು ಆತಿಥ್ಯ ನೀಡಿ, ಸತ್ಕರಿಸಿದ್ದನ್ನು ದಲಿತ ಬಂಧುಗಳು ಜೀವನದ ಅವಿಸ್ಮರಣೀಯ ಘಟನೆ ಎಂದು ಬಣ್ಣಿಸಿದ್ದರು.

ಕಾನೂನುಗಳ ಜಾರಿ

ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಿ.ಎಸ್.ಯಡಿಯೂರಪ್ಪನವರು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವು ಕಾನೂನುಗಳನ್ನು ಜಾರಿ ಮಾಡುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅವರ ಕಾಲದಲ್ಲಿ ಬಂದ ಕಾನೂನುಗಳು ಇಂದಿಗೂ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಪೂರಕವಾಗಿವೆ. ಹಾಗೆಯೇ ಧಾರ್ಮಿಕ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಅನೇಕ ಬಾರಿ ಅನುದಾನಗಳನ್ನು ನೀಡಿದ್ದರು. ಜನಸಾಮಾನ್ಯರಿಗೆ ಶಿಕ್ಷಣ, ಆರೋಗ್ಯ ಸೇವೆ ನೀಡುವ ಇಂತಹ ಧಾರ್ಮಿಕ ಸಂಸ್ಥೆಗಳನ್ನು ಅಭಿವೃದ್ಧಿಪಸಿದರೆ ಸಮಾಜ ತಾನಾಗಿಯೇ ಸಮಸ್ಯೆಗಳಿಂದ ಮುಕ್ತವಾಗುತ್ತದೆ ಎಂಬ ಚಿಂತನೆ ಬಿಎಸ್‌ವೈ ಅವರದ್ದಾಗಿತ್ತು. ಪ್ರಸಿದ್ಧ ಹಿಂದೂಸ್ಥಾನಿ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಸ್ಮರಣಾರ್ಥ ರಾಜ್ಯ ಸರಕಾರದ ವತಿಯಿಂದ ಹುಬ್ಬಳ್ಳಿಯ ಬಳಿ ಇರುವ ಹುಲಕಲ್ ಗ್ರಾಮದಲ್ಲಿ ಸ್ಮಾರಕವನ್ನು ನಿರ್ಮಿಸಲು ಬಿಎಸ್‌ವೈ ನಿರ್ಧರಿಸಿದ್ದರು. ಇದಕ್ಕಾಗಿ ಜಮೀನು ಮಂಜೂರು ಮಾಡಿದ್ದ ಅವರು, ಸುಮಾರು 6 ಕೋಟಿ ರು. ವೆಚ್ಚದಲ್ಲಿ ಬೃಹತ್ ಸ್ಮಾರಕವನ್ನು ನಿರ್ಮಾಣ ಮಾಡಿಕೊಟ್ಟರು. ಅವರ ಅವಧಿಯಲ್ಲಿ ಧರ್ಮ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಗೆ ತಂದ ಕಾನೂನು ಹಾಗೂ ನೀಡಿದ ಅನುದಾನಗಳು ಹೀಗಿವೆ.

- ಕರ್ನಾಟಕ ಗೋ ಹತ್ಯೆ ಮತ್ತು ಸಂರಕ್ಷಣಾ ಕಾಯಿದೆ-2010
- ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ ಮಸೂದೆ - 2011
- ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಯೋಜನೆ
- ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪನೆ
- ದೇವಸ್ಥಾನ ಅರ್ಚಕರಿಗೆ ಸಂಭಾವನೆ ಹೆಚ್ಚಳ
- ಶಿವರಾತ್ರಿ ವೇಳೆಯಲ್ಲಿ ಪವಿತ್ರ ಗಂಗಾಜಲವನ್ನು ಹಂಚುವ ಕಾರ್ಯ

ವಿಶ್ವಕನ್ನಡ ಸಮ್ಮೇಳನ

ರಾಜ್ಯದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕ್ರಮಗಳು ಅನುಕರಣೀಯವಾಗಿವೆ. ಗಡಿ ಸಮಸ್ಯೆ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಪ್ರಭಾವ, ಅನ್ಯಭಾಷಿಕರ ಹೆಚ್ಚಳ, ಸರಕಾರಿ ಶಾಲೆಗಳ ಮುಚ್ಚುವಿಕೆ ಸೇರಿದಂತೆ ಕನ್ನಡ ಭಾಷೆಯ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಿವೆ. ಇಂತಹ ಸಂದಿಗ್ಧ ಸಮಯದಲ್ಲಿ ಕನ್ನಡ ಭಾಷೆಯನ್ನು ಮೇಲ್ಕಕ್ಕೆತ್ತಲು ಬಿ.ಎಸ್ .ಯಡಿಯೂರಪ್ಪ ಅವಿರತವಾಗಿ ಶ್ರಮಿಸಿದ್ದರು. ರಾಜ್ಯದಲ್ಲಿ 25 ವರ್ಷಗಳ ನಂತರ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ಪ್ರಥಮ ಬಾರಿಗೆ ಅತ್ಯಂತ ಯಶಸ್ವಿಯಾಗಿ, ಅದ್ದೂರಿಯಾಗಿ 'ವಿಶ್ವ ಕನ್ನಡ ಸಮ್ಮೇಳನ' ನಡೆಯಿತು. ಸದಾ ಮಹಾರಾಷ್ಟ್ರದ ಕಡೆಯಿಂದ ವಿರೋಧ ಎದುರಿಸುವ ಬೆಳಗಾವಿಯಲ್ಲಿ ಅಂದು ಯಾವುದೇ ಅಡೆತಡೆಯಿಲ್ಲದೆ ಸಮ್ಮೇಳನ ನಡೆದಿತ್ತು. ಈ ಸಮ್ಮೇಳನಕ್ಕೆ ಕೋಟ್ಯಂತರ ಸಂಖ್ಯೆಯಲ್ಲಿ ಕನ್ನಡಿಗರು ಭಾಗವಹಿಸಿದ್ದು, ಅತ್ಯಂತ ಯಶಸ್ವಿಯಾಗಿತ್ತು. ಈ ವಿಶ್ವ ಕನ್ನಡ ಸಮ್ಮೇಳನ ಬೆಳಗಾವಿಯಲ್ಲಿ ನಡೆಸಿರುವುದರಿಂದ ವಿಶ್ವ ಕನ್ನಡಿಗರನ್ನು ಒಗ್ಗೂಡಿಸುವ ಜತೆಗೆ, ಮೇಲಿಂದ ಮೇಲೆ ತಲೆದೋರುತ್ತಿದ್ದ ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆಗೆ ಪರಿಹಾರ ಕಲ್ಪಿಸುವಂತಾಗಿತ್ತು. ಬೆಳಗಾವಿ ಕನ್ನಡದ ಜಿಲ್ಲೆ ಎಂಬುದನ್ನು ಸಮ್ಮೇಳನ ಸಾಧಿಸಿ ತೋರಿಸಿತ್ತು. ಕೋಟಿ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ಹರಿದು ಬಂದ ಕನ್ನಡಿಗರು 'ನಾವೆಲ್ಲ ಒಂದೇ' ಎಂಬ ಸಂದೇಶವನ್ನು ನೀಡಿದ್ದರು. ಇದಕ್ಕೆ ಕನ್ನಡದ ಕಟ್ಟಾಳು ಬಿಎಸ್‌ವೈ ಕಾರಣರಾಗಿದ್ದರು.



ಪಕ್ಷ ಸಂಘಟನೆ

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ನಡೆದಂತಹ ಎಲ್ಲ ಚುನಾವಣೆಗಳಲ್ಲಿ ಪಕ್ಷ ಸಂಘಟನೆ ಸಮರ್ಥವಾಗಿ ನಡೆದಿತ್ತು. ಬಿಜೆಪಿ ಯಶಸ್ವಿಯಾಗಿ ವಿರೋಧ ಪಕ್ಷಗಳನ್ನು ಮೂಲೆಗುಂಪು ಮಾಡಿ ಆಯ್ಕೆಯಾಗಿತ್ತು. ಗ್ರಾಮ ಪಂಚಾಯತಿ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಹಿಂದೆಂದಿಗಿಂತಲೂ ಹೆಚ್ಚು ಮತಗಳ ಅಂತರದಿಂದ ಗೆದ್ದು ಬಂದಿದ್ದರು. ಈ ಸಾಧನೆಯ ಒಳಹೊಕ್ಕಿ ನೋಡಿದಾಗ ಬಿ.ಎಸ್.ಯಡಿಯೂರಪ್ಪ ಅವರ ಶ್ರಮ ಎದ್ದು ಕಾಣುತ್ತದೆ. ಸರಕಾರದ ಮುಖ್ಯಸ್ಥರಾಗಿ ಆಡಳಿತವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದ ಯಡಿಯೂರಪ್ಪನವರು ಪಕ್ಷ ಸಂಘಟನೆಯಲ್ಲೂ ನಿರ್ಲಕ್ಷ್ಯ ವಹಿಸಿರಲಿಲ್ಲ. ಮುಖ್ಯಮಂತ್ರಿಯಾಗಿದ್ದರೂ ಬೂತ್‌ಮಟ್ಟದವರೆಗೂ ಸಂಚರಿಸಿ ಕಾರ್ಯಕರ್ತರಲ್ಲಿ ಪಕ್ಷದ ಧ್ಯೇಯಗಳ ಬಗ್ಗೆ ಅರಿವು ಮೂಡಿಸಿದ್ದರು. ಪಕ್ಷವನ್ನು ರಾಷ್ಟ್ರಮಟ್ಟದಲ್ಲಿ ಕಟ್ಟಿ ಬೆಳೆಸಲು ಯುವ ಕಾರ್ಯಕರ್ತರಿಗೆ ದಾರಿದೀಪವಾದರು.

ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಹಾಗೂ ವಿಧಾನಸಭೆಯ ಉಪ ಚುನಾವಣೆಯಲ್ಲೂ ಬಿಜೆಪಿ ತನ್ನ ಮೇಲುಗೈಯನ್ನು ಸಾಧಿಸಿರುವುದೇ ಇವರ ಪಕ್ಷ ಸಂಘಟನೆಯ ಕಾರ್ಯಕ್ಕೆ ಸಾಕ್ಷಿ. ಇದುವರೆಗೆ ರಾಜ್ಯದಲ್ಲಿ 16 ಉಪಚುನಾವಣೆಗಳು ನಡೆದಿದ್ದು, ಹೆಚ್ಚು ಮತಗಳನ್ನು ಪಡೆದು ಅದರಲ್ಲಿಯೂ ತನ್ನ ಸಾಧನೆಯನ್ನು ತೋರಿರುತ್ತದೆ. ಈ ಹಿಂದೆ ಬಿಜೆಪಿ ಶೇ.10 ರಿಂದ ಶೇ.12 ಇದ್ದದ್ದು ಈಗ ಶೇ.40 ದಾಟಿದೆ. ಇಂತಹ ಕ್ರಾಂತಿಕಾರಿ ಬದಲಾವಣೆಗೆ ಬಿಎಸ್‌ವೈ ದಾರಿ ಮಾಡಿಕೊಟ್ಟಿದ್ದಾರೆ.

ಏಕಾಂಗಿಯಾಗಿ ಅತಿವೃಷ್ಟಿ ನಿರ್ವಹಣೆ; ಕರೋನಾ ವೇಳೆ ಧೀಮಂತ ನಾಯಕತ್ವ

ಅಧಿಕಾರ ಸ್ವೀಕರಿಸಿದ ಕೆಲವೇ ದಿನದಲ್ಲಿ ರಾಜ್ಯದ ಹಲವು ಜಿಲ್ಲೆಯಲ್ಲಿ ಅತಿವೃಷ್ಟಿ ಕರೋನಾ ಸೋಂಕು ಹೆಚ್ಚು ವ್ಯಾಪಿಸದಂತೆ ಕಠಿಣ ಕ್ರಮ

ಆಡಳಿತ ಪಕ್ಷಕ್ಕಿಂತ ಪ್ರತಿಪಕ್ಷದಲ್ಲಿಯೇ ಹೆಚ್ಚು ಹೋರಾಟ ಮಾಡಿರುವ ಯಡಿಯೂರಪ್ಪ ಅವರು ಅಧಿಕಾರಕ್ಕೆ ಬಂದಾಗಲೂ ಹೋರಾಟದ ಹಾದಿಯೇ ಆಗಿತ್ತು ಎಂದರೆ ತಪ್ಪಾಗುವುದಿಲ್ಲ.

2019ರಲ್ಲಿ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರಕಾರ ಪತನಗೊಂಡ ಬಳಿಕ ಅಧಿಕಾರ ಗದ್ದುಗೆ ಏರಿದ ಯಡಿಯೂರಪ್ಪನವರಿಗೆ ಮೊದಲ ಸವಾಲಾಗಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರವಾಹ ಎದುರಾಯಿತು. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ವಾರವೂ ಕಳೆಯದೇ ಇದಿದ್ದರಿಂದ ಸಂಪುಟವೂ ರಚನೆಯಾಗಿರಲಿಲ್ಲ. ಆದ್ದರಿಂದ ಏಕಾಂಗಿಯಾಗಿಯೇ ಯಡಿಯೂರಪ್ಪನವರು ರಾಜ್ಯಾದ್ಯಂತ ಸಂಚರಿಸಿ ಅತಿವೃಷ್ಟಿ ಪರಿಸ್ಥಿತಿಯನ್ನು ನಿಭಾಯಿಸಿದರು.

ಇನ್ನು ಪ್ರವಾಹ ನಿರ್ವಹಣೆಯಾಗುತ್ತಿದ್ದಂತೆ ವಿಶ್ವವೇ ಕಂಡು ಕೇಳರಿಯದ ಕರೋನಾ ಕಾಣಿಸಿಕೊಂಡಿತ್ತು. ವಿಶ್ವದ ದೊಡ್ಡಣ್ಣ ಎನಿಸಿಕೊಂಡ ಅಮೆರಿಕ, ಆರೋಗ್ಯ ಸೇವೆಯಲ್ಲಿ ಮುಂಚೂಣಿಯಲ್ಲಿದ್ದ ಇಟಲಿ ಸೇರಿದಂತೆ ಯಾವ 'ದೇಶವನ್ನು ಬೆಂಬಿಡದೇ ಕಾಡಿದ್ದು ಕರೋನಾ ಎನ್ನುವ ಮಹಾಮಾರಿ. ಇಡೀ ವಿಶ್ವವನ್ನು ಕಾಡಿದ್ದ ಕರೋನಾ, ಭಾರತ ಹಾಗೂ ಕರ್ನಾಟಕವನ್ನು ಬಿಡಲಿಲ್ಲ. ಆಗಷ್ಟೇ ನೆರೆಯಿಂದ ಚೇತರಿಸಿಕೊಂಡು, ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಲು ರಾಜ್ಯ ಸರಕಾರ ಕರೋನಾದಿಂದ ಭಾರಿ ಆಪತ್ತು ಕಾದಿತ್ತು. ಆದರೆ ಚೀನಾದಿಂದ ಕಾಣಿಸಿಕೊಂಡ ಕರೋನಾಕ್ಕೆ ಲಸಿಕೆ ಸಿಗುವ ತನಕ ಸೋಂಕನ್ನು ನಿಗ್ರಹಿಸಲು ರಾಜ್ಯ ಹಾಗೂ ಕೇಂದ್ರ ಸರಕಾರ ಮುಂದಿದ್ದ ಏಕೈಕ ಸಾಧನವೆಂದರೆ ಸಾಮಾಜಿಕ ಅಂತರ, ಮಾಸ್ಕ್ ಧಾರಣೆ ಹಾಗೂ ಸ್ಯಾನಿಟೈಸರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು. ಆದ್ದರಿಂದಲೇ ರಾಜ್ಯ ಸರಕಾರ ರಾಜ್ಯದಲ್ಲಿ ಕರೋನಾ ಸೋಂಕು ಕಾಣಿಸಿಕೊಳ್ಳುತ್ತಿದ್ದಂತೆ, ಕೇಂದ್ರ ಸರಕಾರದ ಆದೇಶಕ್ಕೂ ಕಾಯದೇ, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಲಾಕ್‌ಡೌನ್ ಘೋಷಿಸುವ ನಿರ್ಧಾರವನ್ನು ಕೈಗೊಂಡರು.

ಲಾಕ್‌ಡೌನ್ ಹೇರಿಕೆ ಅಂದು ಕೆಲವರಿಗೆ ಅನಾನುಕೂಲವಾದರೂ ಆರೋಗ್ಯ ವಿಷಯದಲ್ಲಿ ರಾಜಿಯಾಗುವುದು ಬೇಡ ಎನ್ನುವ ಏಕೈಕ ಕಾರಣಕ್ಕೆ, ಯಡಿಯೂರಪ್ಪ ಅವರು ದಿಢೀರ್ ಲಾಕ್‌ಡೌನ್ ಹೇರಿದರು. ಆದರೆ ಕೆಲಸವಿಲ್ಲದೇ, ಬೆಂಗಳೂರಿನಲ್ಲಿ ನಿರುದ್ಯೋಗಿಗಳಾಗಿ ಇರುವುದರಿಂದ ಆಗಬಹುದಾದ ಸಮಸ್ಯೆಯನ್ನು ಅರಿತು, ತಮ್ಮೂರಿಗೆ ಹೋಗಲು ಅವಕಾಶವನ್ನು ಕಲ್ಪಿಸಿದರು. ಇದಿಷ್ಟೇ ಅಲ್ಲದೇ, ಕರೋನಾದಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದವರಿಗೆ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸಿದರು.

ಪ್ರಮುಖಾಂಶ

- ಯಡಿಯೂರಪ್ಪ ಅಧಿಕಾರದಲ್ಲಿದ್ದ ಪ್ರತಿ ಬಾರಿಯೂ ಭೀಕರ ಪ್ರವಾಹದ ಸ್ಥಿತಿ ಎದುರಾಗಿದೆ. ಪ್ರತಿ ಬಾರಿಯೂ ಅವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರಲ್ಲದೇ, ಸಂತ್ರಸ್ತರ ನೆರವಿಗೆ ಧಾವಿಸಿದ್ದಾರೆ. ಕರೋನಾ ಸಂಕಷ್ಟವನ್ನು ಸಮರ್ಥವಾಗಿ ಎದುರಿಸಿದ್ದಾರೆ.
- ಆರೋಗ್ಯ ಕವಚ ಯೋಜನೆಯಡಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತುರ್ತು ಸೇವೆ ವಾಹನಗಳು ಜನರ ಬಳಕೆಗೆ ಬಿಡುಗಡೆ. 2008ರಿಂದ 2015ರವ ರೆಗೆ 38ಲಕ್ಷ ಜನರು ಇದರ ಪ್ರಯೋಜನ ಪಡೆದಿದ್ದಾರೆ. ಇವರಲ್ಲಿ ಶೇ.41ರಷ್ಟು ಗರ್ಭಿಣಿಯರಿಗೆ ಅನುಕೂಲವಾಗಿದೆ.
- ಕರೋನಾದಿಂದ ಮೃತಪಟ್ಟ ವ್ಯಕ್ತಿಯ ಬಿಪಿಎಲ್ ಕುಟುಂಬಕ್ಕೆ ತಲಾ 1 ಲಕ್ಷ ರುಪಾಯಿ ಆರ್ಥಿಕ ನೆರವಿನ ಯೋಜನೆ ಕೂಡ ಬಿಎಸ್‌ವೈ ಸರಕಾರದ ಪ್ರಮುಖ ನಿರ್ಧಾರ.
- ನೇಕಾರರ 1 ಲಕ್ಷ ರು.ವರೆಗಿನ ಸಾಲ ಮನ್ನಾ, ಮೀನುಗಾರರ ಸಾಲ ಮನ್ನಾ, ರೈತ ಸುರಕ್ಷಾ ಫಸಲ್ ವಿಮಾ ಯೋಜನೆಯ ವಿಮೆ ಕಂತು ಪಾವತಿ, ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಕಲ್ಯಾಣಿ ಯೋಜನೆ ಜಾರಿ.
- ಕರೋನಾ ಸೋಂಕಿನಿಂದ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಶಿಕ್ಷಣ ಒದಗಿಸಲು ತಿಂಗಳಿಗೆ 3,500 ರು. ನೀಡುವ 'ಮುಖ್ಯಮಂತ್ರಿ ಬಾಲಸೇವಾ ಯೋಜನೆ' ಜಾರಿ. ಅಲ್ಲದೇ 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ 1 ಲಕ್ಷ ರು. ನೆರವು ಘೋಷಣೆ.
- ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಕಡು ಬಡವರಿಗೆ 400 ರು. ಮಾಸಿಕ ಪಿಂಚಣಿ ದೊರಕುವಂತೆ ಅನುಷ್ಠಾನ. 13.79 ಲಕ್ಷ ಜನರಿಗೆ ಇದರ ಲಾಭ ಲಭಿಸುವಂತೆ ಮಾಡಲಾಗಿದೆ.
- ಯೋಜನೆ ಸರಕಾರಿ ಶಾಲೆ ಹಾಗೂ ಅನುದಾನಿತ ಖಾಸಗಿ ಶಾಲೆಗಳ 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ವಿತರಣೆ. ಇದಕ್ಕಾಗಿ 125 ಕೋಟಿ ರು. ವೆಚ್ಚ. 7 ಲಕ್ಷ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ.

ಜನಪರ ಪರಿಶ್ರಮದ ಪ್ರತಿಫಲ

ಹೋರಾಟವನ್ನೇ ಬದುಕಿನ ಉಸಿರಾಗಿಸಿಕೊಂಡು, ರಾಜಕೀಯ ಪಡಸಾಲೆ ಪ್ರವೇಶ ಮಾಡಿದ ಬಿ.ಎಸ್. ಯಡಿಯೂರಪ್ಪ ಅವರ ಏಳಿಗೆ ಸೋಜಿಗದ ತಪ್ಪಲಿಯಾಗಿದೆ. ಅಧಿಕಾರವೆಂಬುದು ಅವರಿಗೆ ಬೆಳ್ಳಿ ತಟ್ಟೆಯಲ್ಲಿ ಬಂದ ಬಳುವಳಿಯಲ್ಲ. ನಿತ್ಯ ಪರಿಶ್ರಮದಿಂದ ಜನಪರವಾಗಿ ಬೆವರು ಸುರಿಸಿದ ಚಳವಳಿಯ ಪ್ರತಿಫಲವದು. ಹೋರಾಟದ ಧ್ಯಾನ ಎಂದಿಗೂ ಬತ್ತದ ಚರಿಸ್ಮಾ ತಂದುಕೊಟ್ಟಿದೆ.

ಹಾಕಿಕೊಂಡ ಹೋರಾಟಗಳು ಅವರ ರಾಜಕೀಯ ಬದುಕಿಗೆ ರೋಚಕ ತಿರುವು ನೀಡಿವೆ. ಚಳವಳಿಯ ಅಲೆಗಳು ರಾಜ್ಯದಲ್ಲಿ ಭದ್ರ ಬುನಾದಿ ಹಾಕಿ ದಕ್ಷಿಣ ಭಾರತದಲ್ಲಿ ಬಿಜೆಪಿ ಮೊದಲ ಬಾರಿ ಅಧಿಕಾರ ಹಿಡಿಯುವಂತೆ ಮಾಡಿತು. ಪಾದಯಾತ್ರೆ, ಧರಣಿ, ಸತ್ಯಾಗ್ರಹಗಳು ಜನಪರವಾಗಿದ್ದ ಕಾರಣ ರಾಷ್ಟ್ರ ಧುರೀಣರಾದ ಎ.ಬಿ. ವಾಜಪೇಯಿ, ಎಲ್.ಕೆ. ಆಡ್ವಾಣಿಯಂತಹವರೂ ತಲೆದೂಗಿ ಬೆನ್ನು ತಟ್ಟಿದರು. ವಯಸ್ಸು ಹೋರಾಟದ ಕಿಚ್ಚಿಗೆ ಅಡ್ಡಿಯಾಗದೆ ನೂರ್ಮಡಿಯಾಗಿ ಮತ್ತಷ್ಟು ಸ್ಫೂರ್ತಿಯಾಗಿದೆ. 1983ರಲ್ಲಿ ಇದ್ದ ಉತ್ಸಾಹ, ಆಶಾ ಭಾವನೆ ಇಂದಿಗೂ ಬತ್ತಲಾರದ ಗಂಗೆಯಾಗಿದೆ. ಈಗಲೂ ಅನ್ಯಾಯದ ಪರವಾಗಿ ಧ್ವನಿ ಎತ್ತುವ ಛಲವಿದೆ. ಹೋರಾಟಕ್ಕಾಗಿ ಸವೆಸಿದ ದಾರಿ, ಕಳೆದುಕೊಂಡ ವೈಯಕ್ತಿ ಜೀವನ ಅಪಾರ. ಎಷ್ಟೋ ವಯಸ್ಸು ಪ್ರಯಾಣದಲ್ಲಿಯೇ ಸವೆಸಿದ್ದಾರೆ.

ರಾಜಕೀಯ ಜೀವನದಲ್ಲಿ ಆಲದ ಮರವಾಗದೆ ತಾವು ಬೆಳೆದು ಇತರರನ್ನು ಬೆಳೆಸಿದ ದೊಡ್ಡತನ ಜನಮನ ಗೆಲ್ಲಲು ನೆರವಾಗಿದೆ. ಹೀಗಾಗಿ ರಾಜ್ಯದ ಯಾವುದೇ ಮೂಲೆಗೆ ಹೋದರೂ ಇಂದಿಗೂ ಚಪ್ಪಾಳೆ, ಸಿಳ್ಳೆ ಬೀಳುವುದು ಯಡಿಯೂರಪ್ಪ ಅವರಿಗೆ ಹೆಚ್ಚು. ಯಾವುದೇ ಕಾರ್ಯಕ್ರಮ ಪ್ರವೇಶ, ಭಾಷಣ ಪ್ರಾರಂಭ, ಮುಕ್ತಾಯ ಹಂತದಲ್ಲಿ ಯಡಿಯೂರಪ್ಪ ಅವರಿಗೆ ಸಿಗುಷ್ಟು ಜನರ ಕೂಗು- ಸಿಳ್ಳೆ, ಚಪ್ಪಾಳೆ ರಾಜ್ಯದ ಇನ್ಯಾವ ರಾಜಕಾರಣಿಗಳಿಗೂ



ಲಭಿಸುವುದಿಲ್ಲ. ರಾಜಕೀಯ ಬದುಕಿನಲ್ಲಿ ದಣಿವರಿಯದ ದೋಣಿಯಾಗಿರುವ ಯಡಿಯೂರಪ್ಪ ನಿತ್ಯ ಹುಟ್ಟು ಹಾಕುತ್ತಲೆ ತಮ್ಮ ಚರಿಸ್ಮಾ ಕಾಪಾಡಿಕೊಂಡಿದ್ದಾರೆ.

ಜನರಿಗೆ ಹತ್ತಿರವಾದ ಹೋರಾಟ

ಸಾಮಾಜಿಕ ಸುಧಾರಣೆಗೆ ಹೋರಾಟವೇ ಪ್ರಮುಖ ಅಸ್ತ್ರವೆಂಬದನ್ನು ಬಲವಾಗಿ ನಂಬಿದ ಯಡಿಯೂರಪ್ಪ ಅಧಿಕಾರದಲ್ಲಿದಾಗಲೂ ತಾವು ಪ್ರತಿಪಕ್ಷ ನಾಯಕರಂತೆ ವರ್ತಿಸುತ್ತಿದ್ದರು. ಹೋರಾಟವೇ ಜನರು ಅವರ ಹತ್ತಿರ ಬರುವಂತೆ ಮಾಡಿತು. ಕಾನೂನು ನೆಪ ಹೇಳಿ ಕೆಲಸ ವಿಳಂಬ ಮಾಡುತ್ತಿದ್ದ ಅಧಿಕಾರಿಗಳನ್ನು ಕಟುವಾಗಿ ವಿರೋಧಿಸುತ್ತಿದ್ದ ಅವರು, ಜನರಿಗಾಗಿ ಕೆಲಸ ಮಾಡಿ ಕಾನೂನು ನಿಮ್ಮನ್ನೇ ಗೌರವಿಸುತ್ತವೆ ಎಂದು ಗುಡುಗುತ್ತಿದ್ದರು. ಶಿಕಾರಿಪುರದ ವೀರಶೈವ ಸೊಸೈಟಿ ನಿರ್ದೇಶಕರಾಗಿ ರಾಜಕೀಯ ಪ್ರವೇಶ ಮಾಡಿದ ಯಡಿಯೂರಪ್ಪ ಕಡಿಮೆ ದರದಲ್ಲಿ ಬಟ್ಟೆ ಖರೀದಿಸಿ ಬಡವರಿಗೆ ವಿತರಣೆ ಮಾಡಿದ ಕಾರ್ಯ ಸಾರ್ವಜನಿಕರಿಗೆ ಮೆಚ್ಚುಗೆ ಆಯಿತು. ಕಾಂಗ್ರೆಸ್ ಧೋರಣೆ ವಿರುದ್ಧ ಸೆಟೆದು ನಿಂತು ಮೊದಲ ಬಾರಿ ಪುರಸಭೆ ಸದಸ್ಯರಾಗಿ, ಅಧ್ಯಕ್ಷರಾಗಿ ಆಯ್ಕೆಯಾದರು. ಅಧ್ಯಕ್ಷರಾಗಿ ಮಾಡಿದ ಮೊದಲ ಕೆಲಸವೆಂದರೆ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಶೌಚಾಲಯ. ಆನಂತರ ಬೆಳಗ್ಗೆ 6ಕ್ಕೆ ವಾರ್ಡ್‌ಗಳಿಗೆ ಸೈಕಲ್ ಸವಾರಿ ಮಾಡುತ್ತಿದ್ದರು. ಜೀತಮುಕ್ತಿ ಯೋಜನೆ ಪ್ರಕಟಿಸಿದ ಕಾಂಗ್ರೆಸ್ ಅವರಿಗೆ ಪರಿಹಾರ ನೀಡದೆ ಸತಾಯಿಸುತಿತ್ತು. ಅದರ ವಿರುದ್ಧ ಪ್ರಕಾರ ಹೋರಾಟ ಮಾಡಿ ಜೀತ ಮುಕ್ತ ಬಡವರಿಗೆ ನೆರವಾಗಿದ್ದರು.

ಏಕೈಕ ಶಾಸಕರ ಧ್ವನಿ ನಡುಗಿಸಿತು ವಿಧಾನ ಸೌಧ

1983-84ರಲ್ಲಿ ರಾಮಕೃಷ್ಣ ಹೆಗಡೆ ಸರಕಾರ ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಬಗರ್ ಹುಕುಂ ರೈತರ ಒಕ್ಕಲೆಬ್ಬಿಸುವ ಕಾಯಿದೆ ರೂಪಿಸಲು ಸಜ್ಜು ಮಾಡಿತ್ತು. ಆಗ ರೈತರ ಪರವಾಗಿ ಗುಡುಗಿದವರು ಬಿಜೆಪಿಯ ಏಕೈಕ ಶಾಸಕರಾಗಿದ್ದ ಬಿ.ಎಸ್. ಯಡಿಯೂರಪ್ಪ. ಪ್ರತಿಪಕ್ಷ ಸ್ಥಾನದಲ್ಲಿದ್ದ ಕಾಂಗ್ರೆಸ್ ಕೂಡ ಯಡಿಯೂರಪ್ಪ ಹೋರಾಟದ ಪ್ರಖರತೆಗೆ ಮಂಕಾಗಿ ಹೋಗಿತ್ತು. ಬಗರಹುಕುಂ ರೈತರ ಒಕ್ಕಲೆಬ್ಬಿಸುವುದರ ವಿರುದ್ಧ ಶಿಕಾರಿಪುರದಿಂದ ಶಿವಮೊಗ್ಗಕ್ಕೆ ಪಾದಯಾತ್ರೆ ಮಾಡಿದ ಅವರು ಜಿಲ್ಲಾಧಿಕಾರಿ ಕಚೇರಿ ಎದುರು ಮೂರು ದಿನ ಹಗಲು ರಾತ್ರಿ ಧರಣಿ ಮಾಡಿದ್ದರು. ಇದರಿಂದ ಬೆಚ್ಚಿದ ಸರಕಾರ ಕಾಯಿದೆ ಜಾರಿಗೆ ಅಂಜಿಕೊಂಡಿತು. ಆಗ ರಾಚಯ್ಯ ಅರಣ್ಯ ಮಂತ್ರಿಯಾಗಿದ್ದರು. ನಂತರ ಕಾಂಗ್ರೆಸ್ ಸರಕಾರ ವಿನಾಕಾರಣ ಜಿಪಂ, ತಾಪಂ ಚುನಾವಣೆ ಮುಂದೂಡಿಕೆ ಮಾಡಿತ್ತು. ಇದನ್ನು ವಿರೋಧಿಸಿ ಗ್ರಾಮ ಸ್ವರಾಜ್ಯ ಉಳಿಸಿ ಎಂದು ಆಗ್ರಹಿಸಿ ಶಿವಮೊಗ್ಗದಿಂದ ಬೆಂಗಳೂರಿಗೆ 19 ದಿನ ಪಾದಯಾತ್ರೆ ಮಾಡಿ ಸರಕಾರಕ್ಕೆ ಬಿಸಿಮುಟ್ಟಿಸಿದ್ದರು. 1987ರಲ್ಲಿ ಬರಗಾಲದಿಂದ ಶಿಕಾರಿಪುರ ರೈತರ ಜಮೀನುಗಳಿಗೆ ಯಡಿಯೂರಪ್ಪ ಸೈಕಲ್ ಮೇಲೆ ಪ್ರವಾಸ ಮಾಡಿ ಸಾಂತ್ವಾನ ಹೇಳಿದ್ದರು. ರೈತರ ಜಮೀನುಗಳಿಗೆ ಭೇಟಿ ನಿಡಿ ರಾಜ್ಯ ಸರಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು.



ಬಿಎಸ್‌ವೈ ಬದುಕಿನ ಮೈಲುಗಲ್ಲು

- 50 ವರ್ಷ: ಸಾರ್ವಜನಿಕ ಜೀವನದಲ್ಲಿ ಯಡಿಯೂರಪ್ಪ ಸವೆಸಿದ ಅವಧಿ
- 63: ಕರ್ನಾಟಕದ ಉಪಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಿದಾಗ ಬಿಎಸ್‌ವೈ ಅವರ ವಯಸ್ಸು
- 29: ಸಕ್ರಿಯ ರಾಜಕೀಯ ಜೀವನಕ್ಕೆ ಪ್ರವೇಶಿಸಿದಾಗ ಬಿಎಸ್ ವೈ ವಯಸ್ಸು
- 45 ದಿನ: 1975ರ ತುರ್ತು ಪರಿಸ್ಥಿತಿ ವೇಳೆ ಜೈಲು ವಾಸ
- 1983: ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ವರ್ಷ
- 1987: ಬರ ಸಮೀಕ್ಷೆಗೆ ಶಿಕಾರಿಪುರದಲ್ಲಿ ಸೈಕಲ್ ಯಾತ್ರೆ ನಡೆಸಿದ ವರ್ಷ
- 1988: ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮೊದಲ ಬಾರಿಗೆ ನೇಮಕಗೊಂಡ ವರ್ಷ
- 3 ದಿನ: ರಾಜ್ಯದ ಇತಿಹಾಸದಲ್ಲಿಯೇ ಅತ್ಯಂತ ಕಡಿಮೆ ಅವಧಿಗೆ ಸಿಎಂ ಆದ ಮೊದಲಿಗರು

ಹೋರಾಟದ ಪ್ರಮುಖಾಂಶಗಳು

- ಹಳದಿ ಕಾರ್ಡ್ ಬಡವರಿಗೆ ವಿತರಿಸಬೇಕೆಂದು ಒತ್ತಾಯಿಸಿ ಶಿಕಾರಿಪುರದ ತಹಶೀಲ್ದಾರ್ ವಿರುದ್ಧ ಎರಡು ದಿನ ನಿರಂತರವಾಗಿ ಹೋರಾಟ.
- ಆಗಸ್ಟ್ 26ರಂದು 1987ರಲ್ಲಿ ಶಿಕಾರಿಪುರ ತಾಲೂಕಿನಲ್ಲಿ ಬರದಿಂದ ಕಂಗೆಟ್ಟ ರೈತರ ಜಮೀನುಗಳಿಗೆ ಸೈಕಲ್ ಸವಾರಿ.
- 1985-1988ರವರಗೆ ಶಿವಮೊಗ್ಗ ಜಿಲ್ಲಾ ಬಿಜೆಪಿ ಅಧ್ಯಕ್ಷರು. 1988ರಲ್ಲಿ ರಾಜ್ಯಾಧ್ಯಕ್ಷರಾಗಿ ಆಯ್ಕೆ
- 1988ರಲ್ಲಿ ರೈತ ಕಲ್ಯಾಣಕ್ಕಾಗಿ ಬಸವನ ಬಾಗೆವಾಡಿಯಿಂದ ಬೆಂಗಳೂರುವರೆಗೆ ರೈತ ಮೋರ್ಚಾ ಜಾಥಾ. ನಂತರ ಬಸವ ಕಲ್ಯಾಣದಿಂದ ಬೆಂಗಳೂರು.
- 1985ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶ. 1989ರಲ್ಲಿ ಮೂರನೇ ಬಾರಿ, 1994ರಲ್ಲಿ ನಾಲ್ಕನೇ ಬಾರಿ ಆಯ್ಕೆ ಮತ್ತು ವಿಧಾನಸಭೆ ಪ್ರತಿಪಕ್ಷ ನಾಯಕ.
- 1994ರಲ್ಲಿ ಶಿವಮೊಗ್ಗದಿಂದ ಬೆಂಗಳೂರುವರೆಗೆ ಗ್ರಾಮ ಸ್ವರಾಜ್ಯ ಉಳಿಸಲು ಆಗ್ರಹಿಸಿ 18ದಿನ ಪಾದಯಾತ್ರೆ. ಎಲ್. ಕೆ. ಆಡ್ವಾಣಿ ಪಾದಯಾತ್ರೆ ಉದ್ಘಾಟಿಸಿದ್ದರು.
- 1998ರಲ್ಲಿ ನವಲಗುಂದದಿಂದ ಹುಬ್ಬಳ್ಳಿ ತನಕ ರೈತ ಸಂಕಲ್ಪ ಯಾತ್ರೆ. ಇದನ್ನು ವಾಜಪೇಯಿ ಪ್ರಶಂಸಿಸಿದ್ದರು.
- ಕಾವೇರಿ ಉಳಿಸಿ ಹೋರಾಟ ತಲಕಾವೇರಿಯಿಂದ ಕನ್ನಂಬಾಡಿವರೆಗೆ ಪಾದಯಾತ್ರೆ.
- ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಮುರಳಿ ಮನೋಹರ ಜೋಷಿ ಅವರ ಜತೆ ಏಕ್ತಾಯಾತ್ರೆ- ಕನ್ಯಾಕುಮಾರಿಯಿಂದ ಕಾಶ್ಮಿರದವರೆಗೆ.
- ಶಿವಮೊಗ್ಗ ಎಪಿಎಂಸಿ ಎದುರು ಜೋಳದ ಬೆಂಬಲ ಬೆಲೆಗೆ ಜೋಳ ಖರೀದಿ ಕೇಂದ್ರ ಪ್ರಾರಂಭಿಸಲು ಹೋರಾಟ.
- ಬೆಳೆ ವಿಮೆ ಪರಿಹಾರ ವಿತರಣೆ, ಸಾಲ ಮನ್ನಾ, ಬಡ್ಡಿ ಮನ್ನಾ , ಸರಕಾರದ ಭ್ರಷ್ಟಾಚಾರ ವಿರುದ್ಧ ಬೆಂಗಳೂರು ಚಲೋ.
- ಫೆ.6, 2006ರಂದು ಜೆಡಿಎಸ್, ಬಿಜೆಪಿ ಸಮ್ಮಿಶ್ರ ಸರಕಾರ ಅವಧಿಯಲ್ಲಿ ಉಪ ಮುಖ್ಯಮಂತ್ರಿ ಸ್ಥಾನ, 2006-07, 2007-08ರಲ್ಲಿ ರೈತರಿಗೆ ಪ್ರತ್ಯೇಕ ಬಜೆಟ್

ಹೋರಾಟದ ಹಾದಿ, ಜನಪರ ಸಾರಥಿ; ಯಡಿಯೂರಪ್ಪನೆಂಬ ಧೀಮಂತ ಶಕ್ತಿ

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪ ಎಂಬ ಹೆಸರಿನ ಕಮಲ, ಶಿಕಾರಿಪುರದಲ್ಲಿ ಅರಳಿ ಕರ್ನಾಟಕದ ಉದ್ದಗಲಕ್ಕೂ ತನ್ನ ಸುಗಂಧವನ್ನು ಹರಡಿದ್ದು ಒಂದು ಸಾಹಸಮಯ ಗಾಥೆ. ಬಡ ರೈತ ಕುಟುಂಬದಲ್ಲಿ ಜನಿಸಿ, ಬದುಕಿಗಾಗಿ ತರಕಾರಿ ಮಾರಿ, ಜೀವನವನ್ನು ರೂಪಿಸಿಕೊಂಡ ಈ ವ್ಯಕ್ತಿಯ ಏಳಿಗೆಯ ಹಿಂದೆ ಯಾವುದೇ ರಾಜಕೀಯ ವಂಶಪಾರಂಪರ್ಯದ ಬಲವಿರಲಿಲ್ಲ; ಇದ್ದದ್ದು ಕೇವಲ ಛಲ ಮತ್ತು ಜನಪರ ಕಾಳಜಿ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಸ್ತಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡ ಬಿ.ಎಸ್. ಯಡಿಯೂರಪ್ಪನವರು, ಸಂಘದ ಪ್ರೇರಣೆಯಿಂದಲೇ ತಮ್ಮ 22ನೇ ವಯಸ್ಸಿನಲ್ಲಿ ಶಿಕಾರಿಪುರಕ್ಕೆ ಬಂದರು. 1975ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದರು. ತುರ್ತು ಪರಿಸ್ಥಿತಿಯ ವಿರುದ್ಧ ಧ್ವನಿ ಎತ್ತಿ ಜೈಲುವಾಸ ಅನುಭವಿಸಿದ ಅವರು, ಅಲ್ಲಿಂದಾಚೆಗೆ ಎಂದೂ ಹಿಂತಿರುಗಿ ನೋಡಲಿಲ್ಲ.

ಸೋಲೇ ಜಯದ ಸೋಪಾನ ಎನ್ನುವುದು ಯಡಿಯೂರಪ್ಪನವರ ಜೀವನದ ರಹಸ್ಯ ಇರುವುದೇ ಅವರ 'ಹೋರಾಟ'ದಲ್ಲಿ. ಶಿಕಾರಿಪುರದ ಪುರಸಭಾಧ್ಯಕ್ಷರಿಂದ ರಾಜ್ಯದ ಮುಖ್ಯಮಂತ್ರಿ ಪದವಿಯವರೆಗೆ ಅವರು ಕ್ರಮಿಸಿದ ಹಾದಿ ಕಲ್ಲು-ಮುಳ್ಳುಗಳಿಂದ ಕೂಡಿತ್ತು. ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಗೇಣಿದಾರರ ಹಿತರಕ್ಷಣೆಗಾಗಿ ಹೋರಾಡಿದರು. ಬಗರ್ ಹುಕುಂ ಸಾಗುವಳಿ ಮಾಡುವ ರೈತರ ಪರವಾಗಿ ನಡೆಸಿದ ಹೋರಾಟ ಇಂದಿಗೂ ಸ್ಮರಣೀಯವಾದುದು.

ಸದನದ ಶಕ್ತಿ: 1983ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದಾಗ ಅವರು ಬಿಜೆಪಿಯ ಕೆಲವೇ ಸದಸ್ಯರಲ್ಲಿ ಒಬ್ಬರಾಗಿದ್ದರು. ಆದರೆ ಪ್ರತಿಪಕ್ಷದ ನಾಯಕರಾದ ನಂತರ ಅವರ ಸಿಡಿಗುಂಡಿನ ಮಾತುಗಳು ವಿಧಾನಸೌಧದ ಗೋಡೆಗಳನ್ನು ನಡುಗಿಸುತ್ತಿದ್ದವು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳಾದರೂ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಪ್ರವೇಶ ದೊರೆಯುವುದಿಲ್ಲ ಎಂಬ ಸಂಶಯವಿತ್ತು. ಆದರೆ ಬಿ.ಎಸ್. ಯಡಿಯೂರಪ್ಪನವರು ಆ ಸಂಶಯವನ್ನು ಹುಸಿಗೊಳಿಸಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಬಿಜೆಪಿ ಸರಕಾರವನ್ನು ರಚಿಸಿದ ಪವಾಡ ಮಾಡಿದರು. ಬಿಜೆಪಿ ಪಕ್ಷವನ್ನು ಕೇವಲ ನಗರ ಕೇಂದ್ರಿತ ಅಥವಾ ಮಧ್ಯಮ ವರ್ಗದ ಪಕ್ಷವಾಗಿ ಉಳಿಸದೆ, ಅದನ್ನು ಬಡವರ, ದೀನದಲಿತರ ಮತ್ತು ಹಳ್ಳಿಗಳ ಪಕ್ಷವಾಗಿ ಬೆಳೆಸಿದ ಕೀರ್ತಿ

ಚಲವಾದಿ ನಾರಾಯಣಸ್ವಾಮಿ
ಪ್ರತಿಪಕ್ಷ ನಾಯಕರು, ವಿಧಾನಪರಿಷತ್

ಅವರಿಗೆ ಸಲ್ಲುತ್ತದೆ. ಇಂದು ರಾಜ್ಯದಲ್ಲಿ ಬಿಜೆಪಿ ಹೆಮ್ಮರವಾಗಿ ಬೆಳೆದು ನಿಂತಿರುವುದರ ಹಿಂದೆ ಅವರ ದಶಕಗಳ ಬೆವರಿನ ಹನಿಯಿದೆ.

ಮುಖ್ಯಮಂತ್ರಿಗಳಾಗಿ ಮತ್ತು ಉಪಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ನೀಡಿದ ಬಜೆಟ್‌ಗಳು ಇಡೀ ದೇಶಕ್ಕೆ ಮಾದರಿಯಾದವು. ಕೆಲ ಯೋಜನೆಗಳನ್ನು ನೆನಪಿಸಿಕೊಳ್ಳುವುದಾದರೆ, ಬಡ ಕುಟುಂಬದ ಹೆಣ್ಣುಮಕ್ಕಳ ಭವಿಷ್ಯಕ್ಕಾಗಿ ತಂದ ಕ್ರಾಂತಿಕಾರಿ ಯೋಜನೆ 'ಭಾಗ್ಯಲಕ್ಷ್ಮಿ'. ರೈತರ ಕಷ್ಟಕ್ಕೆ ಸ್ಪಂದಿಸಿ ಶೂನ್ಯ ಬಡ್ಡಿ ದರದಲ್ಲಿ ಸಾಲ ಮತ್ತು ಸಾಲ ಮನ್ನಾ ಸೌಲಭ್ಯ ನೀಡಿದರು. ಕೇಂದ್ರ ಸರಕಾರದ ಪಿ.ಎಮ್-ಕಿಸಾನ್ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ರಾಜ್ಯ ಸರಕಾರದಿಂದ 4,000 ರು.ಗಳನ್ನು ನೀಡಿ ನಾಡಿನ ಅನ್ನದಾತರಿಗೆ ನೆರವಾದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸೈಕಲ್ ವಿತರಣೆ ಮಾಡಿದರು. ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ಒದಗಿಸುವ ಮೂಲಕ ಅವರಿಗೆ ನೆರಳಾದರು.

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡುವಲ್ಲಿ ದೆಹಲಿಯ ಮಟ್ಟದಲ್ಲಿ ನಿಯೋಗ ಕರೆದೊಯ್ದು ಧರಣಿ ಹೂಡುವ ಎಚ್ಚರಿಕೆ ನೀಡಿ ಯಶಸ್ವಿಯಾದರು. ಯಡಿಯೂರಪ್ಪನವರು ಹೊರನೋಟಕ್ಕೆ ಸಿಡಿಮಿಡಿಗೊಳ್ಳುವ ಸಿಟ್ಟಿನ ಮನುಷ್ಯರಂತೆ ಕಂಡರೂ, ಅಂತರಂಗದಲ್ಲಿ ಅವರು ತೀರಾ ಭಾವುಕರು. ಹಾವೇರಿಯಲ್ಲಿ ರೈತನ ಮಗ ಪೊಲೀಸ್ ಗುಂಡೇಟಿಗೆ ಬಲಿಯಾದಾಗ ಆ ತಾಯಿಯನ್ನು ಕಂಡು ಕಣ್ಣೀರಿಟ್ಟ ಅವರ ಹೃದಯವಂತಿಕೆ ಅಪಾರ. ರಾಜಕೀಯವಾಗಿ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ಸಾಮಾನ್ಯ ಕಾರ್ಯಕರ್ತರನ್ನು ಕಂಡು ಕುಶಲೋಪರಿ ವಿಚಾರಿಸುವ ಅವರ ವಿನಯ ಮತ್ತು ಸಜ್ಜನಿಕೆ ಎಲ್ಲರಿಗೂ ಮಾದರಿಯಾಗಿದೆ.

ರೈತಪರ ಹೋರಾಟಗಳಿಂದಲೇ ನಾಯಕತ್ವ ರೂಪಿಸಿಕೊಂಡ ಯಡಿಯೂರಪ್ಪನವರು, ಹಲವಾರು ಮುಖಂಡರನ್ನು ಒಗ್ಗೂಡಿಸಿಕೊಂಡು ಬಿಜೆಪಿಯನ್ನು ಹಂತ ಹಂತವಾಗಿ ಬೇರುಮಟ್ಟದಿಂದ ಬಲಗೊಳಿಸಿ ಅಧಿಕಾರದ ಗದ್ದುಗೆಗೆ ತಂದವರು. ಕೇವಲ ಪಕ್ಷ ಸಂಘಟನೆಯಷ್ಟೇ ಅಲ್ಲದೆ, ಅಸಂಖ್ಯಾತ ಯುವಕರಿಗೆ ಮಾರ್ಗದರ್ಶನ ನೀಡಿ, ಅವ ರನ್ನು ಸಮರ್ಥ ನಾಯಕರನ್ನಾಗಿ ರೂಪಿಸಿ ಇಂದು ರಾಜ್ಯ ರಾಜಕಾರಣದ ಮುಂಚೂಣಿಯಲ್ಲಿ ನಿಲ್ಲುವಂತೆ ಮಾಡಿದ್ದಾರೆ.

ನಾನು ಅನ್ಯಪಕ್ಷದಲ್ಲಿದ್ದಾಗಲೂ ಯಡಿಯೂರಪ್ಪನವರ ಜನಪರ ಹೋರಾಟವನ್ನು ಕಂಡು ಮೆಚ್ಚಿಕೊಂಡವನು. ಅವರ ಪ್ರತಿಯೊಂದು ಮಾತು ಮತ್ತು ಹೇಳಿಕೆ ಯುವಕರಲ್ಲಿ

ಹೊಸ ಹುರುಪು ಹಾಗೂ ಸ್ಫೂರ್ತಿಯನ್ನು ತುಂಬುತ್ತಿತ್ತು. ಅವರ ಗತ್ತು, ಗಾಂಭೀರ್ಯ ಮತ್ತು ಹೋರಾಟದ ಹಾದಿ ಕಿರಿಯರಿಗೆ ಸದಾ ಮಾರ್ಗದರ್ಶನ ನೀಡುವಂತಹದ್ದು. ಇಂತಹ ಅದ್ಭುತ ನಾಯಕತ್ವವನ್ನು ಒಪ್ಪಿ, ಬೆಂಬಲಿಸಿ ಪಕ್ಷಕ್ಕೆ ಬಂದ ನನ್ನಂತವರಿಗೆ ಅವರು ಕೇವಲ ನಾಯಕರಾಗಿ ಉಳಿಯದೆ, ಒಬ್ಬ ಶ್ರೇಷ್ಠ ಮಾರ್ಗದರ್ಶಕರಾಗಿ ನಿಂತಿದ್ದಾರೆ. ನಮ್ಮನ್ನು ಪ್ರೋತ್ಸಾಹಿಸಿ, ಯೋಗ್ಯತೆಗನುಗುಣವಾಗಿ ಸ್ಥಾನಮಾನಗಳನ್ನು ನೀಡಿ ಸಮಾಜದಲ್ಲಿ ಗೌರವಯುತವಾಗಿ ಬೆಳೆಯಲು ಅವರು ಕಾರಣಕರ್ತರಾಗಿದ್ದಾರೆ.

ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಷಡ್ಯಂತ್ರಗಳಿಗೆ ಬಲಿಯಾದರೂ, ಯಡಿಯೂರಪ್ಪನವರು ಎಂದಿಗೂ ಎದೆಗುಂದಲಿಲ್ಲ. ತಮ್ಮ ಆತ್ಮಗೌರವಕ್ಕೆ ಧಕ್ಕೆ ಬಂದಾಗ ಹೊಸ ಪಕ್ಷ ಕಟ್ಟುವ ಸಾಹಸವನ್ನೂ ಮಾಡಿದರು. ಸೋಲನ್ನೇ ಗೆಲುವಿನ ಸೋಪಾನವನ್ನಾಗಿಸಿಕೊಂಡ ಅವರು, ಬಾರದು ಬಪ್ಪದು, ಬಪ್ಪದು ತಪ್ಪದು ಎಂಬ ಮಾತಿನಂತೆ ತಮ್ಮ ಛಲದಿಂದ ಅಧಿಕಾರವನ್ನು ಮರಳಿ ಪಡೆದರು. ಯಡಿಯೂರಪ್ಪನವರು ಇಂದು ಕೇವಲ ಒಬ್ಬ ವ್ಯಕ್ತಿಯಲ್ಲ, ಅದೊಂದು ಶಕ್ತಿ.

ಬಸವಣ್ಣನವರ ನುಡಿದಂತೆ ನಡೆ ಎಂಬ ತತ್ವವನ್ನು ಪಾಲಿಸುತ್ತಾ, ಅಖಂಡ ಕರ್ನಾಟಕದ ಅಭಿವೃದ್ಧಿಯೇ ಪಂಚಾಕ್ಷರಿ ಮಂತ್ರವೆಂದು ನಂಬಿರುವ ಧೀಮಂತ ನಾಯಕ. ಇಂತಹ ದೂರದೃಷ್ಟಿಯುಳ್ಳ, ಮೇರು ವ್ಯಕ್ತಿತ್ವದ ರಾಜಕಾರಣಿಯನ್ನು ಅಭಿನಂದಿಸಲು ಓನಕೆ ಓಬವ್ವನ ನಾಡು, ಮದಕರಿ ನಾಯಕನ ಬೀಡು, ಕೋಟೆನಾಡು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮವು ಶ್ಲಾಘನೀಯ. ಈ ಸಮಾರಂಭವನ್ನು ಆಯೋಜಿಸುತ್ತಿರುವ ಅವರ ಅಭಿಮಾನಿಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಲಕ್ಷಾಂತರ ಅಭಿಮಾನಿಗಳ ಸಮ್ಮಿಲನದ ಈ ಸಾಗರದಲ್ಲಿ ನಾನು ಕೂಡ ಒಬ್ಬ ಅಭಿಮಾನಿಯಾಗಿ ಪಾಲ್ಗೊಂಡು ಅಭಿನಂದನೆ ಸಲ್ಲಿಸಲು ಅತ್ಯಂತ ಸಂತೋಷ ಪಡುತ್ತೇನೆ.

ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂಬ ಕುವೆಂಪು ಅವರ ವಾಣಿಯಂತೆ ಬದುಕುತ್ತಿರುವ ನಮ್ಮ ರೈತನಾಯಕರಿಗೆ ಭಗವಂತನು ದೀರ್ಘಾಯುಷ್ಯ ಮತ್ತು ಉತ್ತಮ ಆರೋಗ್ಯವನ್ನು ಕರುಣಿಸಲಿ ಎಂದು ಹಾರೈಸುತ್ತೇನೆ.

ಐದು ದಶಕದ ಒಡನಾಟ; ನನ್ನ ಆತ್ಮೀಯ ಯಡಿಯೂರಪ್ಪ

ರಾಜಕೀಯ ಎನ್ನುವುದು ಕೇವಲ ಅಧಿಕಾರ ಹಿಡಿಯುವ ಹಾದಿಯಲ್ಲ, ಅದೊಂದು ಸುದೀರ್ಘ ತಪಸ್ಸು ಎಂಬುದಕ್ಕೆ ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ಸಾರ್ವಜನಿಕ ಜೀವನವೇ ಸಾಕ್ಷಿ. ಅವರು ತಮ್ಮ ರಾಜಕೀಯ ಬದುಕಿನ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದ್ದಾರೆ. ಈ ಸುದೀರ್ಘ ಹಾದಿಯಲ್ಲಿ ಅವರೊಂದಿಗೆ ಹೆಜ್ಜೆ ಹಾಕಿದ ಹಲವಾರು ನೆನಪುಗಳು ನನ್ನ ಕಣ್ಣಮುಂದೆ ಮೆರವಣಿಗೆಯಂತೆ ಸಾಗುತ್ತಿವೆ.

ಅವತ್ತಿನ ಜನಸಂಘವಾಗಲಿ ಅಥವಾ ಇವತ್ತಿನ ಈ ಬೃಹತ್ ಬಿಜೆಪಿಯಾಗಲಿ ಅಂದು ಇಷ್ಟೊಂದು ಪ್ರಬಲವಾಗಿರಲಿಲ್ಲ. ಶಿಕಾರಿಪುರದಂತಹ ಒಂದು ಪುಟ್ಟ ತಾಲೂಕಿನಲ್ಲಿ ಜನಸಂಘದ ಸಾಧಾರಣ ಕಾರ್ಯಕರ್ತನಾಗಿ ಯಡಿಯೂರಪ್ಪನವರು ಹೊರಟಾಗ, ನಮ್ಮ ಮುಂದೆ ಯಾವುದೇ ಅಧಿಕಾರದ ಆಸೆ ಇರಲಿಲ್ಲ. ಇಡೀ ತಾಲೂಕನ್ನು ಸೈಕಲ್ ಮೇಲೆ ಸುತ್ತಿ 'ಜನಸಂಘ'ದ ತತ್ವಗಳನ್ನು ಮನೆಮನೆಗೆ ತಲುಪಿಸಿದ ಆ ಅದ್ಭುತ ಚೈತನ್ಯ ಅವರದ್ದು. ಆ ಹೋರಾಟದ ಫಲವಾಗಿಯೇ ಪುರಸಭೆಯಲ್ಲಿ ನಮಗೆ ಬಹುಮತ ದೊರೆತು, ಅವರು ಅಧ್ಯಕ್ಷರಾದರು.

ಯಡಿಯೂರಪ್ಪನವರು ಶಿಕಾರಿಪುರದ ಪುರಸಭಾ ಅಧ್ಯಕ್ಷರಾಗಿದ್ದಾಗ ನಡೆದ ಆ ಘಟನೆ ಇಂದಿಗೂ ಮೈ ಜುಂ ಎನಿಸುತ್ತದೆ. ಬೆಳಗ್ಗೆ ಏಕಾಂಗಿಯಾಗಿ ಜನರ ಕಷ್ಟ ಕೇಳಲು ಹೋಗುತ್ತಿದ್ದಾಗ, ಕಿಡಿಗೇಡಿಯೊಬ್ಬ ಅವರ ತಲೆಗೆ ಬಲವಾಗಿ ಹೊಡೆದಿದ್ದ. ರಕ್ತಸಿಕ್ತರಾಗಿ ಪ್ರಜ್ಞಾಹೀನರಾಗಿ ಬಿದ್ದ ಅವರನ್ನು ನೋಡಿ, ಬದುಕುವುದು ಅಸಾಧ್ಯ ಎಂದೇ ನಾವೆಲ್ಲ ಭಾವಿಸಿದ್ದೆವು. ಆದರೆ ಮೆಗ್ಗಾನ್ ಆಸ್ಪತ್ರೆಯಲ್ಲಿ ಸಾವು-ಬದುಕಿನ ಹೋರಾಟ ನಡೆಸಿ ಗೆದ್ದು ಬಂದ ಅವರು, ಮತ್ತೆ ಪುಟಿದೆದ್ದ ರೀತಿ ಅಪ್ರತಿಮ. ಆ ಛಲವೇ ಇಂದು ಅವರನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿದೆ.

ಶೇಖಾವತ್ ನುಡಿದ ಭವಿಷ್ಯ: ಶಿವಮೊಗ್ಗದ ಬೃಹತ್ ರೈತ ಸಮಾವೇಶದಲ್ಲಿ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಭೈರೋಸಿಂಗ್ ಶೇಖಾವತ್ ಅತಿಥಿಯಾಗಿದ್ದರು. ಯಡಿಯೂರಪ್ಪನವರಿಗೆ ಹಿಂದಿ ಬರುತ್ತಿರಲಿಲ್ಲ, ಶೇಖಾವತ್ ಅವರಿಗೆ ಕನ್ನಡ ಬರಲ್ಲ. ಆದರೆ, ಅವರ ಸಂಘಟನಾ ಶಕ್ತಿಯನ್ನು ಹತ್ತಿರದಿಂದ ಗಮನಿಸಿದ ಶೇಖಾವತ್ ಅವರು ಭವಿಷ್ಯ ನುಡಿದಿದ್ದರು; 'ನೋಡಿ ಈ ಹುಡುಗ, ಇವನು ಮುಂದೊಂದು ದಿನ ಕರ್ನಾಟಕದ ಮುಖ್ಯಮಂತ್ರಿ ಆಗುತ್ತಾನೆ' ಎಂದಿದ್ದರು.. ಆ ಮಾತು ಮುಂದೆ ನಾಲ್ಕು ಬಾರಿ ನಿಜವಾಯಿತು.



ಡಾ. ಡಿ.ಎಚ್. ಶಂಕರಮೂರ್ತಿ
ವಿಧಾನಪರಿಷತ್ ಮಾಜಿ ಸಭಾಪತಿ

ಅಧಿಕಾರ ಬಂದಾಗ ಯಡಿಯೂರಪ್ಪನವರು ತೋರಿದ ಮಾನವೀಯತೆ ಅಪಾರ. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಸೈಕಲ್ ಯೋಜನೆ ತಂದಿದ್ದು, ರೈತರಿಗಾಗಿ ದೇಶದಲ್ಲೇ ಮೊದಲ ಬಾರಿಗೆ ಪ್ರತ್ಯೇಕ ಬಜೆಟ್ ಮಂಡಿಸಿದ್ದು ಅವರ ಧೀಮಂತ ವ್ಯಕ್ತಿತ್ವಕ್ಕೆ ಸಾಕ್ಷಿ. ದೇವದಾಸಿಯರ ಕಷ್ಟ ಕಂಡು ಮರುಗಿದ ಅವರು, ಅವರಿಗೆ ಮಾಸಿಕ ಪೆನ್ಷನ್ ಘೋಷಿಸಿದಾಗ ಅವರ ಕಣ್ಣಲ್ಲಿದ್ದ ಆ ತೃಪ್ತಿಯ ಭಾವನೆ ನನಗೆ ಇಂದಿಗೂ ನೆನಪಿದೆ. ಭಾಗ್ಯಲಕ್ಷ್ಮಿಯಂತಹ ಯೋಜನೆಗಳು ಅವರ ಮನದಾಳದ ಕಳಕಳಿಯ ಪ್ರತಿಬಿಂಬಗಳು.

ನಮ್ಮಿಬ್ಬರ ನಡುವಿನ ಸಂಬಂಧ ಕೇವಲ ರಾಜಕೀಯ ಸ್ನೇಹವಲ್ಲ, ಅದೊಂದು ಅವಿನಾಭಾವ ಒಡನಾಟ. ಅವರು ನನ್ನನ್ನು ಎಂದೂ ಶಂಕರಮೂರ್ತಿ ಎಂದು ಕರೆಯಲಿಲ್ಲ; ಸದಾ ಪ್ರೀತಿಯಿಂದ 'ಶಂಕರು' ಎಂದೇ ಕರೆಯುತ್ತಿದ್ದರು. ಹುಬ್ಬಳ್ಳಿ ಈದ್ಗಾ ಮೈದಾನದಿಂದ ಕಾಶ್ಮೀರದ ಲಾಲ್ ಚೌಕ್ ವರೆಗೆ ನಾವು ಜೊತೆಯಾಗಿಯೇ ಹೋರಾಡಿದ್ದೇವೆ. ಒಮ್ಮೆ ಪೊಲೀಸರು ಟಿಯರ್ ಗ್ಯಾಸ್ ಸಿಡಿಸಿದಾಗ ಅವರು ಪ್ರಜ್ಞೆ ತಪ್ಪಿ ಬಿದ್ದರು. ಅವರನ್ನು ನಾನೇ ಆಸ್ಪತ್ರೆಗೆ ಸೇರಿಸಿದೆ. ಪ್ರಜ್ಞೆ ಬಂದ ಮೇಲೆ ಅವರು ತಮಾಷೆಯಾಗಿ, 'ಏಯ್, ನೀನು ನನ್ನನ್ನು ಎತ್ತಿಕೊಳ್ಳೋದಕ್ಕೆ ಸಾಧ್ಯವೇನೋ' ಎಂದು ನಕ್ಕಿದ್ದು ಈಗಲೂ ಕಿವಿಯಲ್ಲಿ ಮೊಳಗುತ್ತಿದೆ.

ನಮ್ಮಲ್ಲಿ ಎಂಥ ಒಗ್ಗಟ್ಟು ಇತ್ತೆಂದರೆ, ಪಕ್ಷದ ಹಿತದ ಮುಂದೆ ವೈಯಕ್ತಿಕ ಭಿನ್ನಾಭಿಪ್ರಾಯಗಳಿಗೆ ಜಾಗವೇ ಇರಲಿಲ್ಲ. ಯಡಿಯೂರಪ್ಪನವರು ಒಬ್ಬ ಅಪ್ಪಟ ಮಾಸ್ ಲೀಡರ್. ನಾನು ಯಾವುದಾದರೂ ಯೋಜನೆಯ ಚಿಂತನೆ ನೀಡಿದರೆ, ಅದನ್ನು ಜನಮಾನಸಕ್ಕೆ ತಲುಪಿಸಿ ಯಶಸ್ವಿಗೊಳಿಸುವ ಚಾಕಚಕ್ಯತೆ ಅವರದ್ದಾಗಿತ್ತು. ನಮ್ಮ ಬಾಂಧವ್ಯವನ್ನು ವಾಜಪೇಯಿ - ಅಡ್ವಾಣಿ ಅವರ ನಡುವಿನ ಸಂಬಂಧಕ್ಕೆ ಹೋಲಿಸಬಹುದು.

ಲಾಲ್ ಚೌಕ್ ಸಾಹಸ; ಸಾವಿನಂಚಿನಲ್ಲೂ ರಾಷ್ಟ್ರಪ್ರೇಮ

1992ರಲ್ಲಿ ಕಾಶ್ಮೀರದ ಲಾಲ್ ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸುವುದು ಪ್ರಾಣದ ಹಂಗು ತೊರೆದ ಕೆಲಸವಾಗಿತ್ತು. ಕರ್ನಾಟಕದಿಂದ ಆಯ್ಕೆಯಾದವರು ಯಡಿಯೂರಪ್ಪನವರು ಮತ್ತು ಡಾ. ಎಂ. ಆರ್.ತಂಗ ಅವರು ಮಾತ್ರ. ಬಸ್ಸು ಹತ್ತಿದ್ದ ಅವರು ದಿಢೀರನೆ ಕೆಳಗಿಳಿದು ಬಂದು ನನ್ನನ್ನೂ ಕೆ.ಎಸ್.ಈಶ್ವರಪ್ಪನವರನ್ನೂ ಪಕ್ಕಕ್ಕೆ ಕರೆದು ಹೇಳಿದ ಮಾತು ಎದೆಯನ್ನು ಕಲುಕುತ್ತದೆ: ನೋಡಿ ಶಂಕರು, ಅಲ್ಲಿ ಹೋದ ಮೇಲೆ ಏನಾಗುತ್ತದೋ ಗೊತ್ತಿಲ್ಲ. ನಾನೇ ನಾದರೂ ಮರಳಿ ಬಾರದಿದ್ದರೆ, ನನ್ನ ಮನೆಯವರನ್ನು ಮತ್ತು ಮಕ್ಕಳನ್ನು ನೀವು ಜಾಗರೂಕತೆಯಿಂದ ನೋಡಿ ಕೊಳ್ಳಬೇಕು. ರಾಷ್ಟ್ರಧ್ವಜಕ್ಕಾಗಿ ಪ್ರಾಣ ಅರ್ಪಿಸಲೂ ಸಿದ್ಧರಾಗಿದ್ದ ಅವರ ಆ ರಾಷ್ಟ್ರಪ್ರೇಮ ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ.

ಸೈಕಲ್ ಮೇಲೆ ಹಳ್ಳಿಗಳನ್ನು ಮತ್ತು ತಾಲ್ಲೂಕು ಸುತ್ತಿ ಪಕ್ಷ ಕಟ್ಟಿದ್ದ ಯಡಿಯೂರಪ್ಪನವರು, ಇಂದು ಹೆಣ್ಣುಮಕ್ಕಳು ಅದೇ ಸೈಕಲ್ ಏರಿ ಶಾಲೆಗೆ ಹೋಗುವಂತೆ ಮಾಡಿದ್ದು ಒಂದು ಐತಿಹಾಸಿಕ ಪವಾಡ. ಅವರು ನನಗೊಬ್ಬ ಮಾಜಿ ಮುಖ್ಯಮಂತ್ರಿಯಾಗಿ ಕಾಣುವುದಕ್ಕಿಂತ ಹೆಚ್ಚಾಗಿ ಒಬ್ಬ ಆತ್ಮೀಯ ಒಡನಾಡಿಯಾಗಿ ಕಾಣುತ್ತಾರೆ. 50 ವರ್ಷಗಳ ಕಾಲ ಸತತವಾಗಿ ದಣಿವಿಲ್ಲದೆ ದುಡಿದಿರುವ ಬಿ.ಎಸ್. ಯಡಿಯೂರಪ್ಪನವರಿಗೆ ಸಲ್ಲುತ್ತಿರುವ ಈ ಗೌರವವು ಪ್ರತಿ ಕಾರ್ಯಕರ್ತನಿಗೆ ಸಲ್ಲುವ ಗೌರವವಾಗಿದೆ. ಈ ಧೀಮಂತ ನಾಯಕನ ಬದುಕು ಮತ್ತು ಹೋರಾಟ ಮುಂದಿನ ಹಲವು ತಲೆಮಾರುಗಳಿಗೆ ಸದಾ ದಾರಿದೀಪವಾಗಲಿ.

ದಿಟ್ಟ ಹೋರಾಟಗಾರ ಮತ್ತು ಮಾನವೀಯತೆಯ ಹರಿಕಾರ

ಅಧಿಕಾರ ಮತ್ತು ಆದರ್ಶದ ನಡುವೆ ಯಾವಾಗಲೂ ಸಂಘರ್ಷ ಇರುತ್ತದೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೇ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕರಾಗುತ್ತಾರೆ. ಅವರು ಯಡಿಯೂರಪ್ಪನವರು.

ಹುಟ್ಟಿದಾಗ ಯಾರೂ ನಾಯಕರಾಗುವುದಿಲ್ಲ. ಹುಟ್ಟಿದಾಗ ಕಣ್ಣು ತೆಗೆಯಲು ಬರುವುದಿಲ್ಲ. ಅವರೇಗೆ ನಾಯಕರಾಗುತ್ತಾರೆ. ತಮ್ಮ ಕಠಿಣ ಪರಿಶ್ರಮದಿಂದ ಗುರಿ ಸಾಧನೆಯ ಛಲದಿಂದ ನಿರಂತರವಾಗಿ ಜನರ ಜೊತೆಗೆ ಇದ್ದು, ಪರಿಶ್ರಮದ ನಾಯಕರು ಯಾರದರೂ ಇದ್ದರೆ ಅದು ಕರ್ನಾಟಕದ ರಾಜಾ ಹುಲಿ ಯಡಿಯೂರಪ್ಪ ಅವರು.

ಆದರ್ಶ ತಾಯಿ ಇದ್ದ ಹಾಗೆ, ಅಧಿಕಾರ ಕಟ್ಟಿಕೊಂಡ ಹೆಂಡತಿ ಇದ್ದ ಹಾಗೇ, ತಾಯಿ ಜನ್ಮ ಕೊಟ್ಟಿದ್ದೇನೆ ನನ್ನ ಮಗ ನನ್ನ ಮಾತು ಕೇಳುತ್ತಾನೆ ಎಂದುಕೊಳ್ಳುತ್ತಾಳೆ. ಹೆಂಡತಿ ನಾನು ಇವನಿಗೊಸ್ಕರ ತವರು ಮನೆ ಬಿಟ್ಟು ಬಂದಿದ್ದೇನೆ ನನ್ನ ಮಾತು ಕೇಳುತ್ತಾನೆ ಎಂದುಕೊಳ್ಳುತ್ತಾಳೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೇ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕರಾಗುತ್ತಾರೆ. ಅವರು ಯಡಿಯೂರಪ್ಪನವರು.

1994 ರಲ್ಲಿ ಚುನಾವಣೆಯಾಗಿ ಹದಿನೈದು ದಿನ ಕಳೆದಿತ್ತು. ಸರಕಾರ ರಚನೆಯಾಗಿ 15 ದಿನ ಕಳೆದಿದರಲಿಲ್ಲ ಯಡಿಯೂರಪ್ಪ ಅವರು ಹರಿಹರದಲ್ಲಿ ರೈತರ ಪರವಾಗಿ ಬೃಹತ್ ಹೋರಾಟ ಮಾಡಿದ್ದರು. ಮೊದಲು ರೈತರ ಪರವಾಗಿ ರಾಜಕಾರಣ ಮಾಡಿದ ನಾಯಕರು ಬಿ.ಎಸ್ ವೈ. ಪ್ರತಿಪಕ್ಷದಲ್ಲಿ ಇದ್ದರೂ ಕೂಡ, ಒಬ್ಬರು, ಇಬ್ಬರೇ ಶಾಸಕರು ಇದ್ದರೂ ರೈತರ ಪರ ಹೋರಾಟ ಮಾಡಿ, ಅದನ್ನು ಮುಖ್ಯಮಂತ್ರಿಗಳ ವರೆಗೆ ತೆಗೆದುಕೊಂಡು ಹೋಗಿ ರಾಜ್ಯದಲ್ಲಿ ರೈತರ ಪರ ಹೋರಾಟ ಮಾಡುವ ಆಯಾಮ ತಂದವರು ಯಡಿಯೂರಪ್ಪನವರು.

ನೀರಾವರಿಗೆ ಆದ್ಯತೆ: ಯಾರು ವಿರೋಧ ಪಕ್ಷ ಇದ್ದಾಗ ಹೋರಾಟ ಮಾಡಿದ್ದರೋ ಅಧಿಕಾರಕ್ಕೆ ಬಂದಾಗ ಅದನ್ನು ಜಾರಿಗೆ ತರುವ ಪ್ರಯತ್ನ ಮಾಡಿದರು. ಅವರು ಭಾಷಣದಲ್ಲಿ ರೈತ ಮತ್ತೇನು ಕೇಳುವುದಿಲ್ಲ. ಆತನಿಗೆ ನೀರು ಕೊಟ್ಟರೆ ಆತ ಅನ್ನ ಕೊಡುತ್ತಾನೆ. ಅವರು ಮೊದಲು ಅಧಿಕಾರಕ್ಕೆ ಬಂದಾಗ ನಾಲ್ಕು ವರ್ಷದ ಅವಧಿಯಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದರು. 7.36 ಲಕ್ಷ ಎಕರೆ ಹೊಸದಾಗಿ ನೀರಾವರಿ ಮಾಡಿರುವ ದಾಖಲೆ ಮಾಡಿದರು. ಆ ಕೆಲಸ ಮಾಡುವ ಸೌಭಾಗ್ಯ ನನಗೆ ಸಿಕ್ಕಿತು. ಯಾವ ಯೋಜನೆ ಅಪೂರ್ಣ ಆಗಿತ್ತೊ ಅದನ್ನು ಪೂರ್ಣ ಮಾಡುವ ಕೆಲಸ ನಾವು ಮಾಡಿದ್ದೇವು. ಅದಕ್ಕೆ ಉದಾಹರಣೆ ತುಂಗಾ ಮೇಲ್ದಂಡೆ ಯೋಜನೆ, ಎಚ್.ಕೆ. ಪಾಟೀಲರು 2002 ರಲ್ಲಿ ಯೋಜನೆ ಮುಗಿಸುವುದಾಗಿ ಹೇಳಿದ್ದರು. ಯಡಿಯೂರಪ್ಪ ಅವರ ಕಾಲದಲ್ಲಿ 2012ರಲ್ಲಿ ನಾವು ಈ ಯೋಜನೆ ಪೂರ್ಣಗೊಳಿಸಿದೆವು. ಸಿಂಗಟಾಲೂರು ಏತ ನೀರಾವರಿ



ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ

ಯೋಜನೆಗೆ ನೀರು ತಂದವರು ನಾವು. ಕೃಷ್ಣಾ ಮೇಲದ್ದಂಡೆ ಯೋಜನೆ ನಾರಾಯಣಪುರ ಬಲದಂಡೆ ಯೋಜನೆಗೆ ನೀರು ತಂದವರು ನಾವು. ಕಾವೇರಿ ಕಣಿವೆಯಲ್ಲಿ ಸುಮಾರು 15 ಏತ ನೀರಾವರಿಗಳನ್ನು ನಾವು ಮಾಡಿದ್ದೇವೆ. ರೈತರಿಗಾಗಿ ಹಗಲಿರಳು ಕೆಲಸ ಮಾಡಿದ್ದೇವೆ. 2008 ರಲ್ಲಿ ಅವರು ಸಿಎಂ ಆಗಿದ್ದಾಗ ರೈತರ ಹೆಸರಿನಲ್ಲಿ ಪಮಾಣ ವಚನ ಸ್ವೀಕರಿಸಿ ಸಂಪುಟಕ್ಕೆ ಒಂದು ಫೈಲ್ ತರಿಸಿದರು. ನನ್ನ ಕಡೆಯಿಂದ ಮೊದಲ ನಿರ್ಧಾರ ಓದಿಸಿದರು. ಅದು ರೈತರಿಗೆ 10 ಎಚ್‌ಪಿ ವಿದ್ಯುತ್ ಉಚಿತವಾಗಿ ಕೊಡುವ ನಿರ್ಧಾರ ಆಗಿತ್ತು. ಅವರ ಆದರ್ಶದಲ್ಲಿಯೇ ನಾವು ನಡೆಯುತ್ತಿದ್ದೇವೆ.

ಅಂದಿನ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿವರನ್ನು ಭೇಟಿಯಾಗಿ ಬಿ.ಎಸ್. ಯಡಿಯೂರಪ್ಪ ಅವರನ್ನು ಮರಳಿ ಪಕ್ಷಕ್ಕೆ ತರಬೇಕೆಂದು ಮನವಿ ಮಾಡಲು ಹೋಗಿದ್ದವು. ಆ ಮಾತುಕತೆಯ ಪ್ರಾರಂಭದಲ್ಲಿಯೇ ನಾನು ಯಡಿಯೂರಪ್ಪ ಅವರ ಪಕ್ಷಪಾತಿ ಎಂದು ಹೇಳುವ ಮುಖಾಂತರ ಮೋದಿಯವರಿಗೆ ಯಡಿಯೂರಪ್ಪ ಅವರ ಬಗ್ಗೆ ಇರುವಂತ ಗೌರವ ಮತ್ತು ನಂಬಿಕೆ ವ್ಯಕ್ತಪಡಿಸಿದರು.

ರಾಜಕಾರಣದಲ್ಲಿ 50 ವರ್ಷ ಜನಮನ್ನಣೆ ಪಡೆದುಕೊಂಡು ಪ್ರಸ್ತುತವಾಗಿರುವುದು ಬಹಳ ಕಷ್ಟ ಅಂತದ್ದರಲ್ಲಿ ಯಡಿಯೂರಪ್ಪ ಜನಮಾನಸದಲ್ಲಿ ಅಚ್ಚಳಿಯದೆ ಹೆಸರು ಮಾಡಿದ್ದಾರೆ. ಅದಕ್ಕಾಗಿ ಅವರು ಅಪರೂಪದ ರಾಜಕಾರಣಿ. ಯಡಿಯೂರಪ್ಪ ಅವರು ಈ ರಾಜ್ಯದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಅವರು ಈಗ ಕರ್ನಾಟಕದಲ್ಲಿ ಪ್ರೇರಣೆ ಮತ್ತು ಶಕ್ತಿ. ಅವರ ಆಶೀರ್ವಾದ ಬಿಜೆಪಿಗೆ ಒಂದು ಆನೆ ಬಲ.

ಯಡಿಯೂರಪ್ಪನವರು ಮತ್ತು ಉತ್ತರ ಕರ್ನಾಟಕಕ್ಕೆ ವಿಶೇಷ ವಾದ ಸಂಬಂಧವಿದೆ. ಅವರ ಹೋರಾಟದ ದಿನಗಳಲ್ಲಿ ಉತ್ತರ ಕರ್ನಾಟಕ ಅತಿ ಹೆಚ್ಚು ಸ್ಪಂದನೆ ಮಾಡಿ ಒಬ್ಬ ಸಂಪೂರ್ಣ ಕರ್ನಾಟಕದ ನಾಯಕನಾಗಿ ಬಿಂಬಿಸಿತ್ತು. ಉತ್ತರ ಕರ್ನಾಟಕದ ಜನ ಯಡಿಯೂರಪ್ಪ ಅವರನ್ನು ಅಪಾರವಾಗಿ ಪ್ರೀತಿಸುತ್ತಾರೆ ಗೌರವಿಸುತ್ತಾರೆ. ಯಡಿಯೂರಪ್ಪ ಅವರಿಗೆ ಉತ್ತರ ಕರ್ನಾಟಕದ ಬಗ್ಗೆ ಅಷ್ಟೆ ಪ್ರೀತಿ, ವಿಶ್ವಾಸ ಮತ್ತು ಒಲವು ರಾಜಕೀಯವಾಗಿ ಅತಿ ಹೆಚ್ಚು ಶಾಸಕರನ್ನು ಅದರಲ್ಲೂ ಕಿತ್ತೂರು ಕರ್ನಾಟಕದ ಜನರು ಯಡಿಯೂರಪ್ಪ ಅವರ ಬೆಂಬಲಕ್ಕೆ ಆಯ್ಕೆ ಮಾಡಿರುವುದು ನಮ್ಮ ಕಣ್ಣ ಮುಂದೆ ಇದೆ. ಈ ಅವಿನಾಭಾವ ಸಂಬಂಧ ಬಿಜೆಪಿ ಬಲವರ್ಧನೆಗೂ ಕಾರಣವಾಗಿದೆ. ಹೀಗಾಗಿ ಯಡಿಯೂರಪ್ಪ ಅವರು ಅತಿ ಹೆಚ್ಚು ಉತ್ತರ ಕರ್ನಾಟಕದ ಪ್ರವಾಸ ಮಾಡುತ್ತಿರುವುದು ಗಮನಾರ್ಹ ಅಭಿಮಾನೋತ್ಸವಕ್ಕೆ ಅತಿ ಹೆಚ್ಚು ಉತ್ತರ ಕರ್ನಾಟಕದ ಜನರು ಸಾಗರೋಪಾದಿಯಲ್ಲಿ ಹರಿದು ಬರಲಿದ್ದಾರೆ.

ಬಹಳ ಒಳ್ಳೆಯ ಮುಹೂರ್ತದಲ್ಲಿ ಅಭಿಮಾನೋತ್ಸವ ನಡೆಯುತ್ತಿದೆ. ಕಾಂಗ್ರೆಸ್ ಸರಕಾರ ಅತ್ಯಂತ ಕಷ್ಟದಲ್ಲಿ ಸಿಲುಕುವ ಸಂದರ್ಭದಲ್ಲಿ ಬಿಜೆಪಿ ಮತ್ತೆ ಪುಟಿದೇಳಲು ಈ ಕಾರ್ಯಕ್ರಮ ನಡೆಯುತ್ತಿದೆ. ರಾಜಕೀಯವಾಗಿ ನಾವು ಕಾಂಗ್ರೆಸ್ ನ ಎಲ್ಲ ವಿಚಾರಧಾರೆಗಳನ್ನು ಮೆಟ್ಟಿ ನಮ್ಮ ಸರ್ಕಾರ ಮಾಡುವಂತ ಮೊದಲನೆ ಹೆಜ್ಜೆ ಈ ಅಭಿಮಾನೋತ್ಸವ.

ಕರ್ನಾಟಕದ ರಾಜಕೀಯದ ದಿಕ್ಕನ್ನು ಬದಲಿಸಿರುವ ನಾಯಕ ಬಿ.ಎಸ್. ಯಡಿಯೂರಪ್ಪ. ಸಿದ್ದರಾಮಯ್ಯ ಅವರು ಒಂದು ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷ ಸೇರಿ ಆ ಪಕ್ಷದಲ್ಲಿ ಮುಖ್ಯಮಂತ್ರಿ ಆದವರು. ಆದರೆ, ಒಂದು ಪಕ್ಷವನ್ನು ಕೆಳಹಂತದಿಂದ ಸಂಘಟಿಸಿ ವಿಧಾನಸೌಧದ ಮೂರನೆ ಮಹಡಿವರೆಗೂ ತಂದು ಜನನಾಯಕರಾಗಿರುವವರು ಯಡಿಯೂರಪ್ಪ. ನಾವು ಯಡಿಯೂರಪ್ಪ ಅವರನ್ನು ರೈತ ನಾಯಕರು, ಹೋರಾಟಗಾರರು ಅಂತ ಹೇಳುತ್ತೇವೆ. ಅವರದು ಇನ್ನೊಂದು ಮಾನವೀಯತೆ ಇರುವಂತ ಮುಖ. ನಾವು ಅಧಿಕಾರ ಕಳೆದುಕೊಂಡು ಒಮ್ಮೆ ಚಾಮರಾಜನಗರಕ್ಕೆ ಹೋಗುವಾಗ ಸುಮಾರು 25 ವರ್ಷದ ಹೆಣ್ಣುಮಗಳು ಕಾರಿಗೆ ಅಡ್ಡ ಬಂದಳು. ಆ ಹೆಣ್ಣುಮಗಳನ್ನು ನೋಡಿ ಕಾರು ನಿಲ್ಲಿಸಿದರು, ಅವಳು ಇವರ ಕಾಲಿಗೆ ಬೀಳಲು ಬಂದು ಕೂಡಲೇ ಅಳಲು ಆರಂಭಿಸಿದಳು, ಏನಾಯಿತು ಎಂದು ಕೇಳಿದಾಗ ಅವಳು ನಾನು ಈ ಊರಿಗೆ ಸೊಸೆಯಾಗಿ ಬಂದಾಗಿನಿಂದ ಕುಡಿಯುವ ನೀರಿಗೆ ಪರದಾಡಿದ್ದೆ ಈಗ ನನ್ನ ಮೊಮ್ಮಗಳು ಬಂದಿದ್ದಾಳೆ, ಈ ಪುಣ್ಯಾತ್ಮ ನಮ್ಮ ಕೆರೆಗೆ ನೀರು ಹರಿಸಿ ಕುಡಿಯಲು ನೀರು ಕೊಟ್ಟಿದ್ದಾನೆ ಎಂದು ಹೇಳಿದಳು.

ಹೆಣ್ಣು ಹುಟ್ಟಿದರೆ ಶಾಪ ಎನ್ನುವ ಕಾಲದಲ್ಲಿ ಈ ಸಾಮಾಜಿಕ ಪಿಡುಗು ಹೋಗಿಸಲು ಗೃಹಲಕ್ಷ್ಮಿ ಯೋಜನೆ ತಂದು ಹೆಣ್ಣು ಮಗುವಿಗೆ 18 ವರ್ಷ ತುಂಬಿದಾಗ ಒಂದು ಲಕ್ಷ ರು. ಸಿಗುವಂತ ಯೋಜನೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ಯಡಿಯೂರಪ್ಪ ಜಾರಿಗೆ ತಂದರು. ಈ ಯೋಜನೆ ಅನುಷ್ಠಾನ ಸಂದರ್ಭದಲ್ಲಿ ಒಬ್ಬರು ಈ ಯೋಜನೆಯ ಶೇ 25% ರಷ್ಟು ಲಾಭ ಅಲ್ಪಸಂಖ್ಯಾತ ಮಹಿಳೆಯರಿಗೆ ಸಿಗುತ್ತದೆ ಎಂದಾಗ ಮಾನವೀಯತೆಯಿಂದ ಮಾಡುವ ಮತ್ತು ಸಾಮಾಜಿಕ ಪಿಡುಗು ತೆಗೆದುಹಾಕುವ ಯೋಜನೆಯಲ್ಲಿ ಯಾವುದೇ ಜಾತಿ ಭೇದ ಭಾವ ಮೂಡಬಾರದು ಎಂದು ಕಿವಿ ಮಾತು ಹೇಳಿದ್ದು ಅವರು ಅನುಷ್ಠಾನ ಮಾಡುವ ಕಾರ್ಯಕ್ರಮದಲ್ಲಿ ಮಾನವಿಯತೆಯ ಗುಣ ಇರುವಂಥದ್ದು ಎದ್ದು ಕಾಣುತ್ತದೆ. ಅದೇ ರೀತಿ ವಿಧವಾ ಮಾಸಾಶನ, ಹೆಣ್ಣು ಮಕ್ಕಳಿಗೆ ಸೈಕಲ್, ಸಂಧ್ಯಾ ಸುರಕ್ಷಾ ಹೀಗೆ ಮಹಿಳೆಯರಿಗೆ ವಿಶೇಷವಾದ ಕಾರ್ಯಕ್ರಮ ಮಾಡಿರುವುದು ಯಡಿಯೂರಪ್ಪ ಅವರ ಹೋರಾಟದ ಬಿರುಸಿನ ಮುಖದ ಹಿಂದೆ ಅತ್ಯಂತ ಸೂಕ್ಷ್ಮಮಾನವೀಯ ತೆಯ ಗುಣವೂ ಕೂಡ ಇದೆ ಎಂಬುದು ಈ ಕಾರ್ಯಕ್ರಮಗಳೇ ಸಾಕ್ಷಿ.

ಯಡಿಯೂರಪ್ಪ ಬಹಳ ಅಪರೂಪದ ನಾಯಕ ಅವರ ಜೊತೆಗೆ ಕೆಲಸ ಮಾಡಿರುವ ಸೌಭಾಗ್ಯ ನನ್ನದು. ಬಹಳ ಜನರ ಬದುಕಿಗೆ ದಾರಿ ತೋರಿದವರು ಬಹಳ ಜನರಿಗೆ ಬೆಳಕು ಕೊಟ್ಟವರು. ಬಹಳ ಜನರಿಗೆ ಆಶ್ರಯ ಕೊಟ್ಟಿದ್ದಾರೆ, ಸಹಾಯ ಪಡೆದವರು ಲಕ್ಷಗಟ್ಟಲೇ ಕೋಟಿಗಟ್ಟಲೆ ಇದ್ದಾರೆ. ಮನುಷ್ಯನಿಗೆ ಕೃತಜ್ಞತೆ ಅತ್ಯಂತ ಬೇಕಾಗಿರುವ ಗುಣ, ಆ ಮಹಾನಾಯಕನಿಗೆ ಕೃತಜ್ಞತೆ ಹೇಳುವ ಸಮಾರಂಭ. ಮುಂದಿನ ದಿನಗಳಲ್ಲಿ ಯಡಿಯೂರಪ್ಪ ಕಂಡಿರುವ ಕನಸಿನ ಕರ್ನಾಟಕವನ್ನು ಕಟ್ಟಲು ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ತಂದು ವಿಧಾನಸೌಧದ ಮೂರನೆ ಮಹಡಿಯಲ್ಲಿ ಕಮಲ ಅರಳಿಸುವ ಸಂಕಲ್ಪ ಮಾಡಬೇಕು.

ಬಗರ್ ಹುಕುಂನಿಂದ ಹುಕೂಮತ್‌ವರೆಗೆ ಬಿಎಸ್‌ವೈ ಹಾದಿ

ಶಿಕಾರಿಪುರ ಎಂದಾಕ್ಷಣ ಇಡೀ ನಾಡಿಗೆ ನೆನಪಾಗುವ ಅಗಾಧ ರಾಜಕೀಯ ಶಕ್ತಿ ಹಾಗೂ ಹೋರಾಟದ ಕಿಚ್ಚು ಎಂದರೆ ಬೂಕನಕೆರೆ ಸಿದ್ದಲಿಂಗಯ್ಯ ಯಡಿಯೂರಪ್ಪ. ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ 1943ರಲ್ಲಿ ಜನಿಸಿದರೂ, ತಮ್ಮ ಬದುಕಿನ ಕರ್ಮಭೂಮಿಯನ್ನಾಗಿ ಶಿವಮೊಗ್ಗದ ಶಿಕಾರಿಪುರವನ್ನು ಆಯ್ದುಕೊಂಡ ಯಡಿಯೂರಪ್ಪನವರು ಸಾರ್ವಜನಿಕ ಹಾಗೂ ರಾಜಕೀಯ ಜೀವನದಲ್ಲಿ 50 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ತಮ್ಮ ಆರಂಭಿಕ ದಿನಗಳಲ್ಲಿ ಮಂಡ್ಯದಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿದ್ದಾಗ ಆಟದ ಮೈದಾನದಲ್ಲಿ ನಡೆಯುತ್ತಿದ್ದ ಆರ್‌ಎಸ್‌ಎಸ್ ಶಾಖೆಗೆ ಕೆಲವರು ಕಿರುಕುಳ ನೀಡುತ್ತಿದ್ದುದನ್ನು ವಿರೋಧಿಸಿ, ಶಾಖೆಗೆ ಬೆಂಬಲವಾಗಿ ನಿಂತು ಶಿಸ್ತಿನ ಸ್ವಯಂಸೇವಕರಾದವರು. ಅಲ್ಲಿಂದ ಶಿಕಾರಿಪುರಕ್ಕೆ ಬಂದು ಶಂಕರ ರೈಸ್ ಮಿಲ್‌ನಲ್ಲಿ ಸಾಮಾನ್ಯ ಗುಮಾಸ್ತರಾಗಿ ವೃತ್ತಿಜೀವನ ಆರಂಭಿಸಿದವರ ಆರ್ಥಿಕ ಶಿಸ್ತು ಮತ್ತು ಸಂಘಟನಾ ಕೌಶಲ್ಯವನ್ನು ಮೆಚ್ಚಿದ ಮಾಲೀಕರು 1967ರಲ್ಲಿ ತಮ್ಮ ಪುತ್ರಿ ಮೈತ್ರಾದೇವಿಯವರನ್ನು ನೀಡಿ ವಿವಾಹ ಮಾಡಿದರು. ಅಲ್ಲಿಯೂ ಸಾಮಾಜಿಕ ಜೀವನವನ್ನು ಮುಂದುವರಿಸಿ, 1972ರಲ್ಲಿ ಶಿಕಾರಿಪುರ ತಾಲೂಕು ಜನಸಂಘದ ಅಧ್ಯಕ್ಷರಾಗುವ ಮೂಲಕ ಜನಪ್ರತಿನಿಧಿಯಾಗಿ ಚುನಾವಣಾ ರಾಜಕೀಯ ಜೀವನಕ್ಕೆ ಕಾಲಿಟ್ಟರು. ಇದು ಕೇವಲ ಒಬ್ಬ ಸಾಮಾನ್ಯ ವ್ಯಕ್ತಿಯ ಕಥೆಯಲ್ಲ, ಬದಲಾಗಿ ಒಬ್ಬ ತಳಮಟ್ಟದ ಕಾರ್ಯಕರ್ತ ತನ್ನ ಪ್ರತಿಭೆ, ಪರಿಶ್ರಮ ಹಾಗೂ ಪರಾಕ್ರಮದಿಂದ ರಾಜ್ಯದ ಅತ್ಯುನ್ನತ ಹುದ್ದೆಗೇರಿದ ಐದು ದಶಕಗಳ ರೋಚಕ ಇತಿಹಾಸ.

ಯಡಿಯೂರಪ್ಪನವರ ರಾಜಕೀಯ ಬದುಕು ಹೂವಿನ ಹಾಸಿಗೆಯಾಗಿರಲಿಲ್ಲ. ಅದು ಸಂಪೂರ್ಣವಾಗಿ ಬೀದಿ ಹೋರಾಟ, ಸೆರೆವಾಸ ಮತ್ತು ಬಡವರ ಪರವಾದ ಚಳುವಳಿಗಳಿಂದಲೇ ಬೆವರಿಳಿಸಿ ಕಟ್ಟಿದ ಸಾಮ್ರಾಜ್ಯ. 1975ರ ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಬಳ್ಳಾರಿ ಮತ್ತು ಶಿವಮೊಗ್ಗ ಜೈಲಿನಲ್ಲಿ 45 ದಿನಗಳ ಕಾಲ ಅವರು ಸೆರೆವಾಸ ಅನುಭವಿಸಿದರು. ಆ ವೇಳೆ ಅವರು ಸಂಘದ ತಾಲೂಕು ಕಾರ್ಯವಾಹರಾಗಿದ್ದರು. ಸರಕಾರದ ಕಣ್ಣಿಗೆ ಅಪಾಯಕಾರಿ ವ್ಯಕ್ತಿಯಾಗಿ ಕಂಡಿದ್ದ ಅವರು, 100ಕ್ಕೂ ಹೆಚ್ಚು ಸ್ವಯಂಸೇವಕರೊಂದಿಗೆ ಜೈಲು ಭರೋ ಚಳವಳಿ ಮೂಲಕ ಬಂಧನಕ್ಕೊಳಗಾದರು. ಜೈಲಿನಲ್ಲಿದ್ದಾಗಲೂ ಸಹ ಕೈದಿಗಳಿಗೆ ನೀಡುತ್ತಿದ್ದ ಹುಳು ಹತ್ತಿದ ಕಳಪೆ ಊಟದ (ಗೋಧಿ ಹಿಟ್ಟಿನ ಚಪಾತಿ) ವಿರುದ್ಧ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಾಗ, ಜೈಲು ಸೂಪರಿಂಟೆಂಡೆಂಟ್ ಸಜಾ ಬಂಧಿಗಳಿಂದ ಅವರ ಮೇಲೆ ಹಲ್ಲೆ ಮಾಡಿಸಿ ಅವರನ್ನು ಮುಗಿಸಿಬಿಡುವ ತಂತ್ರ ರೂಪಿಸಿದ್ದರು. ಆದರೆ ಅದರಿಂದ ಕೂದಲೆಳೆಯಲ್ಲಿ ಪಾರಾದ ಬಿಎಸ್ವೈ ಅವರ ಹೋರಾಟದ ಫಲವಾಗಿ ಜೈಲು ಅಧಿಕಾರಿಯೇ ಹಿಂಬಡ್ತಿ ಪಡೆದು ವರ್ಗಾವಣೆಗೊಳ್ಳಬೇಕಾಯಿತು. ಜೈಲಿನಿಂದ ಹಿಂತಿರುಗಿ ದಾಗ ನೋಡಿದರೆ, ತಮ್ಮ ಜಮೀನಿನ ಕೊಟ್ಟಿಗೆ ಕುಸಿದು ಎತ್ತುಗಳು ಮರಣ ಹೊಂದಿದ್ದವು. ಮನೆಯಲ್ಲಿ ಯಾವುದೇ ಸಮಸ್ಯೆ ಎದುರಾದಾಗಲೂ ಎದೆಗುಂದದೆ ಪತ್ನಿಯ ಬೆಂಬಲದೊಂದಿಗೆ ಜನಪರ ಕಾರ್ಯ ಮುಂದುವರಿಸಿದರು.

ಶಾಸಕರಾಗುವ ಮುನ್ನವೇ 1982ರಲ್ಲಿ ಬೆಂಗಳೂರಿನಲ್ಲಿ ನಡೆದ 'ಹಿಂದೂ ಸಂಗಮ' ಸಮಾವೇಶಕ್ಕೆ ಶಿಕಾರಿಪುರದಿಂದ 500ಕ್ಕೂ ಹೆಚ್ಚು ಗಣವೇಶಧಾರಿ ಸ್ವಯಂಸೇವಕರನ್ನು ಒಟ್ಟುಗೂಡಿಸಿ ಕಳುಹಿಸಿಕೊಟ್ಟಿದ್ದು ಅವರ ಅಸಾಧಾರಣ ಸಂಘಟನಾ ಶಕ್ತಿಗೆ ಸಾಕ್ಷಿ. ತದನಂತರ ಬಗರ್ ಹುಕುಂ ಸಾಗುವಳಿದಾರರ ಹಕ್ಕುಗಳಿಗಾಗಿ, ರೈತರ ಬೆಳೆಗಳಿಗೆ ಬೆಂಬಲ

ಡಾ. ಎಂ.ಆರ್. ವೆಂಕಟೇಶ್
ಮಾಜಿ ಅಧ್ಯಕ್ಷರು, ಬಿಎಂಟಿಸಿ
ಅಧ್ಯಕ್ಷರು, ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್

ಬೆಲೆ ಒದಗಿಸುವಂತೆ ಒತ್ತಾಯಿಸಿ ನಡೆಸಿದ ನಿರಂತರ ಹೋರಾಟಗಳು ಅವರನ್ನು ಅಪ್ಪಟ ರೈತ ನಾಯಕರನ್ನಾಗಿ ರೂಪಿಸಿದವು. ಶಿಕಾರಿಪುರ ಮತ್ತು ಶಿವಮೊಗ್ಗ ಭಾಗದಲ್ಲಿ ಸುಮಾರು 1,700ಕ್ಕೂ ಹೆಚ್ಚು ಮಂದಿಯನ್ನು ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸಿದ ಅವರ ಕಾರ್ಯ, ಶೋಷಿತರ ಪರವಾದ ಅವರ ಬದ್ಧತೆಗೆ ಜೀವಂತ ಸಾಕ್ಷಿಯಾಗಿದೆ. ಬರಗಾಲದ ಸಮಯದಲ್ಲಿ ಸೈಕಲ್ ಜಾಥಾ, ರೈತ ಜಾಥಾ ಹಾಗೂ ಪಾದಯಾತ್ರೆಗಳ ಮೂಲಕ ಹಳ್ಳಿಹಳ್ಳಿಗಳನ್ನು ಸುತ್ತಿ, ಕೇವಲ ನಗರಗಳಿಗೆ ಸೀಮಿತವಾಗಿದ್ದ ಪಕ್ಷವನ್ನು ಗ್ರಾಮೀಣ ಮಟ್ಟದಲ್ಲಿ ಬೇರೂರುವಂತೆ ಮಾಡಿದರು. 1983ರಲ್ಲಿ ಶಾಸಕರಾಗಿ ಆಯ್ಕೆಯಾದ ಬಳಿಕ, 1985ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಕೇವಲ 2 ಸ್ಥಾನಗಳನ್ನು ಗೆದ್ದಿತ್ತು. ಆ ಇಬ್ಬರಲ್ಲಿ ವಸಂತ ಬಂಗೇರ

ಅವರು ಜನತಾ ಪಕ್ಷಕ್ಕೆ ಹೋದಾಗ, ಅಸೆಂಬ್ಲಿಯಲ್ಲಿ ಯಡಿಯೂರಪ್ಪ ಅವರು ಪಕ್ಷದ ಏಕೈಕ ನಿಷ್ಠಾವಂತ ಶಾಸಕನಾಗಿ ಉಳಿದರು. ತಾವು ಒಂಟಿಯಾದರೂ ಅದನ್ನೇ ವರವಾಗಿ ಮಾರ್ಪಡಿಸಿ ಕೊಂಡು ಸದನದಲ್ಲಿ ಸರಕಾರದ ವಿರುದ್ಧ ಸಿಂಹಗರ್ಜನೆ ಮಾಡಿದ ಅವರ ವಾಗ್ಝರಿ ಅಪ್ರತಿಮವಾದದ್ದು. ರಾಷ್ಟ್ರಮಟ್ಟದಲ್ಲಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್‌ಕೃಷ್ಣ ಅಡ್ವಾಣಿಯವರ ಹೋರಾಟದ ಹಾದಿಯನ್ನೇ ರಾಜ್ಯಮಟ್ಟದಲ್ಲಿ ಯಡಿಯೂರಪ್ಪನವರೂ ಸವೆಸಿ ಪಕ್ಷವನ್ನು ಕಟ್ಟಿ ಬೆಳೆಸಿದರು ಎಂಬುದು ಅವರ ಅಪ್ರತಿಮ ಸಾಧನೆಯ ದ್ಯೋತಕ.

ಆಡಳಿತದ ಕಾಠಿಣ್ಯತೆ ಮತ್ತು ಅಂತಃಕರಣದ ಸಿಟ್ಟು: ಆಡಳಿತ ಯಂತ್ರವನ್ನು ಚುರುಕಾಗಿಡುವ ನಿಟ್ಟಿನಲ್ಲಿ ಯಡಿಯೂರಪ್ಪನವರು ತೋರುತ್ತಿದ್ದ ಕಾಠಿಣ್ಯತೆ, ವೇಗ ಮತ್ತು ಶಿಸ್ತು ಅತ್ಯಂತ ವಿಶಿಷ್ಟವಾದದ್ದು. ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಡನೆ ಬೆಳಗಿನ ಐದು ಗಂಟೆಗೇ ದಿನಚರಿ ಆರಂಭಿಸುವ ಅವರ ಕಾರ್ಯವೈಖರಿ ಅನೇಕರಿಗೆ ಬೆರಗು ಮೂಡಿಸುವಂಥದ್ದು. ನಸುಕಿನಲ್ಲೇ ದಿನಪತ್ರಿಕೆಗಳನ್ನು ಓದಿ, ಸಾರ್ವಜನಿಕರ ಕುಂದುಕೊರತೆಗಳಿಗೆ ತಕ್ಷಣ ಸ್ಪಂದಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಎಚ್ಚರಿಸುವ ಅವರ ಕೆಲಸದ ಶೈಲಿ ಆಡಳಿತದ ಮೇಲಿನ ಹಿಡಿತವನ್ನು ತೋರಿಸುತ್ತದೆ. ಯಡಿಯೂರಪ್ಪನವರು ಎಂದರೆ ಮುಂಗೋಪಿ ಮತ್ತು ಸಿಡುಕು ಸ್ವಭಾವದವರು ಎಂಬ ಅಭಿಪ್ರಾಯ ಹಲವರಲ್ಲಿದೆ. ಆದರೆ ಯಡಿಯೂರಪ್ಪನವರ ಸಿಟ್ಟು, ದ್ವೇಷದಿಂದ ಹೊರಹೊಮ್ಮಿದ್ದಲ್ಲ; ಬದಲಾಗಿ ಅದು ಸಾಮಾಜಿಕ ಕಾಳಜಿ, ಅನ್ಯಾಯದ ವಿರುದ್ಧದ ಸೆಣಸಾಟ ಮತ್ತು ಜನರಿಗೆ ತ್ವರಿತವಾಗಿ ನ್ಯಾಯ ದೊರಕಿಸಿಕೊಡಬೇಕೆಂಬ ತವಕದಿಂದ ಹುಟ್ಟುವ ಅಂತಃಕರಣದ ಸಿಟ್ಟು. ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಮಾತಿನಂತೆ ಅವರು ಆಡಳಿತದಲ್ಲಿ ವಜ್ರದಂತೆ ಕಠಿಣವಾಗಿ ಕಂಡರೂ, ಬಡವರು, ದೀನ-ದಲಿತರ ಕಷ್ಟಗಳನ್ನು ಕಂಡಾಗ ಕುಸುಮದಂತೆ ಮೃದುವಾಗುವ ಸಹೃದಯಿ ಎಂಬುದು ಅನೇಕ ಸಂದರ್ಭಗಳಲ್ಲಿ ಸಾಬೀತಾಗಿದೆ.

ಭಿನ್ನ ನಿಲುವಿನ ಅಪರೂಪದ ಮುಖ್ಯಮಂತ್ರಿ: ಕರ್ನಾಟಕ ಹಾಗೂ ದೇಶ ಕಂಡ ಅನೇಕ ಯಶಸ್ವಿ ಮುಖ್ಯಮಂತ್ರಿಗಳ ಸಾಲಿನಲ್ಲಿ ಯಡಿಯೂರಪ್ಪನವರು ಎದ್ದು ಕಾಣಲು ಪ್ರಮುಖ ಕಾರಣ ಅವರ ಸೈದ್ಧಾಂತಿಕ ಮಿತಿಯನ್ನು ಮೀರಿದ ಮಾನವೀಯತೆ ಮತ್ತು ಧಾರಾಳತನ. ಮೇಲ್ನೋಟಕ್ಕೆ ಸೈದ್ಧಾಂತಿಕವಾಗಿ ತೀವ್ರ ವಿರೋಧಿಯಾಗಿದ್ದ ಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಸ್ಮರಣಾರ್ಥ ಮೂಡಿಗೆರೆಯಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಯಾವುದೇ ಅಳುಕಿಲ್ಲದೆ, ತಕ್ಷಣವೇ ಜಾಗ ಹಾಗೂ ಒಂದು ಕೋಟಿ ರುಪಾಯಿ ಅನುದಾನ ಮಂಜೂರು ಮಾಡಿದ ಅವರ ನಡೆಯು ಅತ್ಯಂತ ಅಪರೂಪದ ರಾಜ ಕೀಯ ಔದಾರ್ಯಕ್ಕೆ ಒಂದು ಉದಾಹರಣೆ ಅಷ್ಟೆ. ದ್ವೇಷದ ರಾಜಕಾರಣವನ್ನು ಬದಿಗಿಟ್ಟು, ನಾಡಿನ ಸಾಂಸ್ಕೃತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಅವರು ನೀಡಿದ ಪ್ರಾ ಮುಖ್ಯತೆ ಅನನ್ಯವಾದದ್ದು. ಅಧಿಕಾರಕ್ಕಾಗಿ ಸಿದ್ಧಾಂತಗಳನ್ನು ಬಲಿ ಗೊಡದೆ, ತಮಗೆ ಅನ್ಯಾಯವಾದಾಗ ಅಥವಾ ಅಧಿಕಾರ ಬಿಡಬೇಕಾದ ಪರಿಸ್ಥಿತಿ ಬಂದಾಗ ಅವರು ಕಿಂಚಿತ್ತೂ ವಿಚಲಿ ತರಾಗಲಿಲ್ಲ. ಏಳು ದಿನಗಳ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡಿದ ತಕ್ಷಣವೇ ನೇರವಾಗಿ ಸಿದ್ದಗಂಗಾ ಮಠಕ್ಕೆ ತೆರಳಿ ಶ್ರೀಗಳ ಆಶೀರ್ವಾದ ಪಡೆದ ಅವರ ನಡೆ, ಅವರೊಳಗಿನ ಸ್ಥಿತಪ್ರಜ್ಞತೆಯನ್ನು ಜಗಜ್ಜಾಹೀರು ಮಾಡಿತು.

ರೈತರೆಂದರೆ ಅವರಿಗೆ ಅತ್ಯಂತ ಆಪ್ತರು. ರಾಜ್ಯದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಕೀರ್ತಿ ಅವರದ್ದು. ಯಡಿಯೂರಪ್ಪ ಅವರನ್ನು ಯಾವುದಾದರೂ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಅವರು ಅದಕ್ಕೆ ಬರಲೇಬೇಕು ಎಂದಿದ್ದರೆ, ಕಾರ್ಯಕ್ರಮದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತೇವೆ, ರೈತರಿಗೆ ಪ್ರಶಸ್ತಿ ನೀಡುತ್ತೇವೆ' ಎಂದು ಹೇಳಿದರೆ ಸಾಕು, ಅವರು ಬರುವುದು ಖಾತ್ರಿ ಎಂದು ಅವರ ಜತೆಗಿದ್ದವರು ತಮಾಷೆಗಾದರೂ ಹೇಳುತ್ತಿದ್ದ ಮಾತು ವಾಸ್ತವವೇ ಆಗಿತ್ತು. 2008ರಲ್ಲಿ ನಡೆದ ಹಾವೇರಿ ಗೋಲಿಬಾರ್ ಘಟನೆಯು ಯಡಿಯೂರಪ್ಪನವರ ಬದುಕಿನ ಅತ್ಯಂತ ಭಾವುಕ ಹಾಗೂ ನೋವಿನ ಪ್ರಸಂಗಗಳಲ್ಲಿ ಒಂದು.

5 ದಶಕಗಳ ಸುದೀರ್ಘ ರಾಜಕಾರಣದಲ್ಲಿ, 1983ರಲ್ಲಿ ಮೊದಲ ಬಾರಿಗೆ ಶಾಸನಸಭೆ ಪ್ರವೇಶಿಸಿ, 4 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಯಡಿಯೂರಪ್ಪನವರ ಪಯಣ ಒಬ್ಬ ಧ್ಯಾನಸ್ಥ ಪಯಣಿಗನ ನಿರಂತರ ನಡೆಯಂತಿದೆ. ಪುರಸಭೆಯ ಅಧ್ಯಕ್ಷರಾಗಿ ಆರಂಭವಾದ ಅವರ ಸೇವೆ, ತಮ್ಮ ದಣಿವರಿಯದ ಹೋರಾಟ, ಸಂಘಟನಾ ಕೌಶಲ್ಯ ಹಾಗೂ ರೈತಪರ ನಿಲುವುಗಳ ಮೂಲಕ ಬಗರ್ ಹುಕುಂನಿಂದ ವಿಧಾನಸೌಧದ ಹುಕೂಮತ್‌ವರೆಗೆ (ಅಧಿಕಾರ) ಬಂದು ತಲುಪಿದೆ. ಪಕ್ಷವೊಂದನ್ನು ಶೂನ್ಯದಿಂದ ಅಧಿಕಾರದ ಗದ್ದುಗೆಗೆ ತಂದು ನಿಲ್ಲಿಸಿದ, ಕಲ್ಲು-ಮುಳ್ಳುಗಳ ಹಾದಿಯನ್ನೇ ರಾಜಮಾರ್ಗವನ್ನಾಗಿ ಪರಿವರ್ತಿಸಿಕೊಂಡ ಜನನಾಯಕ ರಾಜ್ಯ ರಾಜಕೀಯ ಚರಿತ್ರೆಯಲ್ಲಿ ಸದಾ ಭಿನ್ನ ಹಾಗೂ ವಿಶಿಷ್ಟ ಮುಖ್ಯಮಂತ್ರಿಯಾಗಿಯೇ ಚಿರಸ್ಥಾಯಿಯಾಗಿ ಉಳಿಯಲಿದ್ದಾರೆ.

ರೈತರ ಪಾಲಿನ ಆಶಾಕಿರಣ ಯಡಿಯೂರಪ್ಪ

ಬಿ.ಎಸ್.ಯಡಿಯೂರಪ್ಪ ಎಂಬ ಹೆಸರೇ ನಮ್ಮ ನಾಡಿನ ಒಂದು ದೊಡ್ಡ ಚೈತನ್ಯಶಕ್ತಿ. ಕರ್ನಾಟಕದ ಅಭಿಜಾತ ಹೋರಾಟಗಾರ, ಉಕ್ಕಿನ ಮನುಷ್ಯ, ಬಡವರ ಬಂಧು, ರೈತ ನಾಯಕ, ದಲಿತರ ಧ್ವನಿ, ಕಾರುಣ್ಯದ ಕಲ್ಪವೃಕ್ಷ ಮತ್ತು ಧೀಮಂತ ನಾಯಕ ಎಂಬ ಅಭಿನಾಮಗಳನ್ನು ಕರ್ನಾಟಕದ ಜನತೆಯಿಂದ ಪಡೆದ ಒಬ್ಬ ಅಪರೂಪದ ಜನನಾಯಕರು ಬಿ.ಎಸ್ .ಯಡಿಯೂರಪ್ಪನವರು.

ದಿನದ 24 ಗಂಟೆಗಳೂ ರಾಜ್ಯದ ಹಿತಕ್ಕಾಗಿ ಶ್ರಮಿಸುತ್ತಿರುವ ಒಬ್ಬ ಕಾಯಕಯೋಗಿ ಯಡಿಯೂರಪ್ಪನವರು ನ್ಯಾಯ ನಿಷ್ಠೂರಿ ದಾಕ್ಷಿಣ್ಯಪರ ನಾನಲ್ಲ ಎಂಬ ಶರಣರ ಸಂದೇಶವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಒಬ್ಬ ಅಪರೂಪದ ರಾಜಕೀಯ ಮುತ್ಸದ್ದಿ. ಎಂದೆಂದಿಗೂ ಭರವಸೆಯನ್ನು ಕಳೆದುಕೊಳ್ಳದ ಲವಲವಿಕೆಯ ಅವರ ಜೀವನೋತ್ಸಾಹ ಅನನ್ಯವಾದದ್ದು. ಕರ್ನಾಟಕದ ಜನಪ್ರಿಯ ನಾಯಕರಾದ ಯಡಿಯೂರಪ್ಪನವರದು ಒಂದು ಆಕರ್ಷಕ ಚುಂಬಕ ವ್ಯಕ್ತಿತ್ವ.

‘ನೀನೊಲಿದಡೆ ಕೊರಡು ಕೊನರುವುದಯ್ಯಾ,
ನೀನೊಲಿದಡೆ ಬರಡು ಹಯನಹುದಯ್ಯಾ,
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ,
ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ.’

ಎಂಬ ಬಸವಣ್ಣನವರ ವಾಣಿಯಂತೆ ಶಿವನ ಒಲುಮೆ, ಗುರುಹಿರಿಯರ ಆಶೀರ್ವಾದ, ಮಾತಾಪಿತೃಗಳ ಹರಕೆ, ಜನ ಸಮುದಾಯದ ಹಾರೈಕೆ ಇವುಗಳಿಗೆ ಪೂರಕವಾಗಿ ಕ್ರಿಯಾಶೀಲತೆ, ಕಠಿಣ ಪರಿಶ್ರಮ ಹಾಗೂ ಮಾನವೀಯ ಕಾಳಜಿ ಇದ್ದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯೂ ಸಹ ತನ್ನ ಸಾರ್ವಜನಿಕ ಬದುಕಿನಲ್ಲಿ ಮುಗಿಲೆತ್ತರಕ್ಕೆ ಬೆಳೆಯಬಹುದು ಎಂಬುದಕ್ಕೆ ಯಡಿಯೂರಪ್ಪನವರ ಜೀವನವೇ ಒಂದು ಉತ್ತಮ ನಿದರ್ಶನ.

1970ರ ಆಸುಪಾಸಿನಲ್ಲಿ ಸಾರ್ವಜನಿಕ ಜೀವನವನ್ನು ಪ್ರವೇಶ ಮಾಡಿದ ಅವರು ಮೊದಲಿಗೆ ಆರ್‌ಎಸ್‌ಎಸ್ ಶಿಕಾರಿಪುರ ಘಟಕದ ಕಾರ್ಯದರ್ಶಿಗಳಾಗಿ ಆನಂತರ ಶಿಕಾರಿಪುರ ಪುರಸಭೆಯ ಸದಸ್ಯರಾಗಿ, ಜನಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ಆನಂತರ ಶಿಕಾರಿಪುರದ ಪುರಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಯಡಿಯೂರಪ್ಪನವರ ರಾಜಕೀಯ ಬದುಕು ಅಲ್ಲಿಂದ ಪ್ರಾರಂಭವಾಗಿ ಅವರ ಹೋರಾಟ ಮತ್ತು ಸಂಘಟನಾ ಕೌಶಲ್ಯದಿಂದ ಅದು ಇಡೀ ಕರ್ನಾಟಕಕ್ಕೆ ವಿಸ್ತೃತಗೊಂಡಿತು. 1977ರಲ್ಲಿ ಭಾರತದ ಪ್ರಜಾಪ್ರಭುತ್ವಕ್ಕೆ ಮಾರಕವಾಗುವಂತಹ ತುರ್ತು ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷವು ರಾಷ್ಟ್ರದ ಮೇಲೆ ಹೇರಿದಾಗ ಅದನ್ನು ವಿರೋಧಿಸಿ ಜೈಲುವಾಸ ಅನುಭವಿಸಿ ಅಂದಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರ ತೀರ್ಮಾನದ ವಿರುದ್ಧ ಸಿಡಿದೆದ್ದ ಯಡಿಯೂರಪ್ಪನವರು ತಮ್ಮ ಹೋರಾಟದ ಬದುಕಿನಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಸಮಾಜವಾದಿ ಚಳುವಳಿಯ ಶಾಂತಗೇರಿ ಗೋಪಾಲಗೌಡರ ರೈತಪರವಾದ ಹೋರಾಟದ ಕೆಚ್ಚನ್ನು ಮುಂದುವರೆಸಿಕೊಂಡು ಬಂದ ಯಡಿಯೂರಪ್ಪನವರ ಸಾರ್ವಜನಿಕ ಬದುಕು ಪ್ರಾರಂಭವಾದದ್ದೇ ರೈತಪರ ಹೋರಾಟದ ಹಿನ್ನಲೆಯಲ್ಲಿ.

ಮೊದಲ ಬಾರಿಗೆ 2007ರಲ್ಲಿ ನವಂಬರ್ 12 ರಿಂದ ನವಂಬರ್ 19ರವರೆಗೆ, ಆನಂತರ 2008 ಮೇ 30 ರಿಂದ 2011ರ ಜುಲೈ 31 ರವರಿಗೆ, ಮೂರನೇ ಬಾರಿಗೆ ಮೇ 17 2018 ರಿಂದ ಮೇ 19 2018 ರವರಿಗೆ ಮತ್ತೆ ಜುಲೈ 26 2019 ರಿಂದ

ಡಾ. ಸಿ. ಸೋಮಶೇಖರ, ಐಎಎಸ್ (ನಿ)
ಮಾಜಿ ಅಧ್ಯಕ್ಷರು
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

28 ಜುಲೈ 2021 ರವರಿಗೆ ನಾಲ್ಕನೆಯ ಬಾರಿಗೆ ರಾಜ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ತಮ್ಮ ಮುಖ್ಯಮಂತ್ರಿ ಸ್ಥಾನದ ಅವಧಿಯಲ್ಲಿ ಕೈಗೊಂಡ ರೈತಪರ ನಿರ್ಧಾರಗಳು, ರೂಪಿಸಿದ ಜನಪರ ಯೋಜನೆಗಳು, ಅನುಷ್ಠಾನಗೊಳಿಸಿದ ಪ್ರಗತಿಪರ ಕಾರ್ಯಕ್ರಮಗಳು ಕರ್ನಾಟಕ ರಾಜ್ಯದ ಸಮಗ್ರ ವಿಕಾಸಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

ಇಡೀ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಶೂನ್ಯ ಬಡ್ಡಿದರದಲ್ಲಿ ರೈತರಿಗೆ ಸಾಲಸೌಲಭ್ಯವನ್ನು ಒದಗಿಸುವ ಕ್ರಾಂತಿಕಾರಕ ರೈತಪರ ಯೋಜನೆಯನ್ನು ಜಾರಿಗೊಳಿಸಿದ ಅವರ ದಿಟ್ಟ ನಿರ್ಧಾರ ಅವರಿಗೆ ರೈತರ ಬಗ್ಗೆಯಿರುವ ಅಪಾರವಾದ ಕಾಳಜಿಯ ಸಂಕೇತವಾಗಿದೆ. ರೈತರ ಭೂಮಿಯಲ್ಲಿ ಇಳುವರಿ ಹೆಚ್ಚಳಕ್ಕಾಗಿ ಅವರು ಪ್ರಾರಂಭಿಸಿದ ಭೂಚೇತನ ಯೋಜನೆ, ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನೀಡಲು ಸುಮಾರು ಒಂದು ಸಾವಿರ ಕೋಟಿ ರು.ಗಳ ಆವರ್ತನಿಧಿ ಸ್ಥಾಪನೆಯ ಮೂಲಕ ಕೃಷಿಕರ ಬಾಳಿಗೆ ಆರ್ಥಿಕ ಭದ್ರತೆಯನ್ನು ತಂದುಕೊಟ್ಟ ಅವರ ರೈತಪರ ನಿರ್ಧಾರ, ರೈತರ ಕೃಷಿ ಪಂಪ್ ಸೆಟ್ಟುಗಳಿಗೆ ಉಚಿತ ವಿದ್ಯುತ್ ಪೂರೈಕೆ, ಸುವರ್ಣಭೂಮಿ, ಸುವರ್ಣ ಗ್ರಾಮ ಯೋಜನೆಗಳ ಮೂಲಕ ಗ್ರಾಮಗಳ ಸರ್ವಾಂಗೀಣ ವಿಕಾಸಕ್ಕೆ ಅವರು ಕೊಟ್ಟಂತಹ ಆದ್ಯತೆ, ಕರ್ನಾಟಕದ ಜನತೆ ಬೇಸಿಗೆಯಲ್ಲಿಯೂ ಕತ್ತಲನ್ನು ಕಾಣದೆ ಬೆಳಕನ್ನು ಹೊಂದಲು ಅವರು ಜಾರಿಗೊಳಿಸಿದ ನಿರಂತರ ಜ್ಯೋತಿ ಯೋಜನೆ ನೂತನವಾಗಿ ಪ್ರಥಮ ಬಾರಿಗೆ ಪ್ರಾರಂಭಿಸಿದ ತೋಟಗಾರಿಕೆ ವಿಶ್ವವಿದ್ಯಾನಿಲಯದ ಸ್ಥಾಪನೆ, ವಿವಿಧ ಜಿಲ್ಲೆಗಳಲ್ಲಿ ತೋಟಗಾರಿಕೆ ಕಾಲೇಜುಗಳ ಸ್ಥಾಪನೆ, ಸಾವಯವ ಕೃಷಿ ಪ್ರೋತ್ಸಾಹಕ್ಕಾಗಿ ಸುಮಾರು ಇನ್ನೂರು ಕೋಟಿ ರು.ಗಳ ಅನುದಾನದೊಂದಿಗೆ ಸಾವಯವ ಕೃಷಿ ಮಿಷನ್ ಸ್ಥಾಪನೆ, ಹಾಲು ಉತ್ಪಾದಕರಿಗೆ ನೀಡಿದ ಪ್ರೋತ್ಸಾಹ ಧನ, ನೇಕಾರರು ಮತ್ತು ಮೀನುಗಾರಿಕೆ ವೃತ್ತಿಯವರಿಗೆ ಅವರು ನೀಡಿದ ಆರ್ಥಿಕ ಪ್ರೋತ್ಸಾಹ, ಸಹಕಾರ ಸಂಘಗಳ ಸದಸ್ಯರುಗಳಿಗಾಗಿ ಕೈಗೊಂಡ ಯಶಸ್ವಿನಿ ಆರೋಗ್ಯ ಯೋಜನೆಯ ಅನುಷ್ಠಾನ, ಕೆರೆಗಳ ಪುನಶ್ಚೇತನದಂತಹ ಯೋಜನೆಗಳೊಂದಿಗೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿದ ಹೆಗ್ಗಳಿಕೆ, ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯದ ಹೆಚ್ಚಳದ ಬಗ್ಗೆ ಕೈಗೊಂಡ ಯೋಜನೆಗಳು ಪೂರ್ಣಗೊಳ್ಳುವಲ್ಲಿ ಅವರು ತೋರಿದ ನಿರ್ಧಾರ, ರಾಜ್ಯದಲ್ಲಿ ಸಾರಿಗೆ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಅವರು ನೀಡಿದ ಪ್ರೋತ್ಸಾಹ, ಶಿಕ್ಷಣ ಕ್ಷೇತ್ರದಲ್ಲಿ ಹತ್ತಾರು ಹೊಸ ಇಂಜಿನಿಯರಿಂಗ್ ಕಾಲೇಜುಗಳಿಗೆ ಅವಕಾಶ, ಸುಮಾರು ಇನ್ನೂರಕ್ಕೂ ಹೆಚ್ಚು ಪ್ರಥಮದರ್ಜೆ ಹೊಸ ಕಾಲೇಜುಗಳ ಸ್ಥಾಪನೆ, ಆರೋಗ್ಯ, ವಸತಿ, ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿಯೂ ಅವರು ರೂಪಿಸಿದ ಹೊಸ ಕ್ರಾಂತಿಕಾರಕ ಯೋಜನೆಗಳು ನಾಡಿನ ಸಮಗ್ರ ಅಭಿವೃದ್ಧಿಯ ದಿಸೆಯಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸಿವೆ.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳ ಮೂಲಕ ರಾಜ್ಯದ ಶೋಷಿತ ವರ್ಗಗಳ ವಿಕಾಸಕ್ಕಾಗಿ ಯಡಿಯೂರಪ್ಪನವರು ರೂಪಿಸಿ ಅನುಷ್ಠಾನಗೊಳಿಸಿದ ಯೋಜನೆಗಳು ದಲಿತರ, ಹಿಂದುಳಿದ ವರ್ಗದವರ ಮತ್ತು ಅಲ್ಪಸಂಖ್ಯಾತರ ಕಲ್ಯಾಣದ ಬಗ್ಗೆ ಅವರಿಗೆ ಇರುವ ಮಾನವೀಯ ಕಳಕಳಿಯನ್ನು ಬಿಂಬಿಸುತ್ತದೆ. ಪಾರದರ್ಶಕ ಆಡಳಿತ ನೀಡುವಲ್ಲಿ ಅವರ ಅವಧಿಯಲ್ಲಿ ರೂಪಿಸಿದ ಸಕಾಲ ಯೋಜನೆಯ ಅಧಿನಿಯಮ ರಚನೆ, ರಾಜ್ಯದಾದ್ಯಂತ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸ್ಥಾಪನೆ ಹಾಗೂ ಎಲ್ಲಕ್ಕಿಂತಲೂ ವಿಶಿಷ್ಟವಾದ ಜನರ ಬಳಿಗೇ ಆಡಳಿತ ಯಂತ್ರವನ್ನು ಕೊಂಡೊಯ್ದು ವಿವಿಧ ಸೇವೆಯನ್ನು ಅವರಿಗೆ ಅವರ ಸಮೀಪದಲ್ಲಿಯೇ ಒದಗಿಸುವಲ್ಲಿ ಪ್ರಾರಂಭಿಸಿದ ಜನಸಂವೇದನೆಯ ಜನಸ್ಪಂದನ ಕಾರ್ಯಕ್ರಮಗಳು ಯಡಿಯೂರಪ್ಪನವರ ಜನಪರವಾದ ಜನಪ್ರಿಯ ಕಾರ್ಯಕ್ರಮವಾಗಿ ರಾಜ್ಯದಾದ್ಯಂತ ಪ್ರಶಂಸೆಗೆ ಪಾತ್ರವಾಗಿವೆ.

‘ಏಳು ಎದ್ದೇಳು ಗುರಿಮುಟ್ಟುವವರೆಗೆ ನಿಲ್ಲಬೇಡ’ ಎಂಬ ಸ್ವಾಮಿವಿವೇಕಾನಂದರ ಸಂದೇಶದಂತೆ ಸದಾಕಾಲ ತಾವು ಅಂದುಕೊಂಡಿದ್ದನ್ನು ಸಾಧಿಸಿಯೇ ತೀರಬೇಕೆಂಬ ಹಠವಾದಿ, ಛಲವಾದಿ ಯಡಿಯೂರಪ್ಪನವರು. ಅವರು ಅನ್ಯಾಯದ ವಿರುದ್ಧ ಸಿಡಿದೇಳುವಂತಹ ಪ್ರವೃತ್ತಿ ಉಳ್ಳವರು. ಅವರು ಸಿಡುಕಿನ ಸ್ವಭಾವದವರು ಎಂದು ಕೆಲವು ಜನರು ಹೇಳುವುದುಂಟು. ಎಷ್ಟೋ ಜನ ಹಿರಿಯ ನಾಯಕರುಗಳೇ ಅವರ ಮುಂದೆ ನಿಂತು ಮಾತನಾಡಲು ಹಿಂಜರಿಯುತ್ತಾರೆ. ಆದರೆ ಹತ್ತಿರದಿಂದ ಅವರನ್ನು ನೋಡಿದವರಿಗೆ ಅವರೊಬ್ಬ ಸಹೃದಯಿ ಹಾಗೂ ಸ್ನೇಹಜೀವಿ ಎಂಬುದು ಗೊತ್ತಾಗುತ್ತದೆ.

‘ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು - ಮಂಕುತಿಮ್ಮ’

ಎಂಬ ದಾರ್ಶನಿಕ ಕವಿ ಡಿ.ವಿ.ಜಿ ಯವರ ಕವನಕ್ಕೆ ಅನ್ವರ್ಥವಾದ ವ್ಯಕ್ತಿತ್ವ ಹೊಂದಿದವರು ಬಿ.ಎಸ್.ಯಡಿಯೂರಪ್ಪನವರು. ಎಂತಹ ಕಷ್ಟಗಳು, ಸವಾಲುಗಳು ಎದುರಾಗಿದ್ದರೂ ಅತ್ಯಂತ ಸ್ಥೈರ್ಯದಿಂದ, ಆತ್ಮಸಂಯಮದಿಂದ ಅವುಗಳನ್ನು ಮೆಟ್ಟಿನಿಂತು ತಮ್ಮ ಜನಸೇವೆಯ ಯಶಸ್ವಿ ಬದುಕನ್ನು ರೂಪಿಸಿಕೊಂಡ ಅವರ ಬದುಕು ಬೆಂಕಿಯಲ್ಲಿ ಅರಳಿದ ಹೂವಿನಂತೆ. ಸುಮಾರು ಐದು ದಶಕಗಳ ತಮ್ಮ ಸಾರ್ವಜನಿಕ ಬದುಕಿನಲ್ಲಿ ಎಂದೂ ಸಹ ಅವರು ಅಹಂಕಾರದಿಂದ ಬೀಗಿದವರಲ್ಲ. ಎನಗಿಂತ ಕಿರಿಯರಿಲ್ಲ ಎನ್ನುವ ಶರಣರ ವಾಣಿಯಂತೆ ಸರ್ವರಿಗೆ ಸಮಪಾಲು - ಸರ್ವರಿಗೆ ಸಮಬಾಳು ಎನ್ನುವ ಸಿದ್ಧಾಂತವನ್ನು ತಮ್ಮ ಆಡಳಿತದಲ್ಲಿ ರೂಢಿಸಿಕೊಂಡ ಅವರು ಜಾತಿ, ಮತ, ಧರ್ಮಗಳಿಗೆ ಅತೀತವಾದ ಸರ್ವಧರ್ಮ ಸಮನ್ವಯದ ಸೂತ್ರವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರು. ನಾಡಿನ ಎಲ್ಲ ಸಮುದಾಯಗಳ ಗೌರವ ಮತ್ತು ಪ್ರೀತಿಗೆ ಪಾತ್ರರಾದ ಅವರು ರಾಜಕೀಯ ಬದುಕಿನಲ್ಲಿ ವಿರೋಧಿಗಳನ್ನು ಕಂಡಿರಬಹುದು. ಆದರೆ ಅವರು ತಮ್ಮ ಬದುಕಿನಲ್ಲಿ ಯಾರನ್ನೂ ಸಹ ಶತ್ರುಗಳಂತೆ ಕಂಡವರಲ್ಲ. ತಮ್ಮ ನೇರನುಡಿ, ನಿರ್ಭೀತವಾದ ಧೋರಣೆ, ಯಾವುದೇ ಸಂದರ್ಭದಲ್ಲೂ ತಾವು ನಂಬಿದ ಮೌಲ್ಯಗಳಿಗಾಗಿ ರಾಜೀ ಮಾಡಿಕೊಳ್ಳದ ಅವರ ಧೀಮಂತ ವ್ಯಕ್ತಿತ್ವ ನಾಡಿನ ಸಾರ್ವಜನಿಕ ಬದುಕಿನಲ್ಲಿ ಒಂದು ಆದರ್ಶದ ಇತಿಹಾಸವನ್ನೇ ಸೃಷ್ಟಿ ಮಾಡಿದೆ.

ಇದೀಗ ಯಡಿಯೂರಪ್ಪನವರು ಸಾರ್ವಜನಿಕ ಸೇವ ಕ್ಷೇತ್ರಕ್ಕೆ ಬಂದು 50 ವರ್ಷಗಳು ಸಂದಿವೆ. ಈ ಐತಿಹಾಸಿಕ ಸಂದರ್ಭದಲ್ಲಿ ಇದೇ ಮೇ 9ರಂದು ಅವರಿಗೆ ಚಿತ್ರದುರ್ಗದಲ್ಲಿ ಅವರ ಅಸಂಖ್ಯಾತ ಅಭಿಮಾನಿಗಳು ‘‘ಅಭಿಮಾನೋತ್ಸವ’’ ಎಂಬ ಶೀರ್ಷಿಕೆಯಡಿಯಲ್ಲಿ ಅವರಿಗೆ ನಾಡಿನ ಜನತೆಯ ಪರವಾಗಿ ಗೌರವ ಅಭಿನಂದನೆಯನ್ನು ಕೃತಜ್ಞತಾ ಪೂರಕವಾಗಿ ಸಲ್ಲಿಸುತ್ತಿರುವುದು ತುಂಬಾ ಹೆಮ್ಮೆಯ ವಿಷಯ. ಸಾರ್ವಜನಿಕ ಸೇವೆಗೆ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಧೀಮಂತ ನಾಯಕರಾದ ಯಡಿಯೂರಪ್ಪನವರು ಶತಾಯುಷಿಗಳಾಗಲಿ ಎಂದು ಹಾರೈಸುತ್ತೇನೆ.

ಹೋರಾಟದ ಬದುಕಿನ ಸಮರ್ಥ ನಾಯಕ, ಜನಸೇವೆಯೇ ಬದುಕಿನಕಾಯಕ ಬಿಎಸ್‌ವೈ

ರಾಜಕೀಯ ಎಂದರೆ ಬೇರೆ ಕ್ಷೇತ್ರಗಳಂತೆ ಅಲ್ಲ. ಸಂಬಳಕ್ಕಾಗಿ ಉದ್ಯೋಗ ಪಡೆದು ಬದುಕು ಕಟ್ಟಿಕೊಳ್ಳುವಂತಹ ಕ್ಷೇತ್ರ ಇದಲ್ಲ.ರಾಜಕೀಯ ಎಂದರೆ ಹೋರಾಟ, ಸಂಘರ್ಷ, ಒತ್ತಡ. ಇಲ್ಲಿ ಅಧಿಕಾರ ಪಡೆಯುವುದು ಜನತಾ ಜನಾರ್ದನರನ್ನು ಅವಲಂಬಿಸಿರುತ್ತದೆ. ಅಂತಹ ಜನರ ಮನಸ್ಸನ್ನು ಸೆಳೆದು ಒಂದೆರಡು ಬಾರಿ ಗೆಲ್ಲಬಹುದು. ಅನೇಕ ದಶಕಗಳ ಕಾಲ ಆ ಪ್ರೀತಿಯನ್ನು ಹಿಡಿದಿಟ್ಟುಕೊಳ್ಳುವುದು ಒಬ್ಬ ಸಮರ್ಥ ನಾಯಕನಿಗೆ ಮಾತ್ರ ಸಾಧ್ಯವಾಗುತ್ತದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಅಂತಹ ಅನೇಕ ನಾಯಕರು ಬೆಳೆದಿದ್ದಾರೆ. ಅಂಥವರಲ್ಲಿ ಹಲವರು ರಾಜಕೀಯ ಪ್ರವೇಶ ಮಾಡಿದ್ದಾರೆ. ಭಾರತೀಯ ಜನತಾ ಪಾರ್ಟಿ ಅಂತಹ ಹಲವು ನಾಯಕರನ್ನು ಹುಟ್ಟುಹಾಕಿದೆ. ಆ ಸಾಲಿನಲ್ಲಿ ಬಿ.ಎಸ್.ಯಡಿಯೂರಪ್ಪ ಪ್ರಮುಖರು.

ರಾಜಕೀಯದಲ್ಲಿ ಬೆಳೆದು ಸುದೀರ್ಘ ಕಾಲ ಜನರ ಮನಸ್ಸಲ್ಲಿ ಪಡಿಯಚ್ಚು ಮೂಡಿಸಬೇಕೆಂದರೆ ದಶಕಗಳ ಕಾಲ ಕೆಲಸ ಮಾಡಬೇಕು, ಸಂಘಟನೆ ಮಾಡಬೇಕು, ಜನರ ಮನಸ್ಸನ್ನು ಒಂದೇ ಗುರಿಯ ಕಡೆ ಹೋಗುವಂತೆ ಪ್ರೇರೇಪಿಸಬೇಕು. ಅದರಲ್ಲೂ ಕರ್ನಾಟಕದಂತಹ ಸುಶಿಕ್ಷಿತರ ನಾಡಿನಲ್ಲಿ ಜನರ ಮನಸ್ಸನ್ನು ಗೆಲ್ಲುವುದು ಅಷ್ಟು ಸುಲಭದ ಮಾತಲ್ಲ. ಇಲ್ಲಿ ಜನಸೇವೆ ಹಾಗೂ ಅಭಿವೃದ್ಧಿಯ ದೃಷ್ಟಿಕೋನವೇ ರಾಜಕಾರಣಿಗಳನ್ನು ಅಳೆಯುವ ಮಾನದಂಡ. ಅಂತಹ ಮಾನದಂಡವನ್ನು ಬಿ.ಎಸ್.ಯಡಿಯೂರಪ್ಪ ದಶಕಗಳಿಂದ ಕಾಪಾಡಿಕೊಂಡು ಬಂದಿದ್ದಾರೆ. ಅವರ ಐವತ್ತು ವರ್ಷಗಳ ಸುದೀರ್ಘ ರಾಜಕಾರಣವನ್ನು ಸ್ಮರಿಸಲು ಬಿಜೆಪಿ ವತಿಯಿಂದ ಅಭಿಮಾನೋತ್ಸವ ಸಮಾರಂಭ ಏರ್ಪಡಿಸ

ಆರ್.ಅಶೋಕ
ಪ್ರತಿಪಕ್ಷದ ನಾಯಕರು

ಲಾಗಿದೆ. ಇದು ರಾಜ್ಯದ ಯಶಸ್ವಿ ನಾಯಕನಿಗೆ ಸಲ್ಲಿಸುತ್ತಿರುವ ಸೂಕ್ತ ಗೌರವ.

ಬಿ.ಎಸ್.ಯಡಿಯೂರಪ್ಪ ಕುಟುಂಬ ರಾಜಕಾರಣದಿಂದ ಬಂದವರಲ್ಲ. ಅವರು ಸಾಮಾನ್ಯ ಹಿನ್ನೆಲೆ ಇದ್ದವರು. ರೈತ ಕುಟುಂಬದಲ್ಲಿ ಹುಟ್ಟಿದ ಅವರು ಸಾಮಾನ್ಯರಂತೆಯೇ ಉದ್ಯೋಗ ಮಾಡಿಕೊಂಡು ಬದುಕು ಸಾಗಿಸುತ್ತಿದ್ದರು. ಆದರೆ ಅವರಲ್ಲಿ ಸಂಘಟನಾ ಶಕ್ತಿ ಇತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಅವರು ತರಬೇತಿ ಪಡೆದಾಗ ಅವರ ಸಂಘಟನಾ ಚತುರತೆ ಹೊರಗೆ ಬಂತು. ಭಾರತೀಯ ಜನಸಂಘವಾಗಿ ಆರಂಭವಾಗಿ, ನಂತರ ಬಿಜೆಪಿಯಾದ ಪಕ್ಷವನ್ನು ಸಂಘಟಿಸಲು ಅನೇಕ ನಾಯಕರು ಶ್ರಮಿಸಿದರು. ಶಿವಮೊಗ್ಗದಲ್ಲಿ ಯಡಿಯೂರಪ್ಪನವರು ಸೈಕಲ್ ಹತ್ತಿ ಊರೂರು ಸುತ್ತಿ ಪಕ್ಷವನ್ನು ಕಟ್ಟಿದರು. ಆಗಿನ ಕಾಲದಲ್ಲಿ ‘ಕರ್ನಾಟಕ ಕೇಸರಿ’ ಎಂದೇ ಹೆಸರಾಗಿದ್ದ ಜಗನ್ನಾಥ್ ರಾವ್ ಜೋಶಿ ಪಕ್ಷವನ್ನು ಪ್ರಬಲವಾಗಿ ಕಟ್ಟತೊಡಗಿದ್ದರು. ಆದರೆ ಅವರಿಗೂ ಯುವಜನರ ತಂಡ ಅಪೇಕ್ಷೆ ಇತ್ತು. ಯಡಿಯೂರಪ್ಪ, ಅನಂತಕುಮಾರ್ ಹಲವಾರು ಯುವಕರು ಆಗ ಮುಂದೆ ಬಂದು ಪಕ್ಷ ಸಂಘಟನೆಯಲ್ಲಿ ತೊಡಗಿದರು. ಕ್ರಮೇಣವಾಗಿ ಬಿಜೆಪಿ ಬೆಳೆದು, ವಿಧಾನಸಭೆಯಲ್ಲಿ ಸದಸ್ಯರ ಸಂಖ್ಯೆ ಹೆಚ್ಚತೊಡಗಿತು.

2008 ರ ಚುನಾವಣೆ ಬಿಜೆಪಿಯ ದಿಕ್ಕನ್ನೇ ಬದಲಿಸಿಬಿಟ್ಟಿತು. ಆಗ ಜನರಿಗೆ ರಾಜಕೀಯದಲ್ಲಿ ಹೊಸತು ಬೇಕಾಗಿತ್ತು. ಆದ್ದರಿಂದ ಬಿಜೆಪಿಯೇ ಸೂಕ್ತ ಪಕ್ಷ ಎಂದು ಜನರು ಮನಗಂಡರು. ಬಿ.ಎಸ್.ಯಡಿಯೂರಪ್ಪನವರು ಪಕ್ಷದ ನೇತೃತ್ವ ವಹಿಸಿಕೊಂಡು ಕಾರ್ಯಕರ್ತರ ಪಡೆಯನ್ನೇ ಕಟ್ಟಿದರು. ಕಾರ್ಯಕರ್ತರು ಹಾಗೂ ಸ್ಥಳೀಯ ಮುಖಂಡರು ಚುರುಕಾಗಿ ಕೆಲಸ ಮಾಡಿ ಬಿಜೆಪಿಯೇ ಈಗಿನ ಅಗತ್ಯ ಎಂಬುದನ್ನು ಜನರಿಗೆ ಮನದಟ್ಟು ಮಾಡಿದರು. 2008 ರಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬಂದು, ಅದರ ನೇತೃತ್ವವನ್ನು ಯಡಿಯೂರಪ್ಪ ವಹಿಸಿ ಕೊಂಡರು. ಈ ಮೂಲಕ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬಿಜೆಪಿ ಸರಕಾರ ರಚನೆ ಯಾಯಿತು. ಕಾಂಗ್ರೆಸ್ ಹಾಗೂ ಇತರೆ ಪಕ್ಷಗ ಳನ್ನು ಹೊರತುಪಡಿಸಿ ಕೂಡ ಒಂದು ಪಕ್ಷ ಸರ್ಕಾರ ರಚಿಸುವ ಸಾಮರ್ಥ್ಯ ಹೊಂದಿದೆ ಎಂಬುದು ಸಾಬೀತಾಯಿತು. ಆಗಿನ ಕಾಲಕ್ಕೆ ರಾಜ್ಯ ರಾಜಕೀಯದಲ್ಲಿ ಹೊಸ ಮನ್ವಂತರವೇ ಸೃಷ್ಟಿಯಾಗಿತ್ತು.

ಯಡಿಯೂರಪ್ಪನವರ ಶಕ್ತಿ ಇದ್ದಿದ್ದು ಸಂಘಟನೆ ಹಾಗೂ ಜನರೊಂದಿಗಿನ ನೇರ ಸಂಪರ್ಕದಲ್ಲಿ. ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದ ಅವರು ಜನರೊಂದಿಗೆ ನೇರ ಸಂಪರ್ಕ ಸಾಧಿಸುತ್ತಿದ್ದರು. ಕಚೇರಿಯಲ್ಲಿ ಕುಳಿತು ಕಾಲಹರಣ ಮಾಡದೆಯೇ ಸದಾ ತಳಮಟ್ಟದಲ್ಲೇ ಕೆಲಸ ಮಾಡುತ್ತಿದ್ದರು. ಇದರಿಂದಾಗಿ ಅವರ ವ್ಯಕ್ತಿತ್ವ ಹಾಗೂ ಬಿಎಸ್‌ವೈ ಎಂಬ ಹೆಸರು ಜನರ ಮನಸ್ಸಲ್ಲಿ ಗಟ್ಟಿಯಾಗಿ ಉಳಿಯುವಂತಾಯಿತು.

1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅವರು ಹೋರಾಟ ಮಾಡಿದ್ದರಿಂದ 45 ದಿನಗಳ ಕಾಲ ಸೆರೆವಾಸ ಅನುಭವಿಸಿದರು. ಇದು ಅವರ ಬದುಕಿನ ಪ್ರಮುಖ ಹೋರಾಟವಾಗಿತ್ತು. ಆಗ ಜೀತ ಪದ್ಧತಿಯಿಂದಾಗಿ ಸಣ್ಣ ರೈತರು, ಬಡಜನರು ಸಂಕಷ್ಟಕ್ಕೆ ಒಳಗಾಗಿದ್ದರು. ಅಂತಹ 1,700ಮಂದಿಯನ್ನು ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸುವಲ್ಲಿ ಅವರ ಕೊಡುಗೆ ದೊಡ್ಡದಿದೆ. ಬಗರ್ ಹುಕುಂ ರೈತರ ಪರವಾಗಿ ಹೋರಾಟ, 1987 ರಲ್ಲಿ ಶಿಕಾರಿಪುರ ತಾಲ್ಲೂಕಿನಾದ್ಯಂತ ಸೈಕಲ್ ಜಾಥಾ ನಡೆಸಿ, ಬರಗಾಲದ ವಿರುದ್ಧ ಹೋರಾಟ ಹೀಗೆ ಅವರ ಬದುಕಿನಲ್ಲಿ ಹೋರಾಟಗಳ ನೂರಾರು ಹೆಜ್ಜೆಗಳಿವೆ.

ಯಡಿಯೂರಪ್ಪ ಎಂದರೆ ಸದಾ ಸಿಡಿಮಿಡಿಗೊಳ್ಳುವ ರಾಜಕಾರಣಿ ಎಂಬ ಆರೋಪವಿದೆ. ಆದರೆ ವಾಸ್ತವದಲ್ಲಿ ಅವರು ಮಾತ್ರ ಹೃದಯದ ರಾಜಕಾರಣಿ. ಯಾರೇ ಸಂಕಷ್ಟವನ್ನು ಹೇಳಿಕೊಂಡರೂ ಅವರಿಗಾಗಿ ಕಣ್ಣೀರಿಟ್ಟು ಕೂಡಲೇ ಸ್ಪಂದಿಸುವ ಗುಣ ಅವರಲ್ಲಿದೆ. ಮುಖ್ಯಮಂತ್ರಿ ಸೇರಿದಂತೆ ಅನೇಕ ದೊಡ್ಡ ಹುದ್ದೆಗಳನ್ನು ಅವರು ಹೊಂದಿದ್ದರೂ, ಆ ಅಹಂ ಅವರಲ್ಲಿ ಎಂದೂ ಬಂದಿಲ್ಲ. ಯಾರೇ ಬಂದರೂ ಅವರ ಬಳಿ ತಾಳ್ಮೆಯಿಂದ ಮಾತಾಡಿ ಕುಶಲೋಪರಿ ವಿಚಾರಿಸುತ್ತಾರೆ.ಜನರ ಕಷ್ಟಗಳಿಗೆ ಕೂಡಲೇ ಮಿಡಿಯುವ ಅವರ ಗುಣದಿಂದಲೇ ಅವರು ಜನರಿಗೆ ತೀರಾ ಆಪ್ತರಾಗಿದ್ದಾರೆ. ಯುವ ರಾಜಕಾರಣಿಗಳು ರಾಜಕೀಯ ಪ್ರವೇಶಿಸುವ ಮುನ್ನ ಬಿ.ಎಸ್.ಯಡಿಯೂರಪ್ಪನವರ ಬದುಕು, ಸಾಧನೆ, ಹೋರಾಟಗಳನ್ನು ಅಧ್ಯಯನ ಮಾಡುವುದು ಅಗತ್ಯ.

ಗ್ರಾಮದಿಂದ - ಗದ್ದುಗೆವರೆಗೆ ಬಿಎಸ್‌ವೈ

ಬಿ.ಎಸ್. ಯಡಿಯೂರಪ್ಪ ಅವರು ಫೆಬ್ರವರಿ 27, 1943ರಂದು ಮಂಡ್ಯ ಜಿಲ್ಲೆಯ ಬುಕ್ಕನಕೆರೆ ಗ್ರಾಮದಲ್ಲಿ ಜನಿಸಿದರು. ಅವರ ಕುಟುಂಬ ಕೃಷಿ ಹಿನ್ನೆಲೆಯದ್ದಾಗಿದ್ದು ಸರಳ ಜೀವನ ಶೈಲಿಯಿಂದ ಕೂಡಿತ್ತು. ತಂದೆ-ಸಿದ್ದಲಿಂಗಯ್ಯ, ತಾಯಿ-ಪುತ್ತತಾಯಮ್ಮ ಇವರು ಶ್ರಮ ಮತ್ತು ನೈತಿಕ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಆರ್ಥಿಕವಾಗಿ ಸೀಮಿತ ಪರಿಸ್ಥಿತಿಯಲ್ಲೇ ಬೆಳೆದ ಯಡಿಯೂರಪ್ಪನವರು ಬಾಲ್ಯದಿಂದಲೇ ಓದು ಮತ್ತು ಶಿಸ್ತು ಇವರ ಜೀವನದ ಪ್ರಮುಖ ಅಂಶವಾಗಿತ್ತು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಊರಲ್ಲೇ ಪೂರ್ಣಗೊಳಿಸಿ. ನಂತರ ತಮ್ಮ ಉನ್ನತ ಶಿಕ್ಷಣವನ್ನು ಶಿವಮೊಗ್ಗ ನಗರದ ಎಲ್.ವಿ.ಡಿ. ಕಾಲೇಜಿನಲ್ಲಿ ಪೂರೈಸಿ ಬಿ.ಎ. ಪದವಿಯನ್ನು ಪಡೆದರು. ವಿದ್ಯಾರ್ಥಿ ಜೀವನದಲ್ಲಿಯೇ ಸಮಾಜದ ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿದ್ದ ಅವರು ಹಲವು ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದರು. ನಂತರದ ದಿನಗಳಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೊತೆ ಸಂಪರ್ಕ ಹೊಂದಿದರು ಇದು ಅವರ ಜೀವನದ ವ್ಯಕ್ತಿತ್ವ ಮತ್ತು ನಾಯಕತ್ವದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿತು. ನಂತರ ಭಾರತೀಯ ಜನತಾ ಪಕ್ಷದಲ್ಲಿ ಕಾರ್ಯಕರ್ತರಾಗಿ ತಮ್ಮ ರಾಜಕೀಯ ಪಯಣವನ್ನು ಆರಂಭಿಸಿದರು.

ಯಡಿಯೂರಪ್ಪ ಅವರ ಜೀವನದಲ್ಲಿ ಜೀತ ಪದ್ಧತಿಯ ವಿರುದ್ಧದ ಹೋರಾಟ ಒಂದು ಮಹತ್ವದ ಅಧ್ಯಾಯವಾಗಿದೆ. ಅವರು ಸಾಮಾನ್ಯ ರೈತ ಕುಟುಂಬದಿಂದ ಬಂದವರು. ಬಾಲ್ಯದಿಂದಲೇ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ಅವರು ನೇರವಾಗಿ ಕಂಡಿದ್ದರು. ಸಾಲದ ಬಾಧ್ಯತೆಯಿಂದ ಅಥವಾ ಸಾಮಾಜಿಕ ಒತ್ತಡದಿಂದ ಬಡವರು ಶ್ರೀಮಂತರ ಮನೆಗಳಲ್ಲಿ ಅಥವಾ ಜಮೀನಿನಲ್ಲಿ ಕಡಿಮೆ ವೇತನಕ್ಕೆ ಅಥವಾ ವೇತನವಿಲ್ಲದೆ ಕೆಲಸ ಮಾಡುವ ದಾಸ್ಯ ವ್ಯವಸ್ಥೆಯ ವಿರುದ್ಧ ಅವರು ಹೋರಾಟ ಆರಂಭಿಸಿದರು. ಗ್ರಾಮಗಳಲ್ಲಿನ ಜನರನ್ನು ಸಂಘಟಿಸಿ, ಜೀತಕ್ಕೆ ಒಳಗಾಗಿದ್ದ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿ ನಿಮ್ಮ ಹಕ್ಕುಗಳನ್ನು ಅರಿತುಕೊಳ್ಳಿ ಎಂಬ ಸಂದೇಶವನ್ನು ಸಾರಿದರು. ಬಡ ರೈತರು ಹಾಗೂ ಕಾರ್ಮಿಕರನ್ನು ಒಗ್ಗೂಡಿಸಿ ಸರಿಯಾದ ಕೂಲಿ ಮತ್ತು ಮಾನವೀಯ ಜೀವನದ ಹಕ್ಕಿಗಾಗಿ ಸಮಾಜದಲ್ಲಿ ಸಮಾನತೆ ಮತ್ತು ಗೌರವದ ಅರಿವು ಮೂಡಿಸುವ ಕಾರ್ಯವನ್ನು ಅವರು ಮುಂದುವರೆಸಿದರು. ಈ ಹೋರಾಟದಿಂದ ಗ್ರಾಮೀಣ ಪ್ರದೇಶಗಳಲ್ಲಿ ಜೀತ ಪದ್ಧತಿಯ ವಿರುದ್ಧ ಜಾಗೃತಿ ಹೆಚ್ಚಿತು. ಜನರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿದರು. ಇದು ಯಡಿಯೂರಪ್ಪನವರ ರಾಜಕೀಯ ಜೀವನಕ್ಕೂ ದಿಕ್ಕು ನೀಡಿತು ಮತ್ತು ಜನರು ಅವರನ್ನು ಜನನಾಯಕನನ್ನಾಗಿ ನೋಡಿದರು.

ಬಿ.ಎಸ್ ಯಡಿಯೂರಪ್ಪನವರು 1983ರಲ್ಲಿ ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದರು. ಪಕ್ಷದ ಸಂಘಟನೆಗೆ ತಳಮಟ್ಟದಿಂದ ಕೆಲಸ ಮಾಡಿ ಬಾರಿ ಜನ ಬೆಂಬಲವನ್ನು ಗಳಿಸಿದರು. ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಬಲಪಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ದಕ್ಷಿಣ ಭಾರತದಲ್ಲಿ ನ್ಯಾಷನಲ್ ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವೂ ಹೆಚ್ಚಿತ್ತು. ಆದರೂ ಯಡಿಯೂರಪ್ಪನವರು ಗ್ರಾಮ ಮಟ್ಟದಿಂದ ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾದರು. 2007 ರಲ್ಲಿ ಮೊದಲ ಬಾರಿ ಜೆಡಿಎಸ್ ಜೊತೆಗಿನ ಮೈತ್ರಿ ಸರ್ಕಾರದ ಮುಖ್ಯಮಂತ್ರಿ ಯಾಗಿ ಅಧಿಕಾರ ಹಿಡಿದ ಅವರು ಮೈತ್ರಿ ಪಕ್ಷದ ಬೆಂಬಲ ಹಿಂಪಡೆಯುವಿಕೆ ಮತ್ತು ರಾಜಕೀಯ ಒಪ್ಪಂದ ಮುರಿದು ಹೋದ ಕಾರಣ ಅಲ್ಪ ಅವಧಿಯಲ್ಲೇ ಸ್ಥಾನ ತ್ಯಜಿಸಬೇಕಾಯಿತು. ನಂತರ 2008 ರಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎರಡನೆಯ ಬಾರಿ ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಆಡಳಿತ ನಡೆಸಿದರು. ನಂತರ 2018 ರಲ್ಲಿ ಮೂರನೇ ಬಾರಿ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕರಿಸಿದರು. ಈ ಹಂತದಲ್ಲಿ ರಾಜಕೀಯ ಒತ್ತಡ, ಆಂತರಿಕ ಕಲಹಗಳು, ಆರೋಪಗಳು, ಕಾನೂನು ಸವಾಲುಗಳ ಮಧ್ಯೆ ಕೆಲವೇ ದಿನಗಳಲ್ಲಿ ತಮ್ಮ ಸ್ಥಾನವನ್ನು ತ್ಯಜಿಸಬೇಕಾಯಿತು. ನಂತರ 2019 ರಲ್ಲಿ ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಿ

ಹರೀಶ್ ಪೂಂಜಾ
ಶಾಸಕರು

ಅಧಿಕಾರಕ್ಕೆ ಸ್ವೀಕರಿಸಿ 2021 ರವರೆಗೆ ಜನಪರ ಆಡಳಿತವನ್ನು ನಡೆಸಿದರು. ಪ್ರಸ್ತುತ ಬಿ.ಎಸ್ ಯಡಿಯೂರಪ್ಪನವರು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಧಿಕಾರಕ್ಕೆ ಬಂದ ಬಳಿಕ ಭಾಗ್ಯಲಕ್ಷ್ಮಿ ಯೋಜನೆ, ರೈತರ ಸಾಲ ಮನ್ನಾ, ಕೃಷಿ ಬಜೆಟ್, ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಣೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದರು. ಭಾಗ್ಯಲಕ್ಷ್ಮಿ ಯೋಜನೆ ಕರ್ನಾಟಕ ಸರ್ಕಾರದ ಅತ್ಯಂತ ಪ್ರಮುಖ ಯೋಜನೆಗಳಲ್ಲಿ ಒಂದಾಗಿದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಇಲಾಖೆಗೆ ಒಳಪಟ್ಟಿರುತ್ತದೆ. ಇದು ವಿಶೇಷವಾಗಿ ಬಡ ಕುಟುಂಬಗಳ ಹೆಣ್ಣುಮಕ್ಕಳ ಭವಿಷ್ಯದ ಭದ್ರತೆಗಾಗಿ ರೂಪಿಸಲಾಗಿದೆ. ಈ ಯೋಜನೆ 2006 ರಲ್ಲಿ ಪ್ರಾರಂಭಗೊಳ್ಳುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ರೇಷನ್ ಕಾರ್ಡ್ ಹೊಂದಿರುವ ಕುಟುಂಬದ ಮೊದಲನೇ ಹೆಣ್ಣು ಮಗುವಿಗೆ 19,300 ರು. ಎರಡನೇ ಹೆಣ್ಣು ಮಗುವಿಗೆ 18,350 ರು.ರಂತೆ ಠೇವಣಿ ಮಾಡಿ ಮಗುವಿಗೆ 18 ವರ್ಷಗಳು ತುಂಬಿದ ನಂತರ ಒಂದು ಲಕ್ಷ ರೂಪಾಯಿ ನಗದು ಹಣ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಹೆಣ್ಣುಮಗುವಿನ ಜನನವನ್ನು ಉತ್ತೇಜಿಸುವುದು, ಹೆಣ್ಣು ಭ್ರೂಣ ಲಿಂಗ ಹತ್ಯೆಯನ್ನು ತಡೆಯುವುದು, ಬಾಲ್ಯ ವಿವಾಹವನ್ನು ನಿಲ್ಲಿಸುವುದು, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಭವಿಷ್ಯದ ಭದ್ರತೆಯನ್ನು ಒದಗಿಸುವುದು.

ರೈತರು ತೆಗೆದುಕೊಂಡಿರುವ ಕೃಷಿ ಸಾಲವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ರದ್ದುಪಡಿಸುವ ಯೋಜನೆಯಾಗಿದೆ. ಇದು ವಿಶೇಷವಾಗಿ ಸಂಕಷ್ಟದಲ್ಲಿರುವ ರೈತರಿಗೆ ಆರ್ಥಿಕ ನೆರವನ್ನು ಒದಗಿಸಲು ರೂಪಿಸಲಾಗಿದೆ. ರೈತರು ಬ್ಯಾಂಕ್ ಅಥವಾ ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ಸರ್ಕಾರವೇ ತೀರಿಸಿ, ರೈತನನ್ನು ಸಾಲಭಾರದಿಂದ ಮುಕ್ತಗೊಳಿಸಲಾಗುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ರೈತರ ಸಾಲಭಾರ ಕಡಿಮೆ ಮಾಡುವುದು, ಕೃಷಿ ಕ್ಷೇತ್ರದಲ್ಲಿ ಆರ್ಥಿಕ ಸ್ಥಿರತೆ ತರುವುದು, ರೈತರ ಆತ್ಮಹತ್ಯೆ ಮತ್ತು ಸಂಕಷ್ಟಗಳನ್ನು ಕಡಿಮೆ ಮಾಡುವುದು, ರೈತರ ಜೀವನಮಟ್ಟ ಸುಧಾರಿಸುವುದು.

ಯಡಿಯೂರಪ್ಪನವರ ಕೃಷಿ ಬಜೆಟ್ ಕರ್ನಾಟಕದಲ್ಲಿ ಬಹಳ ವಿಶೇಷವಾಗಿದೆ. ಅವರು ತಮ್ಮ ಬಜೆಟ್‌ಗಳಲ್ಲಿ ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕ ಒತ್ತು ನೀಡಿ, ರೈತರ ಅಭಿವೃದ್ಧಿಯನ್ನು ಮುಖ್ಯಗುರಿಯನ್ನಾಗಿ ಮಾಡಿಕೊಂಡಿದ್ದರು. ಇದು ಕರ್ನಾಟಕದಲ್ಲಿ ಕೃಷಿಯ ಮಹತ್ವವನ್ನು ಹೆಚ್ಚಿಸುವುದರ ಜೊತೆಗೆ ದೇಶದೆಲ್ಲೆಡೆ ಮಾದರಿಯಾಯಿತು. 2011-12 ರ ಕೃಷಿ ಬಜೆಟ್ಟಿನಲ್ಲಿ ಸುಮಾರು 17,000 ಕೋಟಿ ಹಣವನ್ನು ಹಾಗೆ 2020-21 ರ ಬಜೆಟ್‌ನಲ್ಲಿ 25000 ಕೋಟಿ ಒಟ್ಟು 37000 ಕೋಟಿ ಮೀಸಲಿರಿಸಲಾಯಿತು. ತುಂಗಭದ್ರಾ, ಕಾವೇರಿ ಹೀಗೆ ಅನೇಕ ಪ್ರಮುಖ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಲಾಯಿತು. ಇದರ ಮುಖ್ಯ ಉದ್ದೇಶ ರೈತರ ತಲಾ ಆದಾಯವನ್ನು ಹೆಚ್ಚಿಸುವುದು, ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿಸುವುದು, ಗ್ರಾಮೀಣ ಪ್ರದೇಶದ ಆರ್ಥಿಕತೆಯನ್ನು ಬಲಪಡಿಸುವುದು, ಕೃಷಿ ಹಾಗೂ ನೀರಾವರಿ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವುದು, ಪ್ರಕೃತಿ ವಿಪತ್ತುಗಳಿಂದ ರೈತರ ರಕ್ಷಣೆ ಮಾಡುವುದು.

ಉಚಿತ ಬೈಸಿಕಲ್ ವಿತರಣಾ ಯೋಜನೆ ಎಂಬುದು ಸರಕಾರ ವಿದ್ಯಾರ್ಥಿಗಳ ಶಿಕ್ಷಣವನ್ನು ಉತ್ತೇಜಿಸಲು ಮತ್ತು ಶಾಲೆಯನ್ನು ತೊರೆಯುವ ವಿದ್ಯಾರ್ಥಿಗಳ ಪ್ರಮಾಣವನ್ನು ಕಡಿಮೆ ಮಾಡಲು ಜಾರಿಗೆ ತಂದ ಪ್ರಮುಖ ಯೋಜನೆಯಾಗಿದೆ. 8ನೇ ತರಗತಿಯಲ್ಲಿ ವ್ಯಾಸಾಂಗ ಮಾಡುವ ಬಿಪಿಎಲ್ ರೇಷನ್ ಕಾರ್ಡ್ ಹೊಂದಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ ಸರಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆಂದೇ ವಿಶೇಷವಾಗಿ ರೂಪಿಸಿದ ಯೋಜನೆಯಾಗಿದೆ. ಇದರ ಮುಖ್ಯ ಉದ್ದೇಶ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಶಾಲೆಗೆ ಸುಲಭವಾಗಿ ಹೋಗಲು ಸಹಾಯ ಮಾಡುವುದು, ವಿಶೇಷವಾಗಿ ಹುಡುಗಿಯರ ಶಿಕ್ಷಣವನ್ನು ಉತ್ತೇಜಿಸುವುದು, ಶಾಲೆಗೆ ನಿರಂತರ ಹಾಜರಾತಿಯನ್ನು ಹೆಚ್ಚಿಸುವುದು, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಬೆಳೆಸುವುದು.

ಬಿ.ಎಸ್ ಯಡಿಯೂರಪ್ಪನವರ ಆಡಳಿತ ಅವಧಿಯಲ್ಲಿ ಮುಖ್ಯವಾಗಿ 2008-2011 ಮತ್ತು 2019-2021 ಮಠ-ಮಂದಿರ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ವಿಶೇಷ ಅನುದಾನ ಹಾಗೂ ಪ್ರೋತ್ಸಾಹ ನೀಡುವ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು. ಯಡಿಯೂರಪ್ಪನವರು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಗುರುತು ಮೂಡಿಸಿದ ನಾಯಕರಲ್ಲಿ ಪ್ರಮುಖರು. ಸಾಮಾನ್ಯ ರೈತ ಕುಟುಂಬದಿಂದ ಪ್ರಾರಂಭಿಸಿ ರಾಜ್ಯದ ಮುಖ್ಯಮಂತ್ರಿಯಾಗಿ ಏರಿದ ಅವರ ಜೀವನಯಾನ ಅನೇಕ ಜನರಿಗೆ ಪ್ರೇರಣೆಯಾಗಿದೆ. ಪರಿಶ್ರಮ, ಧೈರ್ಯ ಮತ್ತು ಜನಸೇವೆ ಎಂಬ ಮೌಲ್ಯಗಳನ್ನು ತಮ್ಮ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡು ಅವರು ಜನರ ವಿಶ್ವಾಸವನ್ನು ಗಳಿಸಿದರು. ಅವರ ಆಡಳಿತಾವಧಿಯಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ, ಮೂಲಸೌಕರ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ಕ್ಷೇತ್ರಗಳಲ್ಲಿ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದರು. ರೈತರ ಸಾಲಮನ್ನಾ, ಭಾಗ್ಯಲಕ್ಷ್ಮಿ ಯೋಜನೆ, ಆಶ್ರಯ ಯೋಜನೆಗಳಂತಹ ಕ್ರಮಗಳು ಜನಜೀವನದ ಮೇಲೆ ಸ್ಪಷ್ಟ ಪರಿಣಾಮ ಬೀರಿವೆ. ವಿಶೇಷವಾಗಿ ರೈತರ ಸಮಸ್ಯೆಗಳ ಬಗ್ಗೆ ಅವರು ತೋರಿದ ಕಾಳಜಿ ಗಮನಾರ್ಹವಾಗಿದೆ.

ಹೌದು, ಅವರ ರಾಜಕೀಯ ಜೀವನದಲ್ಲಿ ವಿವಾದಗಳು ಮತ್ತು ಸವಾಲುಗಳೂ ಇದ್ದವು. ಆದರೆ ಅವುಗಳ ನಡುವೆಯೂ ಅವರು ತಮ್ಮ ನಾಯಕತ್ವವನ್ನು ಸ್ಥಿರವಾಗಿ ಮುಂದುವರಿಸಿಕೊಂಡು ಹೋಗಿದ್ದಾರೆ. ಇದು ಅವರ ಧೈರ್ಯ ಮತ್ತು ರಾಜಕೀಯ ಚಾತುರ್ಯವನ್ನು ತೋರಿಸುತ್ತದೆ. ಒಟ್ಟಿನಲ್ಲಿ, ಬಿ.ಎಸ್ ಯಡಿಯೂರಪ್ಪನವರು ಕೇವಲ ಒಬ್ಬ ರಾಜಕಾರಣಿ ಮಾತ್ರವಲ್ಲ, ಜನಪರ ಆಡಳಿತದ ಮೂಲಕ ರಾಜ್ಯದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ ನಾಯಕ. ಅವರ ಸಾಧನೆಗಳು ಮತ್ತು ಹೋರಾಟಗಳು ಭವಿಷ್ಯದ ಪೀಳಿಗೆಗೆ ಮಾರ್ಗದರ್ಶನವಾಗುತ್ತವೆ

ನಾ ಕಂಡಂತೆ ಯಡಿಯೂರಪ್ಪನವರು

ಸುಮಾರು 34 ವರ್ಷದ ಹಿಂದಿನ ಮಾತು. ನಾನಾಗ ಗ್ರಾಮೀಣಾಭಿವೃದ್ಧಿ ಸಚಿವರ ಆಪ್ತಕಾರ್ಯದರ್ಶಿಯಾಗಿದ್ದೆ. ವಿಧಾನಸೌಧದ ಮೂರನೇ ಮಹಡಿಯಲ್ಲಿದ್ದ ನನ್ನ ಕೊಠಡಿಗೆ, ಶಾಸಕರಾಗಿದ್ದ ಯಡಿಯೂರಪ್ಪನವರು ನೇರವಾಗಿ ಬಂದವರೇ ಧನ್ಯವಾದಗಳು ಎಂದು ಹೇಳುತ್ತ ತಮ್ಮ ಬಲಗೈ ಮುಂದೆ ಮಾಡಿದ್ದರು. ಅದಾಗಲೇ ಅನೇಕ ಹೋರಾಟಗಳಲ್ಲಿ ನಾಯಕತ್ವ ವಹಿಸಿ, ಶಾಸನಸಭೆಯಲ್ಲಿ ರೈತರ, ಬಡವರ ಪರವಾಗಿ ಗಟ್ಟಿ ಧ್ವನಿ ಎತ್ತಿ ಹೆಸರು ಮಾಡಿದ್ದ ಅವರನ್ನು ಕಂಡ ನಾನು ಎದ್ದುನಿಂತು ಅವರ ಕೈ ಕುಲುಕಿದೆ. ಇದೆಲ್ಲದಕ್ಕೂ ಕಾರಣವಿತ್ತು. ಶಿಕಾರಿಪುರ ತಾಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಗೆ ಮಂತ್ರಿ ಎಂ.ವೈ. ಘೋರ್ಪಡೆಯವರು ಮಂಜೂರಾತಿ ನೀಡಿದ್ದರು. ಕಡತ ಬಂದ ಎರಡೇ ದಿನಗಳಲ್ಲಿ ನಾನು ಅದನ್ನು ಸಚಿವರಿಗೆ ಸಲ್ಲಿಸಿ ಅನುಮೋದನೆ ಪಡೆಯುವಲ್ಲಿ ಸಫಲನಾಗಿದ್ದೆ. ಅವರ ಆಪ್ತ ಸಹಾಯಕನ ಮೂಲಕ ಇದನ್ನು ತಿಳಿದುಕೊಂಡಿದ್ದರೇನೋ ಯಡಿಯೂರಪ್ಪನವರು ಮುಂದುವರೆದು, ನಾವು ಮುಂದೆ ಅಧಿಕಾರಕ್ಕೆ ಬರುತ್ತೇವೆ. ಆಗ ನಿಮ್ಮಂತಹವರಿಗಾಗಿ ಹುಡುಕಾಡುತ್ತಿರುತ್ತೇವೆ ಧನ್ಯವಾದ ಎಂದು ಹೇಳಿ ಮರಳಿ ಹೋಗಿದ್ದರು. ಅವರು ಬಂದಾಗ ಮಂತ್ರಿಗಳ ಇಡೀ ಕಚೇರಿಯಲ್ಲಿ ಉಂಟಾದ ಸಂಚಲನ ಇನ್ನೂ ನನ್ನ ಕಣ್ಣೆದುರು ಹಾಗೆಯೇ ಇವೆ. ತಮ್ಮ ಜನರ ಬಗ್ಗೆ ಅವರಿಗಿರುವ ಕಾಳಜಿ, ಕಳಕಳಿ, ಕೆಲಸ ಮಾಡುವ ಅಧಿಕಾರಿ ಸಿಬ್ಬಂದಿ ಬಗೆಗಿನ ಅವರ ಪ್ರೀತ್ಯಾದಾರ ಬೇರೆಯವರಿಗೂ ಮಾದರಿಯಾಗುವಂತಹವು ಎಂದೇ ನನ್ನ ಅನಿಸಿಕೆ. ಯಡಿಯೂರಪ್ಪನವರು ಮುಂಗೋಪಿ, ಸಿಡುಕು ಸ್ವಭಾವದವರು ಎನ್ನುವವರಿಗೆ ನಾನು ಹೇಳುವದಿಷ್ಟೆ ಬೇಗ ಬೇಗ ಕೆಲಸ ಮಾಡಬೇಕು, ವೃಥಾ ಕಡತ ಇಟ್ಟುಕೊಳ್ಳಬಾರದು, ಕಾನೂನಿನಡಿಯಲ್ಲಿ ಸಕಾರಾತ್ಮಕ ಚಿಂತನೆ ಮಾಡಿ

ಮನು ಬಳಿಗಾರ್
ನಿಕಟಪೂರ್ವ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್

ರಾಜ್ಯದ ಜನರ ಕೆಲಸ ಪೂರೈಸಿಕೊಡಬೇಕು.

ಮುಂದೆ ಹಲವಾರು ವರ್ಷಗಳ ನಂತರ ನಾನು ರಾಷ್ಟ್ರಪತಿ ಆಡಳಿತ (2007)ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತ ಮತ್ತು ನಿರ್ದೇಶಕ ಎಂದು ಕೆಲಸ ಮಾಡುವ ಅವಕಾಶ ಒದಗಿ ಬಂತು. ಆ ನಂತರ 4-5 ತಿಂಗಳಲ್ಲಿ ಚುನಾವಣೆ ನಡೆದು ಯಡಿಯೂರಪ್ಪನವರು (2008) ಮುಖ್ಯಮಂತ್ರಿಗಳಾದರು. ಯೋಗಾಯೋಗ ವೆಂಬಂತೆ ಕನ್ನಡ ಸಂಸ್ಕೃತಿ ಇಲಾಖೆಯೂ ಮುಖ್ಯಮಂತ್ರಿಗಳ ಕಡೆಯೇ ಇದ್ದುಬಿಟ್ಟಿತು. ನೇರವಾಗಿ ಅವರ ಅಧೀನದಲ್ಲಿಯೇ ಕೆಲಸ ಮಾಡುವ ಸಂದರ್ಭವದು. ನನಗಂತೂ ಸಂತೋಷವೇ ಆಗಿತ್ತು. ಅವರೊಡನೆ ಅನೇಕ ಆತ್ಮೀಯ ಕ್ಷಣಗಳು ಸಹಜವಾಗಿಯೇ ದೊರೆಯುತ್ತಿದ್ದವು. 2008ರ ರಾಜ್ಯೋತ್ಸವದ ಸಂದಭರ್ವದು. ಅರ್ಹರ ಆಯ್ಕೆ ಆಗುತ್ತಿರುವಾಗಲೇ ಕೇವಲ ಚಿನ್ನದ ಪದಕ ಮಾತ್ರ ಇದ್ದ ಪ್ರಶಸ್ತಿ ಜತೆ ತಕ್ಷಣ ತಲಾ ಒಂದು ಲಕ್ಷ ರುಪಾಯಿಯ ಗೌರವಧನವನ್ನೂ ಮಂಜೂರು ಮಾಡಿದರು ಯಡಿಯೂರಪ್ಪನವರು. 2010ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಯಡಿಯೂರಪ್ಪನವರು, ಗೋವಿಂದ ಕಾರಜೋಳ ಅವರಿಗೆ ಹಂಚಿಕೆ ಮಾಡಿದರು. ಕಾರಜೋಳ ಅವರು ಈ ಇಲಾಖೆಗೆ ಹೇಳಿಮಾಡಿಸಿದಂತಹ ಸುಸಂಸ್ಕೃತ ವ್ಯಕ್ತಿ. ಇವರ ಅವಧಿ ಯಲ್ಲಿಯೂ ಕೂಡ ಮೇಲೆ ವಿವರಿಸಿದ ಎಲ್ಲ ಕೆಲಸ ಕಾರ್ಯಗಳು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಂಡವು. ರಾಜ್ಯಾದ್ಯಂತ ನಾಲ್ಕುನೂರಕ್ಕೂ ಹೆಚ್ಚು ಕನ್ನಡ ಸಂಸ್ಕೃತಿ ಭವನಗಳನ್ನು ಹೊಸದಾಗಿ ನಿರ್ಮಿಸಲು ಅನುದಾನವನ್ನು ನೀಡಲಾಯಿತು. ಇದೂ ಕೂಡ ಆ ಇಲಾಖೆಯಲ್ಲಿ ದಾಖಲಾರ್ಹವಾದ ಕಾರ್ಯಕ್ರಮವಾಯಿತು. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಿಶ್ವ ಕನ್ನಡ ಸಮ್ಮೇಳನವನ್ನು ಬೆಳಗಾವಿಯಲ್ಲಿ ಅತ್ಯಂತ ಸಂಭ್ರಮದಿಂದ ಮೂರು ದಿನಗಳ ಕಾಲ ಫೆಬ್ರವರಿ 2011ರಲ್ಲಿ ಆಚರಿಸಲಾಯಿತು. (ಮೂರು ದಿನ ಸೇರಿ) ಅಂದಾಜು ಹದಿನೈದು ಲಕ್ಷ ಜನರು ಇದರಲ್ಲಿ ಭಾಗಿಯಾಗಿ ಸಂಭ್ರಮಿ ಸಿದ್ದೂ ರಾಜ್ಯದ ಇತಿಹಾಸದಲ್ಲಿಯೇ ಪ್ರಪ್ರಥಮ ವೆಂದೆನಿಸಿತು. ಇದು ಯಡಿಯೂರಪ್ಪನವರ ಅಪಾರ ಕನ್ನಡ ಪ್ರೀತಿಯ ಮತ್ತೊಂದು ಝಲಕ್.

ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿದ್ದಾಗಿನ ಇನ್ನೊಂದು ಸಿಹಿ ನೆನಪನ್ನು ಇಲ್ಲಿ ಹಂಚಿಕೊಳ್ಳಬೇಕೆನಿಸುತ್ತದೆ. ಕಡಕವೊಂದನ್ನು ಮುಖ್ಯಮಂತ್ರಿಗಳಿಗೆ ತೋರಿಸಿ, ಅವರ ರೇಸ್ ಕೋರ್ಸ್ ರಸ್ತೆಯಲ್ಲಿನ ಗೃಹ ಕಚೇರಿಯಿಂದ ನಾನು ಹೊರಟು ನಿಂತಾಗ ಸಾಯಂಕಾಲ 4 ಗಂಟೆ ದಾಟಿತ್ತು. ಒಳಗಡೆಯಿಂದ ಮುಖ್ಯ ಮಂತ್ರಿಗಳ ಆಪ್ತ ಸಹಾಯಕ ನನ್ನಲ್ಲಿಗೆ ಬಂದು ಮತ್ತೆ 5.30ಕ್ಕೆ ಬರಬೇಕಂತೆ ಸರ್ ಅಂದಾಗ ನಾನು ಓಹ್ ಈಗಾಗಲೇ ನಾಲ್ಕು ಘಂಟೆ ದಾಟಿದೆ. ಇಲ್ಲೆಲ್ಲೂ (ವಿಧಾನಸೌಧ, ಬಹುಮ ಹಡಿ ಕಟ್ಟಡ ಇತ್ಯಾದಿ) ತಿರುಗಾಡಿಕೊಂಡು ಬರುತ್ತೇವೆ ಎಂದುತ್ತರಿಸಿದೆ. ತಕ್ಷಣ ಆತ ಇಲ್ಲ ಸರ್ ನಾಳೆ ಬೆಳಗಿನ 5.30ಕ್ಕೆ ಅಂತೆ ಎಂದಾಗ ನನಗೆ ಅತೀ ಆಶ್ಚರ್ಯವೇ ಆಯಿತು. ಅಷ್ಟು ಬೇಗ? ಎಂಬ ನನ್ನ ಪ್ರಶ್ನೆಗೆ ಓ ನೀವು ಬನ್ನಿ ಎಂದು ಹೇಳಿ ಅವರು ಒಳ ನಡೆದಿದ್ದರು. ನಮ್ಮ ಮನೆಯಿಂದ ಇಲ್ಲಿಗೆ ಬರಲು ಒಂದು ಗಂಟೆ ಸಮಯ ಬೇಕು. ಆದ್ದರಿಂದ ನಾನು ಬೆಳಿಗ್ಗೆ 4ಕ್ಕೇ ಹೊರಟು ಐದು ಗಂಟೆಗೆ ತಲುಪಿದಾಗ ನನಗೆ ದಿಗ್ಭ್ರಮೆ ಮಾನ್ಯ ಮುಖ್ಯಮಂತ್ರಿಗಳು ಅದಾಗಲೇ ತಯಾರಾಗಿ ದಿನಪತ್ರಿಕೆ ಓದುತ್ತಿದ್ದಾರೆ ಎಂಬುದನ್ನು ತಿಳಿದಾಗ! ಐದೂ ಕಾಲಿಗೇ ನನಗೆ ಬುಲಾವ್ ಬಂತು. ಕಡತದ ಕೆಲಸ ಮುಗಿಸಿ ಕಾಫಿ ಕುಡಿದು ಹೊರಬಿದ್ದಾಗ ಬೆಳಗಿನ 5.35 ಆ ವಯಸ್ಸಿನಲ್ಲೂ ಕಿಂಚಿತ್ತೂ ಬಾಡದ ಉತ್ಸಾಹ, ಚೇತೋಹಾರಿ ಮನಸ್ಸು, ಕೆಲಸದ ನಿಷ್ಠೆ ಯಡಿ ಯೂರಪ್ಪ ನವರ ಇಡೀ ಜೀವನ ವೈಶಿಷ್ಟ್ಯ ವೆನಿಸಿವೆ. ಅವರ ಕಾರ್ಯವೈಖರಿಯ ಬಗ್ಗೆ ಒಂದಿಬ್ಬರು ಗಣ್ಯರು ನನಗೆ ಹೇಳಿದ ಕೆಲ ಸಂಗತಿಗಳನ್ನು ಇಲ್ಲಿ ಮೆಲಕು ಹಾಕುವದು ಸೂಕ್ತವೆನಿಸುತ್ತಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ ಜೊತೆ ಇತ್ತೀಚೆಗೆ ನಾಲ್ಕು ದಿನ ಪ್ರವಾಸ ಮಾಡುವ ಯೋಗ ನನ್ನದಾಗಿತ್ತು. ಹಾಗೆಯೇ ನಾನು ಈ ಲೇಖನ ಬರೆಯುವುದಾಗಿಯೂ ಅವರ ಒಂದೆರಡು ಅನುಭವಗಳನ್ನು ಹಂಚಿಕೊಳ್ಳ ಬೇಕಾಗಿಯೂ ಕೇಳಿಕೊಂಡೆ. ಅದ್ಯಾವರು ಕನ್ನಡ ತಂತ್ರಾಂಶ ಅಭಿವೃದ್ಧಿ ಸಂಬಂಧ ಯಡಿಯೂರಪ್ಪನವರನ್ನು ಕಾಣಲು ಹೋದದ್ದು ಮೊದಲ ಭೇಟಿಯಲ್ಲಿಯೇ ಬಿ.ಎಸ್. ಯಡಿಯೂರಪ್ಪನವರು ಈ ಕಾರ್ಯಕ್ಕೆ ಒಪ್ಪಿಗೆ ನೀಡಿ ತಕ್ಷಣ 2 ಕೋಟಿ ರು. ಮಂಜೂರು ಮಾಡಿದ್ದು ಎಲ್ಲ ನೆನಪಿಸಿಕೊಂಡು ಅವರ ಕ್ರಿಯಾಶೀಲತೆ ಅದ್ಭುತವಾದದ್ದು ಹೃದಯ ವೈಶಾಲ್ಯ ಬೆರಗೊಳಿಸುವಂತಹದ್ದು ಎಂದರು. ಪೂರ್ಣಚಂದ್ರ ತೇಜಸ್ವಿ ಮತ್ತು ತಾವು ಜೊತೆಯಲ್ಲಿ ಹೋಗಿ ಭೆಟ್ಟಿಯಾಗಿ ತಿರುಗಿ ಬರುವಾಗ ಬಿ.ಎಸ್. ಯಡಿಯೂರಪ್ಪನವರು ಬಾಗಿಲವರೆಗೂ ಬಂದು ಬೀಳ್ಕೊಟ್ಟಿದ್ದು ತಮ್ಮ ನೆನಪಲ್ಲಿ ಸದಾ ಇರುವಂತಹದು ಎಂದು ಮೆಲುಕು ಹಾಕಿದರು. ಆ ಮನುಷ್ಯನ ಕ್ರಿಯಶೀಲತೆಯೇ ಕ್ರಿಯಾಶೀಲತೆ. ಆದಕ್ಕಾರೂ ಸರಿಸಾಟಿಯಿಲ್ಲ ಎನ್ನುತ್ತಾರವರು.

ಕರ್ನಾಟಕ ಕಂಡ ಅದ್ಭುತ ರಾಜಕಾರಣಿ ಬಿಎಸ್‌ವೈ

ಸ್ವಾಭಿಮಾನದ ಸತ್ಯದ ಮತ್ತು ಸ್ವಧರ್ಮದ ನೆಲೆಯಲ್ಲಿನ ಚಿತ್ರದುರ್ಗದಲ್ಲಿ ಕರ್ನಾಟಕ ಕಂಡಂತಹ ಅದ್ಭುತ ರಾಜಕಾರಣಿ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವವನ್ನು ಅಭಿಮಾನಿಗಳ ವತಿಯಿಂದ ಮೇ.9ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವುದು ಬಿ.ಎಸ್. ಯಡಿಯೂರಪ್ಪನವರ ಅಭಿಮಾನಿಗಳಲ್ಲಿ ಎಲ್ಲಿಲ್ಲದಂತಹ ಸಂಭ್ರಮ ಮನೆ ಮಾಡಿದೆ.

ಬಿ.ಎಸ್.ಯಡಿಯೂರಪ್ಪನವರು ಏಕಾಂಗಿ ಹೋರಾಟದ ಮುಖಾಂತರ ಭಾರತೀಯ ಜನತಾ ಪಕ್ಷವನ್ನು ಕರ್ನಾಟಕ ರಾಜ್ಯದಲ್ಲಿ ಸಂಘಟಿಸಿ ರೈತರ ಮಹಿಳೆಯರ ಮತ್ತು ಶೋಷಿತರ ನೆರವಿನೊಂದಿಗೆ ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ಬಂದಂತಹ ಹೆಗ್ಗಳಿಕೆಗೆ ಪಾತ್ರರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಸಾರ್ವಜನಿಕ ಜೀವನದ ಐವತ್ತರ ದಶಕದ ಅಭಿಮಾನೋತ್ಸವವನ್ನು ಮೇ.9ರಂದು ಬಿ.ಎಸ್.ಯಡಿಯೂರಪ್ಪನವರ ಅಭಿಮಾನಿಗಳು ಹಮ್ಮಿಕೊಂಡಿರುವುದು ಸಂತಸ ಹಾಗೂ ಒಬ್ಬ ಶ್ರೇಷ್ಠ ಸ್ವಾಭಿಮಾನದ ರಾಜಕಾರಣಿಗೆ ಸಲ್ಲಿಸುತ್ತಿರುವ ಗೌರವೂ ಕೂಡಯಾಗಿದೆ.

ಏಕೆಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಸ್ವಾಭಿಮಾನ ನಿರ್ಭೀತಿ ಮತ್ತು ನಿಸ್ವಾರ್ಥ ಬದುಕಿನ ವ್ಯಕ್ತಿಗಳು ಇಂದಿನ ಸ್ಥಿತಿಯಲ್ಲಿ ಸಿಗುವುದು ತುಂಬಾ ವಿರಳ. ಬಿ.ಎಸ್. ಯಡಿಯೂರಪ್ಪನವರಿಗೆ ಇಂತಹ ಸಾಧನೆಯ ಶಿಖರವನ್ನು ತಲುಪಿದ ಸಂದರ್ಭದಲ್ಲಿ ಈ ರೀತಿ ಸಾರ್ವತ್ರಿಕವಾಗಿ ಅಭಿಮಾನದಿಂದ ಗೌರವಿಸಿದಾಗ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ಇತರರಿಗೂ ಕೂಡ ಪ್ರೇರಣೆ ಆಗುತ್ತದೆ.

ಬಡವರ, ರೈತರ ಬಂಧು ಯಡಿಯೂರಪ್ಪ ಬಿ.ಎಸ್. ಯಡಿಯೂರಪ್ಪನವರು ಕಳೆದ 50 ವರ್ಷದ ಆರಂಭದಲ್ಲಿ ಜನ ಸಂಘದಿಂದ



ಎ ಎನ್ ರಘುಮೂರ್ತಿ ಕೆಎಎಸ್
ಮೊಳಕಾಲ್ಮೂರು, ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ

ಗುರುತಿಸಿಕೊಂಡು ಸಮಾಜದಲ್ಲಿರುವಂತಹ ಶೋಷಿತರು ಮಹಿಳೆಯರು ಮತ್ತು ರೈತರ ಕಷ್ಟ ಮತ್ತು ನೋವುಗಳಿಗೆ ಸ್ಪಂದಿಸಿ ಸದಾ ಅವರ ಕಣ್ಣೀರನ್ನು ಒರೆಸುವಂತಹ ಕೈಂಕರ್ಯವನ್ನ ಕೈಗೊಂಡಿದ್ದು ಇದರಿಂದ ನಾಡಿನ ಉದ್ದಗಲಕ್ಕೂ ಕೂಡ ಇವರ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿದೆ. ಬರೀ ಚಿತ್ರದುರ್ಗದ ನೆಲ ವಷ್ಟೇ ಅಲ್ಲ ಮಲೆನಾಡು ಕರ್ನಾಟಕ ಕರಾವಳಿ ಕರ್ನಾಟಕ ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಉದ್ದಗಲಕ್ಕೂ ಕೂಡ ಬಿ.ಎಸ್ .ಯಡಿಯೂರಪ್ಪನವರ ಅಪಾರ ಅಭಿಮಾನಿಗಳು ಈ ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳಲು ಉತ್ಸಕರಾಗಿದ್ದಾರೆ.

ಬಿ.ಎಸ್. ಯಡಿಯೂರಪ್ಪನವರು ಅನಂತಕುಮಾರ್, ಶಿವಪ್ಪ ಮತ್ತು ಈಶ್ವರಪ್ಪ ಇವರೊಂದಿಗೆ ಪಕ್ಷ ಸಂಘಟನೆ ಆರಂಭಿಸಿ ಛಲದಂಕ ಮಲ್ಲನಂತೆ ವಿಧಾನಸೌಧ ಮೂರನೇ ಮಹಡಿಯಲ್ಲಿ ಅಧಿಕಾರದೊಂದಿಗೆ ಭಾರತೀಯ ಜನತಾ ಪಕ್ಷದ ಧ್ವಜವನ್ನು ನಾಲ್ಕು ಬಾರಿ ಹಾರಿಸಿದ್ದು ಇತಿಹಾಸವೇ ಸರಿ. ಇವರ ಅಧಿಕಾರ ಅವಧಿಯಲ್ಲಿ ಧ್ವನಿ ಇಲ್ಲದಂತಹ ವರ್ಗದವರಿಗೆ ಧ್ವನಿಯನ್ನು ನೀಡುವ ಕೆಲಸ ಕೈಗೊಳ್ಳಲಾಯಿತು. ವೃದ್ಧರಿಗೆ ಸಂಧ್ಯಾ ಸುರಕ್ಷಾ ಯೋಜನೆ, ಮಹಿಳಾ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್, ಭಾಗ್ಯಲಕ್ಷ್ಮಿ ಬಾಂಡ್ ಇದೇ ರೀತಿ ವಿಶೇಷಚೇತನರಿಗೆ ಮತ್ತು ವಿಧುವೆ ಯವರೆಗೆ ಮದುವೆಯಾಗದಂತಹ ಮಹಿಳೆಯರಿಗೆ ಮೈತ್ರಿ ಇನ್ನು ತೃತೀಯ ಲಿಂಗಿಗಳಿಗೆ ಮನಸ್ವಿನಿ ಮುಂತಾದ ವಿಶಿಷ್ಟ ಯೋಜನೆಗಳ ಮುಖಾಂತರ ಸಮಾಜದಲ್ಲಿ ಬದುಕುವ ದಾರಿಯನ್ನು ತೋರಿಸಿದವರು.

ಚಿತ್ರದುರ್ಗಕ್ಕೆ ಅಗತ್ಯವಿರುವಂತಹ ಭದ್ರಾ ಮೇಲ್ದಂಡೆ ಯೋಜನೆ ಆರಂಭಿಕ ಕೆಲಸವನ್ನು 2008ರಲ್ಲಿ ತಾವು ಮುಖ್ಯಮಂತ್ರಿ ಆಗಿದ್ದಾಗ ಕೈಗೊಂಡು ಇದಕ್ಕೆ ನಿರ್ದಿಷ್ಟ ಅನುದಾನವನ್ನು ನಿಗದಿಪಡಿಸಿ ಬಿಡುಗಡೆ ಮಾಡಿದ ಕೀರ್ತಿ ಯಡಿಯೂರಪ್ಪರವರಿಗೆ ಸಲ್ಲುತ್ತದೆ. ಇನ್ನು ಕೆರೆಗಳಿಗೆ ನೀರು ತುಂಬಿಸುವ ಕಾರ್ಯವನ್ನು ಕೂಡ ಇವರ ಅವಧಿಯಲ್ಲಿ ಕೈಗೊಂಡಿದ್ದು ಕೂಡ ಇತಿಹಾಸ ನಾಡಿನ ರೈತರಿಗೆ ಪ್ರತ್ಯೇಕ ಬಜೆಟ್ ಮಂಡಿಸಿ ರೈತರ ಸಾಲ ಮನ್ನಾ ಮಾಡಿದ ಕೀರ್ತಿಯು ಕೂಡ ಯಡಿಯೂರಪ್ಪನವರಿಗೆ ಸಲ್ಲುತ್ತದೆ.

ದೇಗುಲಗಳ ಅಭಿವೃದ್ಧಿಯ ಹರಿಕಾರ

ಧಾರ್ಮಿಕ ಸನಾತನ ಸಂಸ್ಕೃತಿ ಮತ್ತು ಬುತ್ತಿ ಭಾವನಿಗೆ ಯಡಿಯೂರಪ್ಪನವರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ . ಇದಕ್ಕೆ ಒಂದು ಉದಾಹರಣೆ ಎಂದರೆ ಚಳ್ಳಕೆರೆ ತಾಲೂಕಿನ ಮತ್ಸಸಮುದ್ರ ಗ್ರಾಮಕ್ಕೆ ಮುಖ್ಯಮಂತ್ರಿ ಆಗಿದ್ದಾಗ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಯ ಭಕ್ತಾದಿಗಳ ಕೋರಿಕೆ ಮೇರೆಗೆ ಆ ದೇವಸ್ಥಾನದ ಅಭಿವೃದ್ಧಿಗೆ ಒಂದೂವರೆ ಕೋಟಿ ಅನುದಾನವನ್ನು ತಕ್ಷಣ ಒದಗಿಸಿ ಭಕ್ತಾದಿಗಳ ಭಾವನೆಗೆ ಮುನ್ನುಡಿ ಬರೆದಂತಹ ಉದಾಹರಣೆಗಳಿವೆ. ನೇರ ನುಡಿ ಸಂಸ್ಕಾರ ಮತ್ತು ಸಭ್ಯತೆಗೆ ಇನ್ನೊಂದು ಹೆಸರೇ ಶ್ರೀ ಯಡಿಯೂರಪ್ಪನವರು . ಇವರ ಐವತ್ತು ವರ್ಷದ ಸಾರ್ವಜನಿಕ ಜೀವನದಲ್ಲಿ ಇವರ ರಾಜಕೀಯ ವೈರಿಗಳಾಗಲಿ ಅಥವಾ ಇವರನ್ನು ದ್ವೇಷಿಸುವವರಿಗಾಗಲಿ ಯಾವತ್ತೂ ಇವರು ಸಂಸ್ಕಾರವನ್ನು ಬಿಟ್ಟು ಮಾತಾಡಿದ್ದು ಉದಾಹರಣೆ ಇಲ್ಲ . ಇಂತಹ ಇವರ ನಡವಳಿಕೆ ಈಗಿನ ರಾಜಕಾರಣಿಗಳಿಗೆ ಆದರ್ಶಪ್ರಾಯವೂ ಸರಿನೇ ಇಂದಿನ ಇವತ್ತಿನ ಸಮಾಜಕ್ಕೆ ಇಂತಹ ಮನಸ್ಥಿತಿಯ ರಾಜಕಾರಣಿಗಳು ಅತ್ಯಂತ ಅವಶ್ಯಕತೆಯಿದೆ. ಪಕ್ಷ ಮತ್ತು ಜಾತಿ ಭೇದವನ್ನು ಮರೆತು ಮೇ 9ನೇ ತಾರೀಕು ಇವರ ಅಭಿಮಾನೋತ್ಸವಕ್ಕೆ 10 ಲಕ್ಷ ಜನ ಸೇರುವುದು ನಿಶ್ಚಿತ ಜಿಲ್ಲೆಯ ಮತ್ತು ರಾಜ್ಯದ ನಾನಾ ಭಾಗಗಳಿಂದ ಈಗಾಗಲೇ ಈ ಕಾರ್ಯಕ್ರಮಕ್ಕೆ ಹಾಜರಾಗಲು ಅಭಿಮಾನಿಗಳ ವತಿಯಿಂದ ಏರ್ಪಾಡು ಮಾಡಿಕೊಳ್ಳಲಾಗಿದೆ. ಈ ಅಭಿಮಾನೋತ್ಸವ ಕಾರ್ಯಕ್ರಮ ಬಿ. ಎಸ್. ಯಡಿಯೂರಪ್ಪನವರ ಕುಟುಂಬದ ಹೊರ ತಾದ ಕಾರ್ಯಕ್ರಮ ಅಭಿಮಾನಿಗಳು ಆ ಯೋಜನೆ ಮಾಡಿರುವಂತಹ ಕಾರ್ಯಕ್ರಮ ಇನ್ನು ನೂರಾರು ಕಾಲ ಬಿ. ಎಸ್. ಯಡಿಯೂರಪ್ಪನವರು ಈ ನಾಡಿನಲ್ಲಿದ್ದು ಇನ್ನು ಹೆಚ್ಚು ಹೆಚ್ಚು ನೊಂದವರ ಮತ್ತು ಧ್ವನಿ ಇಲ್ಲದವರ ಕಣ್ಣೀರು ಒರೆಸುವಂತ ಕಾರ್ಯವನ್ನು ಮಾಡಲಿ ಎಂಬುದು ನನ್ನ ಒತ್ತಾಸೆ. ಈ ಅಭಿಮಾನೋತ್ಸವಕ್ಕೆ ಲಕ್ಷ ಸಂಖ್ಯೆಯಲ್ಲಿ ಅಭಿಮಾನಿಗಳು ಹಾಜರಾಗಿ ಈ ಕಾರ್ಯಕ್ರಮ ನಬೋತೋ ನಾ ಭವಿಷ್ಯತೆ ಎನ್ನುವ ಹಾಗೆ ನಾಡಿನಲ್ಲಿ ಮಾಡಿ ಸಾರ್ವಜನಿಕ ಜೀವನದ ಇವರ ಹೆಜ್ಜೆ ಗುರುತನ್ನು ಈ ಕಾರ್ಯಕ್ರಮದ ಮುಖಾಂತರ ಸಾಕ್ಷಿಕರಿಸಬೇಕೆನ್ನುವುದು ಎಲ್ಲ ಅಭಿಮಾನಿಗಳ ಒತ್ತಾಸೆಯಾಗಿದೆ. ಬಿ.ಎಸ್ ಯಡಿಯೂರಪ್ಪನವರಿಗೆ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಇನ್ನು ಹೆಚ್ಚಿನ ಆರೋಗ್ಯ ಆಯಸ್ಸು ಕರುಣಿಸಿ ನೂರಾರು ಕಾಲ ನಮ್ಮ ಕಣ್ಮುಂದೆ ಇಂತಹ ಸೇವೆಯನ್ನು ಮಾಡಲಿ ಎನ್ನುವುದು ನನ್ನ ಪ್ರಾರ್ಥನೆ.

ಇಂದಿನ ಯುವ ರಾಜಕಾರಣಿಗಳಿಗೆ ಸ್ಫೂರ್ತಿಯ ಸೆಲೆ ಬಿಎಸ್‌ವೈ

ಯಡಿಯೂರಪ್ಪ ಅವರು ಒಬ್ಬ ವ್ಯಕ್ತಿಯಲ್ಲ ಒಂದು ಶಕ್ತಿ, ಇವರು ಹುಟ್ಟು ಹೋರಾಟಗಾರರು, ಹೋರಾಟದಿಂದಲ್ಲೇ ಜನಮನ್ನಣೆ ಪಡೆದು ರಾಜ್ಯ ಹಾಗೂ ದೇಶದ ಜನಪ್ರಿಯತೆ ಗಳಿಸಿದ ಧೀಮಂತ ನಾಯಕ. ಇವರ ರಾಜಕೀಯ ಹಾದಿ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯಾಗಿದೆ. ತಮ್ಮ ಅಧಿಕಾರ ಅವಧಿಯಲ್ಲಿ ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ ಹಾಗೂ ಅಭಿವೃದ್ಧಿ ಪಡಿಸುವಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಈ ದೇಶ ಕಂಡ ಅಪ್ರತಿಮ ರಾಜಕಾರಣಿ ಯಡಿಯೂರಪ್ಪ. ರಾಷ್ಟ್ರೀಯತೆಯನ್ನೇ ಉಸಿರಾಗಿಸಿಕೊಂಡು, ಜನಸಂಘದ ಕಾಲದಿಂದಲೂ ಭಾರತೀಯ ಜನತಾ ಪಕ್ಷದ ಕಟ್ಟಾಳಾಗಿರುವ ಅವರು ಪ್ರಸ್ತುತ ರಾಜಕೀಯದಲ್ಲಿ ಮಾದರಿ ಮೇರು ವ್ಯಕ್ತಿಯಾಗಿದ್ದಾರೆ. ಅವರ ಜೀವನ ಮತ್ತು ಸೇವೆಯನ್ನು ಯಡಿಯೂರಪ್ಪ ಅಭಿಮಾನೋತ್ಸವವಾಗಿ ಆಚರಿಸುತ್ತಿರುವುದು ಅರ್ಥಪೂರ್ಣ. ಸಮಾಜದ ಎಲ್ಲ ವರ್ಗಗಳ ಜನರು ಯಡಿಯೂರಪ್ಪ ಅವರ ಕೊಡುಗೆಯನ್ನು ಮನಸಾರೆ ಮೆಚ್ಚಿದ್ದಾರೆ. ಅದರ ಪರಿಣಾಮವೇ ಅವರ 50 ವರ್ಷಗಳ ಸುದೀರ್ಘ ರಾಜಕೀಯ ಪಯಣಕ್ಕೆ ಜೀವಂತ ಸಾಕ್ಷಿಯಾಗಿದೆ.

– ಸಿ.ಎಸ್.ನಿರಂಜನ್ ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ, ಚಾಮರಾಜನಗರ.

ಬಿಜೆಪಿ ಕಾರ್ಯಕರ್ತರ ಚೈತನ್ಯದ ಚಿಲುಮೆ

ಬಿ.ಎಸ್. ಯಡಿಯೂರಪ್ಪ ಎಂದರೆ ಕೇವಲ ವ್ಯಕ್ತಿಯಲ್ಲ ಅದೊಂದು ಪ್ರೇರಣಾ ಶಕ್ತಿ. ಲಕ್ಷಾಂತರ ಬಿಜೆಪಿ ಕಾರ್ಯಕರ್ತರ ಚೈತನ್ಯ ಶಕ್ತಿ. ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಹೆಬ್ಬಾಗಿಲು ತೆರೆದ ಅದಮ್ಯ ಚೇತನ. ರೈತ ನಾಯಕರಾಗಿ ರಾಜ್ಯಾದ್ಯಂತ ಅನೇಕ ಹೋರಾಟಗಳ ನೇತೃತ್ವ ವಹಿಸಿ, ಯಶಸ್ಸನ್ನು ಕಂಡು, ಸೈಕಲ್ ತುಳಿದುಕೊಂಡು ಗ್ರಾಮ ಗ್ರಾಮಗಳಲ್ಲಿ ಸದೃಢ ಪಕ್ಷ ಸಂಘಟನೆಗೈದು ಇಂದು ಕರ್ನಾಟಕದಾದ್ಯಂತ ಭಾರತೀಯ ಜನತಾ ಪಾರ್ಟಿಗೆ ಭದ್ರ ಬುನಾದಿಯನ್ನು ಹಾಕಿ ಕೊಟ್ಟ ಬಿ.ಎಸ್. ಯಡಿಯೂರಪ್ಪ ಅವರ ಹೆಸರು ಕೇಳಿದೊಡನೆ ಪಕ್ಷದ ಕಾರ್ಯಕರ್ತರು ರೋಮಾಂಚನಗೊಳ್ಳುವುದು ವಾಸ್ತವ. ರಾಜ್ಯದಲ್ಲಿ ಪ್ರಥಮ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಮೂಲಕ ಬಡವರು, ರೈತರು, ಮಹಿಳೆಯರ ಸಹಿತ ಎಲ್ಲಾ ವರ್ಗಗಳ ಜನತೆಯ ಸಂಕಷ್ಟವನ್ನರಿತು ವಿವಿಧ ಜನಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ನೊಂದವರ ಬಾಳಿಗೆ ಆಶಾಕಿರಣವಾಗಿ ಮೂಡಿ ಬಂದವರು ಬಿ.ಎಸ್. ಯಡಿಯೂರಪ್ಪ. ಹೋರಾಟಗಳ ಸರಮಾಲೆಯೊಂದಿಗೆ ಅಪಾರ ಅನುಭವ, ಮುತ್ಸದ್ದಿತನದಿಂದ ರಾಜಕೀಯ ಜೀವನದ ಸಾರ್ಥಕ 50 ಸಂವತ್ಸರಗಳನ್ನು ಪೂರೈಸುತ್ತಿರುವ ಬಿ.ಎಸ್. ಯಡಿಯೂರಪ್ಪ ಅವರ ಮೇರು ವ್ಯಕ್ತಿತ್ವ ನಮಗೆಲ್ಲರಿಗೂ ಪ್ರೇರಣೆಯಾಗಲಿ, ಅವರ ಜೀವನಾದರ್ಶ ಪಕ್ಷದ ಕಾರ್ಯಕರ್ತರಿಗೆ ದಾರಿ ದೀಪವಾಗಲಿ, ಭಗವಂತನು ಅವರಿಗೆ ದೀರ್ಘ ಆಯುಷ್ಯ, ಆರೋಗ್ಯ ಭಾಗ್ಯವನಿತ್ತು ಪಕ್ಷ ಸಂಘಟನೆಗೆ ನಿರಂತರ ಮಾರ್ಗದರ್ಶನ ನೀಡುವ ಚೈತನ್ಯ ಶಕ್ತಿಯನ್ನು ನೀಡಿ ಹರಸಲಿ.

– ಕುತ್ಯಾರು ನವೀನ್ ಶೆಟ್ಟಿ, ಜಿಲ್ಲಾಧ್ಯಕ್ಷರು, ಬಿಜೆಪಿ ಉಡುಪಿ ಜಿಲ್ಲೆ

ರಾಜಕೀಯ ಇತಿಹಾಸದಲ್ಲಿಯೇ ಭಿನ್ನ ವ್ಯಕ್ತಿತ್ವ

ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಲ್ಲಿ ಬರೆದಿಡಬೇಕಾದ ಹೆಸರು ಬಿ.ಎಸ್. ಯಡಿಯೂರಪ್ಪನವರದು. ಅವರು ರಾಜಕೀಯ ಜೀವನದಲ್ಲಿ 50 ವರ್ಷಗಳನ್ನು ಪೂರೈಸಿರುವುದು ನಮ್ಮೆಲ್ಲರಿಗೂ ಅತ್ಯಂತ ಹೆಮ್ಮೆಯ ಮತ್ತು ಶುಭ ಸಂದರ್ಭವಾಗಿದೆ. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತೆ ಎನ್ನುವ ಮಾತು ಕೇವಲ ಬಾಯಿ ಮಾತಲ್ಲ, ಅದು ಅವರ ಹೋರಾಟದ ಕಿಚ್ಚಿಗೆ ಸಾಕ್ಷಿ. ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಾರ್ಟಿಯ ಹೆಬ್ಬಾಗಿಲನ್ನು ತೆರೆಯುವಲ್ಲಿ ಮತ್ತು ಶೂನ್ಯದಿಂದ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಅವರ ಪಾತ್ರ ಅಗ್ರಗಣ್ಯವಾದುದು. ಈ ಮಹಾನ್ ನಾಯಕನ 50 ವರ್ಷಗಳ ಸಾರ್ಥಕ ಸೇವೆಯ ಸಂಭ್ರಮದ ಪ್ರಯುಕ್ತ ಆಯೋಜಿಸಿರುವ 'ಅಭಿಮಾನೋತ್ಸವ' ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಲಿ. ಈ ಕಾರ್ಯಕ್ರಮವು ರಾಜ್ಯದ ಜನತೆಗೆ ಯುವ ಕಾರ್ಯಕರ್ತರಿಗೆ ಹೊಸ ಚೈತನ್ಯವನ್ನು ನೀಡಲಿ.

– ವೀರನಗೌಡ ಪಾಟೀಲ್ ಲೆಕ್ಕಿಹಾಳ್, ಜಿಲ್ಲಾಧ್ಯಕ್ಷರು, ರಾಯಚೂರು.

ಭದ್ರಕೋಟೆ ನಿರ್ಮಾಣದ ಅಡಿಪಾಯ

ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರಕೋಟೆ ನಿರ್ಮಿಸಿದ ಕೀರ್ತಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಶಿಕಾರಿಪುರದ ನಾಲ್ಕು ಬಾರಿ ಮುಖ್ಯಮಂತ್ರಿಯಾಗುವವರೆಗೆ ಅತ್ಯಂತ ಸಂಘರ್ಷಮಯ ಹಾಗೂ ಸಾರ್ಥಕವಾದುದು. ಹಗಲಿರುಳು ರಾಜ್ಯ ಪ್ರವಾಸ ಮಾಡಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಅವರ ಸಂಘಟನಾ ಶಕ್ತಿ ಅದ್ವಿತೀಯ. ಬಿಎಸ್‌ವೈ ಅವರ 50 ವರ್ಷಗಳ ರಾಜಕೀಯ ಜೀವನವು ಜನಸೇವೆಯ ಪವಿತ್ರ ಹಾದಿಯಾಗಿದೆ. 'ಅಭಿಮಾನೋತ್ಸವ'ವು ಅವರ ಸಾರ್ಥಕ ಸಾಧನೆಗೆ ನಾವು ಸಲ್ಲಿಸುತ್ತಿರುವ ಗೌರವದ ಸಂಕೇತವಾಗಿದೆ.

– ಚಂದು ಪಾಟೀಲ್ ಜಿಲ್ಲಾಧ್ಯಕ್ಷರು, ಬಿಜೆಪಿ ಜಿಲ್ಲಾಧ್ಯಕ್ಷ, ಕಲಬುರಗಿ.

ಇಡೀ ಜೀವನ ಪಕ್ಷಕ್ಕೆ ಮೀಸಲಿಟ್ಟ ವ್ಯಕ್ತಿ



ಯಡಿಯೂರಪ್ಪ ಅವರು ಕೇವಲ ಒಂದು ಶಕ್ತಿಯಾಗಿರಲಿಲ್ಲ. ಬದಲಿಗೆ ಅವರೊಂದು ಶಕ್ತಿ. ಇಡೀ ಜೀವನವನ್ನು ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು, ಸರಕಾರಗಳನ್ನು ಎಚ್ಚರಿಸಲು, ಅನ್ಯಾಯದ ವಿರುದ್ಧ ಹೋರಾಡಲು ಮೀಸಲಿಟ್ಟಿರು. ಬಿಜೆಪಿಗಾಗಿಯೇ ತಮ್ಮ ಜೀವನದ ಬಹುಪಾಲು ಸಮಯ ಮುಡುಪಾಗಿಟ್ಟ ಧೀಮಂತ ವ್ಯಕ್ತಿ ನಮ್ಮ ಯಡಿಯೂರಪ್ಪ ನವರು. ಪಕ್ಷದ ಜತೆ ರೈತರ ಪರವಾಗಿ ಸದಾ ಮಿಡಿಯುವ ಹೃದಯ. ರೈತರಿಗೋಸ್ಕರ ತನ್ನ ಜೀವನವನ್ನೇ ಮುಡಿಪಾಗಿಟ್ಟವರು ಎಂದರೆ ತಪ್ಪಾಗಲಾರದು. ಮೊದಲನೆ ಬಾರಿಗೆ ರೈತರಿ ಗೋಸ್ಕರ ಕೃಷಿ ಬಜೆಟ್ ಮಂಡಿಸಿದ ಏಕೈಕ ಧೀಮಂತ ನಾಯಕರು. ಕಾರ್ಯಕರ್ತರ ಕೆಲಸ ಗುರುತಿಸಿ ಸೂಕ್ತ ಸ್ಥಾನಮಾನ ಕೊಡುವವರು ಯಡಿಯೂರ ಪ್ಪಾಜಿ. ಬಿಎಸ್‌ವೈ ಎನ್ನುವ ಹೆಸರೇ ಒಂದು ಶೇಷ. ಯಡಿಯೂರಪ್ಪ ಬರುತ್ತಾರೆಂದರೆ ವಿಧಾನ ಸೌಧವೇ ನಡುಗುವುದು ಎಂಬ ಮಾತಿದೆ. ಅವರು ಬಂದು ಹೋದಲ್ಲೆಲ್ಲಾ ಬಿಜೆಪಿ ವಿಜಯಪತಾಕೆ ಹಾರಿಸಿದೆ. ಇಂತಹ ಇನ್ನೊಬ್ಬ ನಾಯಕ ಮತ್ತೊಬ್ಬರಿಲ್ಲ. ಇಂತಹ ಮಹನೀಯ ರೊಂದಿಗೆ ಕೆಲಸ ಮಾಡುತ್ತಿರುವುದು ನನ್ನ ಪೂರ್ವಜನ್ಮದ ಪುಣ್ಯವೇ ಸರಿ. ಇಂತಹ ವ್ಯಕ್ತಿ ಸಾರ್ವಜನಿಕ ಜೀವನಕ್ಕೆ ಬಂದು 50 ವರ್ಷ ಪೂರೈಸುತ್ತಿದ್ದಾರೆ. ಈ ಅಪರೂಪದ ಗಳಿಗೆಯಲ್ಲಿ ನಾವೂ ಭಾಗವಹಿಸುತ್ತಿರುವುದು ತಮ್ಮ ಅದೃಷ್ಟ.

–ಎನ್. ರಾಜಶೇಖರ್, ಬಿಜೆಪಿ ಜಿಲ್ಲಾಧ್ಯಕ್ಷರು, ದಾವಣಗೆರೆ

ಬಿಎಸ್‌ವೈ ನಾಡಿನ ಬಹುದೊಡ್ಡ ಶಕ್ತಿ

ಯಡಿಯೂರಪ್ಪ ಅವರನ್ನು ಕೇವಲ ಒಂದು ವ್ಯಕ್ತಿಯಾಗಿ ಅಥವಾ ಅವರನ್ನು ಒಂದು ಸಮುದಾಯಕ್ಕೆ ಸೀಮಿತವಾಗಿ ನೋಡುವ ವ್ಯಕ್ತಿತ್ವವಲ್ಲ. ಅವರು ನಾಡಿ, ಪಕ್ಷದ ಬಹುದೊಡ್ಡ ಶಕ್ತಿ. ಧೀಮಂತ ನಾಯಕ. ಬಿಜೆಪಿ ಆರಂಭದಲ್ಲಿ ಅವರು ರಾಜ್ಯಾದ್ಯಂತ ಕಾಲಿಗೆ ಚಕ್ರಕಟ್ಟಿಕೊಂಡು ತಮ್ಮವರೊಂದಿಗೆ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟಿಸಿ, ಹೋರಾಟ ನಡೆಸಿದ ಫಲವಾಗಿ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೂ ಬರುವಂತಾಯಿತು. ಪಕ್ಷದ ಸಾಮಾನ್ಯ ಕಾರ್ಯಕರ್ತರೂ ಜನಪ್ರತಿನಿಧಿಗಳಾಗುವಂತಾಯಿತು. ನಾನೂ ಸೇರಿದಂತೆ ಅದೆಷ್ಟೋ ಜನರಿಗೆ ಜನಪ್ರತಿನಿಧಿಗಳಾದೆವು. ಜನಸೇವೆ ಮಾಡುವ ಅವಕಾಶ ದೊರೆಯಿತು. ಮುಖ್ಯಮಂತ್ರಿಯಾದ ಯಡಿಯೂರಪ್ಪ ರೈತರು, ಮೀನುಗಾರರು, ಬಡವರು, ದೀನ ದಲಿತರ ಏಳಿಗೆಗೆ ಹಲವು ಯೋಜನೆಗಳನ್ನು ತಂದು ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಈಗಲೂ ಚುರುಕಾಗಿ ಪಕ್ಷ ಸಂಘಟನೆಗೆ ಕೊಡುಗೆ ನೀಡುತ್ತಿದ್ದಾರೆ. ಅವರೊಬ್ಬ ಮಾದರಿ ಜನನಾಯಕರು. ರಾಜ್ಯದ ಜನತೆ ಅವರಿಗೆ ಅಭಿಮಾನೋತ್ಸವ ಆಚರಿಸುವ ಸಂಭ್ರಮದಲ್ಲಿದ್ದಾರೆ. ನಾನೂ ಕೂಡ ಸಂತಸದಿಂದ ಪಾಲ್ಗೊಳ್ಳಲಿದ್ದೇನೆ.

–ರೂಪಾಲಿ ಎಸ್.ನಾಯ್ಕ, ಬಿಜೆಪಿ ರಾಜ್ಯ ಉಪಾಧ್ಯಕ್ಷರು

ಕರ್ನಾಟಕದ ರೈತರ ಕಣ್ಮಣಿ ಬಿಎಸ್‌ವೈ

ಕರ್ನಾಟಕ ಕಂಡ ಅಪ್ರತಿಮ ಜನನಾಯಕ ರೈತರ ಕಣ್ಮಣಿ ಬಿ.ಎಸ್.ಯಡಿಯೂರಪ್ಪನವರು ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿ ಹಂತ ಹಂತವಾಗಿ ಮೇಲೆ ಏರುತ್ತಾ ದೇಶವೇ ತಿರುಗಿ ನೋಡುವಂತ ನಾಯಕ ನಾಗಿ ಬೆಳೆದ ಹುಟ್ಟು ಹೋರಾಟಗಾರನ ರಾಜಕೀಯ ಬದುಕಿಗೆ 50 ವರ್ಷದ ಸಂಭ್ರಮ. ಅವರ ರಾಜಕೀಯ ಮತ್ತು ಸಾಮಾಜಿಕ ಬದುಕು ಎಲ್ಲರಿಗೂ ಸ್ಫೂರ್ತಿದಾಯಕ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿ ಅಧಿಕಾರವಹಿಸಿಕೊಂಡು ಅಭಿವೃದ್ಧಿಯ ಪರ್ವವನ್ನು ಆರಂಭಿಸಿದರು. ಸದಾ ರೈತರ ಹಿತಕ್ಕಾಗಿ ಕಾಳಜಿ ವ್ಯಕ್ತಪಡಿಸುವ ಅವರು ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ್ದರು. ಮೂಲಸೌಕರ್ಯ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಆರಂಭಿಸುವಂತಹ ಯೋಜನೆಗಳನ್ನು ಜಾರಿಗೆ ತಂದರು ಭಾಗ್ಯಲಕ್ಷ್ಮಿ ಸಂಧ್ಯಾ ಸುರಕ್ಷಾದಂತಹ ಕಾರ್ಯಕ್ರಮ ಅನುಷ್ಠಾನಗೊಳಿಸಿದರು. ರೈಲ್ವೆಯಲ್ಲಿ ಕರ್ನಾಟಕ ಹಿಂದುಳಿದಿದ್ದನ್ನ ಗಮನಿಸಿದ ಅವರು ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರದಿಂದ ಶೇಕಡ 50ರಷ್ಟು ಮೊತ್ತ ಭರಿಸುವ ಯೋಜನೆ ತಂದರು. ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡಿದರು. ವಿರೋಧ ಪಕ್ಷದ ನಾಯಕರಾಗಿಯೂ ಸಹ ವಿಧಾನಸಭೆಯಲ್ಲಿ ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸಿದವರು. ನೂರಾರು ಸವಾಲುಗಳ ಮಧ್ಯೆ ರಾಷ್ಟ್ರೀಯತೆಯನ್ನು ಜಾಗೃತಿ ಮಾಡುತ್ತ ವಿಧಾನಸಭೆಯಲ್ಲಿ ಭೂಷಣರಾದವರು ಬಿ.ಎಸ್.ಯಡಿಯೂರಪ್ಪ. ಇಂತಹ ಶ್ರೇಷ್ಠ ನಾಯಕನಿಗೆ ರಾಜಕೀಯದ 50 ವರ್ಷದ ಸಂಭ್ರಮಕ್ಕೆ ಶುಭ ಕೋರುತ್ತೇನೆ.

–ಎನ್.ಎಸ್.ಹೆಗಡೆ, ಅಧ್ಯಕ್ಷರು ಭಾರತೀಯ ಜನತಾ ಪಾರ್ಟಿ ಉತ್ತರ ಕನ್ನಡ.

ಜಾತಿ, ಧರ್ಮ ಮೀರಿ ಮಾನವೀಯ ವ್ಯಕ್ತಿತ್ವ

ಕರ್ನಾಟಕ ಕಂಡ ಧೀಮಂತ ನಾಯಕ ಬಿ.ಎಸ್ ಯಡಿಯೂರಪ್ಪ ಎಂಬುದರಲ್ಲಿ ಯಾವುದೇ ಸಂಶಯಬೇಡ. ಪ್ರತೀ ಸಮುದಾಯದ ಹಿತಚಿಂತನೆ ಬಯಸಿದ್ದ ಮತ್ತು ಎಲ್ಲಾ ವರ್ಗದವರಿಗೂ ವಿವಿಧ ಯೋಜನೆಗಳ ಮೂಲಕ ಸಹಾಯ ನೀಡಿದ್ದ ಮಹಾನ್ ವ್ಯಕ್ತಿ ಯಡಿಯೂರಪ್ಪ ಅವರು. ಮಹಿಳೆ ಯರು, ಕೃಷಿಕರು, ಪರಿಶಿಷ್ಟ ಜಾತಿ,ಪಂಗಡವರು, ವಿದ್ಯಾರ್ಥಿಗಳಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಜಾರಿಗೊಳಿಸಿದ್ದ ವಿವಿಧ ಕಲ್ಯಾಣ ಯೋಜನೆಗಳು ಇಂದಿಗೂ ಜನಮಾನ ಸದಲ್ಲಿದೆ. ಯಡಿಯೂರಪ್ಪ ಅವರದ್ದು ಸದಾ ನ್ಯಾಯಕ್ಕಾಗಿ ತುಡಿಯುವ ಮನಸ್ಸು, ನ್ಯಾಯ ದೊರ ಕದೇ ಇದ್ದಾಗ ಪ್ರಬಲ ಹೋರಾಟಕ್ಕೂ ಮುಂದಾ ಗುತ್ತಿದ್ದ ವ್ಯಕ್ತಿತ್ವ ಅವರದ್ದಾಗಿದೆ. ಯಡಿಯೂರಪ್ಪ ಅವರು ರಾಜ್ಯದ ರೈತರ ಪರವಾಗಿ ತೋರಿದ್ದ ಕಾಳಜಿಯನ್ನು ಮತ್ತೆ ಯಾವುದೇ ರಾಜಕಾರಣಿಯೂ ತೋರಿಲ್ಲ ಎಂಬುದೂ ನಿರ್ವಿವಾದ. ಮಳೆ ಹಾನಿ ಪರಿಹಾರ ಇರಬಹುದು, ಕೃಷಿ ಫಸಲು ಸಾಲ ಯೋಜನೆ ಇರಬಹುದು, ಕಾಫಿ ಕೃಷಿಗೆ ಸಮಸ್ಯೆ ಎದುರಾದಾಗ ಯಡಿಯೂರಪ್ಪ ನೀಡಿದ ವಿಶೇಷ ಪರಿಹಾರ ಇರಬಹುದು. ಎಲ್ಲವನ್ನೂ ರೈತಾಪಿಗಳು ಸದಾ ಸ್ಮರಿಸುತ್ತಾರೆ. ಹೀಗಾಗಿಯೇ ಮಣ್ಣಿನ ಮಗ ರೈತ ಪರ ಕಾಳಜಿಯ ನಾಯಕ ಎಂಬ ವರ್ಣನೆ ಯಡಿಯೂರಪ್ಪ ಅವರನ್ನು ಸದಾ ಬೆಸೆದುಕೊಂಡಿದೆ. ಭಾರತವನ್ನು ವಾಜಪೇಯಿಯವರು ಪ್ರಧಾನಿಯಾಗಿ ಹೇಗೆ ಪ್ರಗತಿಪಥದಲ್ಲಿ ಸಾಗಿಸುವ ಕನಸು ನನಸಾಗಿಸಿದರೋ ಹಾಗೇ ಕರ್ನಾಟಕವನ್ನು ವಿವಿಧ ಅಭಿವೃದ್ಧಿ ಯೋಜನೆಗಳ ಮೂಲಕ ಯಡಿಯೂರಪ್ಪ ಪ್ರಗತಿಪಥದಲ್ಲಿ ಕೊಂಡೊಯ್ದಿದ್ದರು. ವಿದ್ಯಾರ್ಥಿ ನಿಯರು ಹೆಚ್ಚು ಶಿಕ್ಷಣ ಪಡೆಯಬೇಕೆಂಬ ಯಡಿಯೂರಪ್ಪ ಆಶಯದ ಫಲವೇ ಸರಕಾರಿ ಶಾಲಾ ವಿದ್ಯಾರ್ಥಿನಿಯರು ಭಾಗ್ಯಲಕ್ಷ್ಮಿ ಯೋಜನೆ ಮೂಕ ಉಚಿತವಾಗಿ ಸೈಕಲ್ ಪಡೆದದ್ದು ಯಡಿಯೂರಪ್ಪ ಅವರ ದೂರದಷ್ಟಿಗೆ ಸೂಕ್ತ ಉದಾಹರಣೆಯಾಗಿದೆ. ಬೆಂಗಳೂರನ್ನು ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಅಭಿವೃದ್ಧಿಪಡಿಸುವಲ್ಲಿ ಯಡಿಯೂರಪ್ಪ ಅವರ ಚಿಂತನೆ ಮುಖ್ಯ ಕಾರಣ ಎಂಬುದನ್ನು ಮರೆಯುವಂತಿಲ್ಲ.



ನಾಪಂಡ ರವಿಕಾಳಪ್ಪ,
ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ

ಕೊಡಗಿನ ಬಗ್ಗೆ ಯಡಿಯೂರಪ್ಪ ಅವರಿಗೆ ವಿಶೇಷ ಅಭಿಮಾನವಿತ್ತು ಕೊಡಗಿನ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳು, ಅದಕ್ಕೆ ತಕ್ಕಂತೆ ಸಾವಿರಾರು ಕೋಟಿ ರುಪಾಯಿ ಅನುದಾನ ನೀಡಿದ್ದ ಯಡಿಯೂರಪ್ಪ, ಕೆ.ಜಿ.ಬೋಪಯ್ಯ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಕೊಡಗಿಗೆ ಪ್ರಮುಖ ಹುದ್ದೆಯನ್ನು ನೀಡಿದ್ದರು. ಎಂ.ಪಿ. ಅಪ್ಪಚ್ಚು ರಂಜನ್ ಅವರನ್ನು ಕ್ರೀಡಾಸಚಿವರನ್ನಾಗಿ ಮಾಡಿ ಕ್ರೀಡಾ ನೀತಿಗೆ ಕಾರಣರಾದರು. ಯಡಿ ಯೂರಪ್ಪ ಅವರು ಜನನಾಯಕನಾಗಿ, ಜನಸೇವೆ ಯಲ್ಲಿ 5 ದಶಕಗಳನ್ನು ಪೂರ್ಣಗೊಳಿಸಿದ ಸ್ಮರಣೆ ಯಲ್ಲಿ ಆಯೋಜಿತ ಉತ್ಸವ ಖಂಡಿತವಾಗಿಯೂ ಧೀಮಂತ ನಾಯಕನಿಗೆ ಸಲ್ಲಲೇಬೇಕಾದ ಗೌರವವಾ ಗಿದೆ. ಈ ಮೂಲಕ ಇಂಥ ಜನನಾಯಕನನ್ನು ಪಡೆದ ಕರ್ನಾಟಕದ ಜನ ಧನ್ಯರು.

ವರ್ಷ ಕಳೆದಷ್ಟು ವರ್ಚಸ್ಸು ಹೆಚ್ಚಳ

ಸುಮಾರು ಐದು ದಶಕಗಳ ಸುದೀರ್ಘ ರಾಜಕೀಯ ಅವಧಿಯಲ್ಲಿ ಒಬ್ಬ ರಾಜಕಾರಣಿ ಜನಪ್ರಿಯತೆಯನ್ನು ಉಳಿಸಿ ಕೊಳ್ಳುವುದು ಸವಾಲಿನ ಕೆಲಸ. ಆದರೆ ಯಡಿಯೂರಪ್ಪನವರ ವಿಷಯದಲ್ಲಿ ಇದು ತದ್ವಿರುದ್ಧ. ರಾಜ್ಯದ ಯಾವುದೇ ಮೂಲೆಗೆ ಹೋದರೂ ಇವರು ಹೆಸರು ಹಿಡಿದು ಕರೆಯುವ ಮಟ್ಟಿಗೆ ಕಾರ್ಯಕರ್ತರ ಪಡೆಯನ್ನು ಹೊಂದಿದ್ದಾರೆ. ಇದೇ ಕಾರಣಕ್ಕೆ ರಾಜ್ಯದಲ್ಲಿ ಬಿಜೆಪಿ ಇಷ್ಟೊಂದು ಗಟ್ಟಿಯಾಗಿ ಬೆಳೆಯಲು ಯಶಸ್ವಿಯಾಗಿದ್ದು. ಉತ್ತರ ಕರ್ನಾಟಕ ಭಾಗದ ಅದರಲ್ಲೂ ಬೆಳಗಾವಿಯಂತಹ ದೊಡ್ಡ ಜಿಲ್ಲೆಯಲ್ಲಿ ಬಿಜೆಪಿ ಇಷ್ಟೊಂದು ಘಟ್ಟಿಯಾಗಲು ಕಾರಣ ಯಡಿಯೂರಪ್ಪ ನವರ ಶಕ್ತಿ. ಎಲ್ಲಾ ನಾಯಕರನ್ನು ಒಗ್ಗೂಡಿಸಿ ಪಕ್ಷ ಸಂಘಟನೆ ಮಾಡಿದ ರೀತಿ ನಿಜಕ್ಕೂ ಅದ್ಭುತ. ಇಂತಹ ಮಹಾನ್ ನಾಯಕನ ಅಭಿಮಾನೋತ್ಸವ ನಿಜಕ್ಕೂ ನಮ್ಮ ಬದುಕಿನ ಅಮೂಲ್ಯ ಕ್ಷಣಗಳಲ್ಲಿ ಒಂದು ಎಂದರೆ ತಪ್ಪಾಗಲಾರದು.

– ಸತೀಶ್ ಅಪ್ಪಾಜಿಗೋಳ, ಬಿಜೆಪಿ ಜಿಲ್ಲಾಧ್ಯಕ್ಷ, ಚಿಕ್ಕೋಡಿ

ಕೃಷಿಕರ ಪಾಲಿನ ಆಶಾಕಿರಣ

ದೇಶದಲ್ಲೇ ಮೊದಲ ಬಾರಿಗೆ ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿದ ಬಿ. ಎಸ್.ಯಡಿಯೂರಪ್ಪನವರು ಕೃಷಿಕರ ಪಾಲಿನ ನಿಜವಾದ ಆಶಾಕಿರಣ. ರೈತ ವಿದ್ಯಾನಿಧಿ, ಶೂನ್ಯ ಬಡ್ಡಿ ಸಾಲ ಹಾಗೂ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಮೂಲಕ ಅವರು ಗ್ರಾಮೀಣ ಬದುಕನ್ನು ಹಸನುಗೊಳಿಸಿದರು. ಕಿಸಾನ್ ಸಮ್ಮಾನ್ ಯೋಜನೆಗೆ ರಾಜ್ಯದ ಪಾಲಿನ? 4,000 ಸೇರಿಸಿ ರೈತರ ಕೈ ಹಿಡಿದರು. ಭಾಗ್ಯಲಕ್ಷ್ಮಿ ಮತ್ತು ಉಚಿತ ಸೈಕಲ್ ವಿತರಣೆಯಂತಹ ಯೋಜನೆಗಳು ಕ್ರಾಂತಿಕಾರಿ ಬದಲಾವಣೆ ತಂದಿವೆ. ಸಂಕಷ್ಟದ ಕಾಲದಲ್ಲಿ ಮನೆ ಹಾನಿಗೆ 5 ಲಕ್ಷ ರು.ವರೆಗೆ ಪರಿಹಾರ ನೀಡಿ ಸಂತ್ರಸ್ತರ ಕಣ್ಣೀರು ಒರೆಸಿದ ಜನನಾಯಕ ಇವರು. ಇಂತಹ ದೂರದೃಷ್ಟಿಯ ಯೋಜನೆಗಳೇ ಇಂದು ನಮ್ಮ ಪಕ್ಷಕ್ಕೆ ಮತ್ತು ನಾಡಿನ ಅಭಿವೃದ್ಧಿಗೆ ಭದ್ರ ಬುನಾದಿಯಾಗಿವೆ.

–ಅಶೋಕ್ ಬಗಲಿ, ಬಿಜೆಪಿ ಜಿಲ್ಲಾಧ್ಯಕ್ಷ, ಕಲಬುರಗಿ ಗ್ರಾಮಾಂತರ

ದಣಿವರಿಯದ ಜನಪರ ಹೋರಾಟಗಾರ

ರೈತರ ಕಣ್ಮಣಿ, ಸರ್ವಜನಾಂಗದ ಹಿತಚಿಂತಕ ದಣಿವರಿಯದ ಜನಪರ ಹೋರಾಟಗಾರ ನಾಡುಕಂಡ ಧೀಮಂತ ನಾಯಕ. ಜನ ಸೇವೆಗಾಗಿಯೇ ತಮ್ಮ ಜೀವನವನ್ನೇ ಮುಡುಪಾಗಿಟ್ಟ, ಸರ್ವ ಜನರ ಏಳ್ಗೆಗಾಗಿ ಶ್ರಮಿಸಿದ ಬಿ.ಎಸ್. ಯಡಿಯುರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮೇ 9 ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮವು ಪಕ್ಷದ ಕಾರ್ಯಕರ್ತರಿಗೆ ಪ್ರೇರಣೆಯಾಗಲಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರತಿ ಕ್ಷೇತ್ರದಿಂದ ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಅನ್ಯಾಯದ ವಿರುದ್ಧ ಹೋರಾಟ ಮಾಡುವ ಮೂಲಕ ಹಾಗೂ ಕರ್ನಾಟಕದಲ್ಲಿ ಬಿಜೆಪಿ ಪಕ್ಷ ಸಂಘಟನೆ ಮತ್ತು ಲಿಂಗಾಯತ ಸಮುದಾಯದ ಪ್ರಬಲ ನಾಯಕರಾಗಿ ರಾಜ್ಯ ರಾಜಕೀಯದಲ್ಲಿ ಜನಪ್ರಿಯ ನಾಯಕರಾಗಿದ್ದಾರೆ.

–ಸೋಮನಾಥ ಪಾಟೀಲ್ ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷ ಬೀದರ್

ಯಡಿಯೂರಪ್ಪನೆಂಬ ಛಲದಂಕಮಲ್ಲ

ಛಲದಂಕ ಮಲ್ಲ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ರಾಜ್ಯ ಕಂಡ ಅಪ್ರತಿಮ ರಾಜಕಾರಣಿ. ರಾಜ್ಯದ ರೈತರು, ಬಡವರು, ದಲಿತರ ಪರವಾಗಿ ಹೋರಾ ಡಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ದುಡಿದಿದ್ದಾರೆ. ಅವರ ಈ 50 ವರ್ಷಗಳ ಸಾರ್ಥಕ ರಾಜಕೀಯ ಜೀವನ ಮಾದರಿ ಯಾಗಿದೆ. ಯುವ ರಾಜಕಾರಣಿಗಳಿಗೆ ಹಾಗೂ ಯುವ ಪೀಳಿಗೆಗೆ ಯಡಿಯೂರಪ್ಪ ದಾರಿ ದೀಪವಾಗಿದ್ದಾರೆ. ಅವರ 50 ವರ್ಷದ ರಾಜಕೀಯ ಜೀವನ ಮಾರ್ಗದರ್ಶನವಾಗಬೇಕಿದೆ. ಛಲಕ್ಕೆ ಮತ್ತೊಂದು ಹೆಸರಾಗಿದ್ದು, ಜನ ಸೇವೆಗಾಗಿಯೇ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅಧಿಕಾರಕ್ಕಾಗಿಯೇ ಅವರು ಹೋರಾಟ ಮಾಡಲಿಲ್ಲ. ಬಡವರ ಕಣ್ಣೀರನ್ನು ಒರೆಸುವ ಸಲುವಾಗಿ ಕೆಲಸ ಮಾಡಿದ್ದಾರೆ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ, ಪಕ್ಷವನ್ನು ಕಟ್ಟಿ ಬೆಳೆಸಿದರು. ರಾಜಕಾರಣಿ ಎಂದರೆ ಯಾವ ರೀತಿ ಇರಬೇಕು ಎಂಬುದನ್ನು ಬಿಎಸ್‌ವೈ ಅವರನ್ನು ನೋಡಿ ಕಲಿಯಬೇಕಿದೆ. ನುಡಿದಂತೆ ನಡೆದ ವ್ಯಕ್ತಿ ಯಾಗಿ ದ್ದಾರೆ. ಯಡಿಯೂರಪ್ಪನವರು ತಮ್ಮ ರಾಜಕೀಯ ಗರಡಿಯಲ್ಲಿ ತಮ್ಮದೇ ಆದ ಸಾಧನೆ ಮೂಡಿಸಿದ್ದಾರೆ. ಮುಖ್ಯಮಂತ್ರಿ ಆಗಿ ಸ್ಮರಣೆ ಕೊಡುಗೆಗಳನ್ನು ನಾಡಿಗೆ ನೀಡಿದ್ದಾರೆ. ಯಡಿಯೂರಪ್ಪ ನವರ ವ್ಯಕ್ತಿತ್ವ ನಮಗೆ ಪ್ರೇರಣೆ.

– ರವಿಶಂಕರ್ ಹೆಬ್ಬಾಕ, ಬಿಜೆಪಿ ಜಿಲ್ಲಾಧ್ಯಕ್ಷ, ತುಮಕೂರು.

ಕಮಲಕ್ಕೆ ದ. ಭಾರತ ಹೆಬ್ಬಾಗಿಲು ತೆರದ ಧೀಮಂತ

ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ತೆರೆದ ಕಟ್ಟಾಳು, ಕರ್ನಾಟಕ ಕಂಡ ಅಪ್ರತಿಮ ಜನನಾಯಕ, ರೈತರ ಕಣ್ಮಣಿ ಬಿ.ಎಸ್ ಯಡಿಯೂರಪ್ಪ ಅವರ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಹಂತ ಹಂತವಾಗಿ ಮೇಲೆರಿ ಇಡೀ ದೇಶವೆ ತಿರುಗಿ ನೋಡುವಂಥ ನಾಯಕನಾಗಿ 50 ವರ್ಷಗಳ ಸಕ್ರಿಯ ರಾಜಕಾರಣ ಪೂರ್ಣಗೊಳಿಸಿರುವುದು ನಿಜಕ್ಕೂ ಸಾಧನೆಯ ಹಾದಿಯಾಗಿದೆ. ಮುಖ್ಯಮಂತ್ರಿಯಾಗಲು ಅಭೂತಪೂರ್ವ ಸಂದರ್ಭದಲ್ಲಿ ಹಿಂದೆ ದೊಡ್ಡ ಹೋರಾಟವಿತ್ತು. ಪರಿಶ್ರಮವಿತ್ತು ಲಕ್ಷಾಂತರ ಕಾರ್ಯಕರ್ತರ ಹೊನ್ನ ಕಳಸದಂತೆ ಬಿಎಸ್‌ವೈ ಅಂದು ನಾಡಿನ ಚೌಕಿದಾರ್ ಆಗಿ ಅಧಿಕಾರದ ಗದ್ದುಗೆ ಹಿಡಿಯಲು ಸವೆದ ದಾರಿ ಕಲ್ಲು ಮಣ್ಣುಗಳ ಹಾದಿಯಾಗಿತ್ತು. ಅಂದಿನಿಂದ ಇಂದಿಗೂ ಇಳಿಯ ವಯಸ್ಸಿನಲ್ಲಿಯೂ ಸಹ ಎದೆಗುಂದದೆ ಪರಿಸ್ಥಿತಿ ನಿಭಾಯಿಸುವಕಲೆ ಈ ಯುಗದ ರಾಜಕಾರಣಿಗಳಿಗೆ ಮಾದರಿಯಾಗಿದೆ. ಜನಪರ ಆಡಳಿತ, ಅಧಿಕಾರಿಗಳೊಂದಿಗೆ ಹೊಂದಿದ್ದ ನಡವಳಿಕೆ ಮತ್ತು ಪಕ್ಷ , ಸರಕಾರದ ನಡುವಿನ ಸಮನ್ವಯದ ವಿಷಯ ಬಂದಾಗ ಆಡಳಿತ ವೈಖರಿ ವಿರೋಧಿಗಳು ಕೂಡಾ ಮೆಚ್ಚುವಂತಾಗಿದೆ.ಸದ್ಯ 84ರ ಇಳಿ ವಯಸ್ಸಿನಲ್ಲಿಯೂ ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಅವರ ಬದ್ಧತೆ ರಾಜಕಾರಣಿಗೆ ಸಾಕ್ಷಿಯಾಗಿದೆ.

–ಬಸವರಾಜ ವಿಭೂತಿಹಳ್ಳಿ, ಬಿಜೆಪಿ ಜಿಲ್ಲಾಧ್ಯಕ್ಷರು, ಯಾದಗಿರಿ

ಯಡಿಯೂರಪ್ಪ ಬಿಜೆಪಿ ಪಾಲಿನ ಆಸ್ತಿ

ಬಿ.ಎಸ್. ಯಡಿಯೂರಪ್ಪ ಅವರು ಭಾರತೀಯ ಜನತಾ ಪಕ್ಷದ ಅಮೂಲ್ಯ ಆಸ್ತಿ. ಜಾತಿ, ಜನಾಂಗ ಮೆಟ್ಟಿನಿಂತು ರಾಜ್ಯದಲ್ಲಿ ಪಕ್ಷವನ್ನು ಗಟ್ಟಿಗೊಳಿಸಿದ ಧೀಮಂತ ನಾಯಕ. ತಮ್ಮ ಬದುಕನ್ನೇ ಪಕ್ಷಕ್ಕೆ ಮುಡಿಪಾಗಿಟ್ಟವರು, ವೈಯಕ್ತಿಕ ಜೀವನ ಬದಿಗೊತ್ತಿ ರಾಜ್ಯಾದ್ಯಂತ ಸೈಕಲ್ ಮೂಲಕ ಪ್ರವಾಸ ಮಾಡಿ, ಹಳ್ಳಿ ಹಳ್ಳಿಗಳಲ್ಲಿ ಓಡಾಡಿ ಪಕ್ಷ ಕಟ್ಟಿದ್ದಾರೆ, ಇಡೀ ದಕ್ಷಿಣ ಭಾರತದಲ್ಲಿ ಬಿಜೆಪಿ ಸದೃಢಗೊಳಿಸುವ ಜತೆಗೆ ಸರಕಾರ ರಚನೆ ಮಾಡಿ ಸೈ ಎನಿಸಿಕೊಂಡವರು. ಹಿಂದುತ್ವ ಉಳಿಸುವ ವಿಚಾರದಲ್ಲಿ ತಮ್ಮದೇ ರೀತಿಯಲ್ಲಿ ಹೋರಾಟ ಮಾಡಿ ಯಶಸ್ವಿಯಾಗಿದ್ದಾರೆ, ತಮ್ಮ ಅಧಿಕಾರ ಅವಧಿಯಲ್ಲಿ ನೂರಾರು ಮಠ ಮಂದಿರಗಳ ನಿರ್ಮಾಣಕ್ಕೆ ನೂರಾರು ಕೋಟಿ ರು. ಅನುದಾನ ಕೊಟ್ಟಿದ್ದಾರೆ. ಮೂಲಭೂತ ಸೌಲಭ್ಯ ಕಲ್ಪಿಸಿ ಹಳ್ಳಿಗಳ ಉದ್ಧಾರ ಮಾಡಿದ್ದಾರೆ. ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಂಸದರು ಆಯ್ಕೆಯಾ ಗುವಲ್ಲಿ ಯಡಿಯೂರಪ್ಪ ಅವರ ಪಾತ್ರ ಹಿರಿದು, ಅವರ ರಾಜಕೀಯ ಪಯಣ ಇವತ್ತು ವರ್ಷಗಳು ಪೂರೈಸಿದ ಹಿನ್ನಲೆಯಲ್ಲಿ ಅಭಿನಂ ದನಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹೆಮ್ಮೆಯ ವಿಚಾರ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಐದು ಸಾವಿರ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದೇವೆ.

–ರಾಮಕೃಷ್ಣಪ್ಪ ಎಚ್. ಅಧ್ಯಕ್ಷರು, ಬಿಜೆಪಿ , ಬೆಂಗಳೂರು ಗ್ರಾಮಾಂತರ ಜಿಲ್ಲೆ.

ನಮ್ಮ ಪಾಲಿನ ಆದರ್ಶ



ಬಿ. ಎಸ್. ಯಡಿಯೂರಪ್ಪನವರು ನಮ್ಮ ರಾಜಕೀಯ ಬದುಕಿನ ಬಹುದೊಡ್ಡ ಆದರ್ಶ. ಬೇರು ಮಟ್ಟದಿಂದ ಒಂದು ಪಕ್ಷವನ್ನು ಕಟ್ಟಿ ಅಧಿಕಾರಕ್ಕೆ ತರುವುದು ಸಾಮಾನ್ಯ ಕೆಲಸವಲ್ಲ. ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಒಂದು ಗಟ್ಟಿ ಅಡಿಪಾಯ ಹಾಕಿದವರಲ್ಲಿ ಯಡಿಯೂರಪ್ಪನವರದು ಅಗ್ರ ಪಂಕ್ತಿ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದೇಶದ ಮಹಾನ್ ನಾಯಕರ ಜತೆ ಜೈಲುವಾಸ ಅನುಭವಿದರೂ ನಂತರದ ದಿನಗಳಲ್ಲಿ ಅಂದಿನ ಕಾಂಗ್ರೆಸ್ ಸರಕಾರದ ದುರಾಡಳಿತವನ್ನು ಪ್ರಶ್ನಿಸಿ ಕರ್ನಾಟಕದ ಮನೆ, ಮನೆಗೂ ಬಿಜೆಪಿ ಸಿದ್ಧಾಂತವನ್ನು ಪ್ರತಿಪಾದಿಸಿದ ಮಹಾನ್ ನಾಯಕ ಯಡಿಯೂರಪ್ಪ. ನಮ್ಮಂತ ಕೋಟ್ಯಾಂತರ ಬಿಜೆಪಿ ಕಾರ್ಯಕರ್ತರಿಗೆ ಯಡಿಯೂರಪ್ಪನವರ ಸುದೀರ್ಘ ರಾಜಕೀಯ ಬದುಕು ಒಂದು ಸ್ಫೂರ್ತಿ. ಐದು ದಶಕಗಳ ಯಶಸ್ವಿ ರಾಜಕೀಯ ಪಯಣದಲ್ಲಿರುವ ಯಡಿಯೂರಪ್ಪನವರಿಗಾಗಿ ಅವರ ಅಭಿಮಾನಿಗಳಿಂದ ಅಭಿಮಾನದ ಅಭಿಮಾನೋತ್ಸವ ಆಚರಿಸಲಾಗುತ್ತಿದೆ. ಈ ಮೂಲಕ ಮುಂದಿನ ರಾಜಕೀಯ ಪೀಳಿಗೆಗೆ ಇವರ ಅಪಾರ ಅನುಭವ ಒಂದು ಪಾಠವಾಗುವುದರಲ್ಲಿ ಸಂಶಯವಿಲ್ಲ.

–ಶಾಂತಗೌಡ ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ, ಬಾಗಲಕೋಟೆ

ಬಿ.ಎಸ್. ಯಡಿಯೂರಪ್ಪ ಕೇವಲ ರಾಜಕಾರಣಿ ಅಲ್ಲ ಒಬ್ಬ ಅನನ್ಯ ರಾಜಕೀಯ ರತ್ನ, ರೈತ ರತ್ನ. ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸುವ ಮೂಲಕ ರೈತರ ಶ್ರೇಯೋಭಿವೃದ್ಧಿ ಕಾಳಜಿ ತೋರಿದ ಮಹಾನ್ ನಾಯಕ. ಭಾಗ್ಯಲಕ್ಷ್ಮೀ, ಮಕ್ಕಳ ಶಿಕ್ಷಣ ಪ್ರೋತ್ಸಾಹಕ್ಕೆ ಸೈಕಲ್ ವಿತರಣೆ ಹೀಗೆ ಅನೇಕ ಜನಪ್ರಗತಿಯ ಯೋಜನೆಗಳನ್ನು ರೂಪಿಸಿದ ಶ್ರೇಯಸ್ಸು ಬಿ.ಎಸ್. ಯಡಿಯೂರಪ್ಪ ಅವರದ್ದು, ಬಿಜೆಪಿ ಪಕ್ಷವನ್ನು ಕಟ್ಟಲು ತಮ್ಮ ಜೀವವವನ್ನೇ ಸಮರ್ಪಿಸಿದ ಮಹಾನ್ ನಾಯಕ. ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಮಹೋನ್ನತ ಯೋಜನೆಗಳನ್ನು ಸಹ ನೀಡಿದ್ದ ಕೀರ್ತಿ ಅವರದ್ದು.

– ಗುರುಲಿಂಗಪ್ಪ ಅಂಗಡಿ, ಬಿಜೆಪಿ ಜಿಲ್ಲಾಧ್ಯಕ್ಷ ವಿಜಯಪುರ

ರಾಜ್ಯದ ಅಭಿವೃದ್ಧಿ ನೇತಾರ ಬಿ.ಎಸ್ .ಯಡಿಯೂರಪ್ಪ ಅವರಿಗೆ ಚಿತ್ರದುರ್ಗದಲ್ಲಿ ಜನರ ಮಡಿಲಲ್ಲಿ ಸಾರ್ಥಕ 55 ವರುಷ ಬಿಎಸ್‌ವೈ ಅಭಿಮಾನೋತ್ಸವ ನಡೆಯುತ್ತಿರುವ ಸಂದರ್ಭ ದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷನಾಗಿರುವುದು ಹೆಮ್ಮೆಯ ಸಂಗತಿ. ಬಾಲ್ಯದಿಂದಲೂ ಯಡಿಯೂರಪ್ಪ ಅವರ ರೈತ ಮತ್ತು ಜನಪರ ಹೋರಾಟಗಳನ್ನು ನೋಡುತ್ತಾ ಬೆಳೆದ ನಾನು ನಂತರದಲ್ಲಿ ಬಿಜೆಪಿ ಭಾಗವಾಗಿದ್ದು ನನ್ನ ಅದೃಷ್ಟ. ಭಾಗ್ಯಲಕ್ಷ್ಮಿ ಬಾಂಡ್ ಇಂದು ಲಕ್ಷಾಂತರ ಯುವತಿಯರ ಬಾಳಿಗೆ ಬುನಾದಿ ಯಾಗಿದೆ. ಅಭಿಮಾನೋತ್ಸವಕ್ಕೆ ಕನಿಷ್ಟ 10 ಸಾವಿರ ಮಂದಿ ಕಾರ್ಯಕರ್ತರನ್ನು ಚಿತ್ರದುರ್ಗಕ್ಕೆ ಕರೆದೊಯ್ಯುವ ಮೂಲಕ ಗುರುವಿಗೆ ಸನ್ಮಾನ ಮಾಡುತ್ತೇನೆ.

–ಓಂಶಕ್ತಿ ಚಲಪತಿ, ಬಿಜೆಪಿ ಜಿಲ್ಲಾಧ್ಯಕ್ಷರು, ಕೋಲಾರ

ಸಾರ್ವಜನಿಕ ಸೇವೆಯ ಸಾರ್ಥಕ ಕ್ಷಣ

ರಾಜಕೀಯ ಹೋರಾಟದ ಪ್ರತೀಕ

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಹೋರಾಟದ ಪ್ರತೀಕವಾಗಿದ್ದಾರೆ. ಸಾಮಾನ್ಯ ಕುಟುಂಬದಿಂದ ಬಂದು ಅತ್ಯಂತ ಪರಿಶ್ರಮ, ದೃಢ ಸಂಕಲ್ಪ ಮತ್ತು ಜನ ಸೇವೆಯ ಮೂಲಕ ರಾಜ್ಯದ ಮುಖ್ಯಮಂತ್ರಿಯ ಹುದ್ದೆ ಅಲಂಕರಿಸಿದವರು. ರೈತರಿಗಾಗಿ ವಿಶೇಷ ಬಜೆಟ್ ಮಂಡಿಸುವ ಜತೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ನೀರಾವರಿ ಯೋಜನೆಗೆ ವಿಶೇಷ ಗಮನ ನೀಡಿದ್ದು ಯಡಿಯೂರಪ್ಪ ಅವರ ಸಾಧನೆ. ರೈತರಿಗೆ ಪ್ರತ್ಯೇಕ ಬಜೆಟ್ ಮಂಡಿಸಿ ರೈತ ಕುಲಕ್ಕೆ ನ್ಯಾಯ ಕೊಡಿಸುವ ಮೂಲಕ ದೇಶದ ಬೆನ್ನೆಲುಬಿಗೆ ಶಕ್ತಿ ತುಂಬಿದವರು ಎಂದರೆ ತಪ್ಪಾಗಲಾರದು. ಸಂಕಷ್ಟಗಳು, ರಾಜಕೀಯ ಏರುಪೇರುಗಳ ನಡುವೆಯೂ ತಮ್ಮ ನಾಯಕತ್ವವನ್ನು ಸಾಬೀತುಪಡಿಸಿದ್ದಾರೆ. ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷದ ಸಂಘಟನೆ ಬಲಪಡಿಸುವಲ್ಲಿ ಅವರ ಪಾತ್ರ ಮಹತ್ತರವಾಗಿದೆ. ಜನರ ನಂಬಿಕೆ ಗಳಿಸಿದ ನಾಯಕನಾಗಿ, ಹೋರಾಟದ ಮೂಲಕ ಸಾಧನೆ ಸಾಧ್ಯವೆಂಬುದನ್ನು ಯಡಿಯೂರಪ್ಪ ರಾಜ್ಯಕ್ಕೆ ತೋರಿಸಿದ್ದಾರೆ.

-ನವೀನ್ ಗುಳಗಣ್ಣವರ, ಬಿಜೆಪಿ ಜಿಲ್ಲಾಧ್ಯಕ್ಷ, ಕೊಪ್ಪಳ ಜಿಲ್ಲೆ

ರಾಷ್ಟ್ರೀಯತೆಯೇ ಬಿಎಸ್‌ವೈ ಉಸಿರು



ಈ ದೇಶ ಕಂಡ ಅಪ್ರತಿಮ ರಾಜಕಾರಣಿ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ. ರಾಷ್ಟ್ರೀಯತೆಯನ್ನೇ ಉಸಿರಾಗಿಸಿಕೊಂಡು, ಜನಸಂಘದ ಕಾಲದಿಂದಲೂ ಬಿಜೆಪಿ ಕಟ್ಟಾಳಾಗಿರುವ ಯಡಿಯೂರಪ್ಪ ಅವರು ಪ್ರಸ್ತುತ ರಾಜಕೀಯದ ಮಾದರಿ ಮೇರು ವ್ಯಕ್ತಿತ್ವ. ನುಡಿದಂತೆ ನಡೆದೇ ತೀರುವ, ಹಠಕ್ಕೆ ಬಿದ್ದರೆ ಗೆದ್ದೇ ತೀರುವ ಮಹಾನ್ ಛಲವಾದಿ ನಾಯಕರಾಗಿರುವ ಯಡಿಯೂರಪ್ಪ ಅವರ ಸುದೀರ್ಘ ಐವತ್ತು ವರ್ಷಗಳ ರಾಜಕೀಯ ನಡೆ ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಇಂತಹ ಒಬ್ಬ ಮೇರು ವ್ಯಕ್ತಿತ್ವದ ನಾಯಕ ನಮ್ಮ ಪಾಲಿಗಿರುವುದು ಹೆಮ್ಮೆಯ ಸಂಗತಿ. ಯಡಿ ಯೂರಪ್ಪ ಅವರು 50 ವರ್ಷಗಳ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದಾರೆ. ರೈತರಿಗಾಗಿ ಹೋರಾಟ ಮಾಡಿದ್ದಾರೆ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಕೆಲಸ ಮಾಡಿದ್ದಾರೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಹೋರಾಟ ಮಾಡಿದ್ದಾರೆ. ಅವರ ಜೀವನ ಮತ್ತು ಸೇವೆಯನ್ನು ಯಡಿ ಯೂರಪ್ಪ ಅಭಿಮಾನೋತ್ಸವವಾಗಿ ಆಚರಿಸುತ್ತಿರುವುದು ಔಚಿತ್ಯಪೂರ್ಣ.

-ಕುಂಬ್ರಳ್ಳಿ ಸುಬ್ಬಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ, ಮೈಸೂರು.

ಸಂಘದ ಶಿಸ್ತು; ಜನಪರ ಕಾಳಜಿ

ಕರ್ನಾಟಕದ ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಫೆಬ್ರವರಿ 27, 1943 ರಲ್ಲಿ ಜನಿಸಿದ ಯಡಿಯೂರಪ್ಪ ರವರು ತಮ್ಮ ಸಾಮಾಜಿಕ, ರಾಜಕೀಯ ಜೀವನವನ್ನು ಶಿವಮೊಗ್ಗದ ಶಿಕಾರಿಪುರದಲ್ಲಿ ಆರಂಭಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗರಡಿಯಲ್ಲಿ ಬೆಳೆದ ಅವರು ಸಂಘದ ಶಿಸ್ತು, ಬದ್ಧತೆಯನ್ನು ಕರಗತವಾಗಿಸಿ ರಾಜಕೀ ಯದ ಎಲ್ಲಾ ಮಜಲುಗಳಲ್ಲಿ ಜವಾಬ್ದಾರಿಯನ್ನು ನಿರ್ವಹಿಸಿ ಉನ್ನತ ಸ್ಥಾನಕ್ಕೆ ಏರಿದ ಧೀಮಂತ ನಾಯಕ. ಪುರಸಭಾ ಸದಸ್ಯರಾಗಿ ರಾಜಕೀಯದಲ್ಲಿ ತಮ್ಮ ಹೆಜ್ಜೆಯನ್ನಿಟ್ಟು, ಅಧ್ಯಕ್ಷರಾಗಿ, ಶಾಸಕರಾಗಿ, ಸಂಸದರಾಗಿ, ವಿಪಕ್ಷ ನಾಯಕರಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಜನನಾಯ ಕನಾಗಿ ಹೊರಹೊಮ್ಮಿದವರು. ಭಾರತೀಯ ಜನತಾ ಪಾರ್ಟಿಯನ್ನು ರಾಜ್ಯದಲ್ಲಿ ಭದ್ರವಾಗಿ ತಳವೂರಲು ಸೈಕಲ್ ಮೂಲಕ ಪ್ರವಾಸ ಮಾಡಿ ಬಿಜೆಪಿಗೆ ದಕ್ಷಿಣದಲ್ಲಿ ಅಧಿಕಾರದ ಹೆಬ್ಬಾಗಿಲನ್ನು ತೆರೆಯಲು ಕಾರಣೀಭೂತರಾದ ದಣಿವರಿಯದ ನಾಯಕ ರಾಜಾಹುಲಿ ಬಿ.ಎಸ್.ವೈ. ಭಾರತೀಯ ಜನತಾ ಪಾರ್ಟಿಗೆ ದಕ್ಷಿಣದಲ್ಲಿ ಸಂಘಟನೆಯ ಬಲ ಮತ್ತು ಅಧಿಕಾರದ ಪೀಠವನ್ನು ನೀಡಿರುವ ಭಗೀರಥ ಬಿ.ಎಸ್.ವೈ. ನಾಡು ಕಂಡ ಅಪರೂಪದ ನಾಯಕ ರಾಜಾಹುಲಿ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ರವರು ಕೇವಲ ವ್ಯಕ್ತಿಯಲ್ಲಿ ಅವರು ಕರ್ನಾಟಕದ ಶಕ್ತಿ.

-ಸತೀಶ್ ಕುಂಪಲ , ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷ

ಸರ್ವರಿಗೂ ಸಮಪಾಲು, ಸಮಬಾಳು

ನಾಡಿಗೆ ಯಡಿಯೂರಪ್ಪ ನೀಡಿದ ಕೊಡುಗೆಗೆ ಎಲ್ಲ ವರ್ಗದವರೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಇದಕ್ಕಾಗಿ ಅರ್ಥಪೂರ್ಣ. ಭವ್ಯ ಕಾರ್ಯಕ್ರಮ ನಡೆಸುತ್ತಿದ್ದೇವೆ ರಾಜ್ಯದ ಮೂಲೆಮೂಲೆಗಳಿಂದ ಅಭಿಮಾನಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಜನರು ಬರಲಿದ್ದಾರೆ. ಒಂದು ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ. ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸುವಲ್ಲಿ ತನ್ನ ಕುಟುಂಬದ ಬಗ್ಗೆಯೂ ಸಹ ಆಲೋಚನೆಯನ್ನು ಮಾಡದೆ ಬಿಜೆಪಿಯನ್ನು ಸಂಘಟಿಸಿ ಅಧಿಕಾರಕ್ಕೆ ಬರುವಂತೆ ಮಾಡಿದ್ದಾರೆ. ಹಬ್ಬ ಹರಿದಿನ ಎನ್ನದೆ ವರ್ಷ ಪೂರ್ತಿಯಾಗಿ ರಾಜ್ಯದಲ್ಲಿ ಪ್ರವಾಸವನ್ನು ಮಾಡುವುದರ ಮೂಲಕ ಪಕ್ಷವನ್ನು ಬೆಳಸಿದ್ದಾರೆ. ತಮ್ಮ ಮುಂದೆ ಬಂದ ಹಲವಾರು ರೀತಿಯ ಸವಾಲುಗಳನ್ನು ಎದುರಿಸುವುದರ ಮೂಲಕ ಅವುಗಳನ್ನು ಮೆಟ್ಟಿ ನಿಂತು ಪಕ್ಷವನ್ನು ರಾಜ್ಯದಲ್ಲಿ ಕಟ್ಟಿದ್ದಾರೆ. ಅವರ 50 ವರ್ಷದ ರಾಜಕೀಯ ಜೀವನ ಇಂದಿನ ಯುವ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಬೇಕಿದೆ.

-ಕೆ. ಟಿ. ಕುಮಾರಸ್ವಾಮಿ ಬಿಜೆಪಿ ಜಿಲ್ಲಾಧ್ಯಕ್ಷರು. ಚಿತ್ರದುರ್ಗ

ಹುಟ್ಟು ಹೋರಾಟಗಾರ ಬಿಎಸ್‌ವೈ

ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಕಮಲ ಅರಳಿಸಿದ ಕೀರ್ತಿ ಪಡೆದಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ ಕುರಿತು ವರ್ಣಿಸಲು ಪದಗಳೇ ಸಾಲುವುದಿಲ್ಲ. ಹುಟ್ಟು ಹೋರಾಟಗಾರರಾಗಿ, ಬಡವರು ಹಾಗೂ ರೈತರ ಪರ ತಮ್ಮ ಇಡೀ ಬದುಕನ್ನು ಮೀಸಲಿಟ್ಟ ಅಪರೂಪದ ನಾಯಕ ಇವರು. ರೈತರಿಗೆ ಕೃಷಿ ಬಜೆಟ್, ಶೂನ್ಯ ಬಡ್ಡಿ ದರದಲ್ಲಿ ಸಾಲ, ಹೆಣ್ಣು ಮಕ್ಕಳ ಆರ್ಥಿಕ ಭದ್ರತೆಗಾಗಿ ನೀಡಿದ ಭಾಗ್ಯಲಕ್ಷ್ಮೀ ಯೋಜನೆ ಸದಾಕಾಲವೂ ಜನರ ಮನಸ್ಸಿನಲ್ಲಿ ಬೇರೂರಿವೆ. ಉತ್ತರ ಕರ್ನಾಟಕ ಭಾಗದ ಮೇಲೆ ವಿಶೇಷ ಕಾಳಜಿ ಹೊಂದಿದ್ದ ಯಡಿಯೂರಪ್ಪನವರು 2019 ರ ಭೀಕರ ಪ್ರವಾಹದ ಸಂದರ್ಭದಲ್ಲಿ ಸಂತ್ರಸ್ತರ ಬೆನ್ನಿಗೆ ನಿಂತಿದ್ದನ್ನು ಯಾವತ್ತೂ ಮರೆಯಲು ಸಾಧ್ಯವಿಲ್ಲ. ಭೀಕರ ಪ್ರವಾಹಕ್ಕೆ ಮನೆ ಕಳೆದುಕೊಂಡು ಆಸರೆಯಿಲ್ಲದೆ ಜನ ರಸ್ತೆಯಲ್ಲಿ ಬದುಕು ನಡೆಸುವ ಸಂದರ್ಭದಲ್ಲಿ ಪ್ರತಿ ಮನೆಗೆ ಐದು ಲಕ್ಷ ರು. ಪರಿಹಾರ ನೀಡುವ ಮೂಲಕ ಜನರ ಸಂಕಷ್ಟಕ್ಕೆ ಸ್ಪಂದಿಸಿದ್ದು ವಿಶೇಷ. ತಮ್ಮ ಸುಧೀರ್ಘ 50 ವರ್ಷಗಳ ರಾಜಕೀಯ ಹಾದಿಯಲ್ಲಿ ಯಡಿಯೂರಪ್ಪನವರು ಕಲ್ಲು ಮುಳ್ಳಿನ ನಡಿಗೆಯ ಮೇಲೆ ನಡೆದು ನಾಡಿನ ಜನರ ಸೇವೆ ಸಲ್ಲಿಸಿದ್ದಾರೆ. ಇಂತಹ ಮಹಾನ್ ನಾಯಕನ ಸಾರ್ಥಕ ಸೇವೆಯನ್ನು ಸಂಭ್ರಮಿ ಸುವ ಅಭಿಮಾನ ಅಭಿಮಾನೋತ್ಸವ ಕಾರ್ಯ ಕ್ರಮ ಇತಿಹಾಸದ ಪುಟಗಳಲ್ಲಿ ದಾಖಲಾಗುವುದು ಖಚಿತ.

-ಸುಭಾಷ್ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷರು, ಬೆಳಗಾವಿ ಗ್ರಾಮಾಂತರ ಜಿಲ್ಲೆ

ಏಕಾಂಗಿ ಹೋರಾಟದ ಛಲಗಾರ

ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಹುಟ್ಟು ಹೋರಾಟದ ಮೂಲಕ ಏಕಾಂಗಿಯಾಗಿ ಪ್ರಪ್ರಥಮವಾಗಿ ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಅಪಾರ ಅನುಭವ ಹೊಂದಿರುವ ಅವರನ್ನು ದಕ್ಷಿಣಪಥೇಶ್ವರ ಅಂದರೆ ತಪ್ಪಾಗಲಾರದು. ರಾಜ್ಯ ರೈತರ, ಬಡವರ, ದೀನದಲಿತರ,ಮಹಿಳೆಯರ, ಯುವಕರ ಪಾಲಿನ ದೂರ ದೃಷ್ಟಿಯುಳ್ಳ ನಾಯಕರಾಗಿದ್ದಾರೆ. ಅವರ ಆಡಳಿತ ಅವಧಿಯಲ್ಲಿ ನೀರಾವರಿ, ಶಿಕ್ಷಣ,ರಸ್ತೆ, ಕುಡಿಯೋ ನೀರು,ವೈದ್ಯಕೀಯ, ಕೃಷಿ ಸೇರಿದಂತೆ ಸರ್ವ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಪಡಿಸಿ ಜನಪ್ರಿಯ ಮುಖ್ಯಮಂತ್ರಿ ಎಂದು ಕೀರ್ತಿ ಅವರಿಗೆ ಸಲ್ಲುತ್ತದೆ. ಮೇ.9ರಂದು ಚಿತ್ರದುರ್ಗದಲ್ಲಿ ನಡೆಯುತ್ತಿರುವ 50 ವರ್ಷದ ಅವರ ಸುದೀರ್ಘ ಅನುಭವ ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಲಕ್ಷಾಂತರ ಜನರ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಅವರ 50 ಅಭಿಮಾನೋತ್ಸವ ಐತಿಹಾಸಿಕ ದಾಖಲೆ ದಿನ ಆಗಲಿದ್ದು ರಾಜ್ಯದಲ್ಲಿ ಮತ್ತೆ ಅವರ ರಾಜಕೀಯ ಅನುಭವ ಮುಂದಿನ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.

-ವಿರುಪಾಕ್ಷಪ್ಪ ಬಳ್ಳಾರಿ, ಬಿಜೆಪಿ ಜಿಲ್ಲಾಧ್ಯಕ್ಷ, ಹಾವೇರಿ

ಪಕ್ಷ ಬಲಪಡಿಸಿದ ದಿಟ್ಟ ನಾಯಕರು



ಬಿ.ಎಸ್.ಯಡಿಯೂರಪ್ಪನವರು ಪ್ರಶ್ನಾತೀತ ನಾಯಕರು. ಇವರು ಕೇವಲ ರಾಜಕೀಯ ನಾಯ ಕರು ಮಾತ್ರವಲ್ಲ, ಜನಸಾಮಾನ್ಯರ ಆಸೆಗಳ ಪ್ರತೀಕವಾಗಿರುವ ಮಾಸ್ ಲೀಡರ್. ಪಕ್ಷ ಏನು ಇಲ್ಲದೇ ಇದ್ದಾಗ ದಕ್ಷಿಣ ಭಾರತದಲ್ಲಿ ಪಕ್ಷವನ್ನು ಬಲಪಡಿಸಿದ ದಿಟ್ಟ ನಾಯಕರು, ಸಮರ್ಥ ಸಂಘಟಕರು ಹಾಗೂ ರೈತ ಪರ ಹೋರಾಟಗಾರರು. ಪಕ್ಷ ಕಷ್ಟದಲ್ಲಿದ್ದ ಸಮ ಯದಲ್ಲೇ ಅದನ್ನು ಮುನ್ನಡೆಸಿದ ಅವರ ಕೊಡುಗೆ ಅಪಾರವಾಗಿದ್ದು, ಪಕ್ಷದೊಳಗೆ ಅವರಿಗೆ ವಿಶೇಷ ಸ್ಥಾನಮಾನವಿದೆ. ಯಡಿಯೂರಪ್ಪರು ಮಾತು ಕೊಟ್ಟರೆ ಅದನ್ನು ಉಳಿಸಿಕೊಳ್ಳುವ ನಾಯಕರು ಎಂಬ ಖ್ಯಾತಿ ಹೊಂದಿದ್ದಾರೆ. ಅನೇಕ ಸಂಕಷ್ಟಗಳನ್ನು ಎದುರಿಸಿ, ಅವುಗಳನ್ನು ತಮ್ಮ ಮೇಲೆ ತೆಗೆದುಕೊಂಡು ಸಮಾಜಕ್ಕೆ ಒಳಿತಾಗುವಂತೆ ಕೆಲಸ ಮಾಡಿದವರು. ಹಳ್ಳಿಯಿಂದ ರಾಷ್ಟ್ರ ರಾಜಧಾನಿ ದೆಹಲಿ ತನಕ ಯಡಿಯೂರಪ್ಪರಿಗೆ ಅಪಾರ ಅಭಿಮಾನಿಗಳಿದ್ದಾರೆ. ಸಮಾಜದ ಎಲ್ಲಾ ವರ್ಗಗಳಿಗೂ ತಲುಪುವಂತೆ ಹಲವಾರು ಯೋಜನೆಗಳನ್ನು ಜಾರಿಗೊಳಿಸಿ, ಜನಜೀವನದಲ್ಲಿ ಬದಲಾವಣೆ ತರಲು ಅವರು ಪ್ರಮುಖ ಪಾತ್ರವಹಿಸಿದ್ದಾರೆ. ಬೆಂಗಳೂರು ನಗರದ ಅಭಿವೃದ್ಧಿಯಲ್ಲಿಯೂ ಯಡಿಯೂರಪ್ಪರ ಪಾತ್ರ ಮಹತ್ತರವಾಗಿದೆ. ಈ ಹಿನ್ನೆಲೆ, ಅವರ ಐವತ್ತು ವರ್ಷದ ಸಾರ್ವಜನಿಕ ಜೀವನವನ್ನು ಸ್ಮರಿಸುವ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

-ಸಿ.ಕೆ. ರಾಮಮೂರ್ತಿ, ಬಿಜೆಪಿ ಜಿಲ್ಲಾಧ್ಯಕ್ಷರು, ಬೆಂಗಳೂರು ದಕ್ಷಿಣ

ಸೇವೆ, ಸಿದ್ಧಾಂತ ಮತ್ತು ಸಂಘಟನೆ; ಯಡಿಯೂರಪ್ಪ ಎಂಬ ಶಕ್ತಿ

2006ರ ಫೆಬ್ರವರಿ, ರಾಜ್ಯದ ರೈತರ ಸಂಕಷ್ಟ ಮತ್ತು ನೀರಾವರಿ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯಲು, ಬೆಂಗಳೂರು ನಗರದಲ್ಲಿರುವ ವಿಧಾನಸೌಧ ಮುಂಭಾಗದಲ್ಲಿ ಒಬ್ಬ ನಾಯಕ ಕೈಗೊಂಡ ನಿರ್ಧಾರ ರಾಜ್ಯ ರಾಜಕೀಯದ ದಿಕ್ಕನ್ನೇ ಬದಲಿಸಿತು. ರೈತರ ಬೇಡಿಕೆಗಳಿಗೆ ಸ್ಪಂದನೆ ಸಿಗಬೇಕು ಎಂಬ ಧ್ಯೇಯದೊಂದಿಗೆ ಅನಿರ್ದಿಷ್ಟಾವಧಿಯ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅದು ಕೇವಲ ರಾಜಕೀಯ ಕ್ರಮವಾಗಿರಲಿಲ್ಲ ಜನರ ನೋವಿಗೆ ಧ್ವನಿಯಾಗಿದ್ದ ಹೋರಾಟ. ಅಂತಹ ಧೀಮಂತ ನಾಯಕನೇ ಬಿ. ಎಸ್. ಯಡಿಯೂರಪ್ಪ.

ಅಂದು ಮಾಡಿದ ಉಪವಾಸವು ಕೇವಲ ಒಂದು ದಿನದ ಸುದ್ದಿಯಾಗಿ ಉಳಿಯಲಿಲ್ಲ; ಬದಲಾಗಿ ರಾಜ್ಯದ ರಾಜಕೀಯದಲ್ಲಿ ಪ್ರಬಲವಾದ ಸಂದೇಶ ನೀಡಿತು. ಜನರ ಸಮಸ್ಯೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ರೈತರ ನೋವು, ನೀರಿನ ಅಭಾವ, ಬೆಳೆ ಹಾನಿ ಇವೆಲ್ಲವು ಕೇವಲ ಅಂಕಿಅಂಶಗಳಲ್ಲ, ಬದುಕಿನ ಪ್ರಶ್ನೆಗಳು. ಯಡಿಯೂರಪ್ಪನವರು ಈ ವಿಚಾರವನ್ನು ರಾಜಕೀಯದ ಕೇಂದ್ರಬಿಂದುವಾಗಿಸಿದರು. ಜನರ ಸಂಕಷ್ಟವನ್ನು ತಮ್ಮದೇ ನೋವಿನಂತೆ ತೆಗೆದುಕೊಂಡ ನಾಯಕತ್ವವೇ ಅವರಿಗೆ ವಿಶಿಷ್ಟತೆ ನೀಡಿತು.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಯಡಿಯೂರಪ್ಪ ಎಂಬ ಹೆಸರು ಕೇವಲ ವ್ಯಕ್ತಿಯ ಗುರುತು ಅಲ್ಲ ಬದಲಾಗಿ ಒಂದು ಚಳುವಳಿ ಎಂದು ಹೇಳಿದರೆ ತಪ್ಪಾಗಲಾರದು. ಹಳ್ಳಿಯ ಮಣ್ಣಿನಿಂದ ಹುಟ್ಟಿದ ನಾಯಕತ್ವವು ಹೇಗೆ ರಾಜ್ಯದ ಭವಿಷ್ಯವನ್ನು ರೂಪಿಸಬಹುದು ಎಂಬುದಕ್ಕೆ ಅವರು ಜೀವಂತ ಉದಾಹರಣೆ. ಶಿಕಾರಿಪುರದಂತಹ ಸಣ್ಣ ಪಟ್ಟಣದಿಂದ ಪ್ರಾರಂಭವಾದ ಅವರ ಪಯಣ, ರಾಜ್ಯದ ಅಗ್ರಪಂಕ್ತಿಯ ನಾಯಕತ್ವದವರೆಗೆ ಸಾಗಿದದ್ದು ಸುಲಭದ ಕಥೆಯಲ್ಲ ಅದು ಪರಿಶ್ರಮ, ತ್ಯಾಗ

ಭರತ್ ಬೊಮ್ಮಾಯಿ
ಬಿಜೆಪಿ ಯುವ ಮುಖಂಡರು

ಮತ್ತು ಅಚಲ ನಂಬಿಕೆಯ ಫಲ.

ಅವರ ಆಡಳಿತದ ಶೈಲಿ ಅಭಿವೃದ್ಧಿಗೆ ಮಾತ್ರ ಸೀಮಿತವಾಗಿರಲಿಲ್ಲ ಅದು ಮಾನವೀಯತೆಯೊಂದಿಗೆ ಕೂಡಿಕೊಂಡಿತ್ತು. ರೈತರ ಹಿತಾಸಕ್ತಿಗಾಗಿ ಕೈಗೊಂಡ ಕ್ರಮಗಳು, ನೀರಾವರಿ ಯೋಜನೆಗಳಿಗೆ ನೀಡಿದ ಆದ್ಯತೆ, ಗ್ರಾಮೀಣ ಅಭಿವೃದ್ಧಿಗೆ ಒತ್ತು ಇವೆಲ್ಲವೂ ಅವರ ದೃಷ್ಟಿಯ ವ್ಯಾಪ್ತಿಯನ್ನು ತೋರಿಸುತ್ತವೆ. ಅಭಿವೃದ್ಧಿಯ ಅರ್ಥವನ್ನು ಅವರು ಪುನರ್ ವ್ಯಾಖ್ಯಾನಿಸಿದರು. ಅದು ಕೇವಲ ಮೂಲಸೌಕರ್ಯಗಳ ನಿರ್ಮಾಣವಲ್ಲ ಜನರ ಜೀವನಮಟ್ಟವನ್ನು ಮೇಲೇಳಿಸುವ ಪ್ರಕ್ರಿಯೆ.

ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಸಂಘಟನೆಯ ಪಾತ್ರವೂ ಅತಿ ಮುಖ್ಯವಾಗಿದೆ. ಅವರು ಕೇವಲ ಆಡಳಿತಗಾರರಲ್ಲ ಸಂಘಟಕರೂ ಹೌದು. ಕಾರ್ಯಕರ್ತರನ್ನು ಪ್ರೇರೇಪಿಸುವುದು, ಅವರಿಗೆಮಾರ್ಗದರ್ಶನ ನೀಡುವುದು ಮತ್ತು ಪ್ರತಿಯೊಬ್ಬರನ್ನೂ ಜೊತೆಗೊಳ್ಳುವಂತೆ ಮಾಡುವುದು ಇವುಗಳು ಅವರ ರಾಜಕೀಯ ಶೈಲಿಯ ಪ್ರಮುಖ ಅಂಶಗಳು.

ಸಂಘಟನೆಯ ಬಲವೇ ರಾಜಕೀಯದ ನೆಲೆಯಾಗಿದೆ ಎಂಬುದನ್ನು ಅವರು ತೋರಿಸಿದ್ದಾರೆ.

ರಾಜಕೀಯದಲ್ಲಿ, ರಾಷ್ಟ್ರದ ಅಭಿವೃದ್ಧಿ ಪಥದಲ್ಲಿ ಸಾಗಬೇಕೆಂದುಕೊಂಡಿರುವ ಯುವಸಮೂಹಕ್ಕೆ ಬಿಎಸ್‌ವೈ ನಡೆದಾಡುವ ಪಾಠಶಾಲೆ. ನಾಯಕತ್ವವೆಂದರೆ ಕೇವಲ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಲ್ಲ ಜನರ ವಿಶ್ವಾಸವನ್ನು ಗಳಿಸುವ ಪ್ರಕ್ರಿಯೆ. ಈ ವಿಶ್ವಾಸವನ್ನು ಗಳಿಸಲು ವರ್ಷಗಳ ಪರಿಶ್ರಮ ಬೇಕು. ಜನರ ನಡುವೆ ನಿರಂತರವಾಗಿ ಕೆಲಸ ಮಾಡುವುದು, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು, ಮತ್ತು ಅವರಿಗೆ ಪರಿಹಾರ ನೀಡುವುದು ಇವೆಲ್ಲವೂ ನಾಯಕತ್ವದ ಅವಿಭಾಜ್ಯ ಭಾಗಗಳು. ರಾಜಕೀಯವು ಸೇವೆಯ ಸಾಧನವಾಗಿರಬೇಕು ಎಂಬ ಸಂದೇಶವನ್ನು ಅವರು ತಮ್ಮ ಜೀವನದಿಂದಲೇ ನೀಡಿದ್ದಾರೆ. ಜನರ ವಿಶ್ವಾಸವನ್ನು ಗಳಿಸುವುದು ಕಷ್ಟ, ಆದರೆ ಅದನ್ನು ಕಾಪಾಡುವುದು ಇನ್ನಷ್ಟು ಕಠಿಣ. ಅವರು ಈ ಎರಡನ್ನೂ ಯಶಸ್ವಿಯಾಗಿ ಸಾಧಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಯಡಿಯೂರಪ್ಪನವರು ವ್ಯಕ್ತಿಯ ಮೀರಿದ ಒಂದು ಶಕ್ತಿ. ಅವರು ಕಟ್ಟಿದ ನಂಬಿಕೆ, ರೂಪಿಸಿದ ಮಾರ್ಗ, ಬೆಳೆಸಿದ ನಾಯಕತ್ವ ಇವೆಲ್ಲವೂ ಮುಂದಿನ ಪೀಳಿಗೆಗೆ ದಿಕ್ಕು ತೋರಿಸುತ್ತವೆ. ಅವರ ಹಾದಿಯಲ್ಲಿ ನಡೆಯುವುದು ಎಂದರೆ, ಮೌಲ್ಯಗಳನ್ನು ಕಾಪಾಡುತ್ತಾ ಹೊಸ ದಿಕ್ಕುಗಳನ್ನು ಅನ್ವೇಷಿಸುವುದು. ನಾವು ಹೊಸ ಆಲೋಚನೆಗಳನ್ನು ಸೇರಿಸಬಹುದು, ಹೊಸ ವಿಧಾನಗಳನ್ನು ಅನುಸರಿಸಬಹುದು ಆದರೆ ಮೂಲ ಮೌಲ್ಯಗಳನ್ನು ಕಾಪಾಡುವುದು ಅತ್ಯಂತ ಮುಖ್ಯ.

ರೈತರ, ಮಹಿಳೆಯರ, ಬಡವರ ಕಲ್ಯಾಣಕ್ಕೆ ಪ್ರೇರಣೆ :

ಕರ್ನಾಟಕದ ಆಡಳಿತದಲ್ಲಿ ರೈತರ ಪರವಾದ ಸ್ಪಷ್ಟ ದೃಷ್ಟಿಕೋನವನ್ನು ತಂದ ಪ್ರಮುಖ ನಾಯಕರಲ್ಲಿ ಬಿಎಸ್‌ವೈ ಅವರು ಅಗ್ರಗಣ್ಯರು. ದೇಶದಲ್ಲೇ ಪ್ರತ್ಯೇಕ ಕೃಷಿ ಬಜೆಟ್ ಅನ್ನು ಪರಿಚಯಿಸಿದ ಮುಂಚೂಣಿಯ ನಾಯಕತ್ವ ಅವರದ್ದು. ರೈತರ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಲು ಹಾಗೂ ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲು ಪಂಪ್ ಸೆಟ್ ಸಬ್ಸಿಡಿ ಸೇರಿದಂತೆ ಹಲವು ಯೋಜನೆಗಳನ್ನು ಬಲಪಡಿಸಿ, ಕೃಷಿಗೆ ದೃಢವಾದ ಆಧಾರವನ್ನು ನಿರ್ಮಿಸಿದರು. ಅವರ ರೈತಪರ ಚಿಂತನೆಗೆ ಪ್ರೇರಣೆಯಾಗಿ, ಇಂದು ಹಾವೇರಿ ಜಿಲ್ಲೆಯ ಶಿಗ್ಗಾಂವ್-ಸವಣೂರು ಭಾಗದಲ್ಲಿ ಡ್ರೋನ್ ತಂತ್ರಜ್ಞಾನವನ್ನು ರೈತರ ಸೇವೆಗೆ ಪರಿಚಯಿಸಲಾಗಿದೆ. ಬೆಳೆ ಮೇಲ್ವಿಚಾರಣೆ, ಔಷಧಿ ಸಿಂಪಡಣೆ ಮತ್ತು ಉತ್ಪಾದಕತೆ ಹೆಚ್ಚಿಸುವ ದಿಕ್ಕಿನಲ್ಲಿ ಈ ನವೀನ ಪ್ರಯತ್ನ ಕೈಗೊಳ್ಳಲಾಗಿದೆ.

ಭಾಗ್ಯಲಕ್ಷ್ಮೀ ಬಾಂಡ್ ನಂತಹ ವಿಶಿಷ್ಟ ಯೋಜನೆಗಳನ್ನು ಪರಿಚಯಿಸಿ ಮಹಿಳಾ ಸಬಲೀಕರಣದಲ್ಲಿಯೂ ಬಿಸ್‌ವೈ ಅವರು ಛಾಪನ್ನು ಮೂಡಿಸಿದ್ದಾರೆ. ಅವರ ಮಹಿಳಾ ಪರ ಆಡಳಿತದ ವೈಖರಿಯನ್ನು ಗಮನಿಸಿ ಮಾನ್ಯ ಬಸವರಾಜ ಬೊಮ್ಮಾಯಿ ಅವರು ಹಾವೇರಿ ಭಾಗದಲ್ಲಿ ಉಡುಪು ಕೈಗಾರಿಕೆಗೆ ನೀಡಿದ ಪ್ರೋತ್ಸಾಹದಿಂದ ಸಾವಿರಾರು ಮಹಿಳೆಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಿ, ಅವರ ಆರ್ಥಿಕ ಸ್ವಾವಲಂಬನೆಗೆ ಅನುಕೂಲವಾಗಿದೆ. ಪ್ರಸ್ತುತ ತಂದೆಯವರಾದ ಬಸವರಾಜ ಬೊಮ್ಮಾಯಿ ಅವರ ಆಶಯದಂತೆ ಇನ್ನೂ ಎರಡು ಕೈಗಾರಿಕೆಗಳನ್ನು ತರುವ ಸಂಕಲ್ಪದೊಂದಿಗೆ, ಉದ್ಯೋಗ ಸೃಷ್ಟಿಗೆ ಹೊಸ ದಿಕ್ಕು ನೀಡುವ ಕಾರ್ಯ ನಡೆಯುತ್ತಿದೆ.

2019ರಲ್ಲಿ ಹಾವೇರಿ ಜಿಲ್ಲೆಯ ಭೀಕರ ನೆರೆ ಸಂದರ್ಭದಲ್ಲಿ, ಆಗ ಶಾಸಕರಾಗಿದ್ದ ಬಸವರಾಜ ಬೊಮ್ಮಾಯಿ ಅವರು ನೆರೆಪೀಡಿತರ ಜತೆ ನಿಂತು ತ್ವರಿತ ಸ್ಪಂದನೆ ನೀಡಿದರು. ಅದೇ ಸಮಯದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಮನೆ ಕಳೆದುಕೊಂಡ ಕುಟುಂಬಗಳಿಗೆ 15 ಸಾವಿರಕ್ಕೂ ಹೆಚ್ಚು ಮನೆಗಳ ಮಂಜೂರಾತಿಯನ್ನು ಸರಳಗೊಳಿಸಿ, ಪುನರ್‌ವಸತಿ ಕಾರ್ಯಗಳನ್ನು ವೇಗಗೊಳಿಸಲಾಯಿತು ಇದು ಜನಪರ ಆಡಳಿತಕ್ಕೆ ಕನ್ನಡಿ. ಆ ದಿಕ್ಕಿನಲ್ಲಿಯೇ ಸಾಮಾಜಿಕ ಕಳಕಳಿಯ ಭಾಗವಾಗಿ, ಶಿಗ್ಗಾಂವ್ ವ್ಯಾಪ್ತಿಯಲ್ಲಿ ಗಂಗಮ್ಮ ಬೊಮ್ಮಾಯಿ ಟ್ರಸ್ಟ್ ವತಿಯಿಂದ ಸುಮಾರು 300 ಜನರಿಗೆ ಮನೆ ನಿರ್ಮಾಣಕ್ಕಾಗಿ 50 ರಿಂದ 70 ಸಾವಿರ ರುಪಾಯಿವರೆಗೆ ಆರ್ಥಿಕ ಸಹಾಯವನ್ನು ಈಗಾಗಲೇ ನೀಡಲಾಗಿದ್ದು, ಸಂಕಷ್ಟದಲ್ಲಿದ್ದ ಕುಟುಂಬಗಳಿಗೆ ನೆಮ್ಮದಿಯ ಬದುಕು ಕಟ್ಟಿಕೊಡುವ ಕಾರ್ಯ ಯಶಸ್ವಿಯಾಗಿ ನೆರವೇರಿಸಲಾಗಿದೆ. ಕರ್ನಾಟಕದ ಅಭಿವೃದ್ಧಿಯಲ್ಲಿ ಅವರ ಪಾತ್ರವು ಮಹತ್ವದ್ದಾಗಿದೆ. ನೀರಾವರಿ ಕ್ಷೇತ್ರದಲ್ಲಿ ಕೈಗೊಂಡ ಕ್ರಮಗಳು, ಗ್ರಾಮೀಣ ಮೂಲಸೌಕರ್ಯಗಳ ಅಭಿವೃದ್ಧಿ, ರೈತಪರ ಯೋಜನೆಗಳು ವೆಲ್ಲವೂ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸಿದ್ದವೆ. ಅಭಿವೃದ್ಧಿಯನ್ನು ಕೇವಲ ನಗರಗಳಿಗೆ ಸೀಮಿತಗೊಳಿಸಲಿಲ್ಲ ಗ್ರಾಮೀಣ ಪ್ರದೇಶಗಳಿಗೂ ಸಮಾನ ಆದ್ಯತೆ ನೀಡಿದರು. ಅವರ ಹೋರಾಟಗಳು ಕೇವಲ ರಾಜಕೀಯ ಸಾಧನೆಗಳಾಗಿರಲಿಲ್ಲ ಬದಲಾಗಿ ಸಮಾಜದ ಪರಿವರ್ತನೆಯ ಹಾದಿಯನ್ನು ನಿರ್ಮಿಸಿದ ಹೆಜ್ಜೆಗಳು. ಅವರ ಪಯಣವು ನಮಗೆ ಇನ್ನಿಲ್ಲದ ಪ್ರೇರಣೆ, ಮಾರ್ಗದರ್ಶನ ಮತ್ತು ಬದ್ಧತೆ. ಮುಂದಿನ ಪೀಳಿಗೆಯ ನಾಯಕರಾಗಿ, ಈ ಪರಂಪರೆಯನ್ನು ಕಾಪಾಡುವುದು ಮತ್ತು ಅದನ್ನು ಇನ್ನಷ್ಟು ಬಲಪಡಿಸುವುದು ನಮ್ಮ ಜವಾಬ್ದಾರಿ.

ಆರೋಗ್ಯ ಕ್ಷೇತ್ರಕ್ಕೆ ಬಿಎಸ್‌ವೈ ಕೊಡುಗೆ ಅಪಾರ

ಬಿ.ಎಸ್. ಯಡಿಯೂರಪ್ಪ ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅತ್ಯಂತ ಮಹತ್ತರವಾದುದು. ವಿಶೇಷವಾಗಿ ಹೃದ್ರೋಗ ಚಿಕಿತ್ಸೆ ಕ್ಷೇತ್ರದಲ್ಲಿ ಅವರು ತೋರಿದ ಆಸಕ್ತಿ ಮತ್ತು ದೂರದೃಷ್ಟಿಯ ಫಲವಾಗಿ ಜಯದೇವ ಹೃದ್ರೋಗ ಆಸ್ಪತ್ರೆಯ ವಿಸ್ತರಣೆ ಗಮನಾರ್ಹವಾಗಿ ನಡೆದಿದೆ.

ಮೈಸೂರು ನಗರದ ಕೆ.ಆರ್.ಎಸ್. ರಸ್ತೆಯಲ್ಲಿ ಮೊದಲನೇ 100 ಹಾಸಿಗೆಗಳ ಸಾಮರ್ಥ್ಯದ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಅವರು ಅನುಮೋದನೆ ನೀಡಿದ್ದು ಮಾತ್ರವಲ್ಲದೆ, ಎಲ್ಲಾ ರೀತಿಯ ಪ್ರೋತ್ಸಾಹವನ್ನು ಒದಗಿಸಿದರು. ಇಂದು ಈ ಆಸ್ಪತ್ರೆ ದೊಡ್ಡ

ಡಾ.ಸಿ.ಎನ್ ಮಂಜುನಾಥ್
ಸಂಸದರು, ಬೆಂಗಳೂರು ಗ್ರಾಮಾಂತರ

ಮಟ್ಟದಲ್ಲಿ ಬೆಳೆಯಲು ಅವರ ಸಹಕಾರ ಕೂಡ ಕಾರಣವಾಗಿದೆ. ಅದೇ ರೀತಿಯಲ್ಲಿ, ಕಲಬುರಗಿ ಜಿಲ್ಲೆಯಲ್ಲಿ ಹೊಸ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ಮಾಣಕ್ಕೂ ಸಚಿವ ಸಂಪುಟದ ಅನುಮೋದನೆ ಪಡೆದು ಶಂಕುಸ್ಥಾಪನೆ ನೆರವೇರಿಸಿ, ಅದರ ಸ್ಥಾಪನೆಗೆ ಅಗತ್ಯವಾದ ಸಹಕಾರವನ್ನು ನೀಡಿದರು.

ಅಧಿಕಾರಿಗಳ ಪ್ರತಿಭೆ ಹಾಗೂ ಕಾರ್ಯದಕ್ಷತೆಯನ್ನು ಗುರುತಿಸಿ ಪ್ರೋತ್ಸಾಹ ನೀಡುವ ಗುಣವು ಯಡಿಯೂರಪ್ಪ ರವರ ಪ್ರಮುಖ ವೈಶಿಷ್ಟ್ಯವಾಗಿದೆ. ಅವರು ಯಾವುದೇ ಭೇದಭಾವವಿಲ್ಲದೆ ಪ್ರಾಮಾಣಿಕವಾಗಿ ಹಾಗೂ ಸಕ್ರಿಯವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಉತ್ತೇಜಿಸುತ್ತಿದ್ದರು. ನಾನು ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ, ಮೈಸೂರು ಜಯದೇವ ಆಸ್ಪತ್ರೆಯ ನಿರ್ವಹಣೆಯ ಬಗ್ಗೆ ಅವರು ವ್ಯಕ್ತಪಡಿಸಿದ ಮೆಚ್ಚುಗೆ ನನಗೆ ಪ್ರೇರಣೆಯಾಗಿತ್ತು. ರಾಜ್ಯದ ಇತರೆ ಭಾಗಗಳಲ್ಲಿಯೂ ಇದೇ ರೀತಿಯ ಆಸ್ಪತ್ರೆಗಳನ್ನು ಸ್ಥಾಪಿಸಬೇಕು

ಎಂಬುದು ಅವರ ಆಶಯವಾಗಿತ್ತು.

ನನ್ನ ನಿರ್ದೇಶಕ ಹುದ್ದೆಯನ್ನು ಮುಂದುವರೆಸಲು ಅವರು ನೀಡಿದ ಒಪ್ಪಿಗೆ ನನ್ನ ಭಾಗ್ಯವೆಂದೇ ನಾನು ಭಾವಿಸುತ್ತೇನೆ. ಸರಕಾರದ ಅನುಮೋದನೆಗಾಗಿ ಕಳುಹಿಸಲಾದ ಯಾವುದೇ ಕಡತವನ್ನು 24 ಗಂಟೆಗಳೊಳಗೆ ಮಂಜೂರು ಮಾಡುವ ಅವರ ವೇಗ ಮತ್ತು ಬದ್ಧತೆ ಗಮನಾರ್ಹವಾಗಿದೆ. ಇದು ಅವರ ದೊಡ್ಡ ಮನಸ್ಸು ಮತ್ತು ಆಡಳಿತ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಕೋವಿಡ್ ಮಹಾಮಾರಿ ಸಮಯದಲ್ಲಿ ಅವರು ತೋರಿದ ನಾಯಕತ್ವ ಅತ್ಯಂತ ಶ್ಲಾಘನೀಯ. ತಮ್ಮ ವಯಸ್ಸು ಮತ್ತು ಆರೋಗ್ಯವನ್ನು ಲೆಕ್ಕಿಸದೆ, ಯುದ್ಧೋಪಾದಿಯಂತೆ ನಿರಂತರ ಸಭೆಗಳನ್ನು ನಡೆಸಿ, ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ಕ್ರಮ ಕೈಗೊಂಡರು. ವೈದ್ಯಕೀಯ ಕ್ಷೇತ್ರದಲ್ಲಿಯೂ ಅನಿಶ್ಚಿತತೆ ಇರುವ ಸಂದರ್ಭದಲ್ಲಿ, ತಜ್ಞರ ಸಲಹೆಗಳನ್ನು ಪಡೆದು, ಅಗತ್ಯವಾದ ನಿರ್ಧಾರಗಳನ್ನು ತೆಗೆದುಕೊಂಡರು. ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ಸಮರ್ಪಕವಾಗಿ ನಡೆಯಲು ಅವರ ದೃಢ ನಿರ್ಧಾರಗಳೇ ಕಾರಣವೆಂದು ಹೇಳಬಹುದು.

ಅವರೊಂದಿಗಿನ ಒಡನಾಟವೇ ರಾಜಕೀಯ ಬೆಳವಣಿಗೆಗೆ ಕಾರಣ

ಬಿ. ಎಸ್. ಯಡಿಯೂರಪ್ಪ ಅವರೊಂದಿಗೆ ದೀರ್ಘ ಕಾಲದ ಒಡನಾಟವೇ ತನ್ನ ರಾಜಕೀಯ ಬೆಳವಣಿಗೆಗೆ ಮೂಲ ಕಾರಣ. ಸುಮಾರು 1990ರಿಂದಲೇ ಯಡಿಯೂರಪ್ಪ ಅವರ ಸಂಪರ್ಕ ದಲ್ಲಿದ್ದು, ಸಾಮಾನ್ಯ ಕಾರ್ಯ ಕರ್ತ ರನ್ನೇ ಗುರುತಿಸಿ ಪ್ರೋತ್ಸಾಹಿಸುವ ಗುಣವೇ ಅವರ ವಿಶೇಷತೆ. ನಾನು ಇಂದು ಕಾರ್ಪೊರೇಟರ್ ಹಾಗೂ ಉಪ ಮೇಯರ್ ಆಗಿರುವುದಕ್ಕೆ ಯಡಿಯೂರಪ್ಪ ಅವರೇ ಪ್ರಮುಖ ಕಾರಣ. ಅವರು ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ನೀಡಿ, ಕ್ಯಾಂಪೇನ್ ನಡೆಸಿ ಗೆಲುವು ತಂದುಕೊಟ್ಟವರು. ಬೆಂಗಳೂರು ಮಹಾನಗರ ಪಾಲಿಕೆಯನ್ನು ದಕ್ಷಿಣ ಭಾರತದಲ್ಲಿ ಪ್ರಮುಖವಾಗಿ ಬಲಪಡಿಸಿದ ಅವಧಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲವೇ. ಅವರ ನಾಯಕತ್ವ ದಲ್ಲಿ ಪಕ್ಷ ಬಲಿಷ್ಠಗೊಂಡು, ಸಾಮಾನ್ಯ ಕಾರ್ಯಕರ್ತರೂ ಅಧಿಕಾರದ ಸ್ಥಾನಕ್ಕೇರಲು ಸಾಧ್ಯವಾಯಿತು.

ಸಾಮಾಜಿಕ ಸೇವೆಗಳಲ್ಲಿಯೂ ಯಡಿಯೂರಪ್ಪ ಅವರು ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ಸೈಕಲ್ ವಿತರಣೆ, ಭಾಗ್ಯಜ್ಯೋತಿ ಮುಂತಾದ ಯೋಜನೆಗಳು ಜನಸಾಮಾನ್ಯರ ಜೀವನಮಟ್ಟವನ್ನು ಸುಧಾರಿಸಲು ನೆರವಾದವು. ಹೆಣ್ಣು ಮಕ್ಕಳ ರಕ್ಷಣೆಗೆ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಮೂಲಕ ಅವರ ಭವಿಷ್ಯವನ್ನು ಭದ್ರಗೊಳಿಸುವ ಮಹತ್ವದ ಹೆಜ್ಜೆ ಇಟ್ಟವರು ಯಡಿಯೂರಪ್ಪ. ವೃದ್ಧರ ಸಂಕಷ್ಟ ನಿವಾರಣೆಗೆ ಸಂಧ್ಯಾ ಸುರಕ್ಷಾ ಯೋಜನೆ ಸಹಕಾರಿಯಾಯಿತು. ಪಕ್ಷದ ಬೆಳವಣಿಗೆಯಲ್ಲಿಯೂ ಯಡಿಯೂರಪ್ಪ ಅವರ ಪಾತ್ರ ಮಹತ್ತರವಾಗಿದೆ. ಒಮ್ಮೆ ಎರಡು ಸ್ಥಾನಗಳಿಗೆ ಸೀಮಿತ ವಾಗಿದ್ದ ಪಕ್ಷವನ್ನು ಇಂದಿಗೆ ಹಲವು ಬಾರಿ ಸರಕಾರ ರಚಿಸುವ ಮಟ್ಟಕ್ಕೆ ತಲುಪಿಸಿದ ಶ್ರೇಯಸ್ಸು ಯಡಿ ಯೂರಪ್ಪ ಅವರಿಗೆ ಸಲ್ಲುತ್ತದೆ. ಅವರ ನಾಯಕತ್ವ, ಕಾರ್ಯಕರ್ತರ ಮೇಲಿನ ನಂಬಿಕೆ ಮತ್ತು ಸಮಾಜಮುಖಿ ಯೋಜನೆಗಳೇ ಇಂದು ಪಕ್ಷದ ಬಲವರ್ಧನೆಗೆ ಕಾರಣವಾಗಿವೆ.

-ಎಸ್. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷರು, ಬೆಂಗಳೂರು ಉತ್ತರ

ಕೇಸರಿ ಪಡೆಯ ಜನ ನಾಯಕ ಯಡಿಯೂರಪ್ಪ

ಯಡಿಯೂರಪ್ಪನವರು 50 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದಾರೆ. ಅವರು ರೈತರಿಗಾಗಿ ಹೋರಾಟ ಮಾಡಿದ್ದಾರೆ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಕೆಲಸ ಮಾಡಿದ್ದಾರೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಹೋರಾಟ ಮಾಡಿದ್ದಾರೆ. ಸಂಘರ್ಷ, ಸಮರ್ಪಣೆ ಮತ್ತು ಸಾಧನೆಯ ಸಂಗಮ. ದಕ್ಷಿಣ ಭಾರತದಲ್ಲಿ ಬಿಜೆಪಿಯ ಬೇರುಗಳನ್ನು ಗಟ್ಟಿಗೊಳಿಸಿ ಹಿಂದುತ್ವ ಮತ್ತು ವಿಕಾಸವನ್ನು ಒಟ್ಟಿಗೆ ಕೊಂಡೊಯ್ದವರು. ಕರ್ನಾಟಕದ ಜನಮಾನಸದಲ್ಲಿ ಅವರು ಎಂದಿಗೂ ಕೇಸರಿ ಪಡೆಯ ಜನನಾಯಕ.

ರಾಜ್ಯದಲ್ಲಿ ಬಿಜೆಪಿ ಪಕ್ಷಕ್ಕೆ ಆಗಿನ್ನು ಗಟ್ಟಿ ನೆಲೆ ಇರಲಿಲ್ಲ, ಶಾಸಕ ಸಂಸದರಿರಲಿ ಸ್ಥಳೀಯ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಲು ಕಾರ್ಯಕರ್ತರೂ ಸಹ ಇಲ್ಲದ ಪರಿಸ್ಥಿತಿ ಇತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿದ್ದ ಅದೇ ಪಕ್ಷ 2008ರ ವೇಳೆಗೆ ಕೇವಲ 3 ದಶಕಗಳ ಅಂತರದಲ್ಲಿ ರಾಜ್ಯದ ಚುಕ್ಕಾಣಿ ಹಿಡಿಯುವಷ್ಟರ ಮಟ್ಟಿಗೆ ಬೆಳೆದಿದೆ ಎಂದರೆ ಅದು ಸಾಮಾನ್ಯವಾದ ವಿಚಾರವಲ್ಲ. ಅಂದಿನಿಂದ ಇಂದಿನ ವರೆಗೆ ಬಿಜೆಪಿಯ ಈ ಯಶಸ್ಸಿನ ಹಿಂದಿದ್ದ ಏಕೈಕ ಹೆಸರು ಎಂದರೆ ಬಿ.ಎಸ್. ಯಡಿಯೂರಪ್ಪ.

ಯಡಿಯೂರಪ್ಪ ತಮ್ಮ ಜೀವನದುದ್ದಕ್ಕೂ ಅಧಿಕಾರಕ್ಕಿಂತ ಹೋರಾಟದಲ್ಲೇ ಹೆಚ್ಚು ಸಮಯ ಕಳೆದವರು. ತುರ್ತು ಪರಿಸ್ಥಿತಿ ಘೋಷಣೆಯಾದಾಗ ಶಿವಮೊಗ್ಗ ಹಾಗೂ ಬಳ್ಳಾರಿ ಜೈಲಿನಲ್ಲಿ ಇದ್ದರು. ಆ ಸಂದರ್ಭದಲ್ಲಿ ಜೈಲಿನೊಳಗಿದ್ದ ಆರೆಸ್ಸೆಸ್ಸ ಹಲವು ಸದಸ್ಯರು, ಅಂದಿಗೆ ಯಡಿಯೂರಪ್ಪನವರ ನಾಯಕತ್ವ ಗುಣ ಹೇಗಿತ್ತು, ಅದರಲ್ಲೂ ಬಳ್ಳಾರಿ ಜೈಲಿನಲ್ಲಿ ಬಿಎಸ್‌ವೈ ನೇತೃತ್ವದಲ್ಲಿ ನಡೆಸಿದ ಪ್ರತಿಭಟನೆ ಇತ್ಯಾದಿಯನ್ನು ನೆನಪಿಸಿಕೊಳ್ಳುತ್ತಾರೆ. ಶಾಲೆಗೆ ಹೋಗುವ ಹೆಣ್ಣುಮಕ್ಕಳಿಗೆ ಸೈಕಲ್, ಮಹಿಳೆಯರಿಗೆ ಸೀರೆ, ಮಠ-ಮಾನ್ಯಗಳಿಗೆ ಅನುದಾನ ನಾನಾ ಯೋಜನೆಗಳು ಯಡಿಯೂರಪ್ಪನವರಿಗೆ ಹೆಸರು ತಂದುಕೊಟ್ಟವು. ಇಂತಹದ್ದೊಂದು ಕೆಲಸ ಆಗಬೇಕು ಎಂದರೆ ಶತಾಯಗತಾಯ ಮಾಡಿ ಮುಗಿಸುವ ಜಗಮೊಂಡ ಅವರು. ವರ್ಷದ ಹಿಂದೆ ಬೇರೆ ಪಕ್ಷಗಳಿಂದ ಶಾಸಕರು ಬಿಜೆಪಿಗೆ ಬಂದರಲ್ಲ, ಅವರಿಗೆಲ್ಲ ಸೂಕ್ತ ಸ್ಥಾನಮಾನ ದೊರಕಿಸುವುದಕ್ಕೆ ಯಡಿಯೂರಪ್ಪ ಅವರಿಗಲ್ಲದೆ ಮತ್ತ್ಯಾರೇ ಇದ್ದರೂ ಅಸಾಧ್ಯ ಆಗಿರುತ್ತಿತ್ತು. ಅವರೊಬ್ಬ ನಿಜವಾದ ನಾಯಕರಾಗಿದ್ದಾರೆ. ಈ ರಾಜ್ಯಕ್ಕೆ ಅವರ ಕೊಡುಗೆ ಅನನ್ಯವಾದದು.

-ಜಗದೀಶ್, ಜಿಲ್ಲಾಧ್ಯಕ್ಷರು, ಬಿಜೆಪಿ ಶಿವಮೊಗ್ಗ

ರಾಜ್ಯ ಬಿಜೆಪಿಯ ಪಿತಾಮಹ

ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕ ಬಿಜೆಪಿಯ ಪಿತಾಮಹ. 2008ರಲ್ಲಿ ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಬಿಜೆಪಿ ಸರಕಾರ ರಚಿಸಿ ಇತಿಹಾಸ ಬರೆದರು. ದೇಶದ ಚರಿತ್ರೆಯಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯೊಬ್ಬರು ರೈತರಿಗಾಗಿಯೇ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ ರೈತರಿಗೆ ಶೂನ್ಯ ಬಡ್ಡಿ ಸಾಲ ನೀಡಿದ ದೂರದೃಷ್ಟಿಯ ನಾಯಕರಷ್ಟೇ ಆಗಲಿಲ್ಲ, ರೈತ ನಾಯಕ ಅಂತ ಶಾಶ್ವತ ಹೆಸರು ತಂದುಕೊಂಡರು. ಭಾಗ್ಯಲಕ್ಷ್ಮಿ ಯೋಜನೆ ಮೂಲಕ ಹೆಣ್ಣುಮಕ್ಕಳ ಭವಿಷ್ಯ ಭದ್ರಪಡಿಸಿದ ಧೀಮಂತ. ಸಂಧ್ಯಾ ಸುರಕ್ಷಾ ಮೂಲಕ ವೃದ್ಧರಿಗೆ ಆಸರೆಯಾದರು. ಬೆಂಗಳೂರು ಮೆಟ್ರೋಗೆ ಚಾಲನೆ ನೀಡಿ ರಾಜ್ಯದ ಅಭಿವೃದ್ಧಿಗೆ ನಾಂದಿ ಹಾಡಿದರು. ಅವರ ತ್ಯಾಗ, ಹೋರಾಟದಿಂದ ರಾಜ್ಯ ಮಾತ್ರವಲ್ಲ ದೇಶದಲ್ಲಿ ಬಿಜೆಪಿ ಬಲಿಷ್ಟವಾಗಿ ಕಟ್ಟಲ್ಪಟ್ಟಿದೆ. ಅವರ ಮಾರ್ಗದರ್ಶನದಲ್ಲಿ 2028ಕ್ಕೆ ಬಿಜೆಪಿಯನ್ನು ಅಧಿಕಾರಕ್ಕೆ ತಂದು ಕರ್ನಾಟಕವನ್ನು ಮತ್ತೆ ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯಲು ನಾವು ಬದ್ಧರಾಗಿದ್ದೇವೆ. ದೇಶಕ್ಕೆ ನರೇಂದ್ರಮೋದಿ ಹೇಗೋ ರಾಜ್ಯಕ್ಕೆ ಯಡಿಯೂರಪ್ಪ ಅವರ ಮಾರ್ಗದರ್ಶನ ಬೇಕೇಬೇಕು.ಹೊಸತನದ ಹರಿಕಾರರಾಗಿ, ಜನಮೆಚ್ಚಿದ ನೇತಾರರಾಗಿ ಬಿಎಸ್.ಯಡಿಯೂರಪ್ಪ ಅವರ ಹೆಸರು ಕರ್ನಾಟಕದ ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿಯಲಿದೆ.

-ಸೀಕಲ್ ರಾಮಚಂದ್ರಗೌಡ ಬಿಜೆಪಿ ಜಿಲ್ಲಾಧ್ಯಕ್ಷರು. ಚಿಕ್ಕಬಳ್ಳಾಪುರ ಜಿಲ್ಲೆ.

ಬಿ.ಎಸ್. ಯಡಿಯೂರಪ್ಪ ಹೋರಾಟಕ್ಕೆ ಸಾಟಿಯಿಲ್ಲ



ಬಿಜೆಪಿಯಲ್ಲಿ ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎನ್ನುವ ಮಾತಿದೆ, ಇಳಿವಯಸ್ಸಿನಲ್ಲಿಯೂ ಇಂದಿಗೂ ಅವರ ಹೋರಾಟ ಎಗ್ಗಿಲ್ಲದೆ ಸಾಗುತ್ತಿದೆ. ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ತಂದ ಧೀಮಂತ ನಾಯಕ ಯಡಿಯೂರಪ್ಪ ಅವರು ರಾಜ್ಯ ರಾಜಕಾರಣದ ಅನರ್ಘ್ಯ ರತ್ನ. ಸಾವಿರಾರು ನಾಯಕರನ್ನು ಹುಟ್ಟುಹಾಕಿದ ಜನಾನುರಾಗಿ ಹಾಗೂ ದಣಿವರಿಯದ ನಾಯಕ. ಯಡಿಯೂರಪ್ಪ ಅವರು ಮಾತು ಕೊಟ್ಟರೆ ಮುಗಿಯಿತು, ಅದನ್ನು ಈಡೇರಿಸುವವರೆಗೂ ವಿರಮಿಸುವುದಿಲ್ಲ, ಕೊಟ್ಟ ಮಾತು ಈಡೇರಿಸಿಯೇ ತೀರುತ್ತಾರೆ, ಅಂತಹ ಮೇರು ವ್ಯಕ್ತಿತ್ವದ ನಾಯಕರಿಗೆ ಅಭಿನಂದನಾ ಸಮಾರಂಭ ಆಯೋಜನೆ ಮಾಡಿರುವುದು ನಮ್ಮೆಲ್ಲರಿಗೂ ಅತೀವ ಸಂತೋಷ ಉಂಟುಮಾ ಡಿದೆ. ಅವರು ನೂರು ಕಾಲ ನಮ್ಮೊಂದಿಗೆ ಇರಲಿ ಎಂಬುದೇ ನಮ್ಮ ಆಶಯ.

-ಎಂ.ಎನ್. ಆನಂದಸ್ವಾಮಿ, ಜಿಲ್ಲಾಧ್ಯಕ್ಷರು, ಬಿಜೆಪಿ, ಬೆಂಗಳೂರು ದಕ್ಷಿಣ ಜಿಲ್ಲೆ.

ಯಾವುದೇ ಒಂದು ಸಮುದಾಯಕ್ಕೆ ಸೀಮಿತವಲ್ಲ

ಯಡಿಯೂರಪ್ಪ ಅವರು ಒಂದು ಸಮುದಾಯದ ನಾಯಕರಲ್ಲ, ಅವರು ಎಲ್ಲಾ ಸಮುದಾಯ ವರ್ಗದ ನಾಯಕರಾಗಿದ್ದಾರೆ. ಯಡಿಯೂರಪ್ಪ ಅವರು ಬಿಜೆಪಿಯಲ್ಲಿ ದೊಡ್ಡ ಆಲದ ಮರವಿದ್ದಂತೆ. ಪಕ್ಷ ಬಲಿಷ್ಠವಾಗಿ ಕಟ್ಟುವಲ್ಲಿ ಇವರು ಒಬ್ಬರು. ಆಡುಮುಟ್ಟದ ಸೊಪ್ಪಿಲ್ಲ, ಯಡಿ ಯೂರಪ್ಪ ಅವರು ಮುಟ್ಟದ ಜಾತಿ ಜನಾಂಗವಿಲ್ಲ. ಎಲ್ಲಾ ಜಾತಿ ಜನಾಂಗದವರ ಬಗ್ಗೆ ವಿಶೇಷ ಕಾಳಜಿವಹಿಸಿ ಅವರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಭಿಮಾನೋತ್ಸವ ಹಿನ್ನೆಲೆಯಲ್ಲಿ ಸಭೆಗಳನ್ನು ನಡೆಸಲಾಗಿದೆ. ಬೂತ್ ಮಟ್ಟದಲ್ಲಿ ಕೆಲ ಕಾರ್ಯಗಳ ಜೊತೆಗೆ ಸಂಘಟಿಸಲಾಗುತ್ತಿದೆ. ಅಭಿಮಾನೋತ್ಸವ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಮುಖರು, ಕಾರ್ಯಕರ್ತರು ಸೇರಿದಂತೆ ಈ ಭಾಗದ ಅವರ ಅಭಿಮಾನಿಗಳು ಭಾಗವಹಿಸಲಿದ್ದಾರೆ.

- ಅನಿಲ್ ಕುಮಾರ್ ಮೋಕಾ, ಜಿಲ್ಲಾಧ್ಯಕ್ಷರು, ಬಿಜೆಪಿ, ಬಳ್ಳಾರಿ.

ಜನಪರ ಕಾರ್ಯ ಜೀವನಕ್ಕೆ ಪ್ರೇರಣೆ

ರಾಜ್ಯದ ಹಿರಿಯ ನಾಯಕ ಬಿ. ಎಸ್. ಯಡಿಯೂರಪ್ಪ ಅವರೊಂದಿಗೆ ವೈಯಕ್ತಿಕವಾಗಿ ಹೆಚ್ಚು ಒಡನಾಟ ಇರದಿದ್ದರೂ, ಅವರ ನಾಯಕತ್ವ ಮತ್ತು ಜನಪರ ಕಾರ್ಯಗಳು ತಮ್ಮ ಜೀವನಕ್ಕೆ ಪ್ರೇರಣೆಯಾಗಿದೆ. ಯಡಿಯೂರಪ್ಪ ಅವರು ಬಹಳ ಹಿರಿಯರು. ನಮ್ಮಂತಹವರಿಗೆ ನೇರ ಒಡನಾಟ ಕಡಿಮೆ. ಆದರೆ ನಮ್ಮ ತಂದೆಯವರು ಅವರೊಂದಿಗೆ ದೀರ್ಘಕಾಲ ರಾಜಕೀಯವಾಗಿ ಸಂಪರ್ಕ ಹೊಂದಿದ್ದರು. ನಾವು ಬಾಲ್ಯದಿಂದಲೇ ಅವರನ್ನು ಹತ್ತಿರದಿಂದ ಗಮನಿಸಿ ಬೆಳೆದವರು. ಯಡಿಯೂರಪ್ಪ ಅವರು ಸರಳ ಹಿನ್ನೆಲೆಯಿಂದ ಬಂದವರು. ಸೈಕಲ್‌ನಲ್ಲಿ ಸಂಚರಿಸುತ್ತಿದ್ದ ಹಳ್ಳಿಯೊಬ್ಬ ನಾಯಕ ರಾಜ್ಯದ ಮುಖ್ಯಮಂತ್ರಿಯಾಗಿ ಪರಿವರ್ತನೆ ಆಗಿದ್ದು ಅವರ ಪರಿಶ್ರಮ ಮತ್ತು ಬದ್ಧತೆಯ ಸಾಕ್ಷಿಯಾಗಿದೆ. ಯಡಿಯೂರಪ್ಪ ಅವರ ಆಡಳಿತ ಶೈಲಿ ವಿಭಿನ್ನವಾಗಿದ್ದು, ರೈತರ ಪರ ಹೋರಾಟಗಳು ಮತ್ತು ಜನಪರ ಯೋಜನೆಗಳು ಅವರ ವಿಶೇಷತೆಯಾಗಿವೆ. ಇತಿಹಾಸದಲ್ಲೇ ಮೊದಲ ಬಾರಿಗೆ ರೈತರಿಗೆ ಪ್ರತ್ಯೇಕ ಬಜೆಟ್ ನೀಡಿದವರು ಯಡಿಯೂರಪ್ಪ. ಇದು ಅವರ ರೈತರ ಮೇಲಿನ ಕಾಳಜಿಯ ಸ್ಪಷ್ಟ ಉದಾಹರಣೆ. ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ಜಾರಿಗೆ ತಂದ ಭಾಗ್ಯಲಕ್ಷ್ಮಿ ಯೋಜನೆ ಸೇರಿದಂತೆ ಹಲವು ಸಾಮಾಜಿಕ ಯೋಜನೆಗಳು ಇಂದಿಗೂ ಜನಪ್ರಿಯ. ಯಡಿಯೂರಪ್ಪ ಅವರ ದೃಷ್ಟಿಕೋನ ಸಮಾಜದ ಎಲ್ಲಾ ವರ್ಗಗಳನ್ನು ಸ್ಪರ್ಶಿಸಿದೆ. ಮಠಮಾನ್ಯಗಳಿಗೆ ಅನುದಾನ ನೀಡಿದ ಮೊದಲ ವ್ಯಕ್ತಿ. ಗ್ರಾಮೀಣ ಭಾಗಗಳಲ್ಲಿ ಮಠಗಳು ಶಿಕ್ಷಣ ಮತ್ತು ಅನ್ನದಾನದಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇದನ್ನು ಗುರುತಿಸಿ ಅವರಿಗೆ ಬೆಂಬಲ ನೀಡಿದದ್ದು ಗಮನಾರ್ಹ. ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಮೊದಲ ಬಾರಿಗೆ ಅಧಿಕಾರಕ್ಕೆ ತಂದ ಸಾಧನೆ ಯಡಿಯೂರಪ್ಪ ಅವರದೇ ಆಗಿದೆ. ಜತೆಗೆ ಕರ್ನಾಟಕದಲ್ಲಿ ಪಕ್ಷವನ್ನು ಬಲಪಡಿಸಿ, ರಾಷ್ಟ್ರೀಯ ಮಟ್ಟದಲ್ಲೂ ತಮ್ಮ ಗುರುತನ್ನು ಮೂಡಿಸಿದ್ದಾರೆ. ಅವರ ಬಗ್ಗೆ ಜನರಲ್ಲಿ ಇರುವ ಗೌರವ, ಪ್ರೀತಿ ನಮ್ಮಲ್ಲೂ ಇದೆ. ಕಾರ್ಯಕರ್ತರಾಗಿ ಅವರಿಂದ ಕಲಿತ ಅನುಭವವನ್ನು ನಾವು ಸದಾ ನೆನೆಸಿಕೊಳ್ಳುತ್ತೇವೆ.

- ಸಪ್ತಗಿರಿ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷರು, ಬೆಂಗಳೂರು ಕೇಂದ್ರ

ನಂಬಿದವರ ಪಾಲಿನ ಆಪದ್ಬಾಂಧವ ಯಡಿಯೂರಪ್ಪ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಹಿಂದಿನ ಗುರುಗಳಾದ ಸುಯತೀಂದ್ರತೀರ್ಥರು ಬಿ.ಎಸ್.ವೈ ಅವರನ್ನು ಭೇಟಿಯಾದಾಗಲೆಲ್ಲ ಆಪತ್ಬಾಂಧವ ಯಡಿಯೂರಪ್ಪ ಎಂದು ಪ್ರೀತಿಯಿಂದ ಸಂಭೋಧಿಸುತ್ತಿದ್ದರು. ಇದನ್ನು ಗಮನಿಸಿದ ಪತ್ರಕರ್ತರೊಬ್ಬರು ಸುಯತೀಂದ್ರ ತೀರ್ಥರನ್ನು ಸ್ವಾಮೀಜಿ ಇಡೀ ಭಕ್ತ ಸಮುದಾಯ ತಮ್ಮನ್ನು ಆಪತ್ಬಾಂಧವ ಎಂದು ನಂಬಿ ಆರಾಧಿಸುತ್ತಿದೆ. ಆದರೆ ತಾವು ಯಡಿಯೂರಪ್ಪ ಅವರನ್ನು ಆಪತ್ಬಾಂಧವ ಎಂದು ಅಭಿಮಾನದಿಂದ ಸಂಭೋಧಿಸುತ್ತೀರಿ ? ಏನಿದರ ಮರ್ಮ? ಎಂದು ಪ್ರಶ್ನಿಸಿದರು.

ಸ್ವಾಮೀಜಿ ಒಂದು ಕ್ಷಣ ಭಾವುಕರಾದರು. ಯಡಿಯೂರಪ್ಪ ಪ್ರಭಾವಿ ರಾಜಕಾರಣಿ ಎನ್ನುವ ಕಾರಣಕ್ಕೆ ಈ ಮಾತು ಹೇಳುತ್ತಿಲ್ಲ. ಅವರನ್ನು ಹೊಗಳಿ ಸಂತುಷ್ಟಗೊಳಿಸುವುದು ನಮ್ಮ ಉದ್ದೇಶವಲ್ಲ. ನಿಮಗೆಲ್ಲರಿಗೂ ಗೊತ್ತಿರುವಂತೆ 2009ರಲ್ಲಿ ಪ್ರಕೃತಿ ವಿಕೋಪದಿಂದ ಸಂಕಷ್ಟಕ್ಕೆ ಸಿಲುಕಿ ಇಡೀ ಮಂತ್ರಾಲಯ ಜಲಾವೃತವಾದ ಸಂದರ್ಭದಲ್ಲಿ ನಾನು ಹಾಗೂ ಕೆಲವು ಭಕ್ತರು ಪ್ರವಾಹದ ಮಧ್ಯೆ ಸಿಲುಕಿದೆವು. ಎಲ್ಲವೂ ಮುಗಿದು ಹೋಯಿತು ಎಂದುಕೊಂಡು ತೀವ್ರ ಆತಂಕಗೊಂಡ ಆ ಕ್ಷಣದಲ್ಲಿ ಹೆಲಿಕಾಪ್ಟರ್ ಮೂಲಕ ನಮ್ಮನ್ನು ಯಡಿಯೂರಪ್ಪ ರಕ್ಷಿಸಿದರು. ಇಷ್ಟು ಮಾತ್ರವಲ್ಲ, ಸುರಕ್ಷಿತ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಕೊಂಡರು. ಜಲಪ್ರಳಯದಿಂದ ತನ್ನೆಲ್ಲಾ ಬೆಡಗು-ಬಣ್ಣ ಕಳೆದುಕೊಂಡಿದ್ದ ಮಂತ್ರಾಲಯ ಶ್ರೀ ಕ್ಷೇತ್ರದ ಪುನರುತ್ಥಾನ ಕಲ್ಪಿಸಿದರು. ಯಡಿಯೂರಪ್ಪ ನಿಜ ಅರ್ಥದಲ್ಲಿ ಆಪತ್ಬಾಂಧವ! ಎಂದು ಸ್ವಾಮೀಜಿ ಜಲಪ್ರಳಯದ ಆ ದಿನದ ಘಟನೆ ನಿಧಾನವಾಗಿ ಪತ್ರಕರ್ತರಿಗೆ ವಿವರಿಸಿದರು.

ಹೌದು ಯಡಿಯೂರಪ್ಪ ಎಲ್ಲರ ಆಪತ್ಬಾಂಧವ ! ಆದ್ದರಿಂದಲೇ ಕನ್ನಡ ನಾಡಿನ ಜನ ಅವರನ್ನು ತಮ್ಮ ನಾಯಕ ಎಂದು ಗುರುತಿಸಿದೆ. ಬಿಎಸ್‌ವೈ ಕೆಲ ದಿನದ ಹಿಂದೆ 84ನೇ ವರ್ಷದ ಜನ್ಮದಿನವನ್ನು

ಮುರುಗೇಶ್ ಆರ್ ನಿರಾಣಿ
ಮಾಜಿ ಸಚಿವ

ಸರಳವಾಗಿ ಆಚರಿಸಿಕೊಂಡರು ಅವರ ಚಟುವಟಿಕೆ, ಲವಲವಿಕೆ, ಓಡಾಟ, ಹೋರಾಟದ ಕಿಚ್ಚು ಜನಸ್ಪಂದನ ಗಮನಿಸಿದರೆ ಅವರಿನ್ನೂ 25 ಹರೆಯದವರಾಗಿ ಕಾಣುತ್ತಾರೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಬೆಳಗಾವಿ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಭೀಕರ ನೆರೆ ಬಂದು ಅಪಾರ ಆಸ್ತಿ, ಜೀವ ಹಾನಿಗಳಾಗಿತ್ತು. ಜನ ಜೀವನ ಅಸ್ತವ್ಯಸ್ತಗೊಂಡಿತ್ತು. ಇದನ್ನು ಸಮರ್ಥವಾಗಿ ನಿಭಾಯಿಸಿದ ಬಿಎಸ್‌ವೈ ಪ್ರವಾಹ ಪೀಡಿತರಿಗೆ ಅಗತ್ಯ ಪರಿಹಾರ ಒದಗಿಸಿದರು. ಖಾಸಗಿ ಉದ್ದಿಮೆದಾರರು ಹಾಗೂ ಮಠಗಳ ಸಹಭಾಗಿತ್ವದಲ್ಲಿ ಸಂತ್ರಸ್ತರಿಗಾಗಿ ಸುಮಾರು 12,000 ಮನೆಗಳನ್ನು ನಿರ್ಮಿಸಿ ವಿತರಿಸಿದರು. ಆಗ ಕೇಂದ್ರ ಗೃಹ ಸಚಿವರಾಗಿದ್ದ ಪಿ ಚಿದಂಬರಂ 10 ವರ್ಷಗಳಲ್ಲಿ ಮಾಡಬೇಕಾದ ಕೆಲಸವನ್ನು ಯಡಿಯೂರಪ್ಪ ಒಂದು ವರ್ಷದ ಅವಧಿಯಲ್ಲಿ ಸಾಧಿಸಿದ್ದನ್ನು ಶ್ಲಾಘಿಸಿದರು. ಇದು ದೇಶದಲ್ಲಿ ಒಂದು ದಾಖಲೆಯಾಗಿ ಉಳಿದಿದೆ. ಈ ಮನೆಗಳನ್ನು ಪಡೆದ ಜನ ತಮ್ಮ ಮನೆಯಲ್ಲಿ ಬಿ.ಎಸ್. ವೈ ಫೋಟೊ ಇಟ್ಟು ಪೂಜಿಸುತ್ತಾರೆ. ಅವರು ಕೂಡಾ ಯಡಿಯೂರಪ್ಪ ಅವರನ್ನು ನಮ್ಮ ಆಪತ್ಬಾಂಧವ ಎಂದು ನಿತ್ಯ ಸ್ಮರಿಸುತ್ತಾರೆ.

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲೂಕಿನ ಬೂಕನಕೆರೆಯಲ್ಲಿ ಸಿದ್ದಲಿಂಗಪ್ಪ ಪುಟ್ಟತಾಯಮ್ಮ ಅವರ ಮಗನಾಗಿ 1943 ಫೆಬ್ರವರಿ 27 ರಂದು ಜನನ. 1965 ರಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತನಾಗಿ ಸಾರ್ವಜನಿಕ ಜೀವನಕ್ಕೆ ಪ್ರವೇಶ ಮಾಡಿದರು. ಶಿಕಾರಿಪುರವನ್ನು ತಮ್ಮ ಕಾರ್ಯಕ್ಷೇತ್ರನಾಗಿ ಆಯ್ಕೆ ಮಾಡಿಕೊಂಡು ಅವರು ಜನಸೇವೆಯ ಮೂಲಕ ಬೆಳೆದಿದ್ದಾರೆ. ನಾನು ಒಮ್ಮೊಮ್ಮೆ ನಿಧಾನಕ್ಕೆ ನಡೆಯುತ್ತೇನೆ ಆದರೆ ಹಿಂದಕ್ಕೆ ಮಾತ್ರ ನಡೆಯುವುದಿಲ್ಲ ಎಂದು ಅವರು ಆಗಾಗ ಹೇಳುತ್ತಾರೆ. ಅದು ಅಕ್ಷರಶಃ ಸತ್ಯ. 1983ರಲ್ಲಿ ಮೊದಲು ಬಾರಿ ಶಿಕಾರಿಪುರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾದರು. ಮುಂದೆ ಅವರು ಏಳು ಬಾರಿ ಆ ಕ್ಷೇತ್ರದಿಂದ ಗೆದ್ದಿದ್ದಾರೆ. ಪುರಸಭೆಯಿಂದ ಲೋಕಸಭೆ ಸೇರಿದಂತೆ ಅವರು ಬದುಕಿನಲ್ಲಿ 14 ಚುನಾವಣೆಗಳನ್ನು ಎದುರಿಸಿ ಗೆದ್ದಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಸರಕಾರದಲ್ಲಿ ನಾನು ಬೃಹತ್ ಕೈಗಾರಿಕೆ ಮಂತ್ರಿಯಾಗಿ ಸರಕಾರದ ಇಕ್ಕಟ್ಟಿನ ಸ್ಥಿತಿ ತೀರ ಸಮೀಪದಿಂದ ನೋಡಿದ್ದೇನೆ. ಆಗ ವಿರೋಧ ಪಕ್ಷಗಳಾಗಿದ್ದ ಕಾಂಗ್ರೆಸ್ - ಜೆಡಿಎಸ್ ನಾಯಕರು ಸರಕಾರ ಅಭದ್ರಗೊಳಿಸಲು ವಿಪರೀತ ಗೊಂದಲ ಸೃಷ್ಟಿಸಿದರು.

ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಾವಯವ ಕೃಷಿಕನ ಮನೆಯಲ್ಲಿ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಶಿರೋಳ ಗ್ರಾಮದ ಶಿವಲಿಂಗಯ್ಯ ಗಣಾಚಾರಿ ಅವರ ತೋಟದ ಮನೆಯಲ್ಲಿ ದಿ.26-6-2010 ರಂದು ವಾಸ್ತವ್ಯ ಮಾಡಿದ್ದರು. ಮರುದಿನ ಗ್ರಾಮದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯಲ್ಲಿ ಗ್ರಾಮದ ವಿದ್ಯಾರ್ಥಿನಿ ವಿಜಯಲಕ್ಷ್ಮೀ ಸದಾಶಿವ ಗಣಿ ಎದ್ದು ನಿಂತು ನನ್ನ ತಂದೆ ಬಡ ರೈತ

ಅವರ ಆರೋಗ್ಯ ಕೆಟ್ಟಿದೆ, ಆಸ್ಪತ್ರೆ ಖರ್ಚಿಗೆ ಇದ್ದ ಎರಡು ಎಕರೆ ಭೂಮಿ ಕೂಡ ಮಾರಿದ್ದಾರೆ. ಕಾಲೇಜು ಶುಲ್ಕ, ಹಾಸ್ಟೆಲ್ ಫೀ ಕಟ್ಟಲು ಸಾಧ್ಯವಾಗಲಿಲ್ಲ. ಈಗ ಶಿರೋಳ ಗ್ರಾಮಕ್ಕೆ ಬಂದು ಮನೆಯಲ್ಲಿ ಕುಳಿತಿದ್ದೇನೆ ನನಗೆ ನೆರವಾಗಬೇಕು ಎಂದು ವಿನಂತಿ ಮಾಡಿದಳು. ತಳ್ಳಗೆ, ಬೆಳ್ಳಗೆ ಎತ್ತರದ ನಿಲುವಿನ ವಿಜಯಲಕ್ಷ್ಮೀ ಧೈರ್ಯವಾಗಿ ಎದ್ದು ನಿಂತು ತುಂಬ ಸರಳವಾಗಿ ಸ್ಪಷ್ಟವಾಗಿ ಪ್ರಶ್ನೆ ಕೇಳಿದಾಗ ಸಭೆಯಲ್ಲಿ ಒಂದು ನಿಮಿಷ ಅಚ್ಚರಿ ಮಾಡಿತು. ಯಡಿಯೂರಪ್ಪ ಅವರ ರಾಜಕೀಯ ನಿಲುವುಗಳು ಏನೇ ಇರಬಹುದು. ಬಡವರ ಅಸಹಾಯಕರ ದುಃಖಕ್ಕೆ ಕರಗುವ ಮನಸ್ಸನ್ನು ಅವರು ಪಡೆದಿದ್ದಾರೆ.

ಮತ್ತೊಮ್ಮೆ ನಿನ್ನ ಹೆಸರು ಹೇಳಮ್ಮ? ಎಂದು ಯಡಿಯೂರಪ್ಪ ಕೇಳಿದರು. ವಿಜಯಲಕ್ಷ್ಮಿ ಎಂದು ಉತ್ತರಿಸಿದಳು. ನಾಡಿನ ಎಲ್ಲ ಮಕ್ಕಳಿಗೆ ನೆರವಾಗಬೇಕು ಎಂದು ನನ್ನ ಮನಸ್ಸು ಹಂಬಲಿಸುತ್ತಿದೆ ಅದು ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ವಿಜಯಲಕ್ಷ್ಮಿ ನಿನ್ನನ್ನು ದತ್ತು ಪಡೆದಿದ್ದೇನೆ ನಿನ್ನ ಓದಿನ ಖರ್ಚು ವೆಚ್ಚಕ್ಕೆ ಪೂರ್ಣ ಅನುಕೂಲ ಮಾಡುವೆ ಎಂದು ಸಭೆಯಲ್ಲಿ ಹೇಳಿದರು. ಯಡಿಯೂರಪ್ಪ ವಿಜಯಲಕ್ಷ್ಮಿ ಶಿಕ್ಷಣಕ್ಕೆ ವರ್ಷಕ್ಕೆ 2 ಲಕ್ಷ 40 ಸಾವಿರ ಪಾವತಿ ಮಾಡಿದರು.

ಶಿವಮೊಗ್ಗ ಜಿಲ್ಲೆಯ ಕೂಗಿನಹಳ್ಳಿ ರೈತ ಸಿದ್ದರಾಮೇಶ್ವರಪ್ಪ ಸದಾ ಯಡಿಯೂರಪ್ಪರನ್ನು ನೆನೆಯುತ್ತಾನೆ. ತನ್ನ ಮಗನಿಗೆ ಯಡಿಯೂರಪ್ಪ ಎಂದು ಹೆಸರಿಟ್ಟಿದ್ದಾನೆ. ಸಿದ್ದರಾಮಪ್ಪ ಹಿಂದುಳಿದ ಸಮಾಜಕ್ಕೆ ಸೇರಿದರು. ಅವನ ಜಮೀನು ಬಲಿಷ್ಠ ವರ್ಗದಿಂದ ಬಿಡಿಸಿಕೊಡಲು ಯಡಿಯೂರಪ್ಪ ಹೋರಾಟ ನಡೆಸಿದರು. ತಹಸೀಲ್ದಾರ ಕಚೇರಿ ಎದುರು 46 ದಿನ ಆತನೊಂದಿಗೆ ಧರಣಿ ನಡೆಸಿದರು. ಆಗ ಅವರು ತಹಸೀಲ್ದಾರ ಕಚೇರಿಗೆ ಸೈಕಲ್ ಮೇಲೆ ಬರುವುದನ್ನು ಆತ ನೆನಪಿಸುತ್ತಾನೆ. ಸಿದ್ದರಾಮಪ್ಪ ಪಾಲಿಗೂ ಯಡಿಯೂರಪ್ಪ ಇಂದಿಗೂ ಆಪತ್ಬಾಂಧವ ಆಗಿದ್ದಾರೆ.

ಯಡಿಯೂರಪ್ಪ ನನ್ನ ರಾಜಕೀಯ ಗುರು. ಅವರ ಸಮರ್ಪಣ ಮನೋಭಾವ, ಧೈರ್ಯ, ಋಜುತ್ವ, ನನನ್ನು ಬಹಳ ಆಕರ್ಷಿಸಿವೆ. ಆರೋಗ್ಯದ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಾರೆ. ಮುಂಜಾನೆ ಕಡ್ಡಾಯವಾಗಿ ವಾಯು ವಿಹಾರ ಮಾಡುತ್ತಾರೆ. ಊಟ ತುಂಬ ಮಿತವ್ಯಯ. ಸಮಾಜದಲ್ಲಿರುವ ಬಹುಪಾಲು ಬಡವರಿಗಾಗಿ ಏನನ್ನಾದರೂ ಮಾಡಲೇಬೇಕೆಂದು ಅವರು ಮೊದಲಿನಿಂದಲೂ ಚಿಂತಿಸುತ್ತಿದ್ದಾರೆ. ಅಧಿಕಾರದ ಉತ್ತುಂಗದಲ್ಲಿದ್ದಾಗಲೂ ಅವರಲ್ಲಿ ಅದೇ ತುಡಿತವನ್ನು ನಾನು ಕಂಡಿದ್ದೇನೆ. ಅವರ ಎಲ್ಲರ ಪಾಲಿನ ಆಪತ್ಬಾಂಧವ ಆಗಿದ್ದಾರೆ. ಅವರೊಂದಿಗೆ ಪ್ರವಾಸ ಮಾಡುವ, ಸರಕಾರ ನಡೆಸುವ, ಪಕ್ಷ ಸಂಘಟಿಸುವ ಅನೇಕ ಸಭೆ ಸಮಾರಂಭಗಳಲ್ಲಿ ವೇದಿಕೆ ಹಂಚಿಕೊಳ್ಳುವ, ಅವರೊಂದಿಗೆ ಊಟಮಾಡುವ, ನಗುವ ಬಹುದೊಡ್ಡ ಭಾಗ್ಯ ನನಗೆ ದೊರೆತಿದೆ. ಧಾರವಾಡ ಜಿಲ್ಲೆಯ ಪ್ರವಾಸದ ಸಂದರ್ಭದಲ್ಲಿ ಬಾಲಿಕಯೊಬ್ಬಳ್ಳು ಶಾಲೆಗೆ ಹೋಗಲು ಸೈಕಲ್ ಬೇಕು ಎಂದು ತಂದೆ ಎದರು ಕಣ್ಣೀರು ಹಾಕುವುದನ್ನು ಪ್ರತ್ಯಕ್ಷವಾಗಿ ಕಂಡ ಯಡಿಯೂರಪ್ಪ ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಸೈಕಲು ನೀಡುವ ಮಹತ್ವದ ಯೋಜನೆ ಜಾರಿಗೆ ತಂದರು.

ನಾನು ರಾಜ್ಯದ ಬೃಹತ್ ಕೈಗಾರಿಕಾ ಸಚಿವನಾಗಿ 2010 ಮತ್ತು 2012ರಲ್ಲಿ ಎರಡು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಏರ್ಪಡಿಸಿದ್ದೆ. ಇದ್ದರಿಂದ 3.93 ಲಕ್ಷ ಕೋಟಿ ಬಂಡವಾಳ ಹೂಡಿಕೆ ರಾಜ್ಯಕ್ಕೆ ಬಂದಿತ್ತು. 389 ಕೈಗಾರಿಕೆಗಳಿಗೆ ಒಪ್ಪಂದ 10 ಲಕ್ಷ ಹೊಸ ಉದ್ಯೋಗಳ ಸೃಷ್ಟಿಗೆ ಅವಕಾಶ ದೊರೆಯಿತು. ದೇಶಕ್ಕೆ ದೊಡ್ಡ ಹೆಸರು ತಂದ ಈ ಸಮಾವೇಶ ಯಶಸ್ವಿಯಾಗಲು ಯಡಿಯೂರಪ್ಪ ಅವರ ಪ್ರೇರಣೆ ಹಾಗೂ ಪ್ರೋತ್ಸಾಹವೇ ಕಾರಣ. ಪ್ರಧಾನಿಯಾಗಿದ್ದ ಮನಮೋಹನ ಸಿಂಗ್ ಕೂಡಾ ಈ ಸಮಾವೇಶಗಳನ್ನು ಶ್ಲಾಘಿಸಿದ್ದಾರೆ. ಎಸ್‌ಎಸ್ ಎಲ್‌ಸಿ ಶೇ.60ಕ್ಕಿಂತ ಅಧಿಕ ಅಂಕ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡ 34526 ವಿದ್ಯಾರ್ಥಿಗಳಿಗೆ 20.94 ಕೋಟಿ ಪ್ರೋತ್ಸಾಹ ಧನ ನೀಡಿದ್ದು, ಧನ ನೀಡಿದ್ದು ಬಿಎಸ್‌ವೈ ಅವರ ಸಾಧನೆ. ಅತಿ ಹಿಂದುಳಿದ ತಾಲೂಕುಗಳಿಗೆ 59 ಕಿತ್ತೂರ ರಾಣಿ ಚೆನ್ನಮ್ಮ ರಾಣಿ ಚೆನ್ನಮ್ಮ ವಸತಿ ಶಾಲೆ ನಿರ್ಮಿಸಿ ಆ ಭಾಗದಲ್ಲಿ ಶಿಕ್ಷಣ ಕ್ರಾಂತಿಗೆ ಮುನ್ನುಡಿ ಬರೆದ ಯಡಿಯೂರಪ್ಪ ಅವರ ಬಗ್ಗೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅಪಾರ ಪ್ರೀತಿ ಇಟ್ಟುಕೊಂಡಿದ್ದಾರೆ.

ಪ್ರತ್ಯೇಕ ಕೃಷಿ ಬಜೆಟ್ ಎಂಬ ಅದ್ಭುತ ಕಲ್ಪನೆಯ ಹರಿಕಾರ ಯಡಿಯೂರಪ್ಪನವರು. ರಾಜ್ಯದ ಸಮಗ್ರ ಅಭಿವೃದ್ಧಿಗೆ ವಿಷನ್ 2020 ರೂಪಿಸಿದರು. ದೇಶದಲ್ಲಿ ಮೊದಲು ಬಾರಿಗೆ ಶೇ.2ರಷ್ಟು ಬಡ್ಡಿದರದಲ್ಲಿ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಿದರು. ಬೀಳಗಿಯ ನಮ್ಮ ಮನೆಗೆ ಆಗಮಿಸಿದಾಗ ಅಲ್ಲಿಯ ಸ್ಥಳೀಯ ಪತ್ರಕರ್ತರು ನಿಮ್ಮ ಯಶಸ್ಸಿನ ಗುಟ್ಟು ಯಾವುದು ಎಂದು ಪ್ರಶ್ನಿಸಿದರು. ಕಠಿಣ ದುಡಿಮೆ ಸದಾ ಸಂಚಾರ, ಸಮಾಜಕ್ಕೆ ಯಾವಾಗಲೂ ಒಳ್ಳೆಯದನ್ನು ಬಯಸುವುದು ಎಂದು ಯಡಿಯೂರಪ್ಪ ಉತ್ತರಿಸಿದರು. ಅವರು ನನ್ನನ್ನು ಬಹಳ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ನಾನು ಭೇಟಿಯಾದಾಗಲೆಲ್ಲ ಮುರುಗೇಶ ಮತ್ತೆ ಯಾವ ಕಾರ್ಖಾನೆ ಕಟ್ಟುತ್ತೀದ್ದಿರಿ ಎಂದೇ ಮಾತು ಆರಂಭಿಸುತ್ತಾರೆ. ಅವರು ಬೇಸರಗೊಂಡದ್ದನ್ನು, ನಿರಾಸೆಗೊಂಡದ್ದನ್ನು ನಾನು ಒಮ್ಮೆಯೂ ನೋಡಿಲ್ಲ. ನಾಯಕನಾದವನು ಎಂಥ ಒತ್ತಡದಲ್ಲಿಯೂ ಯೋಚಿಸುವವ ಮನಸ್ಸು ಕೇಳುವ ಕಿವಿ ಕಳೆದುಕೊಳ್ಳಬಾರದು. ಜನರು ಹೇಳುವ ಮಾತು ಕಿವಿಗೊಟ್ಟು ಕೇಳುವ ಸಂಯಮ ಸಮಾಧಾನ ರೂಢಿಸಿಕೊಳ್ಳಬೇಕು ಎಂದು ಅವರು ತಮ್ಮ ಸಂಗಾತಿಗಳಿಗೆ ಹೇಳುತ್ತಾರೆ. ಪಕ್ಷದಲ್ಲಿ ಅಪೂರ್ವ ಉತ್ಸಾಹ ತುಂಬಿದೆ. ಮುಂದಿನ ದಿನಗಳಲ್ಲಿ ಬಿ.ಜೆ.ಪಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ಬರುವುದು ಖಚಿತ ಎಂಬುದು ನಮ್ಮೆಲ್ಲರ ಹಾರೈಕೆಯಾಗಿದೆ.

ಬಿ.ಎಸ್.ಯಡಿಯೂರಪ್ಪಾಜಿಗೆ ಜೋಳದ ರೊಟ್ಟಿ ಬಲು ಇಷ್ಟ

ತಂದೆಯ ಸಮಾನರು, ನಮ್ಮ ಕುಟುಂಬದ ಹಿತೈಷಿಗಳಾದ ಬಿ.ಎಸ್. ಯಡಿಯೂರಪ್ಪ ಅವರು ರಾಜಕೀಯ ಹಾಗೂ ಸಾರ್ವಜನಿಕ ಜೀವನದಲ್ಲಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 'ಬಿಎಸ್ ವೈ ಅಭಿಮಾನೋತ್ಸವ 'ಇದೇ 9ರಂದು ಚಿತ್ರದುರ್ಗದಲ್ಲಿ ನಡೆಯುತ್ತಿರುವುದು ಬಹಳ ಸಂತೋಷದ ಸಂಗತಿಯಾಗಿದೆ.

ಯಡಿಯೂರಪ್ಪ ಅವರು ಈ ಭಾಗದಲ್ಲಿ ಬಂದಾಗ ನಮ್ಮ ಮುಧೋಳ ಮತ್ತು ಬೀಳಗಿ ನಿವಾಸಗಳಿಗೆ ತಪ್ಪದೇ ಭೇಟಿ ನೀಡುತ್ತಾರೆ. ಇದು ನಮಗೆ ಹೆಮ್ಮೆಯ ಸಂಗತಿ. ನಾವೆಲ್ಲ ಸಹೋದರಿಯರು ಆರತಿ ಬೆಳಗಿ ಅವರನ್ನು ಸ್ವಾಗತಿಸುತ್ತೇವೆ. ಚರಣ ಮುಟ್ಟಿ ನಮಸ್ಕರಿಸುತ್ತೇವೆ. ಅವರು ಬಂದರೆ ಮನೆಯಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗುತ್ತದೆ. ಅವರೇ ಒಂದು ಬೆಳಕು. 'ಅಮ್ಮ ಆರಾಮ್ ಇದ್ದೀಯಾ,?' ಎಂದು ಅಂತಃಕರಣದಿಂದ ಕೇಳುತ್ತಾರೆ. ನಿಮ್ಮ ಮನೆಯ ಜೋಳದ ರೊಟ್ಟಿ ಊಟ ಮಾಡಲು ಬಂದಿದ್ದೇನೆ ಎಂದು ನಗುತ್ತಾ ಹೇಳುತ್ತಾರೆ. ಹೌದು! ಅವರಿಗೆ ಜೋಳದ ರೊಟ್ಟಿ ಬಹಳ ಇಷ್ಟ. ಅವರು ಮನೆಗೆ ಬರಲಿದ್ದಾರೆ ಎಂಬುದು ಗೊತ್ತಾಗುತ್ತಲೇ ಜೋಳದ ರೊಟ್ಟಿ ಮಾಡುವ ಸಿದ್ಧತೆ ಮಾಡಿಕೊಳ್ಳುತ್ತೇವೆ.

ಊಟ ಬಲ್ಲವನಿಗೆ ರೋಗವಿಲ್ಲ ಎನ್ನುವ ಮಾತೊಂದಿದೆ. ಯಡಿಯೂರಪ್ಪ ವಿಷಯದಲ್ಲಿ ಇದು ನೂರಕ್ಕೆ ನೂರು ಸತ್ಯ. ಅವರು ಊಟದಲ್ಲಿ ಬಹಳ ಶಿಸ್ತು . ಮಾಂಸಹಾರ ಸೇವಿಸುವುದಿಲ್ಲ. ಅವರಿಗೆ ಎಷ್ಟು ಬೇಕು ಅಷ್ಟೇ ನೀಡಬೇಕು. ತಟ್ಟೆಯಲ್ಲಿ ಒಂದು ಅಗಳು ವ್ಯರ್ಥ ಮಾಡುವುದಿಲ್ಲ. ನಿಧಾನಕ್ಕೆ ಊಟ ಮಾಡುವ ಸಂತೋಷದಿಂದ ಊಟ ಸವಿಯುವ ಅವರ ಮನೋಭಾವ ನೋಡುವುದೇ ಒಂದು ಸೊಗಸು.

ನಮ್ಮ ಕುಟುಂಬದವರು ಹಾಗೂ ಯಡಿಯೂರಪ್ಪ ಕುಟುಂಬದವರು ಕೂಡಿ ಅನೇಕ ಬಾರಿ ವಿದೇಶ ಪ್ರವಾಸ ಮಾಡಿದ ಹೆಮ್ಮೆ ನಮ್ಮದು. ಅವರು ಅಲ್ಲಿಯೂ ತಮ್ಮ ಹೆಣ್ಣು ಮಕ್ಕಳು ಹಾಗೂ ಸೊಸೆಯಂದಿರೊಂದಿಗೆ ನನ್ನನ್ನು ಕರೆದುಕೊಂಡು ಊಟ ಮಾಡುತ್ತಿದ್ದರು. ವಿದೇಶಿ ಊಟದ ಸಂದರ್ಭದಲ್ಲಿ ಅವರಿಗೆ ಪೂರೈಸಲಾಗುತ್ತಿದ್ದ ಬ್ರೆಡ್,ಬಿಸ್ಕೆಟ್ ಅವರು



ಕಮಲಾ ಮುರುಗೇಶ ನಿರಾಣಿ

ಮುಟ್ಟುತ್ತಿರಲಿಲ್ಲ. ತಾಜಾ ಶಾಖಾಹಾರ ಮಾತ್ರ ಸೇವಿಸುತ್ತಿದ್ದರು. ನೀರು,ಗೊಬ್ಬರ, ಬೆವರು ಹಾಕಿ ಬಿಜೆಪಿಯನ್ನು ಬೆಳೆಸಿದ ಅಗ್ರಗಣ್ಯ ಜನನಾಯಕ. ಅವರೆಂದೂ ಸಾರ್ವಜನಿಕ ಜೀವನದಲ್ಲಿ ಮುಖವಾಡ ಹಾಕಿಕೊಂಡು ನಡೆದವರಲ್ಲ. ಬಡವರು, ಹಿಂದುಳಿದವರು, ವಂಚಿತರು, ಜನಸಾಮಾನ್ಯರ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡು ಹೋರಾಟದ ಹಾದಿಯಲ್ಲಿ ನಡೆದು ಬಂದವರು. ಜನಕಲ್ಯಾಣದ ಆಶಯಗಳ ಈಡೇರಿಕೆಗೆ ಪ್ರಥಮ ಆದ್ಯತೆ ನೀಡಿದವರು. ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಬೈಸಿಕಲ್ ಕೊಟ್ಟವರು ಯಾರು? ಎಂದು ಕೇಳಿದರೆ ಥಟ್ ಅಂತ ಯಡಿಯೂರಪ್ಪ ಹೆಸರು ಹೇಳುತ್ತಾರೆ. ದೇಶದಲ್ಲಿ ಪ್ರಪ್ರಥಮವಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಎಂಬಹೆಗ್ಗಳಿಕೆಗೆ ಪಾತ್ರವಾಗಿರುವ ಅವರು ಹಸಿರು ಶಾಲು ಹಾಕಿಕೊಂಡು ಪ್ರತಿಜ್ಞಾವಿಧಿ ಸ್ವೀಕರಿಸಿ ರೈತರಲ್ಲಿ ಆತ್ಮ ವಿಶ್ವಾಸ ಹೆಚ್ಚಿಸಿದ ನೇತಾರ ಅವರು. ಇಂಥ ನಾಯಕರು ಮಾತ್ರ ಜನಸಾಮಾನ್ಯರ ಮನಸ್ಸಿನಲ್ಲಿ ನೆಲೆಸಲು ಸಾಧ್ಯ. ಉಪಮುಖ್ಯಮಂತ್ರಿಯಾಗಿ,ಮುಖ್ಯಮಂತ್ರಿಯಾಗಿ ಅಭಿವೃದ್ಧಿಯ ಪರವಾಗಿ ನಿಲುವು ಹೊಂದಿರುವ ಬಿಎಸ್ ವೈ ದೂರ ದೃಷ್ಟಿಯ ಮುತ್ಸದ್ದಿ. ಅವರು ಸಾರ್ವಜನಿಕ ಜೀವನದಲ್ಲಿ 5 ದಶಕಗಳನ್ನು ಕಳೆದ ಈ ಸಂದರ್ಭದಲ್ಲಿ ಯಡಿಯೂರಪ್ಪ ಅಭಿಮಾನೋತ್ಸವ ಹಮ್ಮಿಕೊಂಡಿರುವುದು ಅತ್ಯಂತ ಸೂಕ್ತ ಕಾರ್ಯವಾಗಿದೆ.ಎಲ್ಲರೂ ಬನ್ನಿ. ಮಹಾನ್ ನಾಯಕನ ಹಬ್ಬಕ್ಕೆ ಸಾಕ್ಷಿಯಾಗೋಣ!

ಅನ್ನದಾತರ ನಾಯಕ ಬಿ.ಎಸ್.ಯಡಿಯೂರಪ್ಪ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಬೂಕನಕೆರೆ ಸಿದ್ಧಲಿಂಗಪ್ಪ ಯಡಿಯೂರಪ್ಪ (ಬಿಎಸ್‌ವೈ) ಅವರ ಸ್ಥಾನ ವಿಶಿಷ್ಟವಾದದ್ದು. ಮಂಡ್ಯ ಜಿಲ್ಲೆಯ ಬೂಕನಕೆರೆ ಎಂಬ ಪುಟ್ಟ ಗ್ರಾಮದ ಕೃಷಿ ಕುಟುಂಬದಲ್ಲಿ ಜನಿಸಿದ ಅವರು 'ರೈತನ ಮಗ' ಎಂಬ ತಮ್ಮ ಗುರುತನ್ನು ಎಂದಿಗೂ ಬಿಡಲಿಲ್ಲ. 2007ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ, ಬಿಳಿ ಸಫಾರಿ ಮತ್ತು ಹಸಿರು ಶಾಲನ್ನು ಧರಿಸಿ 'ದೇವರು ಮತ್ತು ರೈತರ ಹೆಸರಿನಲ್ಲಿ' ಪ್ರಮಾಣ ವಚನ ಬೋಧಿಸಿದ ಆ ಒಂದು ಕ್ಷಣವೇ ಅವರ ಇಡೀ ರಾಜಕಾರಣದ ಸಾರಾಂಶ. ಸಾರ್ವಜನಿಕ ಭಾಷಣಗಳಲ್ಲಿ, ಖಾಸಗಿ ಮಾತುಕತೆಯಲ್ಲಿ -ಯಡಿಯೂರಪ್ಪ ಅವರ ಗಮನ ಯಾವಾಗಲೂ ರೈತರ ಸಮಸ್ಯೆಗಳ ಸುತ್ತಲೇ ಸುತ್ತುತ್ತಿರುತ್ತದೆ.

ರೈತ ಸುಧಾರಕ: ಬಿಜೆಪಿಯಂಥ ರಾಷ್ಟ್ರೀಯವಾದಿ ಸಿದ್ಧಾಂತದ ಪಕ್ಷದಲ್ಲಿ ಬೆಳೆದ ಯಡಿಯೂರಪ್ಪ ಅವರು ರೈತನಾಯಕರಾಗಿದ್ದು ಕೂಡ ವಿಸ್ಮಯಕಾರಿಯೆ. ಹಾಗೆ ನೋಡಿದರೆ ರೈತರ ವಿಚಾರವೂ ರಾಷ್ಟ್ರೀಯ ವಿಚಾರವೇ ಅಲ್ಲವೇ ? ಅದನ್ನು ಬಿಜೆಪಿಯ ಅಜೆಂಡಾವಾಗಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಯಡಿಯೂರಪ್ಪ ಅವರು ಕರ್ನಾಟಕದ ಜನನಾಯಕನಾಗಿ, ಮಹಾನ್ ರೈತ ಹೋರಾಟಗಾರನಾಗಿ, ರೈತ ಸುಧಾರಕನನ್ನಾಗಿ ರೂಪಿಸಿದ ಹೆಗ್ಗಳಿಕೆ ಅವರ ರೈತ ಹೋರಾಟಗಳಿಗೆ ಸಲ್ಲಬೇಕು. ಮೊದಲನೆಯದ್ದು 1977ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ನಡೆಸಿದ ಜೀತದಾಳುಗಳ ಪುನರ್‌ವಸತಿ ಚಳವಳಿ. ಐದು ತಿಂಗಳ ಕಾಲ ಹಗಲು ರಾತ್ರಿ ನಡೆಸಿದ ಹೋರಾಟದಲ್ಲಿ ಯಡಿಯೂರಪ್ಪ ಯಶಸ್ವಿಯಾದರು. ಈ ಹೋರಾಟದ ಯಶಸ್ಸಿಗೆ ಖುದ್ದು ಅಟಲ್ ಬಿಹಾರಿ ವಾಜಪೇಯಿ ಅವರೇ ಅಭಿನಂದಿಸಿದ್ದರು.

ಬಗರ್ ಹುಕುಂ ಚಳವಳಿ: ಎರಡನೆಯದು, 1980ರ ದಶಕದ ಆರಂಭದಲ್ಲಿ ಕೈಗೊಂಡ 'ಬಗರ್ ಹುಕುಂ' ಚಳವಳಿ - ಸರಕಾರಿ ಭೂಮಿಯಲ್ಲಿ ತಲೆಮಾರುಗಳಿಂದ ಸಾಗುವಳಿ ಮಾಡುತ್ತಿದ್ದ ಭೂರಹಿತ ರೈತರಿಗೆ ಹಕ್ಕುಪತ್ರ ನೀಡಬೇಕೆಂಬ ಬೇಡಿಕೆಯೊಂದಿಗೆ ನಡೆಸಿದ ಚಳವಳಿ. ಅಂದಿನ ಸರಕಾರ ತರಲು ಉದ್ದೇಶಿಸಿದ್ದ ವಿಧೇಯಕದ ಅಪಾಯ ಕುರಿತು ವಿಧಾನಸಭೆಯಲ್ಲಿ ಎಳೆಎಳೆಯಾಗಿ ಮಾತನಾಡಿ, ಅಂದಿನ ಅರಣ್ಯ ಸಚಿವ ರಾಚಯ್ಯ ಅವರ ಕಣ್ತೆರೆಸಿದರು.

ಗಮನ ಸೆಳೆದ ಸೈಕಲ್ ಯಾತ್ರೆ: ಮೂರನೆಯದು, 1987-88ರ ಭೀಕರ ಬರಗಾಲದ ಸಂದರ್ಭದಲ್ಲಿ ರೈತರ ಸಂಕಷ್ಟವನ್ನು ಎತ್ತಿಹಿಡಿಯಲು ಕೈಗೊಂಡ ಸೈಕಲ್ ಯಾತ್ರೆ. ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಬಸವನಬಾಗೇವಾಡಿಯಿಂದ ಬೆಂಗಳೂರಿನವರೆಗೆ ರೈತ ಜಾಥಾ ನಡೆಸಿದರು. ಸಾವಿರಾರು ಕಡೆ ರೈತರನ್ನು ಉದ್ದೇಶಿಸಿ ಭಾಷಣ ಮಾಡಿದರು. ಹಾಗೆ ನೋಡಿದರೆ, ಬಸವ ಕಲ್ಯಾಣದಿಂದ ಬೆಂಗಳೂರಿಗೆ, ಬನವಾಸಿಯಿಂದ ಬೆಂಗಳೂರಿಗೆ, ಕೃಷ್ಣರಾಜ ಸಾಗರಕ್ಕೆ - ಹೀಗೆ

ಎ.ಎಸ್. ಪಾಟೀಲ ನಡಹಳ್ಳಿ
ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷರು ಹಾಗೂ ಮಾಜಿ ಶಾಸಕರು

ಯಡಿಯೂರಪ್ಪ ಅನೇಕ ರೈತ ಜಾಥಾ ನಡೆಸಿದ್ದಾರೆ.ಇಂತಹ ಚಳವಳಿಗಳ ಮೂಲಕ ಯಡಿಯೂರಪ್ಪ ರಾಜ್ಯದ ಮೂಲೆ ಮೂಲೆಗಳಲ್ಲಿ ತಿರುಗಾಡಿ, ಬರಪೀಡಿತ ಮತ್ತು ಭೂರಹಿತ ರೈತರ ಧ್ವನಿಯಾಗಿ ರೂಪುಗೊಂಡರು. ಸಮಗ್ರ ಕರ್ನಾಟಕದ ಹಳ್ಳಿ ಹಳ್ಳಿಯನ್ನು ಪ್ರವಾಸ ಮಾಡಿದ ರಾಜ್ಯದ ಅಪರೂಪದ ರಾಜಕಾರಣಿಯೂ ಹೌದು.

1980ರ ದಶಕದಲ್ಲಿ ಗದಗ ಜಿಲ್ಲೆಯಲ್ಲಿ ರೈತ ಚಳವಳಿಯ ಮೇಲೆ ಗೋಲೀಬಾರ್ ನಡೆದು ಮೂವರು ಯುವ ರೈತರು ಹುತಾತ್ಮರಾದಾಗ, ಯಡಿಯೂರಪ್ಪ ಅವರು ಮನೆಮನೆಗೆ ಭೇಟಿ ನೀಡಿ ರೈತರಿಗೆ ಧೈರ್ಯ ತುಂಬಿದರು. ನವಲಗುಂದ -ನರಗುಂದ ರೈತ ಚಳವಳಿಯ ಪ್ರಭಾವವೂ ಯಡಿಯೂರಪ್ಪ ಅವರ ರೈತಪರ ನಿಲುವಿಗೆ ಗಟ್ಟಿತನ ತಂದುಕೊಟ್ಟಿತು.

ಪ್ರತ್ಯೇಕ ಕೃಷಿ ಬಜೆಟ್, ರೈತ ಬಜೆಟ್ ಮಂಡನೆ: ರೈತಪರ ಚಳುವಳಿಗಳ ಮೂಲಕ ರಾಜಕೀಯವಾಗಿ ಬೆಳೆದು ಬಂದ ಯಡಿಯೂರಪ್ಪನವರು, ಮುಖ್ಯಮಂತ್ರಿ ಪದವಿ ಅಲಂಕರಿಸಿದ ಬಳಿಕವು ಎಂದಿಗೂ ತಮ್ಮ ಬೆನ್ನಿಗೆ ರಾಜಕೀಯ ಶಕ್ತಿಯಾಗಿರುವ ರೈತ ಸಮುದಾಯವನ್ನು ಮರೆತವರಲ್ಲ. ರೈತ ಅಭ್ಯುದಯಕ್ಕೆ ಸದಾ ಚಿಂತಿಸುವ ಅವರು, ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕ ಬಜೆಟ್ ಮಂಡಿಸುವ ನಿರ್ಧಾರ ಪ್ರಕಟಿಸಿದ್ದಾಗ ರಾಜಕೀಯ ರಂಗವೇ ಅಚ್ಚರಿಗೊಂಡಿತು. ಆದರೆ ತಮ್ಮ ಪಟ್ಟು ಬಿಡದೆ ಯಡಿಯೂರಪ್ಪನವರು, 2011-2012ನೇ ಸಾಲಿನಲ್ಲಿ 17,857 ಮೊತ್ತದ ಕೃಷಿ ಬಜೆಟ್ ಮಂಡಿಸಿದರು. ಇದೂ ದೇಶದಲ್ಲೇ ಮೊದಲ ಕೃಷಿ ಬಜೆಟ್ ಎಂದು ಇತಿಹಾಸ ಬರೆಯಿತು.

ಭಾರತದಲ್ಲೇ ಮೊದಲ ಬಾರಿಗೆ 'ಪ್ರತ್ಯೇಕ ಕೃಷಿ ಬಜೆಟ್' ಮಂಡಿಸಿ ಕೃಷಿಗೆ ರಾಜಮುದ್ರೆಯ ಆದ್ಯತೆ ಯನ್ನು ತೋರಿಸಿಕೊಟ್ಟರು. ಒಣಭೂಮಿಯ ಉತ್ಪಾದಕತೆ ಹೆಚ್ಚಿಸಲು ರೂಪಿಸಿದ 'ಭೂಚೇತನ' ಯೋಜನೆ ಒಣಪ್ರದೇಶಗಳಲ್ಲಿ ಬೆಳೆ ಕ್ರಾಂತಿಗೆ ಕಾರಣವಾಯಿತು.

ರಾಸಾಯನಿಕ ಮುಕ್ತ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಿರುವ ಯಡಿಯೂರಪ್ಪನವರು, ಈ ಸಂಬಂಧ ರಾಜ್ಯದಲ್ಲಿ ಮೊದಲ ಬಾರಿಗೆ ಸಾವಯವ ಕೃಷಿ ಮಿಷನ್ ಅನ್ನು ಸಹ ಸ್ಥಾಪಿಸಿದ್ದರು. ಈ ಸಂಸ್ಥೆಯ ಮೂಲಕ ರಾಸಾಯನಿಕ ಬಳಸದೆ ಸಾವಯವ ಪದ್ಧತಿಯಲ್ಲಿ ಕೃಷಿ ನಡೆಸುವಂತೆ ರೈತರಿಗೆ ಉತ್ತೇಜನ ನೀಡಲಾಯಿತು. ಇದರ ಪ್ರಚಾರಕ್ಕೆ ಸಾವಯವ ಕೃಷಿಕರನ್ನು ಭೇಟಿಯಾಗಿ ಯಡಿಯೂರಪ್ಪನವರು ಸಂವಾದ ನಡೆಸಿದ್ದರು. ಈ ಕೃಷಿ ಪದ್ಧತಿ ಅನುಸರಿಸಿದ ರೈತರಿಗೆ ಆರ್ಥಿಕವಾಗಿ ಕೂಡಾ ಅವರು ನೆರವು ಕಲ್ಪಿಸಿದ್ದಾರೆ. ಇದರ ಫಲವಾಗಿ ರಾಜ್ಯದ 76 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 83 ಸಾವಿರ ರೈತರು ಸಾವಯವ ಬೇಸಾಯದಲ್ಲಿ ತೊಡಗಿದ್ದಾರೆ.

ಕೃಷಿ ಮಾರುಕಟ್ಟೆಗೆ ಹೊಸ ಚೌಕಟ್ಟು: ನೀರಾವರಿ ಕ್ಷೇತ್ರದಲ್ಲೂ ಯಡಿಯೂರಪ್ಪ ಅವರ ಹೆಜ್ಜೆ ಕ್ರಾಂತಿಕಾರಿ. ಸುಮಾರು 23,000 ಕೋಟಿ ವೆಚ್ಚದಲ್ಲಿ 20 ಲಕ್ಷ ರೈತರಿಗೆ 10 ಎಚ್ ಪಿವರೆಗಿನ ಕೃಷಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ ಯೋಜನೆ ಜಾರಿಗೆ ತಂದರು. ಸಣ್ಣ ನೀರಾವರಿ

ಕ್ಷೇತ್ರಕ್ಕೆ ತಾಂತ್ರಿಕ ಸಹಾಯ ಮತ್ತು ಸಬ್ಸಿಡಿ ನೀಡಲು 'ಅಂತರಗಂಗಾ ಯೋಜನೆ 'ಯನ್ನು ಜಾರಿಗೆ ತಂದರು. ಹನಿ ನೀರಾವರಿಯನ್ನು ನೀತಿಯ ಹಂತದಲ್ಲಿಯೇ ಕಡ್ಡಾಯಗೊಳಿಸಿದ್ದು ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿ. 'ಪರ್ ಡ್ರಾಪ್,ಮೋರ್ ಕ್ರಾಪ್' ಯೋಜನೆಯಡಿ 26,000 ಎಕರೆ ಭೂಮಿ ಸೂಕ್ಷ್ಮ ನೀರಾವರಿಗೆ ಒಳಪಟ್ಟಿತು. 'ಕರ್ನಾಟಕ ಕೃಷಿ ವ್ಯವಹಾರ ಅಭಿವೃದ್ಧಿ ನೀತಿ' ರೂಪಿಸಿ ಕೃಷಿ ಮಾರುಕಟ್ಟೆಗೆ ಹೊಸ ಚೌಕಟ್ಟನ್ನೂ ನೀಡಿದರು.

ಸಾಲ ಮನ್ನಾವನ್ನು ಕೇವಲ ರೈತರಿಗೆ ಮಾತ್ರ ಸೀಮಿತಗೊಳಿಸದೆ, ಮೀನುಗಾರರು ಮತ್ತು ನೇಕಾರರಿಗೂ ವಿಸ್ತರಿಸಿದ್ದು ಯಡಿಯೂರಪ್ಪ ಅವರ ವ್ಯಾಪಕ ದೃಷ್ಟಿಕೋನದ ಪ್ರತೀಕ. ರೈತ ಮಕ್ಕಳಿಗೆ ರಾಜ್ಯದಲ್ಲೇ ಮೊದಲ ಬಾರಿಗೆ ವಿದ್ಯಾರ್ಥಿವೇತನ ಆರಂಭಿಸಿದ ಶ್ರೇಯಸ್ಸೂ ಅವರಿಗೆ ಸಲ್ಲುತ್ತದೆ.

ಎರಡನೆಯ ಪ್ರಮುಖ ಅವಧಿ: ಪ್ರವಾಹ, ಬರ ಮತ್ತು ರೈತ ಪರಿಹಾರ: 2019ರ ಜುಲೈನಲ್ಲಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿ ಗದ್ದುಗೆ ಏರಿದ ಯಡಿಯೂರಪ್ಪ, ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ರಾಜ್ಯವನ್ನು ಆವರಿಸಿದ ಭೀಕರ ಪ್ರವಾಹವನ್ನು ಎದುರಿಸಬೇಕಾಯಿತು. ಸಾಮಾನ್ಯ ಪ್ರಮಾಣಕ್ಕಿಂತ ಸುಮಾರು ಐದು ಪಟ್ಟು ಹೆಚ್ಚು ಮಳೆಯಾಗಿ 12 ಜಿಲ್ಲೆಗಳಲ್ಲಿ ರೈತ ಭೂಮಿ ಮುಳುಗಿಹೋಯಿತು. ಆ ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ಮಾರ್ಗಸೂಚಿಗೂ ಮೀರಿ ಪ್ರತಿ ಹೆಕ್ಟೇರ್‌ಗೆ ಹೆಚ್ಚುವರಿ 10,000 ಪರಿಹಾರ ಘೋಷಿಸಿ ರೈತಸ್ನೇಹಿ ಧೋರಣೆಯನ್ನು ಪ್ರದರ್ಶಿಸಿದರು. ಬೆಳೆ ನಷ್ಟಕ್ಕೆ ರಾಜ್ಯದ ಇತಿಹಾಸದಲ್ಲೇ ಅತಿ ಹೆಚ್ಚು ಪರಿಹಾರ ನೀಡಿದ ಹಿರಿಮೆ ಆ ಸರಕಾರಕ್ಕೆ ಸಲ್ಲುತ್ತದೆ.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಗೆ ಪೂರಕವಾಗಿ ಕರ್ನಾಟಕ ಸರಕಾರವು ರಾಜ್ಯದ ಪಾಲಿನಿಂದ ಹೆಚ್ಚುವರಿ 4,000 ನೀಡುವ ಯೋಜನೆ ಜಾರಿಗೊಳಿಸಿದ್ದು ರೈತ ಕುಟುಂಬಗಳಿಗೆ ನೇರ ನೆರವು ತಲುಪಿಸುವ ಆಶಯದಿಂದ ಎಂಬುದು ಗಮನಾರ್ಹ. ಬೆಳೆ ಸಾಲ ಮನ್ನಾ ಯೋಜನೆಗೆ ಬಜೆಟ್‌ನಲ್ಲಿ 10,500 ಕೋಟಿ ಮೀಸಲಿಟ್ಟು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಪಡೆದ 2 ಲಕ್ಷದವರೆಗಿನ ಸಾಲಗಳನ್ನು ಮನ್ನಾ ಮಾಡಿದರು. ತೆಂಗು, ಅಡಕೆ ಮರಗಳಿಂದ ಬಿದ್ದು ಅಥವಾ ಹಾವು ಕಚ್ಚಿ ಮೃತಪಟ್ಟ ರೈತ-ಕಾರ್ಮಿಕರ ಕುಟುಂಬಗಳಿಗೆ 2 ಲಕ್ಷ ಪರಿಹಾರ ನೀಡುವ ಯೋಜನೆಯೂ ಆ ಅವಧಿಯ ರೈತಪರ ನಿಲುವಿನ ಸಂಕೇತ. ನೀರಾವರಿ ಯೋಜನೆಗೆ ಕೇಂದ್ರದ ಒಪ್ಪಿಗೆ ಪಡೆದು ರಾಷ್ಟ್ರೀಯ ಯೋಜನೆಯ ಮಾನ್ಯತೆ ಪಡೆಯಲು ಚಾಲನೆ ನೀಡಿದ್ದು ಆ ಅವಧಿಯ ಮಹತ್ವದ ಸಾಧನೆ.

ಶಿಕಾರಿಪುರದ ಸಣ್ಣ ಪಟ್ಟಣ ಪಂಚಾಯಿತಿ ಸದಸ್ಯತ್ವದಿಂದ ಆರಂಭಗೊಂಡ ಯಡಿಯೂರಪ್ಪ ಅವರ ರಾಜಕೀಯ ಪ್ರಯಾಣ ರಾಜ್ಯದ ಮುಖ್ಯಮಂತ್ರಿ ಗದ್ದುಗೆಯವರೆಗೆ ಸಾಗಿದರೂ, ಆ ಪ್ರಯಾಣದ ಬೆನ್ನೆಲುಬಾಗಿ ಯಾವತ್ತೂ ರೈತರೇ ನಿಂತಿದ್ದಾರೆ.

ಜೀತದಾಳುಗಳ ಪುನರ್‌ವಸತಿ ಹೋರಾಟ, ಬಗರ್ ಹುಕುಂ ಚಳವಳಿ, ಬರಗಾಲದ ಸೈಕಲ್ ಯಾತ್ರೆ, ಸೊರಟೂರು ರೈತ ಹುತಾತ್ಮರ ಪರವಾಗಿ ತೋರಿದ ಬದ್ಧತೆ - ಇವು ಆರಂಭಿಕ ದಿನಗಳಲ್ಲಿ ಅವರ ರೈತಪರ ಗುರುತಿಗೆ ಬುನಾದಿಯಾದರೆ; ಪ್ರತ್ಯೇಕ ಕೃಷಿ ಬಜೆಟ್, ಭೂಚೇತನ, ಸಾವಯವ ಕೃಷಿ ಮಿಷನ್, ಉಚಿತ ವಿದ್ಯುತ್, ಸಾಲ ಮನ್ನಾ, ಹನಿ ನೀರಾವರಿ ಕಡ್ಡಾಯ, ಪ್ರವಾಹ ಪರಿಹಾರಗಳು ಆಡಳಿತದಲ್ಲಿ ಆ ಬದ್ಧತೆಯ ಫಲಶ್ರುತಿ. 'ರೈತನ ಮಗ' ಎಂಬುದು ಯಡಿಯೂರಪ್ಪ ಅವರಿಗೆ ಬರೀ ಚುನಾವಣಾ ಘೋಷಣೆಯಲ್ಲ, ಅದು ಅವರ ರಾಜಕೀಯ ಆತ್ಮವೆಂಬ ಸತ್ಯಕ್ಕೆ ಅವರ ಆಡಳಿತ ದಾಖಲೆಗಳೇ ಸಾಕ್ಷ್ಯ ನುಡಿಯುತ್ತವೆ.

ಮಾನವತಾವಾದಿ, ಪ್ರಬುದ್ಧ ರಾಜಕೀಯ ಮುತ್ಸದ್ದಿ

ಪ್ರಜೆಗಳ ಸುಖವೇ ರಾಜನ ಸುಖ, ಪ್ರಜೆಗಳ ಹಿತವೇ ರಾಜನ ಹಿತ, ರಾಜನಾದವನು ಪ್ರಜೆಗಳಿಗೆ ಹಿತವಾದುದನ್ನೇ ಮಾಡಬೇಕೆ ವಿನಃ ತಮಗೆ ಇಷ್ಟಬಂದಂತಲ್ಲ ಎಂಬ ಕೌಟಿಲ್ಯನ ಹೇಳಿಕೆಯಂತೆ ರಾಜನೀತಿ ಮತ್ತು ರಾಜಧರ್ಮವನ್ನು ಬಿ.ಎಸ್.ಯಡಿಯೂರಪ್ಪ ನವರು ಅಕ್ಷರಶಃ ಪಾಲಿಸಿಕೊಂಡು ಬಂದವರು.

ಹೆದರದಿರು ಮನವೆ,ಬೆದರದಿರು ತನುವೆ, ನಿಜವನರಿದು ನಿಶ್ಚಿಂತನಾಗಿರು- ಎಂಬ ಅಕ್ಕ ಮಹಾದೇವಿಯ ವಚನದಂತೆ, ಇಟ್ಟುಕೊಂಡ ಗುರಿಯನ್ನು, ಹೋಗುವ ದಾರಿಯನ್ನು ಸ್ಪಷ್ಟಗೊಳಿಸಿಕೊಂಡು, ಹೃದಯದ ತುಂಬ ಅಭಿವೃದ್ಧಿಯ ಕನಸು ತುಂಬಿಕೊಂಡು ನನಸು ಮಾಡಿದ ಆಧುನಿಕ ಕರ್ನಾಟಕದ ಶಿಲ್ಪಿ, ಜನನಾಯಕ ಬಿ.ಎಸ್ .ಯಡಿಯೂರಪ್ಪನವರ ಹೋರಾಟದ ಹಾದಿಗೆ, ಸಮಾಜಸೇವೆಗೆ ಐದು ದಶಕಗಳು ಸಂದಿವೆ.

ಉದ್ಯಮಿಯಾಗಿ, ಕೃಷಿಕರಾಗಿ,ಆರಂಭವಾದ ಇವರ ಜೀವನ ಪಯಣ, ಶಿಕಾರಿಪುರದ ಪುರಸಭೆಯ ಸದಸ್ಯರಾಗಿ ಆರಂಭವಾದ ಜನಸೇವಾ ಕಾರ್ಯ, ದಕ್ಷಿಣ ಭಾರತದ ಕೇಸರಿ ಪಡೆಯ ಭದ್ರಕೋಟೆ ನಿರ್ಮಾಣದವರೆಗೆ ಬಂದು ನಿಂತಿದೆ. ಯಡಿಯೂರಪ್ಪನವರು ದುಡಿಮೆಗೆ ಹೆಸರಾದವರು. ಜನಸೇವೆ ಇವರ ಗುರಿ. ಇವರಲ್ಲಿರುವ ಪ್ರಯೋಗಶೀಲ ಗುಣಸ್ವಭಾವದಿಂದ ನೂರಾರು ಯೋಜನಾ ವ್ಯೂಹಗಳು ಇವರಲ್ಲಿ ತೆರೆದುಕೊಳ್ಳುತ್ತಲೇ ಇರುತ್ತವೆ. ಹಲವಾರು ಒತ್ತಡ ಮತ್ತು ವೈಪರೀತ್ಯಗಳ ನಡುವೆಯೂ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗುವ ಚಾಕಚಕ್ಯತೆ ಇವರಲ್ಲಿದೆ. ಜನಸೇವೆಯನ್ನು ಜನಾರ್ದನನ ಸೇವೆಯೆಂದು ತಿಳಿದು ನಂಬಿಕೆ ಮತ್ತು ಮೌಲ್ಯದ ಆಧಾರದಲ್ಲಿಯೇ ಜನಮುಖಿಯಾಗಿ ಮನಮುಟ್ಟಿ ಕೆಲಸ ಮಾಡಿದ್ದವರು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಸಾಧಿಸಲು ಸಾಧ್ಯವೆಂಬುದನ್ನು ಸಾಬೀತುಪಡಿಸಿದವರು. ಜನರ ಸಂಕಷ್ಟಗಳಿಗೆ ಕಿವಿಗೊಟ್ಟುದಲ್ಲದೇ ಜನಸಾಮಾನ್ಯರನ್ನು ಏಕಕಾಲದಲ್ಲಿ ತಲುಪುವ ಚೈತನ್ಯದ ಚಿಲುಮೆಯ, ಅಂತಃಕರಣವುಳ್ಳ ಮತ್ತು ಪರೋಪಕಾರಿ ಮನಸ್ಸಿನ ಜನ-ನಾಯಕರಾಗಿದ್ದಾರೆ. ಬಾಗಿದವರಿಗೆ ಬೆನ್ನಾಗಿ, ಬಿದ್ದವರಿಗೆ ಊರುಗೋಲಾಗಿ, ದೀನದಲಿತರ ಹಿತಚಿಂತಕರಾಗಿ ರಾಜಕೀಯ ರಂಗದಲ್ಲಿ ಮೈಲುಗಲ್ಲಾಗಿದ್ದಾರೆ. ಇದಕ್ಕೆ ಪೂರಕವೆನ್ನುವಂತೆ ಕೆಲವು ಸಂಗತಿಗಳನ್ನು ಉಲ್ಲೇಖಿಸಿಬಹುದಾಗಿದೆ.

ಹೋರಾಟವೇ ಇವರ ಮನೆದೇವರು : ಯಡಿಯೂ ರಪ್ಪನವರು ಅಧಿಕಾರವನ್ನರಿಸಿ ಬಂದವರಲ್ಲ ಅಧಿಕಾರವೇ ಅವರನ್ನು ಹುಡುಕಿಕೊಂಡು ಬಂದಿದೆ. ಹಸಿರು ಶಾಲು ಧರಿಸಿ ವಿಧಾನಸೌಧದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮುನ್ನ ಅವರು ಕರ್ನಾಟಕದ ಪ್ರತಿಯೊಂದು

ಗೋವಿಂದ ಕಾರಜೋಳ
ಸಂಸದರು, ಚಿತ್ರದುರ್ಗ.

ಹಳ್ಳಿಗಳ ಧೂಳಿನಲ್ಲಿ ಸಂಚರಿಸಿದ್ದಾರೆ. ಬಗರ್ ಹುಕ್ಕುಂ ಸಾಗುವಳಿ ಮಾಡುವ ಬಡರೈತರಿಗಾಗಿ ನೀರಾವರಿ ಯೋಜನೆಗಳಿಗಾಗಿ ಅವರು ನಡೆಸಿದ ಪಾದಯಾತ್ರೆಗಳು ಇಂದಿಗೂ ನಮ್ಮ ಕಣ್ಣಮುಂದೆ ಇವೆ.

ಪಕ್ಷದ ಭೀಷ್ಮ : ಕರ್ನಾಟಕದಲ್ಲಿ ಬಿಜೆಪಿ ಯನ್ನು ಕಟ್ಟಿ ಬೆಳೆಸುವಲ್ಲಿ ಯಡಿಯೂರಪ್ಪನವರ ಪಾತ್ರ ಅನನ್ಯವಾದುದು. ಹಗಲಿರುಳು ರಾಜ್ಯ ಪ್ರವಾಸ ಮಾಡಿ ಕಾರ್ಯಕರ್ತರ ಹೆಸರನ್ನು ಹಿಡಿದು ಕರೆಯುವ ಅವರ ಅದ್ಭುತ ನೆನಪಿನ ಶಕ್ತಿ ಮತ್ತು ಜನಸಂಪರ್ಕವೇ ಬಿಜೆಪಿಯನ್ನು ಇಂದು ಮನೆಮನೆಗೆ ತಲುಪಿಸಿ ಸೋಲಿಗೆ ಕುಗ್ಗದೆ ಗೆಲುವಿಗೆ ಬೀಗದೆ ಪಕ್ಷವನ್ನು ಮುನ್ನಡೆಸಿದ ಅವರು ನಿಜಕ್ಕೂ ರಾಜ್ಯ ರಾಜಕಾರಣದ ಭೀಷ್ಮರಾಗಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಜನನಾಯಕ ಎಂಬ ಬಿರುದು ಕೇವಲ ಹೆಸರಿಗಲ್ಲ ಅದು ಬಿ.ಎಸ್ .ಯಡಿಯೂರಪ್ಪನವರ ವ್ಯಕ್ತಿತ್ವಕ್ಕೆ ಸಂದ ಗೌರವ. ಅವರೊಂದಿಗೆ ದಶಕಗಳ ಕಾಲ ಹೆಜ್ಜೆ ಹಾಕಿರುವ ನನಗೆ ಅವರ ಆಡಳಿತ ವೈಖರಿ ಮತ್ತು ತಕ್ಷಣದ ನಿರ್ಧಾರತೆಗೆದುಕೊಳ್ಳುವ ಅವರ ಮಾನವೀಯ ಗುಣಗಳನ್ನು ಹತ್ತಿರದಿಂದ ತಿಳಿದಿರುವೆ. ಅವರ 50 ವರ್ಷಗಳ ಸಾರ್ವಜನಿಕ ಸೇವಾ ಜೀವನದ ಈ ಸಂದರ್ಭದಲ್ಲಿ ನಾನು ಕಂಡ ಅಪರೂಪದ ಪ್ರಸಂಗಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ.

ರಾಣಿ ಚೆನ್ನಮ್ಮ ವಸತಿ ಶಾಲೆಗಳು : ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಜಾರಿಯಾದ ಮೇಲೂ ರಾಜ್ಯದಲ್ಲಿ ಗುಣಮಟ್ಟದ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಒಳಗೊಂಡ ಜೀವನ ಶಿಕ್ಷಣವು ಸಾರ್ವತ್ರಿಕವಾಗಿ ಎಲ್ಲ ವರ್ಗದ ಮಕ್ಕಳಿಗೆ ದೊರೆಯುತ್ತಿಲ್ಲ. ಬಡವರ ಪರಿಶಿಷ್ಟರ ಮಕ್ಕಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಜೀವನವನ್ನು ರೂಪಿಸುವ ಮತ್ತು ಚರಿತ್ರೆಯನ್ನು ಬೆಳೆಸುವ ಶಿಕ್ಷಣದ ಕೊರತೆ ಇದ್ದುದರ ಬಗ್ಗೆ ಅವರೊಂದಿಗೆ ಚರ್ಚಿಸಿದೆ ಕಾರ್ಮಿಕರ, ಸಂಚಾರಿ ಜನರ, ದೇವದಾಸಿಯರ ಮಕ್ಕಳಿಗೆ ಶಿಕ್ಷಣ ಒದಗಿಸಲು ವಸತಿ ಶಿಕ್ಷಣ ಸಂಸ್ಥೆಗಳನ್ನು ಕಿತ್ತೂರ ರಾಣಿ ಚೆನ್ನಮ್ಮ ಹೆಸರಿನಲ್ಲಿ ಪ್ರಾರಂಭಿಸಲು ಕೋರಿದಾಗ ರಾಜ್ಯಾದ್ಯಂತ ಬಡ ಹಿಂದುಳಿದ ಹೆಣ್ಣು ಮಕ್ಕಳ ಜೀವನ ಸುಧಾರಣೆಗಾಗಿ ವಿಕಾಸಕ್ಕಾಗಿ ರಾಣಿ ಚೆನ್ನಮ್ಮ ವಸತಿ ಶಾಲೆಗಳು ಪ್ರಾರಂಭವಾದವು.

ಸಂತ್ರಸ್ತರ ಪಾಲಿನ ಆಶಾಕಿರಣ: 2009 ರಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರು ಆದರೆ ಮಂತ್ರಿಮಂಡಳ ರಚನೆ ಇನ್ನೂ ಆಗಿರಲಿಲ್ಲ ನಾನು ಶಾಸಕನಾಗಿದ್ದೆ. ಬೆಳಗಾವಿ ವಿಭಾಗದಲ್ಲಿ ಧಾರಾಕಾರ ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿ ಮನೆಗಳು ಹಾನಿಯಾಗಿದ್ದವು. ಆಗ ಮನೆ ಕಟ್ಟಲು ಸರಕಾರವು ಕೇವಲ 95000 ರು. ನೀಡುತ್ತಿತ್ತು. ಸ್ಥಳ ಪರೀಶೀಲನೆಗೆ ಬಂದಿದ್ದ ಯಡಿಯೂರಪ್ಪನವರು ಆ ಹಣವನ್ನು ನೋಡಿ ಅಷ್ಟರಲ್ಲಿ ಮನೆ ಕಟ್ಟಲು ಸಾಧ್ಯವೇ ಎಂದು ಕೇಳಿದರು. ಖಂಡಿತ ಅಷ್ಟರಲ್ಲಿಯೇ ಕಟ್ಟಲು ಸಾಧ್ಯವಿಲ್ಲವೆಂದಾಗ ತಕ್ಷಣವೇ ತಲಾ ಸಂತ್ರಸ್ತರಿಗೆ 5 ಲಕ್ಷ ರು.ಪರಿಹಾರ ಘೋಷಿಸಿದರು. ಅಷ್ಟು ದೊಡ್ಡ ಮೊತ್ತ ಹೆಚ್ಚಾಗುವುದೆಂದು ನನ್ನ ಅನಿಸಿಕೆ ತಿಳಿಸಿದಾಗ, ಇರಲಿ, ಜನರ ಪರಿಸ್ಥಿತಿ ಗಂಭೀರವಾ ಗಿದೆ ಎಂದರು. ಕಂಗಾಲಾದ ಜನತೆಗೆ ಸಹಾನುಭೂತಿ ಹೇಳಿದರು. ಅವರಲ್ಲಿ ಬೆರಗುಗೊಳಿ ಸುವಂತಹ ಹೊಸತನ ಯಾವಾಗಲೂ ಕೆಲಸ ಮಾಡುತ್ತಿರುತ್ತದೆ. ನಾವು ಮಾಡಿದ ಜನಹಿತ ಕಾರ್ಯಗಳೇ ನಮಗೆ ಜಯ ತಂದು ಕೊಡುತ್ತವೆ ಎಂದು ಅವರ ನಿಲುವಾಗಿದೆ. ಹೀಗಾಗಿ ಅವರು ಯಾವಾಗಲೂ ನಾನು ಜನತೆಗೆ ಋಣಿಯಾಗಿದ್ದೇನೆ ಎನ್ನುತ್ತಾರೆ.

ಅಭಿವೃದ್ಧಿಯೇ ನಮ್ಮ ಅಜೆಂಡಾ, ಪ್ರಣಾಳಿಕೆಯೇ ದಿಕ್‌ಪಥ, ಸಮೃದ್ಧ ಕರ್ನಾಟಕವೇ ಸರಕಾರದ ಗುರಿ ಎಂದು ಘೋಷಿಸಿದವರು ಇವರು. ನನ್ನದೇನಿದ್ದರೂ ವಾಜಪೇಯಿ ಮಾದರಿ ಎಂದು ವಿನಮ್ರವಾಗಿ ಹೇಳುತ್ತಾರೆ. ರಾಷ್ಟ್ರಪತಿಗಳಾಗಿದ್ದ ಎಪಿಜೆ ಅಬ್ದುಲ್ ಕಲಾಂರ ಏಶಿಯಾ ಮಿಶನ್ 2020 ಇವರಿಗೆ ಆದರ್ಶವಾದುದು. ಇವರ ನಾಯಕತ್ವ, ನಿರ್ಣಾಯಕ ಮನೋಧರ್ಮ ಮತ್ತು ಮುತ್ಸದ್ದಿತನ ರಾಜ್ಯದ ಅಭಿವೃದ್ಧಿಗೆ ಪೂರಕವಾ ಗಿದೆ.ಯಾರಿಗೂ ಕೆಡಕು ಬಯಸದ ಸಹೃದಯತೆ ಮತ್ತು ನುಡಿದಂತೆ ನಡೆಯುವ ಮಾನಸಿಕ ಇಚ್ಛಾ ಶಕ್ತಿ ವಿಶೇಷವಾದುದು. ಇವರ ದೂರದೃಷ್ಟಿ ಎಲ್ಲಕ್ಕೂ ಹೆಚ್ಚಾಗಿ ಪ್ರೀತಿ ಮತ್ತು ಛಲ ಹಾಗೂ ಸಂಕಲ್ಪಶಕ್ತಿ ಅಗಾಧವಾದುದು.

ಚಿತ್ರದುರ್ಗ ನೆಲದಲ್ಲಿ ಗೌರವ: ಸ್ವಾಭಿಮಾನದ ನಾಯಕರಾಗಿ ಸಕಲಜೀವಾತ್ಮರಿಗೆ, ಲೇಸನು ಮಾಡು ಎನ್ನುವ ವಿಶ್ವಮಾನವ ಸಂದೇಶವನ್ನು ಕಾಯಾ ವಾಚಾ ಮನಸಾ ಅನುಷ್ಠಾನಗೊಳಿ ಸಬೇಕೆನ್ನುವ ಅದಮ್ಯ ಸಂಕಲ್ಪ ಮತ್ತು ದೃಢ ಚಿತ್ತತೆ ಇಟ್ಟುಕೊಂಡು ಬಿಜೆಪಿಗೆ ಒಂದು ಸುಭದ್ರ ನೆಲೆ ನೀಡುತ್ತಾ ಪಕ್ಷದ ಬೆನ್ನೆಲುಬಾಗಿ ನಿಂತಿದ್ದಾರೆ. ಇವರು ಮಾಡಿದ ನಿಸ್ವಾರ್ಥ ಸೇವೆಗೆ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಚಿತ್ರದುರ್ಗ ಐತಿಹಾ ಸಿಕ ನೆಲದಲ್ಲಿ ಹರ್ಷದ ಹಂದರದಲ್ಲಿ ನಡೆಯುತ್ತಿ ರುವ ಅಭಿನಂದನಾ ಸಮಾರಂಭ ವ್ಯಕ್ತಿಗೊಬ್ಬರಿಗೆ ಸಲ್ಲಿಸುವ ಗೌರವವಲ್ಲ ಇದು ನಿಸ್ವಾರ್ಥಸೇವೆಯ ಮಾನವಕಲ್ಯಾಣದ ತಪೋಜೀವಿಗೆ ಸಲ್ಲುವ ಕೃತಜ್ಞತೆ.

ನನ್ನಂತ ಅನೇಕ ನಾಯಕರಿಗೆ ರಾಜಕೀಯ ಶಕ್ತಿ ತುಂಬಿದವರು ಯಡಿಯೂರಪ್ಪನವರು ಸಾಮಾಜಿಕ ನ್ಯಾಯದ ಹರಿಕಾರರಾಗಿ ಸರ್ವಜನಾಂಗದ ಶಾಂತಿಯ ತೋಟವಾಗಿ ಕರ್ನಾಟಕವನ್ನು ರೂಪಿಸಲು ಅವರು ನೀಡಿದ ಕೊಡುಗೆ ಸ್ಥಿರಸ್ಥಾಯಿಯಾಗಿದೆ. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಸರ್ವಜನಾಂಗದ ವಿಕಾಸಕ್ಕೆ ತಮ್ಮ ಬದುಕನ್ನೇ ಮೀಸಲಾಗಿಟ್ಟಂತಹ ಬಹು ಮುಖ ಆಲೋಚನೆಗಳ, ರಚನಾತ್ಮಕ ಮತ್ತು ಕ್ರಿಯಾಶೀಲ ಚಿಂತನೆಗಳ ಜನಸೇವಾ ತಪಸ್ವಿ ಕಾಯಕಯೋಗಿ ಸರ್ವಜನಾಂಗದ ಶಾಂತಿಯ ತೋಟವನ್ನು ಬಯಸುವ ಕೂಡಿಬಾಳೋಣ ಕೂಡಿ ಬದುಕೋಣ ಎಂಬ ಸ್ನೇಹಸೌಹಾರ್ದದ ಆಲೋಚನೆಗಳ ಜನಮನದಲ್ಲಿ ತುಂಬಿ ರಾಷ್ಟ್ರಮುಖಿ ಜನಮುಖಿ ಶಕ್ತಿಯನ್ನು ಬೆಳೆಸುವ ಉದಾತ್ತ ಗುಣಗಳ ಯಡಿಯೂರಪ್ಪ ಎಂಬ ಹೆಸರಿನ ಮಹಾಚೇತನಕ್ಕೆ ನೂರು ಕಾಲ ಆಯುಷ್ಯ ಆರೋಗ್ಯ ದೇವರಲ್ಲಿ ಪ್ರಾರ್ಥಿಸುತ್ತಾ ಇಂತಹ ಗಟ್ಟಿ ಮನಸ್ಸಿನ ತ್ಯಾಗಜೀವನದ ನಾಯಕರುಗಳ ಸಂಖ್ಯೆ ಹೆಚ್ಚಾಗಲಿ ಎಂದು ಅಪೇಕ್ಷಿಸುತ್ತೇನೆ.

ಯಡಿಯೂರಪ್ಪನವರ ಬಲಗೈ ಬಂಟ

ಬಡವರ ಪಾಲಿನ ಆಪದ್ಬಾಂಧವ ರೇಣುಕಾಚಾರ್ಯ

ಅನೇಕ ರಾಜಕಾರಣಿಗಳು ಯಾರಿಗೂ ನಿಷ್ಠುರರಾಗದಂತೆ ಮಾತನಾಡುವುದು ಸಹಜ. ಇದು ರಾಜಕಾರಣಗಳಲ್ಲಿರಬೇಕಾದ ಒಂದು ಪ್ರಮುಖ ಗುಣವೂ ಸರಿ. ಆದರೆ, ರೇಣುಕಾಚಾರ್ಯ ಈ ವಿಚಾರದಲ್ಲಿ ತದ್ವಿರುದ್ಧ. ತಮಗನ್ನಿಸಿದ್ದನ್ನು ನೇರವಾಗಿಯೇ ಹೇಳುವುದು ಇವರ ಜಾಯಮಾನ. ಆದ್ದರಿಂದಲೇ ಮಾಧ್ಯಮಗಳಲ್ಲಿ ಅವರು ಒಂದಿಲ್ಲೊಂದು ವಿಚಾರದಲ್ಲಿ ಸುದ್ದಿಯಲ್ಲಿ ಇದ್ದೇ ಇರುತ್ತಾರೆ. ಇದರಿಂದ ಅನೇಕ ಬಾರಿ ಇರಸುಮುರಸು, ಪಕ್ಷಕ್ಕೆ ಮುಜುಗರವಾದ ಸಂಗತಿಗಳು ಹಲವುಂಟು. ಕ್ಷೇತ್ರದ ಅಭಿವೃದ್ಧಿ ಹಾಗೂ ಜನಸಂಪರ್ಕಕ್ಕೆ ಬಹಳಷ್ಟು ಒತ್ತು ನೀಡುತ್ತಾರೆ. ಸಾಮಾಜಿಕ ನ್ಯಾಯ ಮತ್ತು ಎಲ್ಲ ವರ್ಗದ ಜನರನ್ನು ಆತ್ಮೀಯವಾಗಿ ನಡೆಸಿಕೊಳ್ಳುವ ವಿಶಾಲ ಮನೋಭಾವ ಇವರಲ್ಲಿದೆ.

ಅಧಿಕಾರ ಇರಲಿ, ಇಲ್ಲದಿರಲಿ. ಇಚ್ಛಾಶಕ್ತಿ, ಜನಾಸಕ್ತಿ ಇದ್ದಲ್ಲಿ ಏನೆಲ್ಲಾ ಮಾಡಬಹುದು ಎಂಬುದಕ್ಕೆ ಹೊನ್ನಾಳಿ ಹುಲಿ, ಹೋರಿ ಎಂದೇ ಬಿರುದಾಂಕಿತ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯರ ಕಾರ್ಯವೈಖರಿಯೇ ಸಾಕ್ಷಿ.

ಸದಾ ಕ್ಷೇತ್ರದ ಜನರ ಮಧ್ಯೆ ಇರಲು ಇಷ್ಟಪಡುವ ಶಾಸಕ ರೇಣುಕಾಚಾರ್ಯ, ಅಭಿವೃದ್ಧಿ ವಿಚಾರದಲ್ಲಿ ಸದಾ ಮುಂದು. ಅವರು ಶಾಸಕರಾಗಿದ್ದ ವೇಳೆ ಪ್ರಗತಿಯ ಕಾಳಜಿಯೊಂದಿಗೆ ಅವಳಿ ತಾಲೂಕಿನಲ್ಲಿ ಕೈಗೊಂಡ ಕಾಮಗಾರಿಗಳಿಗೆ ಲೆಕ್ಕಲ್ಲ. ಶಾಸಕರಾಗಿ ವಿಶೇಷ ಪ್ರಭಾವ ಬೀರಿ ಕೋಟ್ಯಂತರ ಅನುದಾನ ತರುವಲ್ಲಿ ಯಶಸ್ವಿಯಾಗಿದ್ದಾರೆ. ಜನಸ್ನೇಹಿ ಆಡಳಿತಕ್ಕೆ ಪೂರಕವಾಗಿ ಸಾಧನೆಗಳ ಮಹಾಪೂರವನ್ನೇ ಹರಿಸಿದ್ದಾರೆ.

ಮದುವೆ, ಹಬ್ಬ-ಹರಿದಿನ, ಜಾತ್ರೆ, ಸಭೆ, ಸಮಾರಂಭ, ಸಾವಿನ ಮನೆ... ಹೀಗೆ ಯಾವುದೇ ಕಾರ್ಯಕ್ರಮವಿದ್ದರೂ ಅಧಿಕಾರ ಇರಲಿ, ಇಲ್ಲದಿರಲಿ, ಹೋಗಿ, ಭಾಗಿಯಾಗುವುದು ರೇಣುಕಾಚಾರ್ಯರ ರೂಢಿ. ಸಂಕಷ್ಟದಲ್ಲಿರುವವರಿಗೆ ಸ್ಥಳದಲ್ಲೇ ಕೈಲಾದಷ್ಟು ಸಹಾಯ ಮಾಡುವ ಗುಣ. ಈ ಸ್ಪಂದನೆಯೇ ರೇಣುಕಾಚಾರ್ಯ ಅವರ ರಾಜಕೀಯ ಜೀವನಕ್ಕೆ ಭದ್ರ ಬುನಾದಿ. ಮಾಜಿ ಸಿಎಂ, ಹಿರಿಯ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಮಾನಸಪುತ್ರರೆಂದೇ ಗುರುತಿಸಿಕೊಂಡ ಒಂದಿಲ್ಲೊಂದು ವಿಚಾರವಾಗಿ ಸದಾ ಸುದ್ದಿಯಲ್ಲಿರುವ ಬಿಜೆಪಿ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ, ಯಾವುದೇ ರಾಜಕೀಯ ವಿರೋಧಿಗಳ ಹೇಳಿಕೆಗೆ ತಕ್ಷಣವೇ ತಿರುಗೇಟು ನೀಡುವ ಮೂಲಕ ಸದಾ ಚರ್ಚೆಯಲ್ಲಿರುತ್ತಾರೆ. ಬರೋಬ್ಬರಿ ಮೂರು ಬಾರಿ ಹೊನ್ನಾಳಿ ಕ್ಷೇತ್ರ ಶಾಸಕರಾಗಿ ಅಭಿವೃದ್ಧಿ ಪರ್ವವನ್ನೇ ಸೃಷ್ಟಿಸಿದವರು. ಇಂದಿಗೂ ಕ್ಷೇತ್ರದ ಅನೇಕ ಬಡಕುಟುಂಬಗಳ ಪಾಲಿನ ಆರಾಧ್ಯ ದೈವವಾಗಿದ್ದಾರೆ.

ಹೊಸ ತಾಲೂಕಿಗೆ ಶ್ರೀಕಾರ: ಮಲೆನಾಡಿನ ಸೆರಗು ಹೊನ್ನಾಳಿಯಲ್ಲಿ ಈವರೆಗೆ ಮೂರು ಬಾರಿ ಮಾತ್ರ ಬಿಜೆಪಿ ಗೆದ್ದಿದೆ, ಈ ಮೂರು ಬಾರಿಯೂ ಬಿಜೆಪಿಯಿಂದ ಗೆದ್ದಿರುವುದು ಎಂಪಿ ರೇಣುಕಾಚಾರ್ಯ ಅವರೇ. ಅವರು ಶಾಸಕರಾಗಿದ್ದಾಗ ವೇಳೆ ನ್ಯಾಮತಿ ನೂತನ ತಾಲೂಕಾಗಿ ರಚನೆಯಾಗಿದ್ದು ಅವರ ಪ್ರಮುಖ ಸಾಧನೆಗಳಲ್ಲಿ ಒಂದು. 2012ರಲ್ಲಿ ಸರಕಾರದ ಮಟ್ಟದಲ್ಲಿ ನ್ಯಾಮತಿ ಜನರ ನಿಯೋಗ ಕೊಂಡೊಯ್ದು ಹಲವಾರು ಬಾರಿ ನಡೆಸಿದ ಪ್ರಯತ್ನದ ಫಲವೇ ಹೊಸ ತಾಲೂಕಿಗೆ ಶ್ರೀಕಾರ. ಗ್ರಾಪಂ ಮಟ್ಟದಲ್ಲಿದ್ದ ನ್ಯಾಮತಿ ಪ್ರಸ್ತುತ ಪಟ್ಟಣ ಪಂಚಾಯಿತಿ ಆಗಿ ಪರಿವರ್ತನೆಯಾಗಿದೆ. ಹೊನ್ನಾಳಿಯನ್ನು ಪಟ್ಟಣ ಪಂಚಾಯಿತಿಯಿಂದ ಪುರಸಭೆಯಾಗಿ ಮೇಲ್ದರ್ಜೆಗೇರಿಸಿದ್ದಾರೆ. ಇದಕ್ಕಾಗಿ ಪಟ್ಟ ಪರಿಶ್ರಮ ಅಪಾರ.

ಹುಟ್ಟು ಹೋರಾಟಗಾರ: ಎಂ.ಪಿ.ರೇಣುಕಾಚಾರ್ಯ ಒಬ್ಬ ರಾಜಕಾರಣಿ ಮಾತ್ರವಲ್ಲ. ಅದಕ್ಕೂ ಮೊದಲು ಅವರೊಬ್ಬ ಹುಟ್ಟು ಹೋರಾಟಗಾರ, ಸ್ನೇಹ ಜೀವಿ, ನಂಬಿದವರ ಪಾಲಿನ ಆಪದ್ಬಾಂಧವ. ಅವರು ರಾತ್ರೋರಾತ್ರಿ ರಾಜಕಾರಣಿ ಆಗಿ ಉದಯಿಸಿದವರಲ್ಲ. ಹೋರಾಟದ ಮೂಲಕವೇ ಒಂದೊಂದೇ ಮೆಟ್ಟಿಲು ಏರಿದವರು. ರೈತಪರ, ಜನಪರ ಕಾಳಜಿ ಹೊತ್ತು ಹಿಂದು ಪರ ವಿಚಾರಧಾರೆಗೆ ಓಗೊಟ್ಟು ಚಳವಳಿ ನಡೆಸಿ ಜೈಲುವಾಸ ಅನುಭವಿಸಿದವರು. ಇವರ ರಾಜಕೀಯ ಜೀವನ ಆರಂಭವಾಗಿದ್ದೇ ಹೋರಾಟದಿಂದ, ಹೋರಾಟದ ಹಾದಿಯಲ್ಲಿ ಎದುರಾದ ಎಲ್ಲ ಅಡೆತಡೆ ದಾಟಿ ನಿರೀಕ್ಷೆ ಮೀರಿ ಯಶಸ್ಸು ಕಂಡವರು. ಅಂದಿನ ಹೊನ್ನಾಳಿ ತಾಲೂಕಿನ ಹಳ್ಳಿಗಳನ್ನು ಹಗಲಿರುಳು ಎನ್ನದೆ ಸುತ್ತಿ ಯುವ ಪಡೆಗಳನ್ನು ಸಂಘಟಿಸಿದರು. ಜನಪರ ಹೋರಾಟಕ್ಕೆ ಜನರನ್ನು ಅಣಿಗೊಳಿಸಿದರು.

ಎಲ್ಲರ ಮನೆ ಮಗ: ಜನರೊಟ್ಟಿಗೆ ಬೆರೆತು, ರೈತರೊಡನೆ ಒಡನಾಡಿ, ಗ್ರಾಮೀಣರ ಮನೆ ಮಗನಾಗಿ, ಅವರ ಕಷ್ಟ, ಸುಖಕ್ಕೆ ಸ್ಪಂದಿಸಿ, ಕೈಲಾದ ಸಹಾಯ ಮಾಡಿ ಜನ ನಾಯಕ ಎನ್ನಿಸಿಕೊಂಡಿದ್ದಾರೆ.ನಾನೊಬ್ಬ ಜನಸೇವಕ. ಜನತವೇ ನನ್ನ ಗುರಿ. ಪ್ರೀತಿ, ವಿಶ್ವಾಸದ ಹೊಳೆ ಹರಿಸುವ ಜನರೇ ನನ್ನ ದೇವರು ಎನ್ನುವ ಇವರು, ಹಸಿದ ಹೊಟ್ಟೆಗಳಿಗೆ ಅನ್ನ, ಬಡ-ಬಗ್ಗರಿಗೆ ದವಸಧಾನ್ಯ, ವಿದ್ಯಾರ್ಥಿಗಳಿಗೆ ಬಸ್ ಪಾಸ್, ಬಡ ದ್ಯಾರ್ಥಿಗಳ ಶುಲ್ಕ ಭರಿಸುವ ಇವರು ರೋಗಿಗಳಿಗೆ ಔಷಧೋಪಚಾರ ಒದಗಿಸುವ ಪಾಲಿನ ಸಂಜೀನಿಯೂ ಹೌದು. ಅಧಿಕಾರ ಇರಲಿ, ಇಲ್ಲದಿರಲಿ.. ದೇಹಿ ಎಂದು ಬಂದವರಿಗೆ ಕೈಲಾದ ಸಹಾಯಹಸ್ತ ಚಾಚಿದವರು. ಅವಳಿ ತಾಲೂಕಿನಲ್ಲಿ ಯಾರೇ ಸತ್ತರೂ ಅವರ ಮನೆಗೆ ತೆರಳಿ ಶವಸಂಸ್ಕಾರಕ್ಕೆ 5000 ರು. ನೀಡಿ ಕುಟುಂಬಕ್ಕೆ ಸಾಂತ್ವನ ಹೇಳುವುದನ್ನು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ.

ಕುಂದೂರು ಕುವರನ ಹೋರಾಟ: ಎಂಪಿಆರ್ ಅವರು ಪಂಚಾಕ್ಷರಯ್ಯ - ಕಮ ಲಮ್ಮ ದಂಪತಿ 5ನೇ ಪುತ್ರರಾಗಿ 1961ರ ಫೆ.28ರಲ್ಲಿ ಕುಂದೂರಲ್ಲಿ ಜನಿಸಿದರು. ಹುಟ್ಟೂರಲ್ಲೇ ಪ್ರಾಥಮಿಕ ಶಿಕ್ಷಣ, ಕೂಲಂಬಿಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ಶಿವಮೊಗ್ಗದಲ್ಲಿ ಪಿಯು, ಪದವಿ ಓದಿದರು. ವಿದ್ಯಾರ್ಥಿ ಜೀವನದಲ್ಲೇ ಸ್ವರಾಜ್ ಕುಂದೂರು ಹೋರಾಟಕ್ಕೆ ಧುಮುಕಿದ್ದರು.ಕನ್ನಡ ಸಂಘದ ಮೂಲಕ ಹೋರಾಟ ಆರಂಭಿಸಿ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಓದುವಾಗಲೆ ಭದ್ರಾವತಿ ತಾಲೂಕಿನ ನಾಗಸಮುದ್ರದಲ್ಲಿ ನಡೆದ ರೈತ ಚಳವಳಿಯಲ್ಲಿ ಭಾಗಿಯಾಗಿದ್ದರು. ರೈತರ ಸಮಸ್ಯೆಗಳ ವಿರುದ್ಧದ ಧ್ವನಿ ಎತ್ತಿದರು.1980ರಲ್ಲಿ ಜಯಪ್ರಕಾಶ್ ನಾರಾ ಯಣ್ ಅವರ ಅಂದೋಲನದಲ್ಲಿ ತೊಡಗಿಸಿ ಕೊಂಡು ಅಂದಿನ ಜನತಾ ಪಕ್ಷದೊಂದಿಗೆ ರಾಜ ಕೀಯ ಜೀವನಕ್ಕೆ ಕಾಲಿಟ್ಟರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲೂ ಅವರ ನಂಟಿತ್ತು.

ಪಕ್ಷದ ಕಾರ್ಯಕ್ರಮ ಗಳ ಸಹಿತ ತಾಲೂಕಿನ ಪ್ರತಿ ಹಳ್ಳಿಯಲ್ಲೂ ನಿರಂತರ ಪ್ರವಾಸ ಕೈಗೊಂಡರು. ಜನರಲ್ಲಿ ಜಾಗೃತಿ ಮೂಡಿಸಿದರು. ಇದರಿಂದ ತಾಲೂ ಕು ಬಿಜೆಪಿ ಅಧ್ಯಕ್ಷರಾ ಗುವ ಅವಕಾಶ ಒದಗಿಬಂತು. 1990 ರಲ್ಲಿ ಬಿಜೆಪಿ ರಾಷ್ಟ್ರೀಯ ಮುಖಂಡ ಲಾಲ್ ಕೃಷ್ಣ ಆಡ್ವಾಣಿ ಅವರ ನೇತೃತ್ವದಲ್ಲಿ ದೇಶಾದ್ಯಂತ ರಾಮ ಜನ್ಮ ಭೂಮಿ ನಿರ್ಮಾಣಕ್ಕಾಗಿ ಆಗ್ರಹಿಸಿ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ರಥಯಾತ್ರೆಯಲ್ಲಿ ಭಾಗವಹಿಸಿದ್ದರು. 1997ರಿಂದ ಹೊನ್ನಾಳಿ ತಾಲೂಕಿನ ಪ್ರತಿ ಹಳ್ಳಿಯಲ್ಲಿ ಪ್ರವಾಸ ಕೈಗೊಂಡು ಜನಪರ ಹೋರಾಟ ಮಾಡಿ, ಎರಡು ಬಾರಿ ಸೆರೆವಾಸ ಅನುಭವಿಸಿದರು.

ಹೊನ್ನಾಳಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ತೂಕದಲ್ಲಿ ಮೋಸ ಆಗುತ್ತಿದ್ದುದನ್ನು ಕಂಡು ಬಿಜೆಪಿ ಕಾರ್ಯಕರ್ತರೊಂದಿಗೆ ಖರೀದಿ ಕೇಂದ್ರಕ್ಕೆ ಮುತ್ತಿಗೆ ಹಾಕಿ ಅಹೋರಾತ್ರಿ ಪ್ರತಿಭಟನೆ ನಡೆಸಿ, ಸರಕಾರದಿಂದ ಬಾಕಿ ಹಣ ಕೊಡಿಸುವಲ್ಲಿ ಯಶಸ್ವಿಯಾದರು. ರೈತಕಾಯಕ ಕೆರೆ ಯೋಜನೆಯಡಿ ಸವಳಂಗ ಕೆರೆ ಅಭಿವೃದ್ಧಿ ಪಡಿಸುವ ಸಂಬಂಧ ನಡೆಸಿದ ನಿರಂತರ ಹೋರಾಟದಲ್ಲಿ ಸುಮಾರು 200-300 ರೈತರೊಡನೆ ಸವಳಂಗದಿಂದ ಬೆಂಗಳೂರಿನವರೆಗೆ 250 ಕಿ.ಮೀ.ವರೆಗೆ ಪಾದಯಾತ್ರೆ ನಡೆಸಿದ್ದರಿಂದ ಅಂದಿನ ಮುಖ್ಯಮಂತ್ರಿ ಎಸ್.ಎಂ ಕೃಷ್ಣ, ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಬಡಜನರಿಗೆ ಹಳದಿ ಕಾರ್ಡ್ ನೀಡುವಲ್ಲಿ ವಿಳಂಬ ಸೇರಿ ಇತರೆ ಸಮಸ್ಯೆಗಳ ಪರಿಹಾರಕ್ಕೆ ಆಗ್ರಸಿ ಹೊನ್ನಾಳಿ ತಾಲೂಕು ಕಚೇರಿ ಮುಂಭಾಗ ನೂರಾರು ಜನರೊಡನೆ ಪ್ರತಿಭಟನೆ ನಡೆಸುತ್ತಿದ್ದಾಗ ಬಂಧನಕ್ಕೊಳಗಾಗಿ 15 ದಿನಗಳ ಕಾಲ ಬೆಳಗಾವಿ ಜೈಲು ವಾಸ ಅನುಭವಿಸಿದರು. 2002ರಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಭಟಿಸಿದಾಗ ಬಂಧನಕ್ಕೆ ಒಳಗಾಗಿ 11 ದಿನ ಬಳ್ಳಾರಿ ಜೈಲಿನಲ್ಲಿದ್ದರು. 2004ರಲ್ಲಿ ನ್ಯಾಮತಿ ಗ್ರಾಮದಲ್ಲಿ ವಿಶ್ವ ಹಿಂದು ಪರಿಷತ್ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಅಂದಿನ ಸರಕಾರ ಮುಂಜಾಗ್ರತಾ ಕ್ರಮವಾಗಿ ಬಂಧಿಸಿ ಬಳ್ಳಾರಿ ಜೈಲಿನಲ್ಲಿರಿಸಿತು. 7 ದಿನ ಬಂಧೀಖಾನೆಯಲ್ಲಿದ್ದರು. ಆ ಸಂದರ್ಭದಲ್ಲಿ ಎಂಪಿಆರ್ ವಿರುದ್ಧ ಅನೇಕ ಕೇಸ್ ದಾಖಲು ಮಾಡಲಾಗಿತ್ತು.

ರೈತರ ಸಂಕಷ್ಟಕ್ಕೆ ಸ್ಪಂದಿಸುವ ನಾಯಕ: ರೈತರಿಗೆ ಬೆಂಬಲ ಬೆಲೆ ಒದಗಿಸುವ ಉದ್ದೇಶದಡಿ ಹೊನ್ನಾಳಿಯಿಂದ ದಾವಣಗೆರೆಗೆ ಪಾದಯಾತ್ರೆ ನಡೆಸಿ ಸಾವಿರಾರು ಕಾರ್ಯಕರ್ತರು, ರೈತರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು. ತಾಲೂಕು ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸಿದರು. ಅಡಕೆಗೆ ಬೆಂಬಲ ಬೆಲೆ, ಬಗರ್‌ಹುಕುಂ ರೈತರಿಗೆ ಪಟ್ಟಾ, ಬಡವರಿಗೆ ಸರಳವಾಗಿ ಮರಳು ಸಿಗಬೇಕೆಂದು ಆಗ್ರಹಿಸಿ ಹಾಗೂ ಬಸ್ ಪ್ರಯಾಣದ ದರ ಏರಿಕೆ ವಿರೋಧಿಸಿ ಸರಣಿ ಪ್ರತಿಭಟನೆ ನಡೆಸಿ ಜಿಲ್ಲೆಯ ಗಮನ ಸೆಳೆದರು. ಜಮೀನಿಗೆ ಹೋದರೆ ಮಣ್ಣಿನ ಮಗನೇ ಆಗಿಬಿಡುತ್ತಾರೆ. ಭತ್ತ ನಾಟಿ ಮಾಡುವುದಿರಲಿ, ನೀರು ಕಟ್ಟುವುದಿರಲಿ, ಗಿಡಗಳನ್ನು ಆರೈಕೆ ಮಾಡುವುದೇ ಆಗಲಿ. ಇಂಥ ಕೆಲಸ ಬರುವುದಿಲ್ಲ ಎಂದು ಹೇಳುವುದಿಲ್ಲ.

ಅಪ್ಪಟ ರಾಜಕಾರಣಿ: ಎಂಪಿಆರ್ ಎಲ್ಲ ರಾಜಕಾರಣಿಗಳಂತೆ ತಾವಾಯಿತು. ತಮ್ಮ ಕೆಲಸವಾಯಿತು ಎಂದು ಸುಮ್ಮನಾಗುವ ಜಾಯಮಾನ ಇವರದಲ್ಲ. ಮೈಕ್ ಮುಂದೆ ನಿಂತು ಭಾಷಣ ಆರಂಭಿಸಿದರೆ ಇವರು ಅಪ್ಪಟ ರಾಜಕಾರಣಿ. ಜನರ ನಡುವೆ ಇದ್ದಾಗ ಇವರೊಳಗಿನ ಕಲಾವಿದ ಜಾಗೃತನಾಗಿ ಬಿಡುತ್ತಾನೆ. ಅವಕಾಶ ಸಿಕ್ಕಾಗ ಹಾಡು, ಕುಣಿತಕ್ಕೂ ಸೈ. ಉಡುಗೆ, ತೊಡುಗೆ, ಹಾವಭಾವ ಎಲ್ಲದರಲ್ಲೂ ಇವರು ಭಿನ್ನ.

ರಾಜಕಾರಣಿಗಳು ಬಿಳಿ ಬಟ್ಟೆ ಧರಿಸುವುದು ಸಾಮಾನ್ಯ. ಇವರು ಹಾಗಲ್ಲ, ರಂಗು ರಂಗಿನ ಉಡುಪು ತೊಟ್ಟು ಬರುತ್ತಾರೆ. ಬೇರೆ ಬೇರೆ ಬಣ್ಣ, ನ್ಯಾಸದ ಬಟ್ಟೆ ಇಷ್ಟಪಡುತ್ತಾರೆ. ಒಟ್ಟಿನಲ್ಲಿ ಕಲರ್ ಫುಲ್ ಆಗಿ ಕಂಗೊಳಿಸುತ್ತಾರೆ. ಕೆಲವೊಮ್ಮೆ ಸೂಟು, ಬೂಟಿನಲ್ಲಿ ಮಿಂಚಿಬಿಡುತ್ತಾರೆ. ಜಾತ್ರೆ, ಹಬ್ಬ, ಉತ್ಸವಗಳಲ್ಲಿ ನೀವು ನೋಡುವ ರೇಣುಕಾಚಾರ್ಯರೇ ಬೇರೆ. ಅಲ್ಲೇನಾದರೂ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೆ ಗಾಯಕರ ಜತೆಗೆ ಧ್ವನಿಗೂಡಿಸುತ್ತಾರೆ. ಕುಣಿಯುವವರೊಂದಿಗೆ ಸೇರಿ ಸ್ಟೆಪ್ ಹಾಕುತ್ತಾರೆ.

ವಾಹನ ಚಲಾಯಿಸಿಯೇ ಸಿದ್ದ: ಹೋರಿ ಬೆದರಿಸುವ ಸ್ಪರ್ಧೆಯ ಉದ್ಘಾಟನೆಗೆ ಹೋದಾಗ ಅಪಾಯದ ಸನ್ನಿವೇಶ ಎದುರಿಸಿದ ಉದಾಹರಣೆಯೂ ಇದೆ. ಮಕ್ಕಳೊಂದಿಗೆ ಸೇರಿ ಚಿಣ್ಣಿದಾಂಡು, ಬುಗರೆ ಆಡುತ್ತಾರೆ. ಕ್ರಿಕೆಟ್ ಇರಲಿ, ಬ್ಯಾಡ್ಮಿಂಟನ್ ಆಗಿರಲಿ ಎಲ್ಲದರಲ್ಲೂ ಪಾಲ್ಗೊಳ್ಳುತ್ತಾರೆ. ಕೆಲವೊಮ್ಮೆ ನಾಲೆಗಿಳಿದು ಈಜಿಬಿಡುತ್ತಾರೆ. ವಾಹನ ಚಾಲನೆ ಇವರ ಮತ್ತೊಂದು ಹವ್ಯಾಸ. ಸೈಕಲ್‌ನಿಂದ ಜೆಸಿಬಿವರೆಗೆ ಯಾವುದೇ ವಾಹನವಿದ್ದರೂ ಚಾಲಕನ ಸೀಟಿನಲ್ಲಿ ಕುಳಿತುಬಿಡುತ್ತಾರೆ. ಆಗಾಗ ಬೈಕ್ ಓಡಿಸುತ್ತಾರೆ. ಹೊಲದಲ್ಲಿ ಟ್ರ್ಯಾಕ್ಟರ್ ಏರಿ ಉಳುಮೆ ಮಾಡುತ್ತಾರೆ. ಲಾರಿ ನಡೆಸಲೂ ಹಿಂಜರಿಯುವುದಿಲ್ಲ. ಅಷ್ಟೇ ಏಕೆ ಹೊಸ ಬಸ್‌ಗಳಿಗೆ ಚಾಲನೆ ನೀಡುವ ಸಂದರ್ಭದಲ್ಲಿ ಸ್ವತಃ ಚಾಲಕರಾಗಿ, ಬಸ್ಸನ್ನೂ ಓಡಿಸಬಲ್ಲೆ ಎಂದು ನಿರೂಪಿಸಿದ್ದಾರೆ. ಹಾಗಾಗಿಯೇ ಇವರನ್ನು ಬಲ್ಲವರು 'ಸಕಲ ಕಲಾ ವಲ್ಲಭ' ಎಂದು ಪ್ರೀತಿಯಿಂದ ಕರೆಯುವುದುಂಟು.

ಮುಷ್ಠಿ ಅಕ್ಕಿ ಅಭಿಯಾನ : ಈ ಹಿಂದೆ ಮಾಜಿ ಸಿಎಂ ಯಡಿಯೂರಪ್ಪನವರ ನೇತೃತ್ವದಲ್ಲಿ ರಾಜ್ಯದಲ್ಲಿ ಮುಷ್ಠಿ ಅಕ್ಕಿ ಅಭಿಯಾನ ಆರಂಭಿಸಿ ರೈತ ಕುಟುಂಬಗಳನ್ನು ಬೆಸೆಯುವ ಜತೆಗೆ ಪ್ರತಿ ಹಳ್ಳಿಯ ಮನೆಗೂ ತೆರಳಿ ಅಕ್ಕಿ ಸಂಗ್ರಹಿಸಲು ಕರೆ ನೀಡಲಾಗಿತ್ತು. ಅದರಂತೆ ಅವಳಿ ತಾಲೂಕಿನ 186 ಗ್ರಾಮಗಳ 47 ಗ್ರಾಮ ಪಂಚಾಯಿತಿಗಳ ಪ್ರತಿ ಮನೆಗೂ ಹೋಗಿ ಅಕ್ಕಿಯನ್ನು ಸಂಗ್ರಹಿಸಿದರು. ಜನರ ಒಡನಾಟ ದಿಂದಲೆ ಅಭಿಯಾನಕ್ಕೆ ಅಭೂತಪೂರ್ವ ಸ್ಪಂದನೆ ಸಿಕ್ಕಿತ್ತು.

ಸಾಮಾನ್ಯ ಕಾರ್ಯಕರ್ತನಿಂದ ಸಚಿವ ಸ್ಥಾನದ ವರೆಗೆ: ಸದಾ ಹೋರಾಟದ ಮೂಲಕವೇ ಗುರುತಿಸಿಕೊಂಡ ಎಂಪಿಆರ್ ಸಾಮಾನ್ಯ ಕಾರ್ಯಕರ್ತರಾಗಿ ದುಡಿದವರು. ಪಕ್ಷ ವಹಿಸಿದ ನಾನಾ ಹುದ್ದೆ ಅಲಂಕರಿಸಿ ಸಮರ್ಥವಾಗಿ ನಿಭಾಯಿಸಿದರು. 2004ರಲ್ಲಿ ಹೊನ್ನಾಳಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಜನರು ಬೆಂಬಲದಿಂದ ವಿಧಾನಸಭೆ ಮೆಟ್ಟಿಲು ಹತ್ತಿದರು. 2007ರಲ್ಲಿ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಕಿಯೋನಿಕ್ಸ್ ನಿಗಮ, ನಂತರದಲ್ಲಿ ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷ ಸ್ಥಾನ ದೊರಕಿತು. ಅಲ್ಲಿನ ಕಾರ್ಯಕರ್ತರ ರಕ್ಷಿಸಿ ಚಿನ್ನದ ಗಣಿಗೆ ಹೊಸದಾದ ಕಾಯಕಲ್ಪ ನೀಡಿದರಲ್ಲದೇ ಕಂಪನಿ ಲಾಭಾಂಶ ಹೆಚ್ಚಿಸಿದರು. 2008ರ ಚುನಾವಣೆಯಲ್ಲೂ ಶಾಸಕರಾಗಿ ಮರು ಆಯ್ಕೆಯಾದರು. 50 ಗ್ರಾಮಗಳಲ್ಲಿ ಜನಸ್ಪಂದನ ಸಭೆ ಆಯೋಜಿಸಿ ಜನರ ಕಷ್ಟ ಬಗೆಹರಿಸುವ ಕೆಲಸ ಮಾಡಿದರು. ಯಡಿಯೂರಪ್ಪನವರ ಅವಧಿಯಲ್ಲಿ ಅಬಕಾರಿ ಸಚಿವರಾಗಿ ಕಾರ್ಯನಿರ್ವಸಿದರು. ಕಳ್ಳಬಟ್ಟಿ ನಿಯಂತ್ರಿಸಿ, ಸರಕಾರದ ಬೊಕ್ಕಸಕ್ಕೆ ಆದಾಯ ತಂದು ಕೊಟ್ಟರು. ಅಕ್ರಮ ಕಳ್ಳಬಟ್ಟಿ ದಂಧೆಗೆ ಬ್ರೇಕ್ ಹಾಕಿದ್ದರು. ಜಗದೀಶ್ ಶೆಟ್ಟರ್, ಸದಾನಂದಗೌಡ ಅವರ ಅವಧಿಯಲ್ಲೂ ಕಾಯಂ ಸಚಿವ ಸ್ಥಾನ ಇವರಿಗಿತ್ತು.

ರಾಜಕೀಯ ಏರುಪೇರು ಹಿನ್ನೆಲೆಯಲ್ಲಿ 2013ರಲ್ಲಿ ಯಡಿಯೂರಪ್ಪನವರನ್ನು ಬೆಂಬಲಿಸಿ, ಕೆಜೆಪಿಯಿಂದ ಚುನಾವಣೆ ಸ್ಪರ್ಧೆಗಿಳಿದಿದ್ದ ರೇಣುಕಾಚಾರ್ಯ ಕಡಿಮೆ ಅಂತರದ ಸೋಲುಂಡರು. 2018ರ ಚುನಾವಣೆಯಲ್ಲಿ ಮತ್ತೆ ಶಾಸಕರಾಗುವ ಯೋಗ ಒದಗಿಬಂತು. ಇದರೊಟ್ಟಿಗೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆಲಸದ ಜವಾಬ್ದಾರಿ ಅವರ ಮೇಲಿದೆ. ತದನಂತರ 2023ರಲ್ಲಿ ಡಿ.ಜಿ. ಶಾಂತನಗೌಡ ವಿರುದ್ಧ ಮತ್ತೆ ಸೋಲು ಕಂಡರೂ ಇಂದಿಗೂ ಕ್ಷೇತ್ರ ಸಂಚಾರ, ಹೋರಾಟದಲ್ಲಿ ಮಾತ್ರ ಹಿಂದೆ ಬಿದ್ದಿಲ್ಲ.

ನೇರ, ನಿಷ್ಠುರವಾದಿ: ಅನೇಕ ರಾಜಕಾರಣಿಗಳು ಯಾರಿಗೂ ನಿಷ್ಠುರರಾಗದಂತೆ ಮಾತನಾಡುವುದು ಸಹಜ. ಇದು ರಾಜಕಾರಣಗಳಲ್ಲಿರಬೇಕಾದ ಒಂದು ಪ್ರಮುಖ ಗುಣವೂ ಸರಿ. ಆದರೆ, ರೇಣುಕಾಚಾರ್ಯ ಈ ವಿಚಾರದಲ್ಲಿ ತದ್ವಿರುದ್ಧ. ತಮಗನ್ನಿಸಿದ್ದನ್ನು ನೇರವಾಗಿಯೇ ಹೇಳುವುದು ಇವರ ಜಾಯಮಾನ. ಆದ್ದರಿಂದಲೇ ಮಾಧ್ಯಮಗಳಲ್ಲಿ ಅವರು ಒಂದಿಲ್ಲೊಂದು ವಿಚಾರದಲ್ಲಿ ಸುದ್ದಿಯಲ್ಲಿ ಇದ್ದೇ ಇರುತ್ತಾರೆ. ಇದರಿಂದ ಅನೇಕ ಬಾರಿ ಇರಸುಮುರಸು, ಪಕ್ಷಕ್ಕೆ ಮುಜುಗರವಾದ ಸಂಗತಿಗಳು ಹಲವುಂಟು. ಕ್ಷೇತ್ರದ ಅಭಿವೃದ್ಧಿ ಹಾಗೂ ಜನಸಂಪರ್ಕಕ್ಕೆ ಬಹಳಷ್ಟು ಒತ್ತು ನೀಡುತ್ತಾರೆ. ಸಾಮಾಜಿಕ ನ್ಯಾಯ ಮತ್ತು ಎಲ್ಲ ವರ್ಗದ ಜನರನ್ನು ಆತ್ಮೀಯವಾಗಿ ನಡೆಸಿಕೊಳ್ಳುವ ವಿಶಾಲ ಮನೋಭಾವ ಇವರಲ್ಲಿದೆ. ತಮ್ಮ ಕ್ಷೇತ್ರದ ಯಾವುದೇ ಜನಾಂಗದ ಕಾರ್ಯಕ್ರಮ, ಜಯಂತ್ಯುತ್ಸವಗಳನ್ನು ತಮ್ಮ ಮನೆಯ ಕಾರ್ಯಕ್ರಮವೆಂಬಂತೆ ಅತ್ಯಂತ ಆಸಕ್ತಿಯಿಂದ ಪಾಲ್ಗೊಂಡು ಮೇಲ್ವಿಚಾರಣೆ ಕೈಗೊಳ್ಳುತ್ತಾರೆ. ಕಾರ್ಯಕರ್ತರ ಮದುವೆ ಮುಂತಾದ ಸಮಾರಂಭಗಳಲ್ಲಿ ಕುಟುಂಬದವರೊಬ್ಬರ ಕಾರ್ಯಕ್ರಮವೇನೊ ಎಂಬಂತೆ ತಲ್ಲೀನರಾಗುತ್ತಾರೆ.

ಕರೋನಾ ಕಾರ್ಯಕ್ಕೆ ಮೆಚ್ಚುಗೆ

ಕರೋನಾ ಸಂದರ್ಭದಲ್ಲಿ ರೇಣುಕಾಚಾರ್ಯ ಕ್ಷೇತ್ರದಲ್ಲಿನ ಸೇವೆ ಇಡೀ ರಾಜ್ಯಕ್ಕೆ ಮಾದರಿಯಾಗಿತ್ತು. ಕರೋನಾ ಸೋಂಕಿತರಿಗೆ ಚಿಕಿತ್ಸೆ ವ್ಯವಸ್ಥೆ, ಲಾಕ್ ಡೌನ್ ವೇಳೆಯಲ್ಲಿ ಆಹಾರ ಸಾಮಗ್ರಿ ಪೂರೈಕೆ ಸೇರಿದಂತೆ ಕ್ಷೇತ್ರದ ಜನತೆಗೆ ಸ್ಪಂದಿಸಿದ್ದರು. ಇವರ ಸೇವಾ ಕಾರ್ಯಕ್ಕೆ ಬಿಜೆಪಿ ನಾಯಕರೇ ಫಿದಾ ಆಗಿದ್ದರು. ಕರೋನಾ ಪೀಡಿತರಿಗೆ ಎಂಪಿಆರ್ ಮಿಡಿಯುವ ಪರಿಗೆ ಬಿಜೆಪಿ ರಾಜ್ಯ, ರಾಷ್ಟ್ರ ನಾಯಕರು ಶ್ಲಾಘಿಸಿದ್ದರು. ಕರೋನಾ ಪೀಡಿತರೊಂದಿಗೆ ಡ್ಯಾನ್ಸ್ ಮಾಡುವ ಮೂಲಕವೂ ಅವರಿಗೆ ಆತ್ಮಸ್ಥೈರ್ಯ ತುಂಬಿದ್ದರು.

ದಣಿವರಿಯದ ಕ್ಷೇತ್ರ ಸಂಚಾರಿ

ಎಂಪಿಆರ್‌ಗೆ ಅದೆಷ್ಟೇ ರಾಜಕೀಯದ ಒತ್ತಡಗಳಿರಲಿ. ಅಧಿಕಾರ ಇರಲಿ ಇಲ್ಲದಿರಲಿ ಕ್ಷೇತ್ರ ಸಂಚಾರ ಮಾತ್ರ ಇಂದಿಗೂ ನಿಲ್ಲಿಸಿಲ್ಲ. ಶಾಸಕರಾಗಿದ್ದಾಗ ಎಲ್ಲ ಹಳ್ಳಿಗಳನ್ನು ಹತ್ತಾರೂ ಬಾರಿ ಸುತ್ತಿದ್ದಾರೆ. ತಮ್ಮನ್ನು ವಿಧಾನಸಭೆಗೆ ಆರಿಸಿ ಕಳುಹಿಸಿದ ಕ್ಷೇತ್ರಕ್ಕೆ ವಾರದಲ್ಲಿ ನಾಲ್ಕು ದಿನ ಮೀಸಲಿಡುತ್ತಾರೆ. ಪ್ರತಿ ಶನಿವಾರ, ಭಾನುವಾರ, ಸೋಮವಾರ, ಮಂಗಳವಾರ ಕ್ಷೇತ್ರದಲ್ಲೇ ಇದ್ದು ಜನರ ಅಹವಾಲಿಗೆ ಕಿವಿಯಾಗುವ ಜತೆಗೆ ಸ್ಥಳದಲ್ಲೇ ಸಮಸ್ಯೆ ಪರಿಹರಿಸುತ್ತಿದ್ದರು. ಬೆಳಗ್ಗೆ 5.30ಕ್ಕೆ ಎದ್ದು ಒಂದೂವರೆ ಗಂಟೆ ಕಾಲ ಯೋಗ, ವಾಕ್ ಮಾಡುವ ರೇಣುಕಾಚಾರ್ಯ ಆನಂತರ ಮನೆಗೆ ಬರುವ ಜನರ ಅಹವಾಲು ಆಲಿಸಲು ಕುಳಿತರೆ ಸಮಯ 11 ಮೀರುತ್ತದೆ. ಸ್ನಾನ, ಪೂಜೆ, ಉಪಾಹಾರ ಸೇವಿಸಿ ಹಳ್ಳಿಗಳಿಗೆ ಹೊರಟರೆ ಮತ್ತೆ ಮನೆ ತಲುಪುವುದು ರಾತ್ರಿಯೇ. ಹೀಗಾಗಿ, ಇವರೊಂಥರ ಫುಲ್ ಟೈಮ್ ರಾಜಕಾರಣಿ! ಕ್ಷೇತ್ರ ಸಂಚಾರಕ್ಕೆ ಹೊರಡುವಾಗ ಮನೆಯಿಂದ ಊಟದ ಬಾಕ್ಸ್ ಒಯ್ದು ಇವರಿಗೆ ಗೊತ್ತಿಲ್ಲ. ಮಾರ್ಗಮಧ್ಯೆ ಹೊಲದಲ್ಲಿ ರೈತರ ಜತೆ ಕುಳಿತು ರೊಟ್ಟಿ, ಬುತ್ತಿ ಸೇವಿಸಿ ಮುಂದೆ ತೆರಳುತ್ತಾರೆ. ಪ್ರವಾಸದ ಅವಧಿಯಲ್ಲಿ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಅಧಿಕಾರಿಗಳಿಗೆ ಸಲಹೆ, ಸೂಚನೆ ನೀಡುವ ಜತೆಗೆ, ಕಾಮಗಾರಿಗಳಿಗೆ ಶಂಕು ಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು.

ಇವರ ಅವಧಿಯಲ್ಲಿ ಮಂಜೂರಾದ ಶಾಶ್ವತ ಯೋಜನೆಗಳು

- ತುಂಗಭದ್ರಾ ನದಿಗೆ ನೂತನ ಸೇತುವೆ ನಿರ್ಮಾಣ
- ತುಂಗಾ ನಾಲೆ ಆಧುನೀಕರಣ
- ಹೊನ್ನಾಳಿ-ನ್ಯಾಮತಿಯಲ್ಲಿ 2 ಪದವಿ ಕಾಲೇಜು,
- 6 ಪ್ರೌಢಶಾಲೆ, 2 ಪದವಿ ಪೂರ್ವ ಕಾಲೇಜು,
- ಪ್ರವಾಸಿ ಮಂದಿರ ಹೊನ್ನಾಳಿ
- ಮೊರಾರ್ಜಿ ದೇಸಾಯಿ ವಸತಿ ಶಾಲೆ
- 3 ಕಿತ್ತೂರು ಚನ್ನಮ್ಮ ವಸತಿ ಶಾಲೆ
- ಅಲ್ಪಸಂಖ್ಯಾತರ ವಸತಿಶಾಲೆ
- ಕೆಎಸ್‌ಆರ್‌ಟಿಸಿ ಬಸ್ ಡಿಪೋ
- ಕಸ್ತೂರಬಾ ವಸತಿ ನಿಲಯ
- ಪ.ಜಾ,ಪ.ಪಂ ವಿದ್ಯಾರ್ಥಿನಿಲಯಗಳ ಹೊಸ ಕಟ್ಟಡ
- ಅಗ್ನಿಶಾಮಕ ದಳ ಕಚೇರಿ
- ತಾಲೂಕು ಒಳಾಂಗಣ ಕ್ರೀಡಾಂಗಣ

ಹೊನ್ನಾಳಿಯ ಅಭಿವೃದ್ಧಿ ಹರಿಕಾರ ಎಂಪಿಆರ್

- ಹೊನ್ನಾಳಿ ತುಂಗಭದ್ರಾ ನದಿಯ ಸೇತುವೆ ಶಿಥಿಲವಾಗಿದ್ದು, ನೂತನ ಸೇತುವೆ ನಿರ್ಮಾಣ.
- ಗೋವಿನಕೋವಿ-ರಾಂಪುರ ಮಧ್ಯೆ ನೂತನ ಸೇತುವೆ ನಿರ್ಮಾಣ.
- ಹೊನ್ನಾಳಿ ಸರಕಾರಿ ಆಸ್ಪತ್ರೆ 100 ಹಾಸಿಗೆ ಮೇಲ್ದರ್ಜೆಗೇರಿಸಿದ್ದ ಅವರು ನಂತರ ಅದೇ ಆಸ್ಪತ್ರೆ 200 ಹಾಸಿಗೆಗಳ ಸೌಲಭ್ಯ ಕಲ್ಪಿಸುವ ಪ್ರಯತ್ನದಲ್ಲಿದ್ದರು.
- ಅವಳಿ ತಾಲೂಕಿನಲ್ಲಿ ಅವಶ್ಯವಿರುವ ಕಡೆ ಪಶು ಆಸ್ಪತ್ರೆ ಕಟ್ಟಡ, ಶಿಕ್ಷಣ ಕ್ಷೇತ್ರ, ಆರೋಗ್ಯ ನೀರಾವರಿ ಮುಂತಾದ ಕ್ಷೇತ್ರಗಳು

ಭರಪೂರ ಅಭಿವೃದ್ಧಿ ಕಂಡಿರುವುದು ಇವರ ಸಾಧನೆಗೆ ಮೈಲಿಗಲ್ಲು

- 5 ವಿದ್ಯುತ್ ವಿತರಣಾ ಕೇಂದ್ರ, 2 ಹೊಸ ಮಂಜೂರಾತಿ. ಹೊನ್ನಾಳಿಯಲ್ಲಿ 100 ಹಾಸಿಗೆ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿಯರ ಕಟ್ಟಡ, ಎಸಿಪಿ ಜೆಎಸ್‌ಪಿ ಯೋಜನೆಯಡಿ ಅವಳಿ ತಾಲೂಕುಗಳ ಪ.ಪಂ. ಪ.ಜಾ. ಕಾಲನಿಗಳಲ್ಲಿ ಕಾಂಕ್ರಿಟ್ ರಸ್ತೆ, 5 ಬಹುಗ್ರಾಮ ಕುಡಿಯುವ ನೀರಿನ ಯೋಜನೆ, 4 ಗ್ರಾಮಗಳಿಗೆ ಹೆಚ್ಚುವರಿ ಯೋಜನೆ ಮಂಜೂರಾತಿ ಹಂತದಲ್ಲಿದ್ದವು.
- ಭದ್ರಾ ನಾಲಾ ಆಧುನೀಕರಣ, ಪ್ರಾಥಮಿಕ ಪದವಿ ಪೂರ್ವ ಅಂಗನವಾಡಿ ಶಾಲಾ ಕಾಲೇಜುಗಳ ನೂತನ ಕಟ್ಟಡ ನಿರ್ಮಾಣ, ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳು, ಪ್ರಾಥಮಿಕ ಪ್ರೌಢ ಪದವಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಅಂಗನವಾಡಿ ಕಟ್ಟಡ, ಕೃಷಿ ಸಂಪರ್ಕ ಕೇಂದ್ರ, ಗ್ರಾಮ ಸಡಕ್ ಮತ್ತು ಲೋಕೋಪಯೋಗಿ, ನಮ್ಮ ಹೊಲ ನಮ್ಮ ರಸ್ತೆ ಯೋಜನೆಯಡಿ ಹಲವಾರು ರಸ್ತೆಗಳ ನಿರ್ಮಾಣ ಹೀಗೆ ವಿವಿಧ ಇಲಾಖಾ ವತಿಯಿಂದ ವಿವಿಧ ಶಾಶ್ವತ ಕಾಮಗಾರಿ ಮಂಜೂರಾಗಿದ್ದು ಇವರ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ನಿಂತಿವೆ.


ಅಭಿಮಾನೋತ್ಸವ
ಜನಸೇವೆಯಲ್ಲಿ
ಮಾನ್ಯ ಶ್ರೀ
ಬಿ.ಎಸ್. ಯಡಿಯೂರಪ್ಪ
50
ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ನಾಗರಾಜ ಎ. ಜಿ
ಗೃಹ ವ್ಯವಹಾರಗಳ ನಾಮ ನಿರ್ದೇಶನ ಸದಸ್ಯರು.

ಅಭಿಮಾನೋತ್ಸವ
ಜನಸೇವೆಯಲ್ಲಿ ಮಾನ್ಯ ಶ್ರೀ
ಬಿ.ಎಸ್. ಯಡಿಯೂರಪ್ಪ
50
ಸಾರ್ಥಕ
ವರ್ಷ
ಬಿ.ಎಸ್.ವೈ ಅಭಿಮಾನೋತ್ಸವ
ದಿನಾಂಕ:
9 ಮೇ 2026
ಶನಿವಾರ
ಬೆಳಗ್ಗೆ 11.00 ಗಂಟೆ
ಸ್ಥಳ
ಚಿತ್ರದುರ್ಗ
ಡಾ.ಎಂ.ಆರ್.ವೆಂಕಟೇಶ್
ಮಾಜಿ ಉಪಾಧ್ಯಕ್ಷರು, ಬಿಎಂಟಿಸಿ
ಅಧ್ಯಕ್ಷರು, ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಲಿ,
ನಿರ್ದೇಶಕರು, ಬೆಂಗಳೂರು ಜಿಲ್ಲಾ ಸಹಕಾರಿ ಯೂನಿಯನ್

ಜನರ ಮಡಿಲಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
9 ಮೇ 2026
ಚಿತ್ರದುರ್ಗ
ಸಮಯ: ಬೆಳಗ್ಗೆ 11 ಕ್ಕೆ
ಜನಸೇವೆಯಲ್ಲಿ ಮಾನ್ಯ ಶ್ರೀ
ಬಿ.ಎಸ್.ಯಡಿಯೂರಪ್ಪ
50
ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಗ್ಗೆ 11.00 ಗಂಟೆ
ಸ್ಥಳ
ಚಿತ್ರದುರ್ಗ
ಗಿರಿರಾಜ್ ಯಳಮೇಲಿ
ಪ್ರಬುದ್ಧ ಪ್ರಕೋಷ್ಠ ಸಂಚಾಲಕರು, ಕಲಬುರಗಿ


ಜನಸೇವೆಯಲ್ಲಿ
ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ
50
ಸಾರ್ಥಕ
ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ: 9 ಮೇ 2026, ಶನಿವಾರ
ಬೆಳಗ್ಗೆ 11.00 ಗಂಟೆ
ಸ್ಥಳ: ಚಿತ್ರದುರ್ಗ
ಡಾ.ಉದಯ್. ಬಿ.ಗರುಡಾಚಾರ್
ಶಾಸಕರು ಚಿಕ್ಕಪೇಟೆ ವಿಧಾನಸಭಾಕ್ಷೇತ್ರ


ಅಭಿಮಾನೋತ್ಸವ
ಜನಸೇವೆಯಲ್ಲಿ ಮಾನ್ಯ ಶ್ರೀ
ಬಿ.ಎಸ್.ಯಡಿಯೂರಪ್ಪ
50 ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಿಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ಸಿ.ಕೆ.ರಾಮಮೂರ್ತಿ
ಶಾಸಕರು ಜಯನಗರ ವಿಧಾನಸಭಾ ಕ್ಷೇತ್ರ


ಅಭಿಮಾನೋತ್ಸವ
ಜನಸೇವೆಯಲ್ಲಿ ಮಾನ್ಯ
ಶ್ರೀ ಬಿ.ಎಸ್.ಯಡಿಯೂರಪ್ಪ
50 ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಿಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ಶ್ರೀ ಕಳಕಪ್ಪ ಜಿ. ಬಂಡಿ
ಮಾಜಿ ಸಚಿವರು ಕರ್ನಾಟಕ ಸರ್ಕಾರ, ರೋಣ ವಿಧಾನಸಭಾ ಕ್ಷೇತ್ರ

ಅಭಿಮಾನೋತ್ಸವ
9 ಮೇ 2026 | ಚಿತ್ರದುರ್ಗ
ಸಮಯ: ಬೆಳಿಗ್ಗೆ 11 ಕ್ಕೆ
ಬಿ.ಎಸ್.ವೈ
ಅಭಿಮಾನೋತ್ಸವ
ಜನಸೇವೆಯಲ್ಲಿ ಮಾನ್ಯ ಶ್ರೀ
ಬಿ.ಎಸ್.ಯಡಿಯೂರಪ್ಪ
50
ಸಾರ್ಥಕ ವರ್ಷ
"ಅಂದು ಹೆಣ್ಣುಮಕ್ಕಳ ಶಿಕ್ಷಣ ಅರ್ಧಕ್ಕೆ ನಿಲ್ಲಬಾರದೆಂದು
ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ನೀಡಿದ ಉಚಿತ 'ಬೈಸಿಕಲ್',
ಇಂದು ಲಕ್ಷಾಂತರ ಹೆಣ್ಣುಮಕ್ಕಳ ಬದುಕಿನ ಚಕ್ರಕ್ಕೆ ವೇಗ ನೀಡಿದೆ."
ಸಿಮೆಂಟ್ ಮಂಜು
ಶಾಸಕರು,
ಸಕಲೇಶಪುರ, ಆಲೂರು ಕಟ್ಟಾಯ ವಿಧಾನಸಭಾ ಕ್ಷೇತ್ರ
ದಿನಾಂಕ:
9 ಮೇ 2026,
ಶನಿವಾರ
ಬೆಳಿಗ್ಗೆ
11.00
ಗಂಟೆ
ಸ್ಥಳ:
ಚಿತ್ರದುರ್ಗ


ಅಭಿಮಾನೋತ್ಸವ
BSY
9 ಮೇ 2026 | ಚಿತ್ರದುರ್ಗ
ಸಮಯ: ಬೆಳಗ್ಗೆ 11 ಕ್ಕೆ
“ ಯಡಿಯೂರಪ್ಪ ಎಂದರೆ
ಹಳ್ಳಿಯಿಂದ ದಿಲ್ಲಿವರೆಗೂ ಒಂದೇ ಧ್ವನಿ,
ಕೊಟ್ಟ ಭರವಸೆ ತಪ್ಪುವರಲ್ಲ,
ಇಟ್ಟ ಭಾಷೆ ಬಿಟ್ಟವರಲ್ಲ
ಇದೇ ಯಡಿಯೂರಪ್ಪ ”
ಜನಸೇವೆಯಲ್ಲಿ ಮಾನ್ಯ ಶ್ರೀ
ಬಿ.ಎಸ್.ಯಡಿಯೂರಪ್ಪ
50
ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಿಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ಸುರೇಶ್. ಬಿ
ಅಧ್ಯಕ್ಷರು,
ಬಿಟಿಎಂ ವಿಧಾನ ಸಭಾ ಕ್ಷೇತ್ರ
ಬೆಂಗಳೂರು ದಕ್ಷಿಣ ಜಿಲ್ಲೆ


ಅಭಿಮಾನೋತ್ಸವ
BSY
9 ಮೇ 2026 | ಚಿತ್ರದುರ್ಗ
ಸಮಯ: ಬೆಳಗ್ಗೆ 11 ಕ್ಕೆ
ಜನಸೇವೆಯಲ್ಲಿ
ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ
50 ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026,
ಶನಿವಾರ
ಬೆಳಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ಡಾ. ಸಿ.ಸೋಮಶೇಖರ

ಜನರ ಮಡಿಲಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
ಜನಸೇವೆಯಲ್ಲಿ ಮಾನ್ಯ
ಶ್ರೀ ಬಿ.ಎಸ್.ಯಡಿಯೂರಪ್ಪ
50 ಸಾರ್ಥಕ ವರ್ಷ
ಬಿ.ಎಸ್.ವೈ
ಅಭಿಮಾನೋತ್ಸವ
ದಿನಾಂಕ:
9 ಮೇ 2026, ಶನಿವಾರ
ಬೆಳಿಗ್ಗೆ 11.00 ಗಂಟೆ
ಸ್ಥಳ:
ಚಿತ್ರದುರ್ಗ
ಶ್ರೀ ಎ.ಎಸ್.ಪಾಟೀಲ (ನಡಹಳ್ಳಿ)
ರಾಜ್ಯ ಅಧ್ಯಕ್ಷರು, ಬಿಜೆಪಿ ರೈತ ಮೋರ್ಚಾ ಹಾಗೂ
ಮಾಜಿ ಶಾಸಕರು, ಮುದ್ದೇಬಿಹಾಳ

ಬಿ.ಎಸ್.ವೈ. ಅಭಿಮಾನೋತ್ಸವ ಪರ್ವ
50 ಸಾರ್ಥಕ ರಾಜಕೀಯ ವಸಂತಗಳ ಗರ್ವ
ಜನರ ಮಡಿಲಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
ಮೇ 09, 2026 ಶನಿವಾರ ಬೆಳಿಗ್ಗೆ 11 ಕ್ಕೆ, ಚಿತ್ರದುರ್ಗದಲ್ಲಿ
ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಬಿಜೆಪಿಯ ಕಾರ್ಯಕರ್ತರಾಗಿ,
ಬಿಜೆಪಿ ರಾಜ್ಯಾಧ್ಯಕ್ಷರಾಗಿ, ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷರಾಗಿ, ಎಂಟು ಅವಧಿಗೆ ಶಾಸಕರಾಗಿ,
ವಿಧಾನಸಭೆಯ ಪ್ರತಿಪಕ್ಷದ ನಾಯಕರಾಗಿ, ಹಣಕಾಸು ಸಚಿವರಾಗಿ, ಉಪಮುಖ್ಯಮಂತ್ರಿಗಳಾಗಿ,
ನಾಲ್ಕು ಅವಧಿಗೆ ಮುಖ್ಯಮಂತ್ರಿಗಳಾಗಿ, ಸಂಸದರಾಗಿ, ರಾಜ್ಯದ ಜನತೆಯ ಪ್ರೀತಿಯ
ನಮ್ಮ ಯಡಿಯೂರಪ್ಪರಾಗಿ ಅಮೋಘ ಸೇವಾ ದಾಖಲೆ ಬರೆದ ಮಹಾ ನಾಯಕ,
ನಿರಂತರ ಪರಿಶ್ರಮ, ಬದ್ಧತೆ, ಸಮರ್ಪಣಾ ಸೇವೆ, ಕಾರ್ಯದಕ್ಷತೆ ಮತ್ತು ಕಾರ್ಯಕ್ಷಮತೆಗಳಿಂದ
ಪ್ರಶ್ನಾತೀತ ನಾಯಕರಾಗಿ ಬೆಳೆದು ಬಂದ ರಾಜ್ಯ ಕಂಡ ಮೇಧಾವಿ ನೇತಾರ
ಶ್ರೀಯುತ ಬಿ.ಎಸ್. ಯಡಿಯೂರಪ್ಪ ಅವರ
ಅಭಿನಂದನೋತ್ಸವದ, ಅಭಿಮಾನೋತ್ಸವಕ್ಕೆ ನಿಮ್ಮೆಲ್ಲರನ್ನೂ
ತುಂಬು ಹೃದಯದಿಂದ ಸ್ವಾಗತಿಸುತ್ತೇವೆ.
ನೀಲೇಶ್ ಹೆಚ್.ಪಿ.
ಸಂಸ್ಥಾಪಕರು
ಪರ್ವ ಗ್ರೂಪ್, ದುಬೈ
ಶಶಿಧರ್ ನಾಗರಾಜಪ್ಪ
ಸಹಸಂಸ್ಥಾಪಕರು
ಪರ್ವ ಗ್ರೂಪ್, ದುಬೈ
ಪ್ರವೀಣ್ ಶೆಟ್ಟಿ
ಅಧ್ಯಕ್ಷರು
ಕರ್ನಾಟಕ ಅನಿವಾಸಿ
ಭಾರತೀಯ ಸಮಿತಿ, ಯು ಎ ಇ
ರುದ್ರೇಶ್ ಟಿ.ಎನ್.
ಅಧ್ಯಕ್ಷರು
ಬಿಜೆಪಿ ಕೊರಟಗೆರೆ
ವಿಧಾನಸಭಾ ಕ್ಷೇತ್ರ
PARVA GROUP
ಬನ್ನಿ...
ಅಭಿಮಾನೋತ್ಸವದ ಮಹಾ ಸಾಗರದಲ್ಲಿ ಹನಿಗಳಾಗೋಣ
ಸಾರ್ಥಕ ಸಂಭ್ರಮದಲ್ಲಿ, ಸಡಗರದಲ್ಲಿ ಸಹಭಾಗಿಗಳಾಗೋಣ